ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ-೨೨


ಪ್ರಧಾನ ಸಂಪಾದಕ : ಕಾ ತ ಚಿಕ್ಕಣ್ಣ

# ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ

(ಸಂಶೋಧನಾ ಕೃತಿ)

ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ

JNANA001993



ಡಾ. ಶುಭಾ ಮರವಂತೆ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು

ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ–೨೨

ಪ್ರಧಾನ ಸಂಪಾದಕ : ಕಾ ತ ಚಿಕ್ಕಣ್ಣ

# ಕನಕ ಕೃತಿಗಳ
# ಮಧ್ಯಕಾಲೀನ ಚರಿತ್ರೆಯ ಪುನಾರಚನೆ

(ಸಂಶೋಧನಾ ಕೃತಿ)

ಡಾ. ಶುಭಾ ಮರವಂತೆ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ಬೆಂಗಳೂರು

# ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ (ಸಂಶೋಧನಾ ಕೃತಿ)


ಲೇಖಕರು : **ಡಾ. ಶುಭಾ ಮರವಂತೆ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಶಿವಮೊಗ್ಗ ಜಿಲ್ಲೆ, ದೂ. ೮೭೨೨೯೦೯೫



ಪ್ರಕಾಶಕರು : ವಿ. ಎನ್. ಮಲ್ಲಿಕಾರ್ಜುನಸ್ವಾಮಿ
ಸದಸ್ಯ-ಕಾರ್ಯದರ್ಶಿ, ರಾಷ್ಟ್ರೀಯ ಸಂತಕವಿ ಕನಕದಾಸ
ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
೨ನೆಯ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ,
ಜೆ.ಸಿ.ರಸ್ತೆ, ಬೆಂಗಳೂರು-೦೨
ದೂರವಾಣಿ : ೦೮೦-೨೨೧೧೩೧೪೭
E-Mail-kanakaresearchcentre@gmail.com
www.saintpoetkanaka.in

ಮೊದಲ ಮುದ್ರಣ : ೨೦೧೮



ಹಕ್ಕುಗಳು : ರಾಷ್ಟ್ರೀಯ ಸಂತಕವಿ ಕನಕದಾಸ
ಅಧ್ಯಯನ ಮತ್ತು ಸಂಶೋಧನಾ ಕೇಂದ್ರ



ಪುಟಗಳು : ೨೧೦

ಪ್ರತಿಗಳು : ೫೦೦

ಆಕಾರ : ೧/೮ ಡೆಮ್ಮಿ

ಒಳಪುಟ ಕಾಗದ : ೭೦ ಜಿ.ಎಸ್.ಎಂ.. ಮ್ಯಾಪ್‌ಲಿಥೋ

ಬೆಲೆ : ೬೫/-

ಮಾರ್ಗದರ್ಶಕರು : ಡಾ. ಹಿ. ಶಿ. ರಾಮಚಂದ್ರೇಗೌಡ

ಮುಖಪುಟ ಚಿತ್ರ : ಶ್ರೀ ಮಹೇಶ್ ರಾವಲ್

ಮುದ್ರಕರು : ರಾಜಾ ಪ್ರಿಂಟರ್ಸ್, ಬೆಂಗಳೂರು

# ಅಧ್ಯಕ್ಷರ ನುಡಿ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರ ಜೀವನ ದರ್ಶನ ಮತ್ತು ಅವರ ಕಾವ್ಯ-ಕೀರ್ತನೆಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಈ ಕಾರ್ಯಕ್ರಮಗಳಲ್ಲಿ ಯುವ ಸಮುದಾಯವನ್ನು ತೊಡಗಿಸಿಕೊಳ್ಳುವುದು ಸಹ ಇದರ ಆಶಯವಾಗಿದೆ. ಈ ನೆಲೆಯಲ್ಲಿ ಹೊಸ ಹೊಸ ದೃಷ್ಟಿಕೋನದಿಂದ ಅಧ್ಯಯನಶೀಲ ವಿದ್ವಾಂಸ, ಸಂಶೋಧನಾರ್ಥಿಗಳಿಗೆ ಫೆಲೋಶಿಪ್ ನೀಡಿಕೆ, ಅಧ್ಯಯನಗಳಿಗೆ ಅನುದಾನ, ರಾಜ್ಯ-ರಾಷ್ಟ್ರಮಟ್ಟದಲ್ಲಿ ವಿಚಾರ ಸಂಕಿರಣ-ಸಂವಾದಗೋಷ್ಠಿಗಳನ್ನು ಏರ್ಪಡಿಸಲಾಗುತ್ತಿದೆ. ವಿವಿಧ ಮಾಧ್ಯಮಗಳಲ್ಲಿ ಕನಕದಾಸರ ತತ್ವಾದರ್ಶಗಳ ಪ್ರದರ್ಶನ-ಪ್ರಸಾರ ಕಾರ್ಯ, ವಿವಿಧ ಭಾಷೆಗಳಿಗೆ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ, ತೌಲನಿಕ ಅಧ್ಯಯನವನ್ನು ನಡೆಸಲಾಗುತ್ತಿದೆ. ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ, ಯುವಜನ-ವಿದ್ಯಾರ್ಥಿ ಸಮುದಾಯಕ್ಕಾಗಿ ಕನಕ ಸಂಸ್ಕೃತಿ ಕಮ್ಮಟ- ರಸಗ್ರಹಣ ಶಿಬಿರಗಳ ಸಂಘಟನೆ, ಹಿರಿಯ ಹಾಗೂ ಯುವ ವಿದ್ವಾಂಸರಿಗೆ ಪುರಸ್ಕಾರ ಮುಂತಾದ ಹಲವಾರು ರಚನಾತ್ಮಕ ಯೋಜನೆಗಳನ್ನು ಸಹಾ ರೂಪಿಸಿ ಜಾರಿಗೊಳಿಸುತ್ತಿದೆ.

ಪ್ರಸ್ತುತ **'ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ'** ಎಂಬ ಕೃತಿಯು ಕನಕದಾಸರನ್ನು ಅವರ ಸಾಹಿತ್ಯದ ಮೂಲಕವೇ ನಮ್ಮ ಸಮಾಜದ ಬಗ್ಗೆ ಸಿದ್ಧಾಂತಗಳನ್ನು ಮರುರಚಿಸುವ ದಾರಿಯಲ್ಲಿ ಮಹತ್ತರ ಹೆಜ್ಜೆಯಾಗಿದೆ. ಈ ಸಂಶೋಧನಾ ಕೃತಿಯು ಕನ್ನಡದ ಅನುಭಾವ ಪರಂಪರೆಯಲ್ಲಿ ಕನಕದಾಸರ ಅನುಭಾವಿ ಚಿಂತನೆಗಳ ಮಹತ್ವವನ್ನು ಗುರುತಿಸುವ ಉದ್ದೇಶವನ್ನು ಹೊಂದಿದೆ. ಈ ಕೃತಿಯನ್ನು ರಚಿಸಿಕೊಟ್ಟ ಡಾ. ಶುಭಾ ಮರವಂತೆ ಅವರಿಗೆ ಕೃತಜ್ಞತೆಗಳು. ಅಧ್ಯಯನ ಕೇಂದ್ರದ ಯೋಜನೆಗಳು ಅತ್ಯಂತ ಕ್ರಿಯಾಶೀಲವಾಗಿ ಅನುಷ್ಠಾನಗೊಳಿಸಲು ಕಾರಣಕರ್ತರು, ಸ್ವತಃ ಸಾಹಿತಿಗಳೂ ಆದ ಕೇಂದ್ರದ ಸಮನ್ವಯಾಧಿಕಾರಿಗಳಾದ ಶ್ರೀ ಕಾ ತ ಚಿಕ್ಕಣ್ಣ ಅವರಿಗೆ, ಸದಸ್ಯ ಕಾರ್ಯದರ್ಶಿಗಳಾದ ಶ್ರೀ ವಿ. ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೆ ಹಾಗೂ ಅಧ್ಯಯನ ಕೇಂದ್ರದ ಕಾರ್ಯಾನುಷ್ಠಾನ ಮಂಡಳಿಯ ಸದಸ್ಯರಿಗೆ ಕೃತಜ್ಞತೆಗಳು.

**ಎನ್. ಆರ್. ವಿಶುಕುಮಾರ**

ಅಧ್ಯಕ್ಷರು

# ಮುಂಮಾತು

ಕರ್ನಾಟಕದ ಮಧ್ಯಕಾಲೀನಯುಗ ಭಕ್ತಿ ಪಾರಮ್ಯದ ಕಾಲವೆಂದೇ ಹೇಳಬಹುದು. ವಚನ ಸಾಹಿತ್ಯ ಚಳವಳಿಯ ನಂತರದ ಭಕ್ತಿಯು ಗುಡಿಕೇಂದ್ರಿತವಾಗಿ ವಿಸ್ತರಿಸಿ ತಮ್ಮ ಪ್ರಾಬಲ್ಯವನ್ನು ಮೆರೆಯುತ್ತಿದ್ದ ಸಂದರ್ಭದಲ್ಲಿ ಕನಕದಾಸರ ಪ್ರವೇಶವಾಯಿತು. ಕನಕದಾಸರ ಕುಲವು ಶೈವಪರಂಪರೆಯಲ್ಲಿ ನೆಲೆಗೊಂಡಿದ್ದರೂ ವಿಶೇಷವೆಂಬಂತೆ ಕನಕದಾಸರ ಅಪ್ಪ-ಅವ್ವ ತಿರುಪತಿಯಲ್ಲಿ ಭಕ್ತಿಯಿಂದ ನಡೆದುಕೊಂಡಿದ್ದು, ಕನಕದಾಸರು ತಿರುಪತಿ ತಿಮ್ಮಪ್ಪನ ಅನುಗ್ರಹದಿಂದ ಹುಟ್ಟಿದ್ದು, ನಂತರ ವೈಷ್ಣವ ಧರ್ಮದ ಅನುಯಾಯಿಗಳಾದ ರಾಜ್ಯಾಡಳಿತದ ಒಬ್ಬ ಸಾಮಂತ ನಾಯಕನಾಗಿ ಬದುಕಿದ್ದು, ಅನಂತರ ತನ್ನ ಲೌಕಿಕ ಜಂಜಾಟಗಳಿಂದ ಮುಕ್ತನಾಗಿ ಬಯಲಾದದ್ದು ಮತ್ತು ಈ ಜೀವನ ಮುಕ್ತಿಗೆ ಮಾರ್ಗ ಯಾವುದೆಂದು ಅರಸುತ್ತಾ ನಡೆದಾಗ ತಾನು ಅನುಭವಿಸಬೇಕಾದ ಅವಮಾನ, ಅಡ್ಡಿ-ಅಡಚಣೆಗಳನ್ನು ಎದುರಿಸಿ ಮನುಷ್ಯ ಸಮಾಜದ ಮೌಲ್ಯಕ್ಕೆ ಸ್ಪಂದಿಸಿದ್ದು - ಇದೆಲ್ಲವೂ ಈಗ ಸಾಹಿತ್ಯ ಚರಿತ್ರೆಯಲ್ಲಿ ಕೆಲವು ಕಡೆ ಸ್ಪಷ್ಟವಾಗಿಯೂ, ಕೆಲವು ಕಡೆ ಅಸ್ಪಷ್ಟವಾಗಿಯೂ, ಕೆಲವು ಕಡೆ ತೇಲುಗುಣದಲ್ಲಿಯೂ ಬಂದು ಹೋಗಿರುವ ಸಂಗತಿಗಳೇ.

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರನ್ನು ಮರುಓದಿಗೆ ಒಳಪಡಿಸಿ ಅರ್ಥೈಸಿಕೊಳ್ಳುವ ಉದ್ದೇಶದಿಂದ ಕೆಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಕನಕದಾಸರ ಬಗೆಗೆ ಖಚಿತವಾದ ಮಾಹಿತಿಯನ್ನು ಒದಗಿಸುವ ಶಾಸನಗಳಾಗಲೀ, ಇತಿಹಾಸವಾಗಲೀ, ಲಿಖಿತ ದಾಖಲೆಗಳಾಗಲೀ ಲಭ್ಯವಾಗಿಲ್ಲ. ಆದರೆ ಈ ಮಧ್ಯಕಾಲೀನ ಚರಿತ್ರೆಯನ್ನು ಹಿಡಿದಿಡುವ ಹಿನ್ನೆಲೆಯಲ್ಲಿ ಅವರ ಕೃತಿಗಳು, ಅವರ ಕಾಲದ ಇತರೆ ಕವಿಗಳ ಕೃತಿಗಳು, ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಗಳು ನಮಗೆ ಹೊಳಹು ನೀಡಲು ಸಾಧ್ಯವಿದೆ. ಈ ಅಂಶಗಳನ್ನು ಗಮನಿಸಿ ಕನಕದಾಸರ ಕೃತಿಗಳಲ್ಲಿ ಮಧ್ಯಕಾಲೀನ ಚರಿತ್ರೆಯನ್ನು ಅವಲೋಕಿಸುವ ಪ್ರಯತ್ನವೇ "ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ" ಕೃತಿಯ ಆಶಯ.

ಕನಕದಾಸರು ತಳಸಮುದಾಯದಿಂದ ಬಂದ ಒಬ್ಬ ದಾರ್ಶನಿಕ ಕವಿಯಾದ ಕಾರಣ ಅವಗಣನೆಗೆ ಒಳಪಟ್ಟ ಈ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು

ಪುನಾರಚಿಸುವ ಅಗತ್ಯವನ್ನು ಕಂಡಿರಬೇಕು. ಏಕೆಂದರೆ ಈ ತಳಸಮುದಾಯದ ಚರಿತ್ರೆಯ ಬಗ್ಗೆ ಸ್ಪಷ್ಟವಾದ ಅರಿವಾಗಲೀ ಅಥವಾ ಈ ಅಸ್ಪಷ್ಟ ಚರಿತ್ರೆಯನ್ನು ಪುನರ್‌ರಚಿಸುವ ರಾಜಕೀಯ ಇಚ್ಛಾಶಕ್ತಿಯಾಗಲೀ ಈ ಸಮುದಾಯಕ್ಕೆ ಸಾಧ್ಯವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಕನಕದಾಸರು ಎತ್ತಿದ ಪ್ರಶ್ನೆಗಳು ಅಧ್ಯಯನ ಯೋಗ್ಯವಾಗಿವೆ. ತಮ್ಮ ಕಾವ್ಯಗಳ ಮೂಲಕ ಈ ಕೆಲಸಕ್ಕೆ ಕೈ ಹಾಕಿದರು ಮತ್ತು ಈ ಸಮುದಾಯದ ತಿಳುವಿಗೆ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟರು. ಈ ಅಂಶವನ್ನೆಲ್ಲಾ ಉದ್ದೇಶಿತ ಸಂಶೋಧನೆಯಲ್ಲಿ ನಿರೀಕ್ಷಿಸಿ ಇಂಥದೊಂದು ಯೋಜನೆಯನ್ನು ಅಧ್ಯಯನ ಕೇಂದ್ರವು ಕೈಗೆತ್ತಿಕೊಂಡಿತು. ಅದರ ಫಲವೇ ಈ ಕೃತಿ.

ಡಾ. ಶುಭಾ ಮರವಂತೆ ಅವರ 'ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆಯು' ಈ ದಿಕ್ಕಿನಲ್ಲಿ ಆಲೋಚಿಸಲು ಒಂದು ತೋರ್ಬೆಳೆಂದು ಭಾವಿಸಿದ್ದೇನೆ.

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮೂಲಕ ಫೆಲೋಶಿಪ್ ಯೋಜನೆಯಡಿ ಸಂಶೋಧನಾ ಸಂಪ್ರಬಂಧ ರಚಿಸಿಕೊಟ್ಟ ಡಾ. ಶುಭಾ ಮರವಂತೆ ಅವರಿಗೆ, ಇದರ ಮಾರ್ಗದರ್ಶಕರಾದ ಡಾ. ಹಿ.ಶಿ.ರಾಮಚಂದ್ರೇಗೌಡ ಅವರಿಗೆ, ಹಸ್ತಪ್ರತಿಯನ್ನು ಪರಿಶೀಲಿಸಿಕೊಟ್ಟ ಪ್ರೊ. ಎಸ್. ಜಿ. ಸಿದ್ಧರಾಮಯ್ಯ ಅವರಿಗೆ, ಮುಖಪುಟ ರಚಿಸಿಕೊಟ್ಟ ಶ್ರೀ ಮಹೇಶ್ ರಾವಲ್, ಮುದ್ರಕರಾದ ರಾಜಾ ಪ್ರಿಂಟರ್ಸ್ ಅವರಿಗೆ, ಈ ಯೋಜನೆಯ ಅನುಷ್ಠಾನಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಯನ ಕೇಂದ್ರದ ಅಧ್ಯಕ್ಷರು, ಸದಸ್ಯ-ಕಾರ್ಯದರ್ಶಿ ಹಾಗೂ ಎಲ್ಲ ಸದಸ್ಯರಿಗೆ, ಕಾರ್ಯಾಲಯದ ಸಿಬ್ಬಂದಿ ಸ್ನೇಹಿತರಿಗೆ ನನ್ನ ಆತ್ಮೀಯ ಕೃತಜ್ಞತೆಗಳು.

**ಕಾ. ತ. ಚಿಕ್ಕಣ್ಣ**
ಪ್ರಧಾನ ಸಂಪಾದಕ

# ನೆನಹು-ನಮನ

ನಮ್ಮ ಸಾಮಾಜಿಕ ಗ್ರಹಿಕೆಗಳನ್ನು ರೂಪಿಸುವಲ್ಲಿ ಕನಕದಾಸರ ಪಾತ್ರ ಮಹತ್ವದ್ದು. ಇದುವರೆಗಿನ ತಿಳಿವಳಿಕೆಗಿಂತ ಭಿನ್ನವಾಗಿ ಕನಕನನ್ನು ಅರಿಯಲು ಸಾಧ್ಯವಿದೆ ಎನ್ನುವುದನ್ನು ತೋರಿಸಿಕೊಡುವಲ್ಲಿ ಬೆಂಗಳೂರಿನ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ ತನ್ನ ಮಹತ್ವಪೂರ್ಣ ಕೊಡುಗೆಯನ್ನು ನೀಡುತ್ತಿದೆ. ನಾಡಿನ ಸಂಸ್ಕೃತಿ ಪ್ರಜ್ಞೆಯನ್ನು, ತಳವರ್ಗದ ಸಾಮಾಜಿಕ ನೆಲೆಯನ್ನು ಉನ್ನತೀಕರಿಸುವ ಕೆಲಸವನ್ನು ಮಾಡುತ್ತಿದೆ. ಕನಕ ಸಾಹಿತ್ಯವನ್ನು ಭಿನ್ನವಾಗಿ ಓದಿ ಅದನ್ನು ಅರ್ಥೈಸುವ ಹೊಸಸಾಧ್ಯತೆಗೆ ದಿಕ್ಕು ತೋರಿದ ಈ ಸಂಸ್ಥೆಯನ್ನು ಹಾಗೂ ಅದರ ನಿರ್ದೇಶಕರಾದ ಶ್ರೀ ಕಾ ತ ಚಿಕ್ಕಣ್ಣನವರನ್ನು ಮನಸಾರೆ ವಂದಿಸುತ್ತೇನೆ. ನೆಲಮೂಲಸಂಸ್ಕೃತಿಯ ನೆಲೆಯಲ್ಲಿ ಅಧ್ಯಯನದ ದಾರಿ ತೋರಿದ ಹಿರಿಯ ಜಾನಪದ ವಿದ್ವಾಂಸರಾದ ಡಾ. ಹಿ.ಶಿ. ರಾಮಚಂದ್ರೇಗೌಡರಿಗರಿಗೆ ನನ್ನ ನಮನಗಳು. ಎಂದಿನಂತೆ ವಾತ್ಸಲ್ಯ ತೋರಿ ಪ್ರೋತ್ಸಾಹಿಸುವ ಹಿರಿಯ ಕವಿ, ಚಿಂತಕ, ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಡಾ. ಬಂಜಗೆರೆ ಜಯಪ್ರಕಾಶ ಇವರ ಪ್ರೀತಿಗೆ ಶರಣು. ಮಂಗಳೂರು ಕನಕದಾಸ ಅಧ್ಯಯನ ಪೀಠದ ಡಾ. ಶಿವರಾಮಶೆಟ್ಟಿ ಯವರನ್ನೂ, ಧರ್ಮಸ್ಥಳದ ಸಂಸ್ಕೃತಿ ಪ್ರತಿಷ್ಠಾನವನ್ನೂ, ಕಾಲೇಜಿನ ಸಹೋದ್ಯೋಗಿ ಬಂಧುಗಳನ್ನೂ, ಅಗತ್ಯ ಪುಸ್ತಕಗಳನ್ನು ಒದಗಿಸಿದ ಹಿರಿಯ ವಿದ್ವಾಂಸರನ್ನೂ, ಸಂಶೋಧನ ಸಂಸ್ಥೆಯ ಸಿಬ್ಬಂದಿವರ್ಗದವರನ್ನೂ ವಿದ್ಯಾರ್ಥಿ ಸ್ನೇಹಿತರಾದ ಕು.ರೂಪಾ.ಜಿ.ಕೆ., ಶ್ರೀ ಓಂಕಾರ ನಾಯ್ಕ, ಕು. ಪ್ರಗತಿ, ಕು. ಪಲ್ಲವಿ ಇವರ ಸಹಕಾರವನ್ನು ನೆನೆಯುತ್ತೇನೆ. ಆತ್ಮೀಯರಾದ ಡಾ. ರವಿಕಲಾ ಕಾಳಪ್ಪ ಅವರ ಸಹಕಾರವನ್ನು ಎಂದಿಗೂ ಮರೆಯಲಾರೆ. ಬೆರಳಚ್ಚಿನಲ್ಲಿ ಸಹಕರಿಸಿದ ಶ್ರೀ ಶ್ರೀಧರ್ ಅವರಿಗೂ ನನ್ನ ವಂದನೆ. ಸ್ನೇಹ ಸಂಗಾತಿ ಅಡ್ವೋಕೇಟ್ ಶ್ರೀ ಲಕ್ಷ್ಮೀ ವೈ. ಎಸ್ ಇವರನ್ನೂ ಸ್ಮರಿಸುತ್ತೇನೆ.

– ಡಾ. ಶುಭಾ ಮರವಂತೆ

# ಪರಿವಿಡಿ


| | | |
|---|---|---|
| ಅಧ್ಯಾಯ ೧: | ಅಧ್ಯಯನದ ಪ್ರವೇಶ | ೧ |
| ಅಧ್ಯಾಯ ೨: | ಮಧ್ಯಕಾಲೀನ ಚರಿತ್ರೆಯ ಸ್ವರೂಪ ಮತ್ತು ಕನಕದಾಸರ ಪ್ರತಿನಿಧೀಕರಣ | ೧೧ |
| ಅಧ್ಯಾಯ ೩: | ಸಮೂಹ ಸೃಷ್ಟಿಯ ಕಥನವಾಗಿ ಕನಕ ಚರಿತ್ರೆ: ಬದುಕು ಬರಹಗಳ ಅನುಸಂಧಾನ | ೩೪ |
| ಅಧ್ಯಾಯ ೪: | ಮಧ್ಯಕಾಲೀನ ಪ್ರಭುತ್ವ ಕೇಂದ್ರಿತ ಆಲೋಚನ ಕ್ರಮಗಳು ಮತ್ತು ಕನಕ ಕೃತಿಗಳ ಮರು ಓದು | ೭೪ |
| ಅಧ್ಯಾಯ ೫: | ಮೋಹನ ತರಂಗಿಣಿ: ವಿಜಯನಗರದ ರಾಜಕೀಯ ಚರಿತ್ರೆಯ ಮರು ನಿರೂಪಣೆ | ೯೩ |
| ಅಧ್ಯಾಯ ೬: | ನಳಚರಿತ್ರೆ: ಆದಿಮ ಚರಿತ್ರೆಯ ಶೋಧದ ನೆಲೆಗಳು | ೧೩೧ |
| ಅಧ್ಯಾಯ ೭: | ರಾಮಧಾನ್ಯಚರಿತ್ರೆ: ಧರ್ಮ ಮತ್ತು ಜಾತಿ ಸಂಘರ್ಷದ ಐತಿಹಾಸಿಕ ರೂಪಕ | ೧೬೧ |
| ಅಧ್ಯಾಯ ೮: | ಕನಕ ಕೃತಿಗಳು ನಿರೂಪಿಸುವ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ | ೧೭೫ |
| ಗ್ರಂಥಋಣ | | ೧೯೪ |

# ಅಧ್ಯಾಯ ೧

# ಅಧ್ಯಯನದ ಪ್ರವೇಶ

ಸಾಹಿತ್ಯ ಮತ್ತು ಚರಿತ್ರೆಯ ಸಂಬಂಧ ಇಂದು ನಿನ್ನೆಯದಲ್ಲ. ಪ್ರಾಚೀನ ಕಾಲದಿಂದಲೂ ನಮ್ಮ ಕನ್ನಡ ಕವಿಗಳು ಇತಿಹಾಸದ ಪ್ರಜ್ಞೆಯಿಂದಲೇ ಬರೆದರು. ಕವಿರಾಜಮಾರ್ಗ, ವಡ್ಡಾರಾಧನೆ, ಪಂಪಭಾರತ, ಗದಾಯುದ್ಧ, ಹೀಗೆ ಕನ್ನಡದ ಪ್ರಮುಖ ಕೃತಿಗಳಲ್ಲಿ ಈ ನಾಡಿನ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದ ಸಮೃದ್ಧ ಆಕರಗಳಿವೆ. ಮಧ್ಯಕಾಲೀನ ಕರ್ನಾಟಕದಲ್ಲಿ ಶರಣರ ಆಗಮನದ ನಂತರ ಸಾಹಿತ್ಯದ ಚಹರೆಯೇ ಬದಲಾಯಿತು. ಸಂಸ್ಕೃತಿಯನ್ನೂ ಸಾಹಿತ್ಯವನ್ನೂ ಧರ್ಮ, ರಾಜಕೀಯಗಳನ್ನು ಒಟ್ಟಾಗಿ ಮುಖಾಮುಖಿಯಾಗಿಸಿದ ಕಾಲಘಟ್ಟವದು. ಮೊಟ್ಟ ಮೊದಲ ಬಾರಿಗೆ ತಳವರ್ಗಗಳು ಸಾಹಿತ್ಯ ರಚನೆಯಲ್ಲಿ ತೊಡಗಿ ಚರಿತ್ರೆಯನ್ನು ನೋಡುವ ಕ್ರಮಗಳನ್ನು ಬದಲಿಸಿದವು. 'ಸಾಂಸ್ಕೃತಿಕ ಚರಿತ್ರೆ' ಎಂದರೇನು? ಎನ್ನುವುದಕ್ಕೆ ಸ್ಪಷ್ಟವಾದ ವ್ಯಾಖ್ಯೆ ದೊರೆತದ್ದೇ ಕರ್ನಾಟಕದ ವಚನ ಚಳುವಳಿಯ ಸಂದರ್ಭದಲ್ಲಿ. ಅದು ಸಮಾಜದ ಎಲ್ಲಾ ವರ್ಗಗಳ ಆಶಯಗಳಿಗೆ ಬದ್ಧವಾಯಿತು ಎನ್ನುವ ಕಾರಣಕ್ಕಾಗಿಯೇ ಇಂದಿಗೂ ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆ. ಪ್ರಭುತ್ವದ ನಿರಾಕರಣೆಯ ಒಡಲಲ್ಲೇ ಜನ ಸಾಮಾನ್ಯರ ಚರಿತ್ರೆ ಕಟ್ಟುವ ಹೊಸ ಉತ್ಸಾಹವನ್ನು ತೋರಿತು. ಹೊಸ ಸ್ವರೂಪದಲ್ಲಿ ಸಾಹಿತ್ಯ ಅಭಿವ್ಯಕ್ತವಾದ ಕ್ರಮದಲ್ಲಿಯೇ ಚರಿತ್ರೆಯ ಪುನಾರಚನೆಯ ಆಶಯಗಳು ಗೋಚರಿಸಿದವು. ಧರ್ಮ–ಜಾತಿ–ಪ್ರಭುನಿಷ್ಠ ಧೋರಣೆಗಳಿಂದ ಸಮಾಜಮುಖಿ ಸಂಚಲನೆ ಪ್ರಾರಂಭವಾಗಿ ಕೆಳವರ್ಗಕ್ಕೂ ಒಂದು ಚರಿತ್ರೆ ಇದೆ ಎಂಬ ತಿಳಿವಿನ ನೆಲೆಗೆ ಬಂದು ನಿಂತಿತು. 'ಜಾತಿ'ಯನ್ನು ರಾಜಕೀಯಾರ್ಥದ ಐಡೆಂಟಿಟಿಯಾಗಿ ಗುರುತಿಸದೆ 'ಕಾಯಕ' ಪ್ರಜ್ಞೆಯಲ್ಲಿ ಸಮಾವೇಶಗೊಳಿಸಿರುವುದು ಆ ಕಾಲದ ದೊಡ್ಡ ಸಾಮಾಜಿಕ– ಸಾಂಸ್ಕೃತಿಕ ಪಲ್ಲಟ.

ಸಾಹಿತ್ಯದ ಮೂಲಕ ಚರಿತ್ರೆಯನ್ನು ನೋಡುವ ಕ್ರಮಗಳಲ್ಲಿ ದೋಷಗಳಿವೆ. ಅಲ್ಲಿ ಅತಿ ವರ್ಣನೆ, ರಂಜನೆಗಳ ಮೂಲಕ ಐತಿಹಾಸಿಕ ಸತ್ಯಗಳು ಮರೆಯಾಗುತ್ತವೆ. ಹಾಗಾಗಿ ಚರಿತ್ರೆಯನ್ನು ಸಾಹಿತ್ಯಕ್ಕಿಂತ ಭಿನ್ನವಾಗಿ ನೋಡಬೇಕೆನ್ನುವ ವಾದ ೧೭–೧೮ನೇ ಶತಮಾನದ ಹೊತ್ತಿಗೆ ಮುಂಚೂಣಿಗೆ ಬಂತು. ಇತಿಹಾಸವು ವಸ್ತುನಿಷ್ಠ ಅಧ್ಯಯನದ ಶಾಖೆಯಾಗಿ ಬೆಳೆಯುತ್ತಾ ಶಾಸನಗಳು, ನಾಣ್ಯಗಳು, ಅವಶೇಷಗಳು, ತಾಮ್ರಪಟ, ಸ್ತಂಭಲೇಖ, ಚಿತ್ರಕಲೆ ಮೊದಲಾದ ಆಕರಗಳತ್ತ ಹೊರಳಿತು. 'ಭಾರತೀಯರಿಗೆ ಇತಿಹಾಸ ಪ್ರಜ್ಞೆ' ಇಲ್ಲ ಎನ್ನುವುದನ್ನು ಘೋಷಿಸುತ್ತಲೇ, ಗತವೈಭವವನ್ನು ಮರುಕಳಿಸುವ

ಚಿಂತನೆಯಲ್ಲಿ ಪಾಶ್ಚಾತ್ಯ ವಿದ್ವಾಂಸರು ಚರಿತ್ರೆ ಕಟ್ಟುವ ಸಾಹಿತ್ಯೇತರ ಆಕರಗಳನ್ನು ಬಳಸಿಕೊಂಡರು. ನಮ್ಮ ಪರಂಪರೆಯ ಸತ್ವಗಳನ್ನು ಮರೆತು ಚರಿತ್ರೆ ಕಟ್ಟುವ ಹೊಸ ಹುನ್ನಾರಕ್ಕೆ ತೊಡಗಿದರು. ನಮ್ಮ ಮೌಖಿಕ ಪರಂಪರೆ, ಐತಿಹ್ಯ, ಪುರಾಣಕಥೆಗಳ ಬಗೆಗಿನ ದಿವ್ಯ ನಿರ್ಲಕ್ಷ್ಯದಿಂದಾಗಿ ಚರಿತ್ರೆಯ ಮಾದರಿಗಳು ಬದಲಾದವು. ವ್ಯಕ್ತಿನಿಷ್ಠವಾಗಿ ನೋಡುವ ಮಾದರಿಗಳು ಚಲಾವಣೆಗೆ ಬಂದವು. ಪ್ರಭುತ್ವ ಕೇಂದ್ರಿತ ವ್ಯವಸ್ಥೆ ನಾಡಿನ ಸಾಂಸ್ಕೃತಿಕ ಬದುಕನ್ನು ವ್ಯಕ್ತಿ ಕೇಂದ್ರಿತವಾಗಿಯೇ ನೋಡುವಂತೆ ಒತ್ತಾಯಿಸುತ್ತದೆ. ಯುದ್ಧ- ವಿಜಯಗಳು ಸಾಮ್ರಾಜ್ಯಶಾಹಿಯೊಬ್ಬನ ಮೌಲ್ಯವಾಗಿ ಪರಿಗಣಿತವಾದವು. ಈ ನಡುವೆ ಸ್ತ್ರೀ ಚರಿತ್ರೆಯಂತೂ ಕಣ್ಣಿಗೆ ಕಾಣದಂತಾಯಿತು. ವಿಜಯಕ್ಕಾಗಿ ಪ್ರಾಣತೆತ್ತ ಬಹುಸಂಖ್ಯಾತ ಸೈನಿಕರ, ಸೇವಕರ ಕಥನಗಳು ಮರೆಯಾಗಿ ಹೋದವು. ಶಾಸನಗಳು ಹೇಳುವುದೇ ಪರಮ ಸತ್ಯವೆಂಬ ಭ್ರಮೆಗೆ ಒಳಗಾದವು. ಮೌಖಿಕ ಸಂಕಥನಗಳನ್ನು ಅನುಮಾನಿಸುವ ಅದು 'ಕಟ್ಟುಕತೆ' ಎಂಬ ಉಪೇಕ್ಷಿಸುವ ಮನೋಭಾವನೆ ಬೆಳೆದಿರುವುದನ್ನು ಕಾಣಬಹುದು.

ಕಳೆದ ಶತಮಾನದ ೭೦-೮೦ರ ದಶಕದ ವೇಳೆಗೆ ಜಾಗತಿಕ ಮಟ್ಟದಲ್ಲಿ ಸಂಪ್ರದಾಯಬದ್ಧ ಮನೋಚಿಂತನೆಗಳಿಗೆ ಹೊಸ ಆಲೋಚನ ಕ್ರಮದ ಪ್ರತಿರೋಧಗಳು ಸೃಷ್ಟಿಯಾದವು. ನವಚಾರಿತ್ರಿಕವಾದ ಅಥವಾ ನ್ಯೂ ಹಿಸ್ಟಾರಿಸಿಸಂ ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿದವ ಸ್ಟೀಫನ್ ಜೆ ಗ್ರೀನ್ ಬ್ಲಾಟ್ (೧೯೪೩). ಅಮೇರಿಕಾದ ಕ್ರೇಂಬ್ರಿಡ್ಜನಲ್ಲಿ ಹುಟ್ಟಿದ ಈತ ೧೯೮೨ರ ಸುಮಾರಿಗೆ ತನ್ನ 'Genre' ಎಂಬ ನಿಯತಕಾಲಿಕದ ಮೂಲಕ ಈ ಚಿಂತನೆಯನ್ನು ಪ್ರಚಾರಕ್ಕೆ ತಂದ. ಅನಂತರ ಲೂಯಿ ಮಾನ್ ಟ್ರೋಸ್, ಕ್ಲಿಫರ್ಡ್ ಜೀರ್ಟ್ಸ್ ಮುಂತಾದವರು ಇದನ್ನು ಬೆಂಬಲಿಸಿದರು. ಹಿಸ್ಟಾರಿಸಿಸಂ ಅಥವಾ ನವಚಾರಿತ್ರಿಕವಾದ ಎಂಬ ಹೆಸರಿನಲ್ಲಿ ಇದು ಭಾರತಕ್ಕೂ ಬಂತು. ಚರಿತ್ರೆಯನ್ನು ಸಾಂಸ್ಕೃತಿಕ ಆಶಯಗಳಿಗೆ ಬದ್ಧವಾಗಿ ನೋಡಬೇಕೆಂಬ ಪ್ರಧಾನ ಉದ್ದೇಶವನ್ನು ಇದು ಮುಂದಿಟ್ಟಿತು. ಸಾಹಿತ್ಯ ಹಾಗೂ ಚರಿತ್ರೆಯ ವಿದ್ವಾಂಸರಿಂದ ರೂಪ ತಳೆದ ಈ ಹೊಸ ಪರಿಕಲ್ಪನೆ ಎಲ್ಲಿಯೂ ಸಾಹಿತ್ಯ ಮತ್ತು ಚರಿತ್ರೆಯನ್ನು ಭಿನ್ನವೆಂದು ಹೇಳುವುದಿಲ್ಲ. ಇವುಗಳ ಸಂಬಂಧದ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸುವುದಿಲ್ಲ. ಇವೆರಡು ಜೊತೆ ಜೊತೆಯಲ್ಲಿ ಸಾಗುವಷ್ಟು ಆಪ್ತವಾಗಿದೆ ಎಂಧು ಭಾವಿಸುತ್ತದೆ. ಕಳೆದು ಹೋದ ಕಾಲವನ್ನು ಕಟ್ಟಲು ಸಾಹಿತ್ಯ ಪಠ್ಯಗಳು ಪೂರಕ ಸಾಮಾಗ್ರಿಗಳನ್ನು ಒದಗಿಸುತ್ತದೆ ಎಂದೇ ನಂಬುತ್ತದೆ.

ನವಚಾರಿತ್ರಿಕವಾದವು ಸಾಹಿತ್ಯ ಪಠ್ಯವನ್ನು ಅದರ ಸೌಂದರ್ಯ ತತ್ವ, ಮೀಮಾಂಸೆಯ ಭಾಗವಾಗಿ ನೋಡುವುದಿಲ್ಲ. ಸಾಹಿತ್ಯ ನಿರೂಪಿಸುವ ಸತ್ಯ ಕೇವಲ ಕವಿಯ ಅನುಭವಲೋಕವನ್ನು ಮಾತ್ರ ಒಳಗೊಳ್ಳದೆ ಅದು ಆ ಕಾಲದ 'ಸಾಂಸ್ಕೃತಿಕ

ಸಂರಚನೆ'ಗಳ ಮೊತ್ತವಾಗಿ ಗ್ರಹಿಸಲ್ಪಡುತ್ತದೆ. ಸಾಹಿತ್ಯ ಕೃತಿಯನ್ನು ಚರಿತ್ರೆಯೊಂದಿಗೆ ಇಟ್ಟು ನೋಡುವ ಕ್ರಮದಲ್ಲಿಯೇ ಹೊಸ ನೋಟಗಳ ಹುಡುಕಾಟವಿದೆ. ವಸಾಹತುಶಾಹಿ ಚರಿತ್ರೆಯ ಮಾದರಿಗಳು ಗತದ ವೈಭವಗಳ ವ್ಯಾಖ್ಯಾನದಲ್ಲಿ ಮುಳುಗಿ ವರ್ತಮಾನವನ್ನು ಮರೆತವು ಎನ್ನುವುದೇ ಇದಕ್ಕಿರುವ ಗಂಭೀರ ಆರೋಪ.

ಆದರೆ ನವಚರಿತ್ರವಾದವು ಗತದ ಪ್ರಜ್ಞೆಯಿಂದಲೇ ವರ್ತಮಾನವನ್ನು ಕಟ್ಟುವುದಕ್ಕೆ ಪ್ರೇರಣೆಯನ್ನು ನೀಡುತ್ತದೆ. "ಈ ಚಿಂತನೆ ಸಮಾಜ ಹಾಗೂ ಸಂಸ್ಕೃತಿಯ ವಿಭಿನ್ನ ಚಹರೆಗಳನ್ನು ಉಳಿಸಿಕೊಳ್ಳುವಲ್ಲಿ ಗಮನಹರಿಸುವಂಥದ್ದು, ಸಂಸ್ಕೃತಿ ವಿಮರ್ಶೆಯಲ್ಲಿನ ವೈವಿಧ್ಯತೆಗಳನ್ನು ಈ ವಾದವು ಪ್ರಧಾನ ಭಿತ್ತಿಯನ್ನಾಗಿಸಿಕೊಳ್ಳುತ್ತದೆ. ಪಶ್ಚಿಮದ ನಾಗರೀಕತೆಯಿಂದ ಭಿನ್ನವಾಗಿ ನಿಲ್ಲುವ ನವ ಚಾರಿತ್ರಿಕತೆಯ ಚಿಂತನೆ ಪ್ರತೀತ ಗುಣವನ್ನು ಹೊಂದಿರುವಂತದ್ದು. ಜೊತೆಗೆ ಸಾಹಿತ್ಯದ ದೇಶಿ ಹಾಗೂ ಜನಪದ ಚಿಂತನೆಗಳನ್ನು ಒಪ್ಪಿಕೊಳ್ಳುತ್ತದೆ. ಅಂದರೆ ಮಾನವ ಶಾಸ್ತ್ರಜ್ಞರ ಹಾಗೂ ಸಂಸ್ಕೃತಿ ಚಿಂತಕರ ಹಿನ್ನಲೆಯಿಂದ ನೋಡುವ ಎಲ್ಲಾ ಬಗೆಯ ದೇಶಿ ಆಚರಣೆ, ರೂಢಿ-ಪದ್ಧತಿಗಳು ನಂಬಿಕೆಗಳನ್ನು ನವ ಚಾರಿತ್ರಿಕವಾದ ಬಳಸಿಕೊಳ್ಳುತ್ತದೆ" [೧]

ನಮ್ಮಲ್ಲಿ ಶಂ.ಬಾ. ಜೋಷಿಯವರು ಕೂಡ ಚಾರಿತ್ರಿಕ ಸಾಮಾಗ್ರಿಗಳಾಗಿ ಪುರಾಣ, ಐತಿಹ್ಯ, ಭಾಷಿಕ ಸಂಕೇತಗಳನ್ನು ಬಳಸುತ್ತಾರೆ. ಈ ಮೂಲಕ ನಮ್ಮದೇ ಜೀವನ ಕ್ರಮದ ಗತಿಗಳನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ. ಮಧ್ಯಯುಗೀನ ಸಂಸ್ಕೃತಿ ಚರಿತ್ರೆಯನ್ನು ಕಟ್ಟುವಲ್ಲಿ ನಾವು ಆಶ್ರಯಿಸಬೇಕಾದ ಮುಖ್ಯ ಆಕರಗಳೆಂದರೆ ಪುರಾಣ, ಕಾವ್ಯ, ಐತಿಹ್ಯ, ಚದುರಿಹೋದ ಶಾಸನಗಳು, ತಾಳೇಗರಿ ಮೊದಲಾದವು. ಓರಿಯಂಟಲಿಸ್ಟ್ ಅಧ್ಯಯನಕಾರರ ಪ್ರಕಾರ ಶಾಸನ, ಸ್ತಂಭಲೇಖ, ತಾಳೆಗರಿಗಳನ್ನು ಬಿಟ್ಟು ಉಳಿದೆಲ್ಲವು ನಂಬಲರ್ಹವಲ್ಲದ, ನಿಖರವಲ್ಲದ, ಆಕರಗಳು. ೧೮-೧೯ನೇ ಶತಮಾನದಿಂದಲೂ ಇಂತಹ ಆಲೋಚನೆಗಳೇ ಮಹತ್ವವನ್ನು ಗಳಿಸಿಕೊಂಡಿದ್ದವು. ಈ ವಾದವನ್ನು ಬೆಂಬಲಿಸುವವರನ್ನು ಪೊಸಿಟಿವಿಸ್ಟರು ಎಂದು ಕರೆಯುತ್ತೇವೆ.

ಪ್ರಸ್ತುತ ಸಂಶೋಧನ ಅಧ್ಯಯನ "ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ"ಯು ಈ ಬಗೆಯ ನವ ಚಾರಿತ್ರಿಕವಾದಿ ಚಿಂತನೆಗಳನ್ನು ಪುರಸ್ಕರಿಸುತ್ತದೆ ಮತ್ತು ಬೆಂಬಲಿಸುತ್ತದೆ. ಕನಕದಾಸ ಒಬ್ಬ ಹರಿದಾಸ ಪಂಥದ ಸಂತ. ಅವನು ಬದುಕಿದ್ದ ಸಂದರ್ಭ, ಹಲವು ಸಾಂಸ್ಕೃತಿಕ ಸಂಘರ್ಷಗಳಿಗೆ ಸಾಕ್ಷಿಯಾದ ಮಧ್ಯಕಾಲೀನ ಇತಿಹಾಸದ ಮಹತ್ವದ ಕಾಲಘಟ್ಟ. ವಚನ ಚಳುವಳಿಯ ಕಾವು ತನ್ನ ಕಾಲದ ತೀವ್ರತೆಯಿಂದ ತಣ್ಣಗಾಗಿ ಹೊಸ ವಿಚಾರ ಜಾಗೃತಿಯನ್ನು ಹುಟ್ಟು ಹಾಕಿದ ಸನ್ನಿವೇಶ.

೧. ಡಾ.ಸಿ. ಆರ್.ಗೋವಿಂದ ರಾಜು □ನವಚಾರಿತ್ರಿಕವಾದ □ಪುಟ ೨೨

ಪ್ರಭುತ್ವವು ತನ್ನ ಅಧಿಕಾರಕೇಂದ್ರದಿಂದ ಕೆಳಗಿಳಿದು ಜನಮುಖಿಯಾಗುವ ಒತ್ತಡವನ್ನು ರಾಜಕೀಯ ವಲಯದಲ್ಲಿ ಸ್ಥಾಪಿಸಿದ ವಚನ ಚಳುವಳಿ, ಮತ್ತೆ ಕಾಣಿಸಿಕೊಂಡಿದ್ದು ಭಕ್ತಿ ಚಳುವಳಿಯ ಮೂಲಕವೇ ಎಂಬುದು ಗಮನಾರ್ಹ. ಕನ್ನಡದಲ್ಲಿ ಭಕ್ತಿ ಚಳುವಳಿ 'ಹರಿದಾಸ ಚಳುವಳಿ' ಎಂದೇ ಪ್ರಸಿದ್ಧ. ವಿಜಯನಗರ ಸಾಮ್ರಾಜ್ಯದ ವೈಭವದ ಪರಾಕಾಷ್ಠೆಯಲ್ಲಿ, ಶ್ರೀಮಂತಿಕೆಯ ಅಹಂಕಾರದಲ್ಲಿ ಮೈಮರೆತ ಜನವರ್ಗಕ್ಕೆ ಮಾನವ ಬದುಕಿನ ನಶ್ವರತೆಯನ್ನು, ದೈವಭಕ್ತಿಯನ್ನೂ ಒಟ್ಟಾಗಿ ಪ್ರೇರೇಪಿಸಿದವರು ಹರಿದಾಸರು. ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ಕನಕದಾಸರು, ಪ್ರಸನ್ನವೆಂಕಟದಾಸರು, ಹೀಗೆ ಹರಿದಾಸರ ಬಳಗವೇ ಬೆಳೆಯುತ್ತದೆ. ಹರಿದಾಸ ಪಂಥದ ಮೂಲಕವೇ ಇತಿಹಾಸಕ್ಕೆ ಪರಿಚಯವಾಗುವ ಕನಕದಾಸರು ಅವರಲ್ಲೊಂದು ಭಿನ್ನಧ್ವನಿ.

ಸಾಹಿತ್ಯ ಕೃತಿಯೊಂದರ ಚಾರಿತ್ರಿಕತೆ ಎಷ್ಟು ಅಧಿಕೃತ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಜಿ. ಎಸ್. ಶಿವರುದ್ರಪ್ಪನವರ ಮಾತನ್ನು ಗಮನಿಸಬೇಕು. "ಕಾವ್ಯದಲ್ಲಿ ವ್ಯಕ್ತವಾಗಿರುವ ಜನ ಜೀವನದ ಮತ್ತು ಜನಮನದ ಚಿತ್ರ ಅಂದಿನ ಕಾಲಕ್ಕೆ ವಿಶಿಷ್ಟವಾದುದು ಎಂದು ಹೇಳುವುದು ಸುಲಭವಲ್ಲ. ಏಕೆಂದರೆ ಕವಿ ಎಷ್ಟೋ ವೇಳೆ ತನ್ನ ಕಾಲಕ್ಕಿಂತಲೂ ಹಿಂದಿನಿಂದ ಪರಂಪರಾಗತವಾಗಿ ಬಂದ ರೀತಿ ನೀತಿಗಳನ್ನು ಪ್ರಕಟಿಸಿರಬಹುದು ಅಥವಾ ಮುಂದೆ ಇಂಥದಾಗಬೇಕೆಂಬ ಆದರ್ಶ ಸ್ಥಿತಿಯ ಚಿತ್ರವನ್ನು ಪ್ರಕಟಿಸಲೂ ಬಹುದು." [೧] ಕೃತಿಯ ಕಾಲ ನಿರ್ದೇಶನದಲ್ಲಿರುವ ತೊಡಕು ಇದಕ್ಕೊಂದು ಕಾರಣವಿರಬಹುದು. ಆದರೂ "ಸಾಹಿತ್ಯ ಕೃತಿಯ ಮುಖ್ಯ ಗುಣವೇ ತನ್ನ ಕಾಲದ ಮಿತಿಗಳನ್ನು ತಮ್ಮ ಅಭಿವ್ಯಕ್ತಿ ಮತ್ತು ಅರ್ಥವ್ಯಾಪ್ತಿಗಳಲ್ಲಿ ಮೀರಲು ಪ್ರಯತ್ನಪಡುವುದು. ಒಂದರ್ಥದಲ್ಲಿ ಭೂತ-ವರ್ತಮಾನಗಳನ್ನು ಸಮೀಕರಿಸುವ, ಭೂತದಿಂದ ವರ್ತಮಾನಕ್ಕೆ ಚಲಿಸುವ ಗುಣ ಸಾಹಿತ್ಯ ಕೃತಿಗಿದೆ" [೨]

ನಮ್ಮಲ್ಲಿ ಸಮಾಜಕೇಂದ್ರಿತ ವಿಮರ್ಶೆಯ ಮಾರ್ಗಗಳು ನಾನಾ ವಿಧ ಮತ್ತು ರೂಪಗಳಲ್ಲಿ, ಬೆಳೆದು ಶ್ರೀಮಂತವಾಗಿವೆ. ಅವುಗಳಲ್ಲಿ ಚಾರಿತ್ರಿಕ ವಿಮರ್ಶೆಯೂ ಒಂದು. ಇದರ ಮುಖ್ಯ ಸ್ವರೂಪ ಲೇಖಕನೊಬ್ಬನ ಸಾಹಿತ್ಯ ಕೃತಿಯ ಮೂಲಕ ಅವನ ಕಾಲದ ಸಾಂಸ್ಕೃತಿಕ, ಚಾರಿತ್ರಿಕ ಸನ್ನಿವೇಶಗಳನ್ನು ಪುನರ್ನಿರ್ಮಿಸುವುದು, ಕೃತಿಕಾರನ ಕಾಲದಲ್ಲಿ ಪ್ರಭಾವಶಾಲಿಯಾದ ವೈಚಾರಿಕತೆಯನ್ನು ಗುರುತಿಸುವುದು, ಕೃತಿಕಾರನ ಜೀವನ, ಬದುಕಿಗೂ, ಬರಹಕ್ಕೂ ಇರುವ ಸಂಬಂಧವನ್ನು ನಿರೂಪಿಸುವುದು,

---

೧. ಜಿ.ಎಸ್. ಶಿವರುದ್ರಪ್ಪ: ವಿಮರ್ಶೆಯ ಪೂರ್ವ ಪಶ್ಚಿಮ. ಪುಟ-೭೧.
೨. ಬಸವರಾಜಕಲ್ಗುಡಿ: ಅನುಭಾವ- ಸಾಂಸ್ಕೃತಿಕ ಹುಡುಕಾಟ. ಪುಟ: ೨೭

ಕೃತಿಕಾರನ ಜೀವನ ಚರಿತ್ರೆಯನ್ನು ಕಟ್ಟುವುದು ಈ ಮೊದಲಾದವು. ಚಾರಿತ್ರಿಕ ವಿಮರ್ಶೆಯ ವ್ಯಾಪ್ತಿಯೊಳಗೆ ಬರುವ ಸಂಗತಿಗಳು. ೧೮ನೇ ಶತಮಾನದ ಆರಂಭದಲ್ಲಿಯೇ ಕಾಣಿಸಿಕೊಂಡ ಈ ವಿಮರ್ಶಾಪಂಥಕ್ಕೆ ವ್ಯಾಪಕ ವಿರೋಧವೂ ಸೃಷ್ಟಿಯಾಯಿತು. ಕೃತಿಕಾರನಿಗೆ ಸಲ್ಲುವ ವಿಶೇಷ ಮಾನ್ಯತೆಯಿಂದ ಕೃತಿಯೇ ನಿರ್ಲಕ್ಷ್ಯಕ್ಕೆ ಒಳಪಡಬಹುದು, ತಾನು ಬದುಕಿದ ಪರಿಸರ ಲೇಖಕನ ಮೇಲೆ ಸಮಾನವಾಗಿ ಪರಿಣಾಮ ಬೀರದೆ ಹೋಗಬಹುದು. 'ಇಂತಹ ಸನ್ನಿವೇಶ ಇಂತಿಂತಹ ಲೇಖಕನಿಗೇ, ಕೃತಿಗಳಿಗೇ ಜನ್ಮ ನೀಡುತ್ತದೆ' ಎಂದು ಕವಿಯ ಜನಾಂಗ, ಕಾಲಘಟ್ಟಗಳನ್ನು ವಿಶ್ಲೇಷಿಸಿ ಹೇಳುವುದು ಕಷ್ಟ. ಈ ಬಗೆಯ ಪೂರ್ವಗ್ರಹಗಳ ಮೂಲಕ ಕೃತಿ ಪ್ರವೇಶಿಸುವುದು ಸರಿಯಾದ ಮಾರ್ಗವಾಗಲಾರದು ಎಂಬುದು ನವ್ಯ ವಿಮರ್ಶಕರು ಹಾಗೂ ರಾಚನಿಕವಾದಿಗಳ ಅಭಿಪ್ರಾಯ. ಸೊಸ್ಯೂರ್, ಬ್ಲೂಮ್‌ಫೀಲ್ಡ್, ಎಲಿಯಟ್, ರ್‍ಯಾನ್ ಸವರ್, ಕ್ಲಿಯಂತ್ ಬ್ರೂಕ್ಸ ಇವರಲ್ಲಿ ಮುಖ್ಯರು.

ಕನ್ನಡದಲ್ಲಿ ಆರ್. ನರಸಿಂಹಾಚಾರ್ ಅವರ 'ಕವಿಚರಿತೆ', ರಂ. ಶ್ರೀಮುಗಳಿಯರ ಕನ್ನಡ ಸಾಹಿತ್ಯ ಚರಿತ್ರೆ, ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ', ಸೇಡಿಯಾಪು ಕೃಷ್ಣಭಟ್ಟರ 'ವಿಚಾರಪ್ರಪಂಚ', ಸಿ. ವೀರಣ್ಣನವರ 'ಕನ್ನಡಸಾಹಿತ್ಯ: ಚಾರಿತ್ರಿಕ ಬೆಳವಣಿಗೆ'– ಮೊದಲಾದವು ಈ ಚಾರಿತ್ರಿಕ ವಿಮರ್ಶೆಯನ್ನು ಆಧರಿಸಿ ರಚನೆಯಾದ ಕೃತಿಗಳಾಗಿವೆ.

ಚಾರಿತ್ರಿಕ ವಿಮರ್ಶೆ ೧೯೮೦ರ ದಶಕದ ನಂತರ ತನ್ನ ರೂಪ ಬದಲಿಸಿಕೊಂಡಿತು. 'ನವಚಾರಿತ್ರಿಕವಾದ' (New Historicism) ಎಂಬ ಹೆಸರಿನಲ್ಲಿ ಮರುಹುಟ್ಟು ಪಡೆಯಿತು. ಇದರಲ್ಲಿ ಫುಕೋನ 'ಡಿಸ್‌ಕೋರ್ಸ್', ಸೈದ್‌ನ 'ವಸಾಹತೋತ್ತರ ಚಿಂತನೆ', ಲೂಯಿ ಅಲ್‌ಥೂಸರ್‌ನ 'ನವಮಾರ್ಕ್ಸವಾದಿ ಚಿಂತನೆಗಳು' ಸಮ್ಮಿಳಿತವಾಗಿದೆ. ನವ ಚಾರಿತ್ರಿಕವಾದವು ಮುಂದಿಡುವ ಮುಖ್ಯ ಅಭಿಪ್ರಾಯಗಳನ್ನು ಡಾ.ಸಿ.ಎನ್.ರಾಮಚಂದ್ರನ್ ಹೀಗೆ ಸಂಗ್ರಹಿಸುತ್ತಾರೆ:

೧) ಸಾಂಪ್ರದಾಯಿಕ ಮಾರ್ಕ್ಸ್‌ವಾದಿಗಳು ನಂಬುವಂತೆ ಚರಿತ್ರೆಯ ಗತಿ ಸದಾ ಏಕಮುಖಿಯಾಗಿ ಪ್ರತಿಗಾಮಿಯಾಗಿರುವುದಿಲ್ಲ. ಚರಿತ್ರೆಯೆಂದರೆ ವಿಚ್ಛಿನ್ನತೆಗಳ ಆಕಸ್ಮಿಕಗಳ ಚರಿತ್ರೆ. (ಇದು ಫೂಕೋನ ಡಿಸ್ಕೋರ್ಸ್ ಪರಿಕಲ್ಪನೆಯ ಒಂದು ಮುಖ್ಯ ಅಂಶ)

೨) ಸಾಹಿತ್ಯ ಪಠ್ಯಗಳು ಇತರ ಚಾರಿತ್ರಿಕ, ಮಾನವಿಕ ಶಾಸ್ತ್ರೀಯ ಪಠ್ಯಗಳಂತೆ, ವಿಶಿಷ್ಟ ಕಾಲ ದೇಶಗಳ, ವಿಶಿಷ್ಟ ಸಾಂಸ್ಕೃತಿಕ ಸಂದರ್ಭಗಳ ಉತ್ಪನ್ನ. ಆದ್ದರಿಂದ, ನವ್ಯ–ರೂಪನಿಷ್ಠ ವಿಮರ್ಶಕರಂತೆ ಸಾಹಿತ್ಯ ಕೃತಿಗಳನ್ನು ಅವುಗಳ ರಾಜಕೀಯ– ಸಾಂಸ್ಕೃತಿಕ ಸಂದರ್ಭಗಳಿಂದ ಹೊರತುಪಡಿಸಿ ವ್ಯಾಖ್ಯಾನ ಮಾಡಲಾಗುವುದಿಲ್ಲ.

೩) ಸಾಹಿತ್ಯ ಪಠ್ಯಗಳು ಸಮಕಾಲೀನ ಅಧಿಕಾರ- ಸಂಬಂಧಗಳನ್ನು ಬಲಪಡಿಸುವ, ಸಮರ್ಥಿಸುವ ಐಡಿಯಾಲಜಿಯಿಂದಲೇ ರೂಪಿಸಲ್ಪಟ್ಟಿರುತ್ತದೆ. ಆದರೆ, ಎಲ್ಲೋ ಒಂದು ಕಡೆ ಇವುಗಳ ಐಡಿಯಾಲಜಿಯ ನಿಯಂತ್ರಣವನ್ನು ಮೀರಿ ಅದರಲ್ಲಡಗಿರುವ ಸ್ವವಿರೋಧಗಳನ್ನು ದರ್ಶಿಸುತ್ತದೆ. ಆದ್ದರಿಂದ ಒಂದು ಸಾಹಿತ್ಯಿಕ ಪಠ್ಯವೆಂದರೆ 'ವಿಸಂಗತ ದನಿಗಳ ತುಮುಲದ ಸ್ಥಳ'. (ಈ ಅಂಶ ಬಕ್ತೀನ್ ಚರ್ಚಿಸುವ polyphony ಅಥವಾ ಬಹುಧ್ವನಿತ್ವದ ಪರಿಕಲ್ಪನೆಯಿಂದ ಪ್ರಭಾವಿತವಾಗಿದೆ.)

೪) ಎಲ್ಲಾ ಪ್ರಭಾವೀ ರಾಜಕೀಯ- ಸಾಂಸ್ಕೃತಿಕ ಸಂಸ್ಥೆಗಳು, ಒಂದು ಮಟ್ಟದವರೆಗೆ ತಮಗೆ ವಿರುದ್ಧವಿರುವ ಶಕ್ತಿಗಳನ್ನು ಪೋಷಿಸಿ, ಪ್ರೋತ್ಸಾಹಿಸುತ್ತವೆ. ಇಂತಹ ಪೋಷಣೆ, ಪ್ರೋತ್ಸಾಹಗಳ ಹಿಂದಿನ ಉದ್ದೇಶ ತನ್ನ ನಿಯಂತ್ರಣ ಹಾಗೂ ಅಧಿಕಾರಗಳನ್ನು ಬಲಪಡಿಸುವುದೇ ಆಗಿದೆ.

೫) ವಿಮರ್ಶಕನ ಗುರಿಯೆಂದರೆ ಒಂದು ಸಾಹಿತ್ಯ ಪಠ್ಯದಲ್ಲಿರುವ ಎಲ್ಲಾ ಬಗೆಯ 'ವಿಸಂಗತದನಿಗಳನ್ನು' ಗುರುತಿಸಿ, ಒಂದು ಕೃತಿ ಒಂದು ನಿರ್ದಿಷ್ಟ ಸ್ಥಳ ಹಾಗೂ ಕಾಲದಲ್ಲಿ ಹೇಗೆ ಮತ್ತು ಏಕೆ ಅಸ್ತಿತ್ವಕ್ಕೆ ಬರುತ್ತದೆ ಎಂದು ಶೋಧಿಸುವುದು. ಹಾಗೆಯೇ, ಅದೇ ನೆಲೆಯಲ್ಲಿ, ಒಂದು ಪಠ್ಯದಲ್ಲಿ 'ಅಡಗಿಸಲ್ಪಟ್ಟಿರುವ' ಅಥವಾ ಅಂಚಿಗೆ ತಳ್ಳಲ್ಪಟ್ಟಿರುವ ದನಿಗಳನ್ನು ಗುರುತಿಸುವುದು [೪]

ನವಚಾರಿತ್ರಿಕವಾದವು ಮಂಡಿಸುವ ಸೈದ್ಧಾಂತಿಕತೆಯ ನೆರವಿನಿಂದ ಮಧ್ಯಕಾಲೀನ ಚಾರಿತ್ರಿಕ ಸಂದರ್ಭದ ಮೂಲಕ ಕನಕ ಕೃತಿಗಳನ್ನು ಪ್ರವೇಶಿಸುವ ಪ್ರವೇಶಿಸಿದರೆ ಸಾಹಿತ್ಯ ಮತ್ತು ಚರಿತ್ರೆಯ ಸಂಬಂಧಕ್ಕೆ ಇನ್ನಷ್ಟು ಪುಷ್ಟಿ ದೊರೆಯಬಹುದು. ಸಾಹಿತ್ಯವು ನಿರೂಪಿಸುವ ಮೌಲ್ಯಗಳು ಒಂದು ಕಾಲದ ಸಂಸ್ಕೃತಿ, ಇತಿಹಾಸದ ಮೇಲೆ ಬೆಳಕು ಚೆಲ್ಲುವ ಕಾರಣದಿಂದ ಅದು ಒಂದು ಪರಂಪರೆಯನ್ನು ಪ್ರತಿನಿಧಿಸುತ್ತದೆ. ಕನ್ನಡದಲ್ಲಿ ವಚನ ಸಾಹಿತ್ಯವೊಂದನ್ನು ಹೊರತುಪಡಿಸಿದರೆ ಉಳಿದೆಲ್ಲವೂ ಪರಂಪರೆಯೊಂದಿಗೆ ಪಡೆದ ನಿಕಟ ಅನುಭವದ ಮೂಲಕವೇ ಪ್ರಕಟಗೊಳ್ಳುತ್ತದೆ. ವಚನಗಳನ್ನು ಸಾಹಿತ್ಯವೆಂದು ಕರೆಯಬೇಕೋ ಬೇಡವೋ ಎನ್ನುವ ಕುರಿತು ಚಿಂತಿಸಬೇಕಿದೆ. ಏಕೆಂದರೆ ಅದು ಯಾವ ಸನಾತನ ಸಂಸ್ಕೃತಿ, ಸಾಹಿತ್ಯ ಪರಂಪರೆಯೊಂದಿಗೂ ತನ್ನ ಸಂಬಂಧವನ್ನು ದಾಖಲಿಸಿಕೊಳ್ಳುವುದಿಲ್ಲ. ಆದರೆ ದಾಸ ಸಾಹಿತ್ಯ ಹಾಗಲ್ಲ. ಅದು ನಮ್ಮ ವೈದಿಕ ಸಂಸ್ಕೃತಿಯ ಪಳಯುಳಿಕೆಯಾಗಿ ಅದೇ ಸನಾತನ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಈ ನಡುವೆಯೂ ಕನಕದಾಸರು ನಮಗೆ ವಿಭಿನ್ನವಾಗಿ ಕಾಣುವುದು ದಾಸ ಚಳುವಳಿಯ ಪರಿಧಿಯೊಳಗೆ ಸಮಕಾಲೀನ ಸಂವೇದನೆಯನ್ನು ಮತ್ತು ಪರಂಪರೆಯ ತಿಳುವಳಿಕೆಯನ್ನು

---

೪. ಡಾ. ಸಿ. ಎನ್. ರಾಮಚಂದ್ರನ್: ಸಾಹಿತ್ಯ ವಿಮರ್ಶೆ ಪುಟ-೬೨-೬೩

ಹೇಗೆ ವರ್ಗೀಕರಿಸಿದರು ಎನ್ನುವುದಕ್ಕಾಗಿ. ಅವರು ಈ ಪರಂಪರೆಯ ತಿಳುವಳಿಕೆಯನ್ನು ಯಥಾವತ್ತಾಗಿ ವರ್ಗೀಕರಿಸುವುದಕ್ಕಿಂತ ಅದರ ವೈರುಧ್ಯದ ಮುಖಗಳನ್ನು, ಸಾಮಾಜಿಕ ತರತಮಗಳನ್ನು ತಿಳಿವಿನ ದಾರಿಯಾಗಿ ವರ್ಗೀಕರಿಸಿದರು ಎನ್ನುವುದು ಬಹಳ ಮುಖ್ಯವಾದ ಸಂಗತಿ. ಇದರಲ್ಲಿ ನಮಗೆ ಕಾಣುವಂತದ್ದು ಕರ್ನಾಟಕವೆಂಬ ಬಹುತ್ವದ ಪ್ರಜ್ಞೆ, ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹೀಗೆ ಎಲ್ಲಾ ನೆಲೆಗಳಲ್ಲಿ ಇದು ಅದು ಅವರನ್ನು ಆವರಿಸಿಕೊಂಡಿದೆ.

ಮಧ್ಯಕಾಲೀನ ಕರ್ನಾಟಕದ ಚರಿತ್ರೆಯನ್ನು ಇದುವರೆಗೆ ಓದಿಕೊಂಡ ಕ್ರಮಗಳಲ್ಲಿ ಎರಡು ಮುಖ್ಯಧಾರೆಗಳು ನಮಗೆ ಕಾಣಿಸುತ್ತವೆ.

೧. ರಾಜಕೀಯ ಸಂಘರ್ಷದ ಪ್ರಭಾವ-ಪರಿಣಾಮಗಳು

೨. ಧರ್ಮ, ಸಾಹಿತ್ಯ, ಸಂಸ್ಕೃತಿ, ಪ್ರೇರಣೆಗಳು ಸಾಮಾಜಿಕ ಜೀವನದಲ್ಲಿ ಉಂಟು ಮಾಡಿದ ಬದಲಾವಣೆಗಳು

ಈ ಎರಡು ಧಾರೆಗಳನ್ನು ಚರಿತ್ರೆಯ ಪಠ್ಯಗಳು ಒಂದಾಗಿ ನೋಡುವ ಪ್ರಯತ್ನ ಮಾಡಿರುವುದು ಕಡಿಮೆ ಎಂದೇ ಹೇಳಬೇಕು. ಮಧ್ಯಕಾಲಿನ ಚಾರಿತ್ರಿಕ ಆಕರಗಳು ರಾಜಕೀಯವನ್ನು ಯುದ್ಧ-ಹಿಂಸೆ, ದಿಗ್ವಿಜಯದ, ಶೌರ್ಯಗಾಥೆಗಳಾಗಿ ನೋಡುವುದಕ್ಕೆ ಪ್ರೇರೇಪಿಸುತ್ತವೆಯೇ ಹೊರತು ಅದರೊಳಗೆ ಹುದುಗಿರುವ ಸಾಮಾನ್ಯ ವರ್ಗಗಳ ಮಾನವೀಯ ಮುಖಗಳನ್ನು ಪರಿಚಯಿಸುವುದಕ್ಕೆ ಪ್ರೇರಣೆ ನೀಡುವುದಿಲ್ಲ. ಭಾರತದ ಚರಿತ್ರೆಯ ಪಠ್ಯಗಳು ಯುದ್ಧವನ್ನು ವರ್ಣಿಸಿದಷ್ಟು ಬೇರೆ ಯಾವ ವಿಷಯಗಳನ್ನು ವರ್ಣಿಸಿಲ್ಲ. ಚರಿತ್ರೆ, ಇತಿಹಾಸವೆಂದರೆ ಅದು ರಾಜರ ಚರಿತ್ರೆಗಳು ಮಾತ್ರ, ಅಲ್ಲಿ ಜನಸಾಮಾನ್ಯರ ಬದುಕಿನ ವಿವರಗಳು ದೊರೆಯುವುದು ತುಂಬಾ ಕಡಿಮೆ. ಶಾಸನಗಳ ಸಾಲುಗಳಲ್ಲಿ ಅಲ್ಲಲ್ಲಿ ಕಂಡು ಬರುವ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಿ ಹುಡುಕಿ ಆ ಕಾಲದ ಸಾಮಾಜಿಕ ಜೀವನಗಳನ್ನು ಅನುಷಂಗಿಕ ಆಕರಗಳಾಗಿ ಗುರುತಿಸಲಾಗುತ್ತದೆಯೇ ಹೊರತು ಪ್ರಧಾನಧಾರೆಯ ಆಕರವಾಗಿ ಅಲ್ಲ.

ಪ್ರಭುತ್ವವನ್ನು ವಿವೇಕದ ದಾರಿಯಲ್ಲಿ ಮುನ್ನಡೆಸಬೇಕಾದ ಧರ್ಮ, ಸಂಘರ್ಷದ ದಾರಿ ಹಿಡಿದಾಗ ಜನಸಾಮಾನ್ಯರ ಬದುಕನ್ನು ಊಹಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಪ್ರಬಲ ವರ್ಗಗಳು ತಮ್ಮ ಅಸ್ಮಿತೆಗಾಗಿ ನಡೆಸುವ ಹೋರಾಟದ ಕಥನಗಳನ್ನು ದುರ್ಬಲ ವರ್ಗದ ನೆಲೆಯಲ್ಲಿಯೂ ಗ್ರಹಿಸಬೇಕಾದ ಅಗತ್ಯವಿದೆ. ಈ ದೃಷ್ಟಿಯಿಂದ ಕನಕದಾಸರು ಮಧ್ಯಕಾಲೀನ ಧರ್ಮ ರಾಜಕೀಯ- ಸಂಸ್ಕೃತಿ- ಸಾಹಿತ್ಯದ ಅತ್ಯುತ್ತಮ ಪ್ರತಿನಿಧಿ. ಚರಿತ್ರೆಯ ಏಕಮುಖಿ ಧೋರಣೆಯ ಚಿಂತನೆಯ ನೆಲೆಗಳನ್ನು ಒಡೆದು ನೋಡಬೇಕಾದ ಅಗತ್ಯವಿರುವುದರಿಂದ ಕನಕದಾಸನ ಮೂಲಕ ಚರಿತ್ರೆಯನ್ನು ಕಟ್ಟುವ, ಚರಿತ್ರೆಯನ್ನು

ನೋಡುವ ಪ್ರಥಮ ಆದ್ಯತೆಯನ್ನು ಪ್ರಸ್ತುತ ಸಂಶೋಧನ ಅಧ್ಯಯನ ಕೈಗೆತ್ತಿಕೊಳ್ಳುತ್ತದೆ. ಜಾತಿ ರಾಜಕಾರಣದಿಂದ ತೀವ್ರವಾದ ಅಪಮಾನ– ಅವಮಾನಗಳ ನಡುವೆಯೂ ತನ್ನ ಅಸ್ತಿತ್ವವನ್ನು ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ದಾಖಲಿಸಿಕೊಂಡ ಕನಕದಾಸರು, ತಮ್ಮ ಕೃತಿಗಳ ಮೂಲಕ ತನ್ನ ಕಾಲದ ರಾಜಕೀಯ ಸಾಮಾಜಿಕ, ಆರ್ಥಿಕ, ಧಾರ್ಮಿಕ ಅನುಭವಗಳನ್ನು ದಾಖಲಿಸಿದ್ದಾರೆ. ವರ್ತಮಾನವನ್ನು ಅರ್ಥೈಸಿಕೊಳ್ಳಬೇಕಾದರೆ ಗತದ ಪರಿಜ್ಞಾನ ಬೇಕು. ಕನಕದಾಸರು ಚರಿತ್ರಕಾರರಲ್ಲ. ಅವರು ಕೃತಿಗಳಲ್ಲಿ ಕಾಣಿಸಿರುವ ಅನುಭವಗಳು ಮುಖ್ಯ. ಅದು ಏಕಕಾಲದಲ್ಲಿ ಸಾಮಾಜಿಕ ಸಮಾನತೆಯ ಆಶಯವನ್ನು, ಜಾತಿ ವಿರೋಧಿ ನೀತಿಯನ್ನು, ವ್ಯಕ್ತಿ ಬದುಕಿನ ಘನತೆಯನ್ನು ಪ್ರಭುತ್ವ ವಿರೋಧಿ ಅಂಶಗಳನ್ನು ಒಳಗೊಂಡಿರುವುದರಿಂದ ಮಧ್ಯಕಾಲೀನ ಸಾಂಸ್ಕೃತಿಕ ಅಧ್ಯಯನಕ್ಕೆ ಮೌಲಿಕವಾದ ಆಕರವಾಗಬಲ್ಲದು ಎನ್ನುವುದು ಇಲ್ಲಿನ ಪ್ರಧಾನವಾದ ತಿಳುವಳಿಕೆ.

ಇಲ್ಲಿ 'ಚರಿತ್ರೆ'ಯನ್ನು ಸಾಂಸ್ಕೃತಿಕ ಅಧ್ಯಯನದ ವಿಶಾಲವಾದ ಪರಿಕಲ್ಪನೆಯಲ್ಲಿ ನಿರ್ವಚಿಸಿಕೊಳ್ಳಲಾಗಿದೆ. 'ಸಂಸ್ಕೃತಿ' ಪರಿಕಲ್ಪನೆ ಸಾಹಿತ್ಯ, ಇತಿಹಾಸ, ಪುರಾಣ, ಜನಪದ ಹೀಗೆ ಎಲ್ಲಾ ಮಜಲುಗಳನ್ನು ಒಳಗೊಂಡಿರುವುದರಿಂದ ಪ್ರಸ್ತುತ ಅಧ್ಯಯನವನ್ನು 'ಸಾಂಸ್ಕೃತಿಕ ಚರಿತ್ರೆ' ಎಂದು ವಿಸ್ತರಿಸಿಕೊಳ್ಳಲಾಗಿದೆ. ಕನಕನ ಕೃತಿಗಳು ಇಲ್ಲಿ ಪ್ರಧಾನ ಆಕರಗಳಾಗಿ ಬಳಕೆಯಾದರೆ ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ಐತಿಹಾಸಿಕ ಆಕರಗಳಾದ ಶಾಸನ, ಕೈಫಿಯತ್ತು, ತಾಮ್ರಪಟ, ಸ್ಮಾರಕಗಳು, ವಿದೇಶಿ ಪ್ರವಾಸಿಗರ ಬರವಣಿಗೆ ಇವೆಲ್ಲವನ್ನೂ ಆನುಷಂಗಿಕ ಆಕರಗಳಾಗಿ ಪರಿಭಾವಿಸಲಾಗಿದೆ.

ಕನಕದಾಸರನ್ನು ಇವಿಷ್ಟರಿಂದಲೇ ಅರ್ಥೈಸಿಕೊಳ್ಳುವುದು ಅಸಾಧ್ಯ. ಏಕೆಂದರೆ ಕನಕದಾಸರ ಬಗೆಗೆ ಹಲವು ಐತಿಹ್ಯ, ಪವಾಡದ ಕಥೆಗಳು ಜನಪದರ ಸಾಮಗ್ರಿಯಲ್ಲಿದೆ. ಕನ್ನಡ ನಾಡಿನ ಜನಪದ ಲೋಕವನ್ನು ಪ್ರವೇಶಿಸದೇ ಯಾವ ಸಂಸ್ಕೃತಿಕ ನಾಯಕ ಚರಿತ್ರೆಯನ್ನೂ ಬರೆಯಲು ಸಾಧ್ಯವಿಲ್ಲ. ಕನಕ ಜನ ಸಮೂಹದ ನಾಯಕನೆಂಬುವುದನ್ನೇ ಅಧ್ಯಯನವು ಪ್ರತಿಪಾದಿಸುತ್ತದೆ. ಅವನ ಬದುಕು –ಬರಹಗಳ ಕುರಿತು ಹಲವಾರು ಜನಸಮೂಹದ ಅಭಿಪ್ರಾಯಗಳು ರೂಪುಗೊಂಡಿವೆ. ಲಾವಣಿ, ಜನಪದ ಹಾಡುಗಳು,

ಕಥೆಗಳು, ಚಿತ್ರಗಳು, ಸಂಗೀತವೇ ಮೊದಲಾದ ಹಲವು ಪ್ರಕಾರಗಳಲ್ಲಿ ಕನಕದಾಸರ ವೈಯಕ್ತಿಕ ಹಾಗೂ ಸಾಮಾಜಿಕ ಚಿತ್ರಣಗಳು ಹರಡಿಕೊಂಡಿವೆ. ಇವೆಲ್ಲವನ್ನೂ ಮೌಖಿಕ ಆಕರಗಳೆಂದು ಪರಿಭಾವಿಸಬಹುದು.

ಕನಕದಾಸರ ಸ್ಥಾನವನ್ನು ನಿರ್ಧರಿಸುವ ನಿಖರವಾದ ಚರಿತ್ರೆಯೊಂದು ಅವರಿಗಿಲ್ಲ. ಅವರನ್ನು ದಾಸ ಸಾಹಿತ್ಯದ ಪ್ರತಿನಿಧಿ ಎಂಬಂತೆ ಮಾತ್ರ ಗುರುತಿಸಲಾಗುತ್ತಿದೆ. ಅವರ

ಬದುಕಿನೊಂದಿಗೆ ತಳುಕು ಹಾಕಿಕೊಂಡ ಅನೇಕ ಘಟನೆಗಳನ್ನು, ಕಟ್ಟಿದ ಪವಾಡ ಕಥೆಗಳನ್ನು ಪುನರ್ ಅವಲೋಕಿಸುವ ಅಗತ್ಯವಿರುವುದರಿಂದ ಪ್ರಸ್ತುತ ಅಧ್ಯಯನದಲ್ಲಿ ಕನಕ ಚರಿತ್ರೆ ಕಟ್ಟುವುದೂ ಒಂದು ಪ್ರಮುಖವಾದ ಉದ್ದೇಶವಾಗಿದೆ. ಕನಕನ ಬದುಕನ್ನು ಅರ್ಥೈಸದೆ ಕನಕ ಕೃತಿಗಳಿಗೆ ಪ್ರವೇಶಿಸಿದರೆ ಅದು ಅಪೂರ್ಣವಾಗುತ್ತದೆ. ಆದ್ದರಿಂದ ಮಧ್ಯಕಾಲೀನ ಕರ್ನಾಟಕದಲ್ಲಿ ಕನಕದಾಸರ ಪ್ರತಿನಿಧೀಕರಣದ ಸ್ವರೂಪವನ್ನು ಹಾಗೂ ಸಮೂಹ ನಾಯಕನಾಗಿ ಕನಕದಾಸರ ಬದುಕು-ಬರಹಗಳ ಅನುಸಂಧಾನವನ್ನೂ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ವಿಜಯನಗರ ಸಾಮ್ರಾಜ್ಯವನ್ನು ಹಿಂದುವಾದಿ ದೃಷ್ಟಿಕೋನದಿಂದ ನೋಡುವುದಕ್ಕಿಂತ ಧಾರ್ಮಿಕ ಸಮನ್ವಯದ ನೆಲೆಯಲ್ಲಿ ನೋಡಬೇಕಾದ ಅಗತ್ಯವಿದೆ. ಏಕೆಂದರೆ ಧರ್ಮವು ಇಂದಿನ ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಉಂಟು ಮಾಡುತ್ತಿರುವ ತಲ್ಲಣಗಳಿಗೆ ಉತ್ತರವಾಗಿ ಮಧ್ಯಕಾಲೀನ ಚರಿತ್ರೆಯನ್ನು ಪುನರ್ ಅವಲೋಕಿಸಬೇಕಾಗಿದೆ. ಕನಕದಾಸರ ಮೂಲಕ ನಿರೂಪಿಸಲ್ಪಡುವ ವಿಜಯನಗರದ ಚರಿತ್ರೆಯ ಸ್ವರೂಪವನ್ನು ಕಂಡುಕೊಳ್ಳುವುದಕ್ಕೆ ಪೂರಕವಾಗಿ ತೆಲುಗು ಹಾಗೂ ಕನ್ನಡ ಕೃತಿಗಳಲ್ಲಿ ಮಧ್ಯಕಾಲಿನ ಚಾರಿತ್ರಿಕ ಪ್ರಜ್ಞೆಯನ್ನು ವಿಶ್ಲೇಷಿಸಬೇಕಾದುದು ಅನಿವಾರ್ಯ. ಈ ಕೃತಿಗಳಿಗೂ ಕನಕ ಕೃತಿಗಳಿಗೂ ಇರುವ ಮೂಲಭೂತ ವ್ಯತ್ಯಾಸವನ್ನು ಶೋಧಿಸುವ ನೆಲೆಯಿಂದ ತನ್ನ ತಾತ್ವಿಕ ಚೌಕಟ್ಟನ್ನು ರೂಪಿಸಿಕೊಂಡಿದೆ. ಇದುವರೆಗಿನ ಅಧ್ಯಯನಗಳಲ್ಲಿ ಕನಕ ಕೃತಿಗಳು ಚಾರಿತ್ರಿಕ ಅಂಶಗಳನ್ನು ಗುರುತಿಸುತ್ತವೆಯೇ ಹೊರತು ಅದರ ಮಹತ್ವವನ್ನು ಇತಿಹಾಸದ ಪುನಾರಚನೆಯ ಆಶಯವಾಗಿ ಗುರುತಿಸಿಲ್ಲ. ಮೋಹನ ತರಂಗಿಣಿಯಲ್ಲಿ ನಿರೂಪಿತವಾದ ರಾಜಕೀಯ ಚರಿತ್ರೆಯ ಒಳನೋಟಗಳು ಪ್ರಭುಚರಿತ್ರೆಯನ್ನು ಇತಿಹಾಸದ ಕೃತಿಗಳಿಗಿಂತ ಹೇಗೆ ಭಿನ್ನವಾಗಿ ನೋಡುತ್ತದೆ ಎನ್ನುವುದು ಇಲ್ಲಿನ ಕುತೂಹಲ. ನಳಚರಿತ್ರೆ ಹಾಗೂ ರಾಮಧಾನ್ಯ ಚರಿತ್ರೆಗೂ ಈ ಮಾತನ್ನು ವಿಸ್ತರಿಸಬಹುದು.

ಕನಕ ಕೃತಿಗಳು ಕಟ್ಟಿದ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗೆ ವಿಭಿನ್ನ ಆಯಾಮಗಳಿವೆ. ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮಧ್ಯಕಾಲೀನ ರಾಜಕೀಯ ಭೂಪಟದಲ್ಲಿ ಕಾಣಿಸಿಕೊಂಡ ಸ್ವರೂಪವು ಭಾರತದ ಒಟ್ಟು ರಾಷ್ಟ್ರೀಯ ಭಾವೈಕ್ಯತೆಯ ಉದಯಕ್ಕೆ ಪ್ರೇರಣೆ ನೀಡಿದೆ ಎನ್ನುವುದನ್ನು ಹುಡುಕಬೇಕಾಗಿದೆ. ಕನಕದಾಸರು ಕೈಗೊಂಡ ಚಳವಳಿಯು ವ್ಯಕ್ತಿಗತ ಮಿತಿಯಲ್ಲಿ ಅಭಿವ್ಯಕ್ತಗೊಂಡರೂ ಅದು ದೂರಗಾಮಿ ಪರಿಣಾಮಗಳನ್ನು ಹೊಂದಿದೆ ಎನ್ನುವುದು ಮುಖ್ಯವಾದ ವಿಚಾರ. ವಚನ ಚಳವಳಿಯಂತೆ, ವಚನಕಾರರಂತೆ ಕನಕದಾಸರಿಗೆ ತನ್ನ ಆಶಯಗಳನ್ನು ವ್ಯಾಪಕವಾದ ಆಂದೋಲನವಾಗಿ ರೂಪುಗೊಳಿಸಲು ಸಾಧ್ಯವಾಗದಿದ್ದರೂ ವೈಯಕ್ತಿಕ ನೆಲೆಯಲ್ಲಿ ಅವರ ಪ್ರಯತ್ನವನ್ನು ವಿಶ್ಲೇಷಿಸಬೇಕಾದುದು ಅಗತ್ಯವೆನ್ನುವ ತಿಳುವಳಿಕೆಗೆ ಈ ಅಧ್ಯಯನ

ಬದ್ಧವಾಗಿದೆ. ಎಲ್ಲಾ ತಳವರ್ಗಗಳ ಅಲೆಮಾರಿ-ಅರೆಅಲೆಮಾರಿ ಸಮುದಾಯಗಳ ವರ್ಗ ಪ್ರಜ್ಞೆಯನ್ನು ಬಡಿದೆಬ್ಬಿಸುವ ಮೂಲಕ ದಲಿತರು, ಹಿಂದುಳಿದವರು, ಮಹಿಳೆಯರನ್ನು ಒಳಗೊಂಡ ಸಾಮಾಜಿಕ ಚರಿತ್ರೆ ಕಟ್ಟುವಲ್ಲಿ ಕನಕದಾಸರ ಕೊಡುಗೆಯನ್ನು ತಿಳಿದುಕೊಳ್ಳಬೇಕಾಗಿದೆ. ಆಗ ಸಮಗ್ರ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗೊಂದು ಘನತೆ ಪ್ರಾಪ್ತವಾಗುತ್ತದೆ.

ಕನಕನೆಂಬ ಸೈನಿಕನನ್ನೂ, ಪ್ರಭುತ್ವದ ಪ್ರತಿನಿಧಿಯನ್ನೂ, ದಾರ್ಶನಿಕ, ಕ್ರಾಂತಿಕಾರಿ ಸಮಾಜವಾದಿಯನ್ನೂ ಒಟ್ಟಾಗಿ ಅರ್ಥೈಸಿಕೊಳ್ಳಬಯಸುವಲ್ಲಿ ಕೆಲವು ವೈರುಧ್ಯದ ಹಾಗೂ ಸಂಘರ್ಷದ ನೆಲೆಗಳಿಂದ ಕನಕದಾಸರ ಕೃತಿಗಳನ್ನು ನೋಡಬೇಕು. ಬ್ರಾಹ್ಮಣ-ಶೂದ್ರ, ರಾಜ-ಸೇವಕ, ಬಡವ – ಶ್ರೀಮಂತ ಮುಂತಾದ ಪರಿಕಲ್ಪನಾತ್ಮಕ ದ್ವಂದ್ವಗಳನ್ನು ಅಧ್ಯಯನದ ಅನುಕೂಲತೆಗಾಗಿ ವಿಭಜಿಸಲಾಗಿದೆಯೇ ಹೊರತು ವೈಯಕ್ತಿಕ ಹಿತಾಸಕ್ತಿ, ಪೂರ್ವಾಗ್ರಹದಿಂದಲ್ಲ ಎನ್ನುವುದನ್ನೂ ಸ್ಪಷ್ಟಪಡಿಸಬೇಕಾಗುತ್ತದೆ. ವಸ್ತು ಸ್ಥಿತಿಯ ಗ್ರಹಿಕೆಗೆ ಇಂತಹ ವಿಭಜನೆಗಳು ಅನಿವಾರ್ಯವಾಗುತ್ತದೆ. ಚರಿತ್ರೆಯನ್ನು ನೋಡುವ ಕ್ರಮದಲ್ಲಿ ಮೂಲಭೂತ ಬದಲಾವಣೆಗಳಾಗಬೇಕೆಂಬ ವಾದವನ್ನು ಅಧ್ಯಯನವು ತಾತ್ವಿಕ ಚೌಕಟ್ಟುಗಳಲ್ಲಿ ಸಮರ್ಥಿಸಲು ಬಯಸುತ್ತದೆ. ಒಟ್ಟಿನಲ್ಲಿ ಕನಕ ಕೃತಿಗಳ ಮಧ್ಯಕಾಲಿನ ಚರಿತ್ರೆಯ ಪುನಾರಚನೆಯ ಆಶಯಗಳು ಹೊಸ ಮಾದರಿಯ ಅಧ್ಯಯನದ ಸಾಧ್ಯತೆಗಳನ್ನು ಪರಿಚಯಿಸುವ ಪ್ರಯತ್ನ ಮಾಡುವುದರೊಂದಿಗೆ ಮಧ್ಯಕಾಲೀನ ಚರಿತ್ರೆಗೆ ಕನಕ ಕೃತಿಗಳಲ್ಲಿ ದೊರೆತ ವಿಶೇಷ ತಿರುವು ಯಾವುದು ಎನ್ನುವುದನ್ನು ಗಮನಿಸುವುದು ಮುಖ್ಯ.

ಅಧ್ಯಾಯ ೨

# ಮಧ್ಯಕಾಲೀನ ಚರಿತ್ರೆಯ ಸ್ವರೂಪ ಮತ್ತು ಕನಕದಾಸರ ಪ್ರತಿನಿಧೀಕರಣ

ಕರ್ನಾಟಕದ ಸಾಂಸ್ಕೃತಿಕ ಶ್ರೀಮಂತಿಕೆಯ ಭಾಗವಾಗಿರುವ ಕನಕದಾಸರು ಬಹುಮುಖಿ ವ್ಯಕ್ತಿತ್ವದ ಅಸ್ಮಿತೆಯನ್ನು ಇತಿಹಾಸದಲ್ಲಿ ದಾಖಲಿಸಿಕೊಂಡ ಧೀಮಂತರು. ಅವರು ಕೇವಲ ಕವಿ-ಕೀರ್ತನೆಕಾರರು ಮಾತ್ರವಲ್ಲ, ಧಾರ್ಮಿಕ-ಸಾಮಾಜಿಕ-ನೈತಿಕ ಮೌಲ್ಯಾಧಾರಿತ ವ್ಯವಸ್ಥೆಯ ಪ್ರತಿಪಾದಕರಾಗಿಯೂ, ಶೋಷಣೆ, ಅಸಮಾನತೆ, ವರ್ಗ-ವರ್ಣ ಕೇಂದ್ರಿತ ಪ್ರಭುತ್ವ ವಿರೋಧಿ ಚಳುವಳಿಯ ನೇತಾರರಾಗಿಯೂ, ನಾಯಕ (ಪಾಳೇಗಾರ), ತತ್ತ್ವಜ್ಞಾನಿ, ಅದ್ವೈತವಾದಿ, ಶೈವ-ವೈಷ್ಣವ ಸಮಾನತೆಯ ಪ್ರತಿನಿಧಿಯಾಗಿಯೂ, ಎಲ್ಲದಕ್ಕಿಂತ ಹೆಚ್ಚಾಗಿ ತಳವರ್ಗಗಳ, ಶೂದ್ರ ಸಂಸ್ಕೃತಿಯ ಚಹರೆಯನ್ನು ಹರಿದಾಸ ಪರಂಪರೆಯಲ್ಲಿ ಸ್ಥಾಪಿಸಿಕೊಂಡ ಅನುಭಾವಿಯಾಗಿಯೂ ಗುರುತಿಸಿಕೊಳ್ಳಬಹುದು. ಹೀಗೆ ಬಹು ಸಾಂಸ್ಕೃತಿಕ ಮಾದರಿಯ ಚರಿತ್ರೆಯ ನೆಲೆಯಲ್ಲಿ 'Larger Identity' ಯನ್ನು ಪಡೆದ 'ಸಾಂಸ್ಕೃತಿಕ ನಾಯಕ'ರಾಗಿ ಅವರು ನಮಗೆ ಮುಖ್ಯರು.

ಕನಕದಾಸರ ಬದುಕು-ಬರಹವನ್ನು ಕುರಿತು ಬಂದಿರುವ ಬಹುತೇಕ ಅಧ್ಯಯನದ ಮಾದರಿಗಳು ಓರಿಯಂಟಲ್ (Oriental) ದೃಷ್ಟಿಕೋನದಿಂದ ಪ್ರೇರಿತವಾದವುಗಳಾಗಿವೆ. ವಸಾಹತೋತ್ತರ ಕರ್ನಾಟಕದ ಭಾಷಿಕ ಚರಿತ್ರೆಯಲ್ಲಿ ಸಾಹಿತ್ಯ-ಸಂಸ್ಕೃತಿಯನ್ನು ಈ ಮಾನದಂಡಗಳು ಪ್ರಭಾವಿಸಿವೆ. ಅದರಲ್ಲೂ ಚರಿತ್ರೆ, ಇತಿಹಾಸವನ್ನು ರೂಪಿಸಿದ ಬಹುಪಾಲು ಅಧ್ಯಯನಗಳು ಚರಿತ್ರೆಯ ಒಳಗೆ ನಿರ್ದಿಷ್ಟ ವಿಷಯಗಳನ್ನು ಚೌಕಟ್ಟಾಗಿ ರೂಪಿಸಿ ಅದನ್ನೇ ವಿಶ್ಲೇಷಿಸಿ ಬರೆದ ಕ್ರೋನಿಕಲ್ ರಚನೆಗಳು. ಅದರಲ್ಲಿ ಪ್ರಸ್ತಾಪಿಸಲ್ಪಡುವ ವಿಷಯಗಳು ನಿರ್ದಿಷ್ಟ ಸನ್ನಿವೇಶಗಳನ್ನಷ್ಟೇ ಸೂಚಿಸುತ್ತವೆ. ಯಾವ ಘಟನೆಯ ನಂತರ ಯಾವ ಘಟನೆ ಸಂಭವಿಸಿತು? ಆ ಸನ್ನಿವೇಶದಲ್ಲಿ ಅದರ ಮಹತ್ವವೇನು? ಎನ್ನುವುದರ ಕುರಿತು ಬೌದ್ಧಿಕ ಸಿದ್ಧಾಂತಗಳನ್ನು ರಚಿಸುವುದು ಇದರ ಗುರಿ. ಅಬ್ರಾಹಂ ಕಪ್ಲಾನ್ ಎನ್ನುವ ಇತಿಹಾಸಕಾರ ಹೇಳುವ ಹಾಗೆ ಇದೊಂದು 'ಹಿಸ್ಟಾರಿಕಲ್ ಅಕೌಂಟ್'. ಕನಕದಾಸರ ಕುರಿತಾಗಿಯೂ ಕಟ್ಟಲ್ಪಟ್ಟ ಈ 'ಇತಿಹಾಸದ ಲೆಕ್ಕಾಚಾರ' ಸ್ವೀಕೃತ ಮಾದರಿಯೊಂದರಿಂದ ರೂಪುಗೊಂಡಿದೆ. ಕನಕದಾಸರನ್ನು ಕರ್ನಾಟಕದ ಸಂಸ್ಕೃತಿಯ ಭಾಗವಾಗಿ ನೋಡುವ ಸಂದರ್ಭದಲ್ಲಿ ಈ ಮಾದರಿಗಳು ಹೇಗೆ ಬದಲಾಗಬೇಕು

ಎಂಬ ಪ್ರಶ್ನೆ ನಮ್ಮನ್ನು ಮತ್ತೆ ಮತ್ತೆ ಕಾಡುತ್ತದೆ. ಕನಕದಾಸರ ಅನುಭವ ಜಗತ್ತು ದಾಖಲಿಸಿದ ಸತ್ಯಗಳ ಮೂಲಕ ಅವರ ಚರಿತ್ರೆಯನ್ನು ಕಟ್ಟುತ್ತಿದ್ದೇವೆಯೋ ಅಥವಾ ಆ ಕಾಲದ ಧಾರ್ಮಿಕ-ರಾಜಕೀಯ- ಪ್ರಭುತ್ವ ಮಾದರಿಯ ಇತಿಹಾಸದ ಮೂಲಕ ಕನಕದಾಸರ ಚರಿತ್ರೆಯನ್ನು ಕಟ್ಟುತ್ತಿದ್ದೇವೆಯೋ? ಆದ್ದರಿಂದ ಕನಕಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆಯ ಆಶಯುಗಳು ಈ ಪ್ರಶ್ನೆಯೊಂದಿಗೆ ಮುಖಾಮುಖಿಯಾಗುವುದರೊಂದಿಗೆ ಚರಿತ್ರೆಯಲ್ಲಿ ಕನಕದಾಸರ ಪ್ರತಿನಿಧೀಕರಣದ ಅಗತ್ಯವನ್ನು ಕುರಿತು ಚರ್ಚಿಸುವುದು ಅಗತ್ಯ. ಅದಕ್ಕೂ ಪೂರ್ವದಲ್ಲಿ ಮಧ್ಯಕಾಲೀನ ಸಂಸ್ಕೃತಿ ಚರಿತ್ರೆಯ ವಿಭಿನ್ನ ಆಯಾಮಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಿಕೊಳ್ಳಬಹುದು.

೧. ಮಧ್ಯಕಾಲೀನ ಸಂಸ್ಕೃತಿ ಚರಿತ್ರೆಯ **ಸ್ಥಿರೀಕೃತ ರಚನೆಗಳು:** 'ಚರಿತ್ರೆ' ಮತ್ತು 'ಸಂಸ್ಕೃತಿ' ನಿರ್ವಚನಗಳಲ್ಲಿ ಕೆಲವು ಮೂಲಭೂತ ವ್ಯತ್ಯಾಸಗಳಿವೆ. ಸ್ಥಗಿತ ಮತ್ತು ಚಲನಶೀಲವೆಂಬ ಎರಡು ಮಾನದಂಡಗಳು ಪ್ರಾಯಶಃ ಇದನ್ನು ಸ್ಪಷ್ಟಪಡಿಸುತ್ತದೆ. ಸಂಸ್ಕೃತಿಯನ್ನು ಒಬ್ಬ ವ್ಯಕ್ತಿಯ ಅಥವಾ ಒಂದು ಸಮುದಾಯದ ಭಾಗವಾಗಿ ಮುಂದುವರಿದ ಪರಂಪರೆಯ ಚಲನಶೀಲ ಗುಣವಾಗಿ ನೋಡುವಂತೆ ಮಾಡಿದರೆ ಚರಿತ್ರೆಯನ್ನು ಒಟ್ಟು ಕಾಲಘಟ್ಟದ ಪ್ರಭಾವಿ ಮಾಧ್ಯಮದ ಮೂಲಕ ಅಂದರೆ ಧರ್ಮ, ರಾಜಕೀಯಗಳನ್ನು ಆಧರಿಸಿದ ಸಾಮಾಜಿಕತೆಯ ಸ್ವರೂಪದ ಹಿನ್ನಲೆಯಲ್ಲಿ ಅದರ ಸ್ವರೂಪವನ್ನು ಗ್ರಹಿಸುವಂತೆ ಮಾಡುತ್ತದೆ. ಇವೆರಡೂ ಭಿನ್ನವೆಂದು ವಿಭಾಗಿಸಿ ನೋಡುವ ಪ್ರಯತ್ನಗಳು ನಡೆದಿರುವುದನ್ನು ಕಾಣುತ್ತೇವೆ. ಚರಿತ್ರೆ ಎನ್ನುವುದು ಒಂದು ಸ್ಥಾವರವಲ್ಲ; ಸ್ಥಿರೀಕೃತ, ಸ್ಥಗಿತ ರಚನೆಯಲ್ಲ. ಅದು ಕಾಲದಿಂದ ಕಾಲಕ್ಕೆ ಒಡೆದು ಕಟ್ಟುವ ಸಾಂಸ್ಕೃತಿಕ ಪ್ರಕ್ರಿಯೆ ಎಂಬ ಧೋರಣೆಗೆ ಈ ತಿಳುವಳಿಕೆಯನ್ನು ವಿಸ್ತರಿಸಿಕೊಂಡಾಗ ಮಾತ್ರ ಇವೆರಡನ್ನೂ ಸಮಗ್ರವಾಗಿ ನೋಡಲು ಸಾಧ್ಯವಾಗುತ್ತದೆ.

೧. ಚರಿತ್ರೆಯನ್ನು ಶುದ್ಧ ಜ್ಞಾನ ಪಾತಳಿಯ ರೂಪವಾಗಿ ಗ್ರಹಿಸಲಾಗುತ್ತದೆಯೇ ಹೊರತು ಅದು ಅಂತರ್ಗತಗೊಂಡ ಸಂಸ್ಕೃತಿಯ ಹಿನ್ನಲೆಯಲ್ಲಿ ಅಲ್ಲ. ಏಕರೂಪಿ ಚರಿತ್ರೆಯನ್ನು ಕಟ್ಟುವುದಕ್ಕೆ ಭಾರತೀಯರು ಆರಂಭಿಸಿದಾಗಿನಿಂದ ನಮ್ಮಲ್ಲಿನ ಬಹುತ್ವವು ನಾಶವಾಗುತ್ತಾ ಬಂದಿದೆ. ಭಾರತದಂತಹ ಬಹು ಸಂಸ್ಕೃತಿಗಳ ದೇಶದಲ್ಲಿ ಪ್ರಧಾನ ಸಂಸ್ಕೃತಿಯ ಧಾರೆಗಳೇ ವಿಜೃಂಭಿಸುತ್ತಿದ್ದ ಕಾಲದಲ್ಲಿ ಜನ ಸಾಮಾನ್ಯರ ಸಂಸ್ಕೃತಿಗೆ ಸಿಕ್ಕ ಮನ್ನಣೆ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಪ್ರಧಾನ – ಅಧೀನ ಎಂಬ ವೈರುಧ್ಯಗಳ ಚಿತ್ರಣ ನಮಗೆ ದೊರೆತಿರುವುದೇ ವಸಾಹತುಶಾಹಿ ಪ್ರಜ್ಞೆಯಲ್ಲಿ. ಇವೆಲ್ಲದಕ್ಕೂ ಪ್ರತಿಕ್ರಿಯೆಯಾಗಿ ರೂಪುಗೊಂಡ ಪ್ರತಿ ಸಂಸ್ಕೃತಿ, ಉಪಸಂಸ್ಕೃತಿಯ ಆಶಯುಗಳು ಪ್ರಧಾನ ಸಂಸ್ಕೃತಿಗೆ ಮುಖಾಮುಖಿಯಾಗುತ್ತಲೇ ಬೆಳೆದುಕೊಂಡು ಬಂದಿದೆ. ಮಧ್ಯಕಾಲೀನ

ಭಾರತದಲ್ಲಿ ಸಾಮಂತ ವ್ಯವಸ್ಥೆ ಪ್ರಾರಂಭವಾದಾಗಿನಿಂದ ಪ್ರಧಾನ ಮತ್ತು ಅಧೀನ ಎಂಬ ಎರಡು ಕಲ್ಪನೆಗಳು ವಿಶೇಷವಾಗಿ ಬೆಳೆದು ಬಂತು. ಅಲ್ಲಿಂದ ಅದು ಸಂಸ್ಕೃತಿಯನ್ನೂ ಪ್ರವೇಶಿಸಿತು. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಸಂಸ್ಕೃತಿ ಮೇಲಿನಿಂದ ಕೆಳಗೆ ಹರಿದು ಬರುತ್ತದೆಯೇ ಹೊರತು ಕೆಳಗಿನಿಂದ ಮೇಲಕ್ಕೆ ಸಾಗುವುದಿಲ್ಲ. ನಿಜವಾಗಿ ಅದು ಕೆಳಗಿನಿಂದ ಮೇಲಕ್ಕೆ ಚಲಿಸಬೇಕು. ಕೆಳಗಿನಿಂದ ಮೇಲಕ್ಕೆ ಚಲಿಸುವುದು ಮೇಲ್ಮುಖ ಚಲನೆ ಅಥವಾ ಮೇಲಿನಿಂದ ಕೆಳಕ್ಕೆ ಚಲಿಸುವುದು ಹಿಮ್ಮುಖ ಚಲನೆ ಎಂದು ಕರೆದುಕೊಳ್ಳಬಹುದು. ಅಂದರೆ ಮೇಲ್ವರ್ಗದ ಪ್ರಬಲ ಸಂಸ್ಕೃತಿಯ ಪ್ರಜ್ಞೆಯನ್ನೇ ಕೆಳವರ್ಗಗಳ ಮೇಲೆ ಹೇರಲ್ಪಡುವ ಈ ಚಲನೆ ಎಂದಿನಿಂದಲೂ ನಮ್ಮ ಸಮಾಜವನ್ನು ವ್ಯಾಪಿಸಿದೆ. ಪ್ರಬಲ ಸಂಸ್ಕೃತಿಯ ಈ ಹಿಮ್ಮುಖ ಚಲನೆ ಅಧೀನ ಸಂಸ್ಕೃತಿಯ ಮೇಲ್ಮುಖ ಚಲನೆಗೆ ಅವಕಾಶ ಕೊಡದಷ್ಟು ಅಧಿಕಾರ ನೆಲೆಯನ್ನು ಆಶ್ರಯಿಸಿಕೊಳ್ಳುತ್ತದೆ. ಆಗ ದುರ್ಬಲ ವರ್ಗವು ತನ್ನ ಅಸ್ಮಿತೆಯುನ್ನು ಕಳೆದುಕೊಳ್ಳುವ ಅಪಾಯುವನ್ನು ಎದುರಿಸಬೇಕಾಗುತ್ತದೆ. ತನ್ನ ಅನನ್ಯತೆಯನ್ನು ಸ್ಥಾಪಿಸಲು ಹೆಣಗಾಡಬೇಕಾಗುತ್ತದೆ. ರಕ್ಷಣಾತ್ಮಕ ಪ್ರಯತ್ನವಾಗಿ ತನ್ನ ಮೂಲ ಬೇರುಗಳನ್ನು ಮರಳಿ ಗುರುತಿಸುವ ಪ್ರಜ್ಞಾಪೂರ್ವಕ ಕ್ರಿಯೆಯೊಂದರ ಮೊರೆ ಹೋಗಬೇಕಾಗುತ್ತದೆ. ಒಂದು ಸಂಸ್ಕೃತಿ ತನ್ನ ಅನನ್ಯತೆಯುನ್ನು ಗುರುತಿಸಲು ವುತ್ತು ಸ್ಥಾಪಿಸಲು ಅತೀವ ಕ್ರಿಯಾಶೀಲವಾಗುವುದು ಅದು ಇನ್ನೊಂದು ಪ್ರಬಲ ಸಂಸ್ಕೃತಿಯೊಡನೆ ಮುಖಾಮುಖಿಯಾದಾಗ ಮಾತ್ರ. [೧]

೨. ಸಂಸ್ಕೃತಿಗಳ ಈ ಬಗೆಯ ಮುಖಾಮುಖಿ ಹೆಚ್ಚು ವ್ಯಾಪಕವಾಗಿ ಮೂಡಿ ಬಂದಿರುವುದು ಮಧ್ಯಯುಗದಲ್ಲಿ. ರಕ್ಷಣೆ, ಸಂಘಟನೆ, ಸಮರ್ಥನೆಯ ಕಾರಣಕ್ಕಾಗಿ ಈ ಮುಖಾಮುಖಿ ಅನಿವಾರ್ಯವಾಯಿತು. ಮುಸ್ಲಿಂ ಆಕ್ರಮಣದ ವಿರೋಧಿ ನೆಲೆಯಲ್ಲಿ ಹುಟ್ಟಿದ ಹಿಂದೂ ಸಾಮ್ರಾಜ್ಯಶಾಹಿ, ಧಾರ್ಮಿಕ ಪುನರುತ್ಥಾನದ ಕಾರಣದಿಂದ ಹುಟ್ಟಿದ ವಚನ, ಭಕ್ತಿ ಚಳುವಳಿ, ಒಟ್ಟಾರೆಯಾಗಿ ಕಾಣಿಸಿಕೊಂಡ ದೇಶೀಯ ಸಂಸ್ಕೃತಿಯ ಪರವಾದ ಕಾಳಜಿ ಕೆಲವು ಪರಿಕಲ್ಪನಾತ್ಮಕ ದ್ವಂದ್ವಗಳನ್ನು ಸೃಷ್ಟಿಸಿತು. ಸಾಹಿತ್ಯ, ಸಂಸ್ಕೃತಿ, ಧರ್ಮ, ರಾಜಕಾರಣದ ಪರಸ್ಪರ ಹಿತಾಸಕ್ತಿ ಧೋರಣೆಗಳಿಗೆ ಅನುಗುಣವಾಗಿ ಮಾರ್ಗ- ದೇಸಿ, ಶಿಷ್ಟ- ಜಾನಪದ, ವೈದಿಕ- ಅವೈದಿಕ, ಆರ್ಯ-ದ್ರಾವಿಡ, ಪ್ರಭುತ್ವ-ಜನಪರ ಹೀಗೆ ರೂಪುಗೊಂಡ ಅಧ್ಯಯನದ ವೈಧಾನಿಕತೆ ಪರ-ವಿರೋಧದ ಮೂಲಕವೇ ವಸ್ತು ಸ್ಥಿತಿಯನ್ನು ಅರ್ಥೈಸುವ ಚೌಕಟ್ಟು ನಿರ್ಮಾಣವಾಯಿತು. ಒಂದು ಹಂತದವರೆಗೆ ಈ

೧. ಡಾ. ಸಿ. ಎನ್. ರಾಮಚಂದ್ರನ್ – ವಸಾಹತೋತ್ತರ ಚಿಂತನೆ ಪುಟ ೭೨

ಪರಿಕಲ್ಪನಾತ್ಮಕ ದ್ವಂದ್ವಗಳು ಐತಿಹಾಸಿಕ ನಿಜ (fact)ವನ್ನು ಶೋಧಿಸುವ ಕೆಲಸವನ್ನೇ ಮಾಡಿವೆ. ಆದರೆ ಇತ್ತೀಚಿನ ಕೆಲವು ಸಂಶೋಧನೆಯ ವಿಧಾನಗಳು ಪ್ರತಿಪಾದಿಸುವ ವಿಚಾರಗಳೆಂದರೆ ಈ ಬಗೆಯ ಚೌಕಟ್ಟು ಸೃಜಿಸುವ ಐತಿಹಾಸಿಕ ನಿಜಗಳ ಸ್ವರೂಪ ಹೇಗಿದೆಯೆಂದರೆ, ಅವು ಜನರನ್ನು ಹಿತಾಸಕ್ತಿಯ ಗುಂಪುಗಳನ್ನಾಗಿ ವಿಭಜಿಸಿ ನೋಡುವ ಪ್ರಯತ್ನ ಮಾಡುತ್ತದೆ. ಒಂದು ಗುಂಪು ಇನ್ನೊಂದು ಗುಂಪಿಗೆ ಮಾರಕವಾಗಿದೆ ಎಂಬ ಸಿದ್ಧಾಂತವನ್ನು ದೃಢೀಕರಿಸುವ ನಿಜಗಳಾಗಿವೆ. ಹಿಂದೂ–ಮುಸ್ಲಿಂ, ಬ್ರಾಹ್ಮಣ–ಶೂದ್ರ ಈ ಎಲ್ಲಾ ಗುಂಪುಗಳು ಇದರಲ್ಲಿ ಸೇರಿವೆ. [೩]

ಸಂಶೋಧನೆಯಲ್ಲಿ ಕಾಣಿಸಿಕೊಳ್ಳುವ ಇಂತಹ ಬಿಕ್ಕಟ್ಟುಗಳನ್ನು ಪರಿಹರಿಸಿಕೊಳ್ಳಲು ಸಾಂಸ್ಕೃತಿಕ ಅಧ್ಯಯನದ ಮಾದರಿಗಳು ಬದಲಾಗಬೇಕಾಗಿದೆ. ಸಂಸ್ಕೃತಿ ಚಲನೆಯ ಗತಿ ಕೆಳಗಿನಿಂದ ಮೇಲ್ಮುಖವಾಗಿ ಸಾಗಬೇಕಾಗಿದೆ. ಎಂದಿನಿಂದಲೂ ಈ ನಾಡನ್ನು ಕಟ್ಟಿದ ಸಂಸ್ಕೃತಿಯನ್ನು ರೂಪಿಸಿದ ಅದೆಷ್ಟೋ ಅಲೆಮಾರಿಗಳು, ಅರೆಅಲೆಮಾರಿಗಳು, ಬುಡಕಟ್ಟು, ತಳಮೂಲ ಅಥವಾ ನೆಲಮೂಲ ಸಂಸ್ಕೃತಿಯ ಪದರುಗಳನ್ನು ಶೋಧಿಸಬೇಕಾದದು ಅಗತ್ಯ. ಇದನ್ನು ಆಧರಿಸಿದ ಸಂಸ್ಕೃತಿಯ ಸಮಗ್ರ ದರ್ಶನವೊಂದನ್ನು ಕಟ್ಟಿಕೊಡುವುದಕ್ಕಾಗಿಯು ಚರಿತ್ರೆಯ ಪುನಾರಚನೆಯ ಅವಶ್ಯಕತೆ ಇದೆ.

ಮಧ್ಯಯುಗೀನ ಸಾಹಿತ್ಯದ ದೇಸಿ ಕವಿಗಳ ಕಾವ್ಯ ಲಕ್ಷಣಗಳ ಬಗ್ಗೆ ಮೇಲ್ಮುಖ ಚಲನೆಯ ಅಧ್ಯಯನಗಳು ರೂಪುಗೊಂಡಿಲ್ಲ. ನಮ್ಮ ಸಂಸ್ಕೃತ ಕಾವ್ಯಮೀಮಾಂಸೆ ರೂಪಿಸಿದ ದೈವಿಕ ಪ್ರತಿಭೆಯ ಹೊರ ನೋಟಗಳನ್ನು ಬಯಲು ಮಾಡಬೇಕಾಗಿದೆ. ಕಾವ್ಯವೆನ್ನುವುದು, ಸಾಹಿತ್ಯವೆನ್ನುವುದು ಜನಸಾಮಾನ್ಯರ ಅಭಿವ್ಯಕ್ತಿಯ ಮಾಧ್ಯಮವೆಂಬುದನ್ನು ಕಂಡುಕೊಳ್ಳಬೇಕು. ಭಕ್ತಿಚಳುವಳಿಯಿಂದಲೇ ಇದನ್ನು ಆರಂಭಿಸಬೇಕು. ಇಲ್ಲಿಯವರೆಗಿನ ಸ್ಥಿರೀಕೃತ ಚರಿತ್ರೆ ಭಕ್ತಿಯನ್ನು ವೈದಿಕ ಪರ ನೆಲೆಯ ಆಶಯಗಳ ಮೂಲಕವೇ ಅನುಸಂಧಾನ ಮಾಡುವ ಕೆಲಸ ಮಾಡಿದೆ. ಈ ಸ್ಥಿರೀಕೃತ ಚರಿತ್ರೆಯ ಮಾದರಿಗಳನ್ನು ಮೀರುವ ಹಂಬಲದಲ್ಲಿ ಸಂಸ್ಕೃತಿಯ ಇತಿಹಾಸದಲ್ಲಿ ರೂಪುಗೊಂಡಿರುವ ಎಲ್ಲಾ ಬಗೆಯ ಭೌತಿಕ ಅಭೌತಿಕ ರಚನೆಗಳೆಲ್ಲವೂ ಚಲನೆ, ವೈರುಧ್ಯ, ಪರಿವರ್ತನೆಗೆ ಬದ್ಧವಾಗಿದೆ. ರೋಮಿಲಾ ಥಾಪರ್ ಹೇಳುವಂತೆ, ಪರಂಪರೆ ಎನ್ನುವುದು ನಮ್ಮ ಅಪೇಕ್ಷೆಗೆ ತಕ್ಕಂತೆ ತಾವೇ ರೂಪಿಸಿಕೊಳ್ಳುವ ಒಂದು ಸಂರಚನೆಯಾಗಿದೆ. ಅದು ವರ್ತಮಾನದ್ದೇ ಸೃಷ್ಟಿ. ಇತಿಹಾಸವನ್ನು ವರ್ತಮಾನದ

---

೩. ಡಾ. ರಾಜಾರಾಮ ಹೆಗಡೆ : ಕನಕನ ಸುತ್ತ ಮುತ್ತ – ಸಂಕಥನಗಳ ಜಿಜ್ಞಾಸೆ – ಡಾ. ಶಿವರಾಮ ಶೆಟ್ಟಿ (ಸಂ) ಪುಟ–೭೨

ಅಗತ್ಯಗಳಿಗೆ ತಕ್ಕಂತೆ ಪುನರ್ ರಚಿಸಿಗೊಳ್ಳಬೇಕಾದ ಅಗತ್ಯವಿದೆ. ಸಂಸ್ಕೃತಿ ಚರಿತ್ರೆ ಎಂದರೆ ಹಿಂದಿನದು ಮತ್ತು ಆಳುವ ವರ್ಗದ ವೈಭವದ ಉಲ್ಲೇಖ ಎನ್ನುವಂತಾಗಿದೆ. ಘಟನಾವಳಿಗಳನ್ನು ಹುಡುಕುವ Empiricist (ಎಂಪಿರಿಸಿಸ್ಟ್) ಮಾದರಿಯೇ ಚರಿತ್ರೆ ಎಂಬ ಭ್ರಮೆಗೆ ಒಳಗಾಗಿ ಬಹುರೂಪಿ ಆಕೃತಿಗಳನ್ನು ಉಪೇಕ್ಷಿಸಿ ಏಕಮುಖಿ 'ಆಕೃತಿ' (Monolistic structure) ಯನ್ನು ಕಟ್ಟುವಲ್ಲಿ ನಿರತವಾದದ್ದು ಸಂಸ್ಕೃತಿ ಅಧ್ಯಯನದಲ್ಲಿ ಆತಂಕ ಮೂಡಿಸಿದೆ.

೧. ಮೌಖಿಕ ಪರಂಪರೆಯ ದೇಸಿ ಕಾವ್ಯ ಸಂಪ್ರದಾಯದ ಜಾಡನ್ನು ನಾವು ಸಂಪೂರ್ಣ ಉಪೇಕ್ಷಿಸಿದ್ದೇವೆ. ಮಧ್ಯಕಾಲೀನ ಸಾಹಿತ್ಯ ಪರಂಪರೆಯಲ್ಲಿ ದೇಸೀ ಶಕ್ತಿ, ವಚನ ಹಾಗೂ ಭಕ್ತಿ ಚಳುವಳಿಯ ಅಂತರ್ಗತ ಅಂಶಗಳಾಗಿವೆ. ಜೈನರ ಲಿಪಿ ಪರಂಪರೆ (Scripto Centric) ಯಿಂದ ವಚನಕಾರರ ಹಾಗೂ ಭಕ್ತಿ ರಚನಾಕಾರರ ಧ್ವನಿ ಕೇಂದ್ರಿತ ಕಕ್ಷೆಗೆ ಪ್ರತಿನಿಧಿಕರಣ ಸ್ಪಷ್ಟವಾದ ತಿರುವು ಪಡೆದಿದೆ. ಇದು ೧೨ ಶತಮಾನದ ನಂತರದ ಪ್ರಮುಖ ಬೆಳವಣಿಗೆ. ಜೈನ ಪರಂಪರೆಯಲ್ಲಿದ್ದ ಅಕ್ಷರ ಕೇಂದ್ರಿತ ಪಠ್ಯದ ಆಲೋಚನೆಗಳಿಗೆ ಪರ್ಯಾಯವಾಗಿ ಧಾರ್ಮಿಕ ಹಾಗೂ ಸಾಮಾಜಿಕ ಪ್ರಾಶಸ್ತ್ಯದ 'ಮಾತು', 'ನುಡಿ' ಎಂಬ ಪರಿಕಲ್ಪನೆಗಳಿಗೆ ತಿರುಗಿವೆ. "ನುಡಿದರೆ ಮುತ್ತಿನ ಹಾರದಂತಿರಬೇಕು" "ಮಾತೆಂಬುದು ಜ್ಯೋತಿರ್ಲಿಂಗ" "ಶರಣರ ನುಡಿಗಡಣ" "ಸೂಳ್ನುಡಿ" "ಕಣಿಯ ಹೇಳಬಂದೆ ನಾರಾಯಣನಲ್ಲದಿಲ್ಲವೆಂದು" ಇತ್ಯಾದಿ ಅನೇಕ ವಚನ, ಕೀರ್ತನೆಗಳು ಮೌಖಿಕತೆಗೆ ಸಿಕ್ಕ ಮಾನ್ಯತೆಯನ್ನು ವಿವರಿಸುತ್ತದೆ. [೪]

೨. ಭಕ್ತಿ ಚಳುವಳಿಯಂತೂ ಕಂಠ ಪಠ್ಯದ ಜೊತೆಗೆ ದೇಹವನ್ನು ಪಠ್ಯವಾಗಿಸಿದೆ. ಕುಣಿತವನ್ನು ಪಠ್ಯವಾಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಈ ಬಗೆಯ ಸಂಸ್ಕೃತಿ ಅಧ್ಯಯನದ ನೆಲೆ ಸಾಹಿತ್ಯವನ್ನು ಕೇವಲ ಮಾಹಿತಿ ಮೂಲವೆಂದು ಅರ್ಥೈಸದೆ ಸಾಹಿತ್ಯದ ಆಕೃತಿಯ ಒಳಗಿನ ಸೂಕ್ಷ್ಮ ಚಲನೆಯನ್ನು ಮರು ವಿವೇಚನೆಗೆ ಒಳಪಡಿಸುತ್ತದೆ. ಬಹುನೆಲೆಯ ಸಂಸ್ಕೃತಿಯ ಒಳವಿವರಗಳನ್ನು ಏಕ ನೆಲೆಯ ಸಂಸ್ಕೃತಿಯಾಗಿ ನೋಡುವ ಅಪಾಯವನ್ನು ನಾವು ಅರಿಯಬೇಕಾಗಿದೆ.[೫] ಪರಂಪರಾಗತ ಇತಿಹಾಸದ ಗ್ರಹಿಕೆಯಲ್ಲಿ ಕಂಡುಬರುವ ಈ ಸ್ಥಿರೀಕೃತ ರಚನೆಗಳನ್ನು, ಅಭಿಪ್ರಾಯಗಳನ್ನು ನಾವು ತಿರಸ್ಕರಿಸಬೇಕೆಂಬ ವಾದವನ್ನು ಫುಕೋ ಕೂಡ ನಮ್ಮ ಮುಂದಿಡುತ್ತಾನೆ.

---

೪. ಡಾ. ಟಿ.ಎಸ್. ಸತ್ಯನಾಥನ್: ಸಂಸ್ಕೃತಿ ಶೋಧ: ಲಿಂಗದೇವರು ಹಳೆಮನೆ (ಸಂ)ಪುಟ–೮೫

೫. ಡಾ. ಎಚ್.ಎಸ್. ರಾಘವೇಂದ್ರ ರಾವ್: ಚಕ್ರವರ್ತಿಯ ಬಟ್ಟೆಗಳು ಪುಟ ೬೪

೩. ಮಧ್ಯಕಾಲೀನ ಚರಿತ್ರೆಯ ಅಧ್ಯಯನದ ಇನ್ನೊಂದು ಬಿಕ್ಕಟ್ಟು ಸಾಂಸ್ಕೃತಿಕ ವಿಸ್ಮೃತಿ. ಡಿ.ಆರ್. ನಾಗರಾಜ್ ಸಾಂಸ್ಕೃತಿಕ ವಿಸ್ಮೃತಿಯ ಬಗ್ಗೆ ಬರೆಯುತ್ತಾ ನಮ್ಮ ಸಾಂಸ್ಕೃತಿಕ ಶಕ್ತಿ ಎಲ್ಲಿ ಸಂಚಯವಾಗುತ್ತೇ ಎಂದರೆ ನಮ್ಮ ಸಂಸ್ಕೃತಿಯಲ್ಲಿರುವ ಬಹುಮುಖಿಧಾರೆಗಳನ್ನು ಉದ್ದೀಪಿಸಿದಾಗ[೬] ಎನ್ನುತ್ತಾರೆ. ದೇಶೀಯವಾದ ಸಾಂಸ್ಕೃತಿಕ ಸಂಪತ್ತನ್ನು ಕಸಿದುಕೊಂಡು ಅದರ ಸ್ಥಾನದಲ್ಲಿ ಪ್ರಾಚೀನ ಸಾಂಸ್ಕೃತಿಕ ವೈಭವದ ಭ್ರಮೆಯನ್ನು ಸ್ಥಾಪಿಸುವುದು, ನಾವು ನಮ್ಮ ಹತ್ತಿರದ ಗತಕಾಲವನ್ನು (Immediate past) ದಮನಿಸಿ ಅತ್ಯಂತ ಪ್ರಾಚೀನಕಾಲವನ್ನು ಊರ್ಜಿತಗೊಳಿಸುವುದು ಇದರ ಗುಣ ಎನ್ನುತ್ತಾರೆ ಸಿ.ಎನ್.ಆರ್. 'ವಿಸ್ಮೃತಿಯ ನಂತರ: ಭಾರತೀಯ ವಿಮರ್ಶೆಯಲ್ಲಿ ಪರಂಪರೆ ಮತ್ತು ಬದಲಾವಣೆ' ಎನ್ನುವ ಕೃತಿಯಲ್ಲಿ ಜಿ.ಎನ್. ದೇವಿಯವರು ಮಧ್ಯಕಾಲೀನ ಭಕ್ತಿಯುಗವನ್ನೇ ಉದಾಹರಣೆಯಾಗಿ ಬಳಸಿ ಚರ್ಚಿಸುತ್ತಾರೆ. "ಭಕ್ತಿ ಸಾಹಿತ್ಯವು ಪ್ರತಿರೋಧದ ಸಾಹಿತ್ಯವಾಗಿತ್ತು. ಜನಸಾಮಾನ್ಯರನ್ನು ತಲುಪುವ ದೇವರನ್ನೇ ಕೇಂದ್ರದಲ್ಲಿಟ್ಟುಕೊಂಡಿದ್ದ ಜನಪದ ಸಾಹಿತ್ಯವಾಗಿತ್ತು" ಎಂದು ಅವರು ವಾದಿಸುತ್ತಾರೆ. ಅತಿ ಪ್ರಾಚೀನ ಸಂಸ್ಕೃತ ಕಾವ್ಯಮೀಮಾಂಸೆಯನ್ನು ಆಧುನೀಕರಣಗೊಳಿಸುವುದು, ಪಾಶ್ಚಿಮಾತ್ಯ ಪ್ರಸ್ಥಾನ, ಪರಿಕಲ್ಪನೆಗಳನ್ನು ತಂದು ತುರುಕುವುದರಿಂದಲೇ ಇಂತಹ ಸಾಂಸ್ಕೃತಿಕ ವಿಸ್ಮೃತಿ ಆಗಿದೆ ಎಂದು ಅವರು ಪ್ರತಿಪಾದಿಸುತ್ತಾರೆ. ಇದಕ್ಕಿರುವ ಪರಿಹಾರವೆಂದರೆ 'ದೇಶೀಯವಾದ' (Nativism). ಒಂದು ಸಾಹಿತ್ಯ ಪರಂಪರೆಯಿಂದಲೇ ಅದನ್ನು ವಿಮರ್ಶಿಸುವ ಮತ್ತು ವ್ಯಾಖ್ಯಾನಿಸುವ ಮಾರ್ಗಗಳು ಸೃಷ್ಟಿಯಾಗಬೇಕೆಂದು ಅಭಿಪ್ರಾಯಪಡುತ್ತಾರೆ.[೭]

ಅವರ ಅಭಿಪ್ರಾಯಗಳಿಗೆ ಇರುವ ವಿರೋಧದ ನಿಲುವುಗಳೇನಿದ್ದರೂ ಅವು ಮುಖ್ಯವಾಗದೆ ಅವರು ಪ್ರತಿಪಾದಿಸುವ ವಿಚಾರಗಳು ಭಕ್ತಿ ಚಳುವಳಿಯನ್ನು ಭಿನ್ನ ಕೇಂದ್ರವೊಂದರ ಮೂಲಕ ನೋಡುವುದಕ್ಕೆ ಪ್ರೇರೇಪಿಸುತ್ತವೆ. ಕನಕದಾಸರ ಬದುಕು-ಬರಹವನ್ನು ಕುರಿತು ಆಲೋಚಿಸುವ ಸಂದರ್ಭದಲ್ಲೂ ಅವರನ್ನು ಘಟನೆಗಳ ಚರಿತ್ರೆಯ ರೂಪಕವಾಗಿ, ಕತೆಯಾಗಿ ಸ್ವೀಕರಿಸದೆ ವರ್ತಮಾನವನ್ನು ಗ್ರಹಿಸಿಕೊಳ್ಳುವ ಹಾದಿಯಾಗಿ, ಅವರನ್ನು ಅನುಸಂಧಾನ ಮಾಡಬೇಕು. ಆಗ ಕನಕದಾಸರು ನಮಗೆ ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತರಾಗುತ್ತಾರೆ.

---

೬. ಡಿ.ಆರ್. ನಾಗರಾಜ್: ಸಾಹಿತ್ಯ ಕಥನ, ಪುಟ: ೮೩

೭. ಡಾ. ಸಿ.ಎನ್. ರಾಮಚಂದ್ರನ್ : ವಸಾಹತೋತ್ತರ ಚಿಂತನೆ

## ೧.೨. ಮಧ್ಯಕಾಲೀನ ಭಕ್ತಿ ಚಳುವಳಿ ಮತ್ತು ಕನಕದಾಸರ ಪ್ರತಿನಿಧೀಕರಣ:

ಮಧ್ಯಯುಗಿನ ಭಾರತದ ಇತಿಹಾಸದಲ್ಲಿ ರೂಪುಗೊಂಡ ಧಾರ್ಮಿಕ ಸಂಘರ್ಷಕ್ಕೆ ಧರ್ಮದ ಕಾರಣದಿಂದಾಗಿ ಹುಟ್ಟಿದ ಶ್ರೇಷ್ಟತೆಯ ಪರಿಕಲ್ಪನೆಯೇ ಮುಖ್ಯವಾದ ಕಾರಣ. ಬೌದ್ಧ-ಜೈನ ಧರ್ಮಗಳು ಪ್ರಬಲವಾಗಿದ್ದ ಕಾಲದಿಂದಲೂ ಬ್ರಾಹ್ಮಣ್ಯದ ಯಜಮಾನಿಕೆಯನ್ನು ವಿರೋಧಿಸುತ್ತಲೇ ಬಂದವು. ಪಟ್ಟಭದ್ರ ಸಂಸ್ಕೃತಿಯ ವಿರುದ್ಧದ ನಿಲುವು ಹಲವು ಬಗೆಯ ಸಾಮಾಜಿಕ – ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಮೂಲವಾಯಿತು. ಕರ್ನಾಟಕದ ಸಂದರ್ಭದಲ್ಲಿ ಈ ಸ್ಥಿತ್ಯಂತರಗಳಿಗೆ ಕಸುವು ನೀಡಿದ್ದು ವಚನ ಚಳುವಳಿ ಮತ್ತು ಹರಿದಾಸ ಚಳುವಳಿ. ಜಾತಿ ಶ್ರೇಣಿಕರಣವನ್ನು ವಿರೋಧಿಸುವ, ಪರಿಷ್ಕರಣವಾದಿ ಪ್ರಜ್ಞೆಯಿಂದಲೇ ಹುಟ್ಟಿದ ಈ ಚಳುವಳಿಗಳ ಉದ್ದೇಶ 'ಜಾತಿವಿರೋಧಿಯಾಗಿರಲಿಲ್ಲ' ಎಂಬುವುದು ಇತ್ತೀಚೆಗಿನ ವಾದ. ವಚನಗಳು, ಜಾತಿ ಪದ್ಧತಿ, ಬ್ರಾಹ್ಮಣ ವಿರೋಧಿ ಚಳುವಳಿಯ ಅಭಿವ್ಯಕ್ತಿಗಳೆಂದು ಹೇಳಲು ವಚನಗಳಲ್ಲಿಯೇ ಆಧಾರವಿಲ್ಲ, ಯಾಕೆಂದರೆ ವೈದಿಕ ವಿರೋಧಿ, ಕೆಳಜಾತಿ ಪರ, ಸ್ತ್ರೀ ಪರ ಪುರೋಗಾಮಿ ಭಕ್ತಿ ಚಳುವಳಿಗಳ ಅಂಗವಾಗಿ ೧೨ ನೇ ಶತಮಾನದಲ್ಲಿ ವಚನ ಚಳುವಳಿಗಳು ನಡೆಯಿತೆಂಬ ಗ್ರಹಿಕೆಯೊಂದು ವಸಾಹತುಶಾಹಿ ಸಂದರ್ಭದಲ್ಲಿ ಆಧುನಿಕ ವೀರಶೈವ ಸಮುದಾಯದವರು ತಮ್ಮ ಮೇಲು ಚಲನೆಗಳಾಗಿ ಕಲ್ಪಿಸಿಕೊಂಡ ಒಂದು ಮಿಥ್ಯ ಕಲ್ಪನೆ.[೮] ಎಂಬ ಅಭಿಪ್ರಾಯಕ್ಕೆ ಹಲುವು ಪರ ವಿರೋಧಗಳು ವ್ಯಕ್ತವಾಗಿವೆ. ಇದರ ಸತ್ಯಾಸತ್ಯತೆಯ ವಿಮರ್ಶೆ ಮಾಡುವುದು ಅಗತ್ಯ. ಜಾತಿ, ಕುಲದ ಬಗೆಗಿನ ಅಸಮಾಧಾನ, ಕನ್ನಡ ಸಾಹಿತ್ಯದಲ್ಲಿ ಎಂದಿನಿಂದಲೂ ನಡೆದುಕೊಂಡು ಬಂದಿದೆ. ಪಂಪ, ಹರಿಹರ, ರಾಘವಾಂಕ, ಕನಕದಾಸ, ಸರ್ವಜ್ಞ ಹೀಗೆ ಈ ಪರಂಪರೆ ಆಧುನಿಕ ಕಾಲದ ಕುವೆಂಪು ಅವರಲ್ಲಿಯೂ ಕಂಡು ಬಂದು ಈಗಲೂ ಮುಂದುವರೆಯುತ್ತಿದೆ. ಈ ಮುಂದುವರಿಕೆಗೆ ಕಾರಣವಾಗುತ್ತಿರುವುದು ಆಯಾಯ ಕಾಲದ ಸಾಮಾಜಿಕ ಸನ್ನಿವೇಶಗಳೆ. ಪ್ರಸ್ತುತ ಸನ್ನಿವೇಶವು ಇದಕ್ಕೆ ಹೊರತಲ್ಲ. ಧರ್ಮ-ದೇವರ ಹೆಸರಿನಲ್ಲಿ ನಡೆಯುತ್ತಿರುವ 'ಮಡೇ ಸ್ನಾನ' (ಎಂಜಲು ಸ್ನಾನ) ದವರೆಗೂ ಅದರ ಮುಂದುವರಿಕೆ ಇದೆ.

ವಚನ ಚಳವಳಿಯಲ್ಲಾಗಲಿ ಭಕ್ತಿಚಳವಳಿಯಲ್ಲಾಗಲಿ ಧರ್ಮ, ಪ್ರಭುತ್ವ, ದೇವರನ್ನು ಜನಸಾಮಾನ್ಯರಿಂದ ದೂರವಿರಿಸಿ ನೋಡುವ ಕ್ರಮವಿಲ್ಲ. ಇವುಗಳ ಕಲ್ಪನೆಯ ಕೇಂದ್ರಸ್ಥಾನವನ್ನು ಬದಲಿಸಿರುವುದು ಇಲ್ಲಿಯ ಮಹತ್ತರ ಸಾಧನೆ. ದೇವರು, ಧರ್ಮ, ಪ್ರಭುತ್ವಗಳು ಜನಪರವಾಗಬೇಕೇನ್ನುವುದನ್ನೇ ಇವು ಪ್ರತಿಪಾದಿಸಿವೆ. ಅಧಿಕಾರ, ಪ್ರಭುತ್ವದ ನೆಲೆಯನ್ನು ವಿರೋಧಿಸಿ ಸಮಾಜಮುಖಿ ಚಲನೆಯ ಪ್ರದುರ್ಭಾವವನ್ನು ಅಲ್ಲಿ ಮುಖ್ಯವಾಗಿ ಕಾಣುತ್ತೇವೆ. ವ್ಯಕ್ತಿಗತ ಅಹಂಕಾರ, ದರ್ಪಕ್ಕೆ ಇಲ್ಲಿ ಅವಕಾಶವಿಲ್ಲ.

---

೮. ಹೆಚ್.ಎಸ್. ಶಿವಪ್ರಕಾಶ್ – ಮಾರ್ಚ್ ೧೫ ರ ಪ್ರಜಾವಾಣಿ ಅಂಕಣ

ಭಕ್ತಿಯಲ್ಲಂತೂ 'ದಾಸಭಾವವೇ ಪ್ರಧಾನ'. ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ದಾಖಲಾದ ಭಕ್ತಿ ಚಳವಳಿಯ ಸ್ವರೂಪವನ್ನು ಗಮನಸಿದರೆ ಅದು ಕೆಳವರ್ಗವನ್ನೇ ಆಧರಿಸಿ ರೂಪುಗೊಂಡಿದೆ. ಜಾತಿಯಿಂದ ಕೀಳಾಗಿ ಕಾಣಲ್ಪಟ್ಟ ಹಲವು ಸಾಧು-ಸಂತರ ಬದುಕು ಇದಕ್ಕೊಂದು ನಿದರ್ಶನ. ತಮಿಳುನಾಡಿನಲ್ಲಿ ಪ್ರಾರಂಭವಾದ ಶೈವ – ವೈಷ್ಣವ ಭಕ್ತಿ ಪಂಥಗಳಲ್ಲಿ ಬ್ರಾಹ್ಮಣರಿಂದ – ಅಸ್ಪೃಶ್ಯರವರೆಗೂ ಎಲ್ಲಾ ಜಾತಿಯ ಜನರಿದ್ದರು. ವೈಷ್ಣವ ಪಂಥದ ಆಳ್ವಾರರಲ್ಲಿ ಎಲ್ಲಾ ಜಾತಿಯ ಜನರಿದ್ದರು, ಅವರಲ್ಲಿ ಮೂವರು ಬ್ರಾಹ್ಮಣರನ್ನು ಬಿಟ್ಟರೆ ಉಳಿದ ಒಂಬತ್ತು ಮಂದಿ ವಿವಿಧ ವರ್ಗಕ್ಕೆ ಸೇರಿದವರು. ಪಂಚವರು, ಸ್ತ್ರೀಯರು, ಕಳ್ಳರ ಕುಲಕ್ಕೆ ಸೇರಿದವರು, ಮ್ಲೇಚ್ಛರು ಎಲ್ಲರೂ ಇದರಲ್ಲಿ ಸೇರಿದ್ದಾರೆ. ಆಳ್ವಾರರಲ್ಲಿ ಒಬ್ಬನಾದ ತಿರುಪ್ಪಾಳ್ವಾರ್ ಒಬ್ಬ ಅಸ್ಪೃಶ್ಯ ಜಾತಿಗೆ ಸೇರಿದವ. ನಾಯನಾರ್‌ಗಳಲ್ಲಿ ನಂದನಾರ್ ಅಪ್ಪರ್ ಎನ್ನುವವನು ಅಸ್ಪೃಶ್ಯನಾಗಿದ್ದ. ರಾಮಾನುಜಾಚಾರ್ಯರು ಅಸ್ಪೃಶ್ಯರನ್ನು 'ತಿರುಕುಳತ್ತರ್' ಎಂದು ಕರೆದರು.[೯] ರಾಮಾನುಜಾಚಾರ್ಯರು ಶೂದ್ರನಾಗಿದ್ದ ಕಾಂಜೀಪೂರ್ಣನ ಪಾದಗಳನ್ನು ಒತ್ತಲು ಮುಂದಾಗಿದ್ದ ಉಲ್ಲೇಖಗಳಿವೆ. ವೈಷ್ಣವ ಆಳ್ವಾರ್‌ನ ಅಂಡಾಳ್, ಶೈವ ನಾಯನಾರ್ ಕಾರೈಕಾಲೆ ಈ ಸ್ತ್ರೀಯರು, ಒಟ್ಟಿನಲ್ಲಿ ಭಾರತೀಯ ಭಕ್ತಿಪಂಥವು ಜಾತಿ, ಲಿಂಗ, ವರ್ಣ ಭೇದಗಳನ್ನು ತಿರಸ್ಕರಿಸುವುದು, ಸಂಸ್ಕೃತದ ನಿರಾಕರಣೆ, ದೇವರ ರಾಜ್ಯ ಸ್ಥಾಪನೆ ಇವೇ ಮೊದಲಾದ ಆಶಯಗಳನ್ನು ಹೊಂದಿತ್ತು.

ಮಧ್ಯಕಾಲೀನ ಚರಿತ್ರೆಯನ್ನು ಪ್ರಧಾನ ಸಂಸ್ಕೃತಿಗೆ ಪ್ರತಿಯಾಗಿ ಕಟ್ಟುವ ಅಗತ್ಯವಿದೆ. ಜೈನ-ಬ್ರಾಹ್ಮಣ-ವೀರಶೈವ ಧರ್ಮಗಳು ರೂಪಿಸಿದ ಸಾಹಿತ್ಯದ ಸಿದ್ಧ ಮಾದರಿಗಳನ್ನು ಒಡೆದು ಒಳ ಪ್ರವೇಶಿಸಿ ಶ್ರಮಿಕ ವರ್ಗದ ನೆಲೆಯಿಂದ ಚರಿತ್ರೆಯನ್ನು ಮರುಕಟ್ಟಲು ವಿಫುಲ ಅವಕಾಶಗಳಿವೆ. ವೃತ್ತ ಪ್ರತಿಮೆಗಳ ಮೂಲಕ ಸ್ವತಂತ್ರ-ಅಭಿವ್ಯಕ್ತಿ, ಆಶಯಗಳಿಗೆ ಸಾಹಿತ್ಯವನ್ನು ಬಳಸಿಕೊಂಡ ಕರ್ನಾಟಕದ ವಚನ ಚಳುವಳಿಯ ಸಂದರ್ಭವನ್ನು ಇದಕ್ಕೆ ಪೂರಕವಾಗಿ ಗಮನಿಸಬಹುದು. ಸ್ಥಿರೀಕೃತ ಚಿಂತನಾ ಘಟಕಗಳನ್ನು ಒಡೆದು ನೋಡುವ ಪ್ರಕ್ರಿಯೆಗೆ ಒಂದು ಚಾಲನೆ ದೊರೆತಿರುವುದೇ ವಚನಸಾಹಿತ್ಯದ ಮೂಲಕ. ಅದನ್ನು ಮೊದಲು ಧರ್ಮ ಪ್ರಧಾನವಾಗಿಯೇ ಗ್ರಹಿಸಲಾಯಿತು, ನಂತರದ ಬೆಳವಣಿಗೆಯಲ್ಲಿ ಸಾಹಿತ್ಯ ಚಳುವಳಿ-ರಾಜಕೀಯ-ಸಾಮಾಜಿಕ ಚಳುವಳಿಯಾಗಿ ಬಹು ಸಾಂಸ್ಕೃತಿಕ ಅಂಶದ ಸಮನ್ವಯವಾಗಿ ಗುರುತಿಸಲಾಯಿತು. ಬದಲಾಗುತ್ತಿರುವ ಬದುಕಿನಲ್ಲಿ, ಚಲನಶೀಲತೆಯ ನೆಲೆಯಲ್ಲಿ ನಿಂತು, ಪುನರಾವಲೋಕನಕ್ಕೆ ತೊಡಗುವ ಕ್ರಿಯೆ ಪಠ್ಯ ಕೇಂದ್ರಿತ ಆಲೋಚನೆಯ ಘಟಕವನ್ನು ಒಡೆದು ನೋಡುವುದಕ್ಕೆ ಪ್ರೇರೇಪಿಸುತ್ತದೆ. ಸಮಕಾಲೀನ ವಿವೇಕ ಮತ್ತು ಇದಕ್ಕೆ

೯. ಷಣ್ಮುಖಯ್ಯ ಅಕ್ಕೂರಮಠ : ಭಾರತೀಯ ಭಕ್ತಿ ಚಳುವಳಿ ಪುಟ – ೨೫

ಹಿನ್ನೆಲೆಯಾದ ಇತಿಹಾಸಗಳನ್ನು ಒಟ್ಟಿಗೆ ದಕ್ಕಿಸಿಕೊಂಡ ದೃಷ್ಟಿಕೋನದಲ್ಲಿ ವಿವಿಧ ಕಾಲಗಳನ್ನು ಪರಿಶೀಲಿಸುವ ಈ ಕ್ರಿಯೆ ಬದುಕು ಮತ್ತು ಬರಹಕ್ಕೆ ಸಂಬಂಧಿಸಿದೆ [೧೧] ಎನ್ನುವ ಅಭಿಪ್ರಾಯದಲ್ಲಿ ಪ್ರಾಯಶಃ ಎಲ್ಲಾ ಕಾಲಕ್ಕೂ ಸಮಕಾಲೀನ ವಿವೇಕವೆನ್ನುವುದು ಕೆಲಸಮಾಡಿದೆ.

ಭಕ್ತಿ ಕಾಲದ ಸಮಾಜೋ-ಸಾಂಸ್ಕೃತಿಕ ವಿವರಗಳನ್ನು ಗ್ರಹಿಸುವಲ್ಲಿ ಕೆಲವು ತೊಡಕುಗಳಿವೆ. ಭಕ್ತಿ ರಚನೆಯ ಒಳಗೆ ಇಂತಹ ಬಿಕ್ಕಟ್ಟುಗಳನ್ನು ನಾವು ಕಾಣುತ್ತೇವೆ. ಮಧ್ಯವರ್ತಿಗಳನ್ನು ತಿರಸ್ಕರಿಸುವ, ಪುರೋಹಿತಶಾಹಿಯನ್ನು ವಿರೋಧಿಸುವ ಅದರ ಚೌಕಟ್ಟಿನೊಳಗೆ ಕೆಳವರ್ಗದ ಜನರನ್ನು ಆರ್ಯೇತರರನ್ನು ಜಾತಿ ವ್ಯವಸ್ಥೆಯ ಕಾರಣವೊಡ್ಡಿ ಒಳಗೆಳೆದುಕೊಳ್ಳುವ ಪ್ರಯತ್ನವೂ ನಡೆದಿದೆ. ೧೨ನೇ ಶತಮಾನದ ಸುಮಾರಿಗೆ ಕರ್ನಾಟಕದಲ್ಲಿ ಇಸ್ಲಾಂ ಬಲವಾಗಿ ಬೇರುಬಿಡುತ್ತಿರುವ ಸಂದರ್ಭದಲ್ಲಿ ಅದು ಸಂರಕ್ಷಕ ಕಾರ್ಯತಂತ್ರವಾಗಿ ರೂಪಗೊಂಡಿತು. ಬ್ರಾಹ್ಮಣರ ಸಾಮಾಜಿಕ ಜೀವನದ ಮಾದರಿಯನ್ನು ವೀರಶೈವರ ಹೊರತಾಗಿ ಇತರ ಕೆಳಜಾತಿಯುವರು ಹೆಚ್ಚು - ಕಡಿಮೆ ಅನುಸರಿಸತೊಡಗಿದರು. ಬ್ರಾಹ್ಮಣ್ಯವೇ ಶ್ರೇಷ್ಠವೆಂಬ ಭಾವ ಪರ್ಯಾಯವಾಗಿ ರೂಪುಗೊಳ್ಳಲಾರಂಭಿಸಿತು. ಜಾತ್ಯತೀತವಾದ ಉದ್ಯೋಗದ ಹಕ್ಕನ್ನು ಪಡೆಯುವಲ್ಲಿ ಶರಣರು ಸಫಲರಾದಂತೆ ದಾಸರು ಆಗಲಿಲ್ಲ. ಪರಿಣಾಮವಾಗಿ ಶ್ರಮಿಕವರ್ಗವು ರೂಪಿಸಿಕೊಂಡ ಪ್ರತಿಸಂಸ್ಕೃತಿಯ ಅಂಶಗಳಿಗೆ ತೀವ್ರವಾದ ಧಕ್ಕೆಯೂ ಉಂಟಾಯಿತು. ವೇದಶಾಸ್ತ್ರ, ಪುರಾಣವೇ ಮೊದಲಾದ ಸಂಸ್ಕೃತ ಪಾಂಡಿತ್ಯ ಪ್ರದರ್ಶನವೂ ಕನ್ನಡೀಕರಣ ಪ್ರಕ್ರಿಯೆಗೆ ಒಳಗಾದರೂ ಅದನ್ನು ವಚನಕಾರರಷ್ಟು ದಿಟ್ಟವಾಗಿ ಪ್ರತಿರೋಧಿಸಲು ಹರಿದಾಸ ಪಂಥಕ್ಕೆ ಸಾಧ್ಯವಾಗಿಲ್ಲ. ಸಂಸ್ಕೃತದ ನಿರಾಕರಣೆ ವಚನಗಳಲ್ಲಿ ಸ್ಪಷ್ಟವಾಗಿ ಕಾಣಸಿಗುತ್ತದೆ.

ಕಲ್ಲಿಯ ಹಾಕಿ ನೆಲ್ಲಿ ತುಳಿದು ಗುಬ್ಬಿ ಸಿಕ್ಕಿಸುವ
ಮಳ್ಳನಂತೆ ವಾಗದ್ವೈತವ ಕಲಿತು ಸಂಸ್ಕೃತದ
ಮಾತಿನ ಪಸರವ ಮುಂದೆ ಇಕ್ಕಿಕೊಂಡು
ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವವನಂತೆ
ದೇತರ ನುಡಿ? ಮಾತಿನ ಮರೆ, ಆತುರ ವೈರಿ, ಮಾರೇಶ್ವರ,

ನಗೆಯ ಮಾರಿತಂದೆಯ ಈ ವಚನದಲ್ಲಿ ಮಾತಿನ ಅದ್ವೈತ ಒಂದು ಬಲೆ, ಸಂಸ್ಕೃತ ಅದರ ಕೆಳಗೆ ಚೆಲ್ಲಿದ ನೆಲ್ಲು ; ಸಂಸ್ಕೃತ ಅರಿಯದ ಜನ ಗುಬ್ಬಿಗಳು. [೧೨] ಹಾಗೆ

---

೧೧. ಬರಗೂರು ರಾಮಚಂದ್ರಪ್ಪ : ಕನ್ನಡ ಸಾಹಿತ್ಯ : ಪುನರ್ ಮೌಲ್ಯೀಕರಣ ಪ್ರಸ್ತಾವನೆ
೧೨. ಡಾ. ಎಲ್. ಬಸವರಾಜು : ವಚನ ಸಾಹಿತ್ಯದಲ್ಲಿ ಕೆಳವರ್ಗದ ಅಶಯ ಮತ್ತು ಅಭಿವ್ಯಕ್ತಿ : ಲಿಂಗದೇವರು ಹಳೆಮನೆ (ಸಂ) ಪುಟ - ೦೩.

ನೋಡಿದರೆ ಭಾರತದ ಇತರ ಭಕ್ತಿ ಚಳುವಳಿಯಲ್ಲಿಯೂ ವಚನಕಾರರಂತೆ ಸಂಸ್ಕೃತ ಭಾಷೆಯನ್ನಾಧರಿಸಿದ ಶಾಸ್ತ್ರಗಳ ನಿರಾಕರಣೆ, ಹಿಂದುಳಿದ ವರ್ಗಗಳ ಬಗ್ಗೆ ಮೇಲುವರ್ಗದ ಅವಹೇಳನಕ್ಕೆ ತೀವ್ರವಾದ ತಿರಸ್ಕಾರ ವ್ಯಕ್ತವಾಗಿದೆ. ಮಹಾರಾಷ್ಟ್ರದ ವಾರಕರಿ ಪಂಥದ ಅಸ್ಪೃಶ್ಯ ಚೋರಮೇಲನ ಭಕ್ತಿಗೀತೆಗಳಲ್ಲಿ ಇದು ಕಾಣಿಸುತ್ತದೆ.

ಮಧ್ಯಕಾಲೀನ ಭಕ್ತಿ ಪಂಥದ ಚರಿತ್ರೆಯಲ್ಲಿ ಕನಕದಾಸರ ಪ್ರತಿನಿಧೀಕರಣವನ್ನು ವಿವೇಚಿಸುವ ನೆಲೆಯೊಂದನ್ನು ಒಟ್ಟು ಭಕ್ತಿ-ವಚನಗಳ ಹಿಂದುಳಿದ ವರ್ಗಗಳ ಅಭಿವ್ಯಕ್ತಿ-ಆಶಯಗಳ ಹಿನ್ನೆಲೆಯಲ್ಲಿ ಗುರುತಿಸಬೇಕಾಗುತ್ತದೆ. ಕನಕದಾಸರೆಂಬ 'ಅಸ್ಮಿತೆ' ದೊರೆಯುವ ಮೊದಲಿನ ಅವರ ಪೂರ್ವ ವಿವರಗಳ ಮೂಲಕವೇ ಪ್ರವೇಶಿಸುವುದಾದರೆ ಬೀರಪ್ಪ -ಬಚ್ಚಮ್ಮ ದಂಪತಿಗಳಿಗೆ ಮಗನಾಗಿ 'ತಿಮ್ಮಪ್ಪ' ಹುಟ್ಟುತ್ತಾನೆ. ಮೂಲತ; ಶೈವರಾದ ಕುರುಬರು ತಿರುಪತಿ ತಿಮ್ಮಪ್ಪನ ಒಕ್ಕಲಾಗುವ ಧಾರ್ಮಿಕ ಸ್ಥಿತ್ಯಂತರವೊಂದು ಆಗಲೇ ಆ ಪರಿಸರದಲ್ಲಿ ನಡೆದು ಹೋಗಿದೆ. ಅದು ಕನಕದಾಸರ ಕಾಲದಲ್ಲೇ ನಡೆದ ಸ್ಥಿತ್ಯಂತರ. ಬೀರಪ್ಪ-ತಿಮ್ಮಪ್ಪ ಈ ಹೆಸರಿನಲ್ಲೇ ಇದು ಸ್ಪಷ್ಟ. ಬೀರಪ್ಪ ಕುರುಬರ ದೈವ ಎನ್ನುವ ತಿಳುವಳಿಕೆಗೆ ಹಲವು ಆಧಾರಗಳಿವೆ. ಅದು ಶೈವ ಪರಂಪರೆಗೆ ಸೇರಿದ ಹೆಸರು. ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಯಡೂರು ವೀರಭದ್ರ, ಲೇಪಾಕ್ಷಿಯ ವೀರಭದ್ರ ಎರಡು ಕುರುಬರ ದೈವ ಬೀರಪ್ಪನೇ ಆಗಿದ್ದಾನೆ. ಹಂಪಿಯ ವಿರೂಪಾಕ್ಷನೂ ಮೂಲತಃ ಬೀರಪ್ಪನೇ. ಬೀರಪ್ಪ >ವೀರಪ್ಪ>ವಿರೂಪಾಕ್ಷನಾಗಿರಬಹುದಾದ ಸಾಧ್ಯತೆ ಇದೆ. [೧೩]

ಮಹಾರಾಷ್ಟ್ರದ ವಾರಕರೀನಾಥ ಸಂಪ್ರದಾಯದವರಿಗೆ, ಗೋಸಾವಿ, ದತ್ತರು ಮೊದಲಾದವರಿಗೆ ಪಂಡರಾಪುರ ವಿಠ್ಠಲ ಆರಾಧ್ಯದೈವ. ಅವನು ಕರ್ನಾಟಕದ ದೈವ. ವಿಠ್ಠಲನ ಬಹಳಷ್ಟು ಜನ ಹಕ್ಕುದಾರರು ಕರ್ನಾಟಕದವರು. ವಿಠ್ಠಲ ಮೂಲತಃ ಒಂದು ಜನಪದ ದೈವ. ಅವನು ಮೊದಲು ಕುರುಬ ಅಥವಾ ಗೋವಳಿಗರ ದೇವರು. ಗೋವಳಿಗರ ದೈವವಾದ ಅವನನ್ನು ಕೃಷ್ಣ, ವಿಷ್ಣುವಾಗಿ ವೈದಿಕ ದೇವರನ್ನಾಗಿಸಿದೆ.[೧೪] ಎಂಬ ವಾದವನ್ನು ಶ್ರೀ ರಾಮಚಂದ್ರ ಢೇರೆಯವರು 'ಶ್ರೀ ವಿಠ್ಠಲ ಒಂದು ಮಹಾ ಸಮನ್ವಯ' ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. (ಅನು : ಚಂದ್ರಕಾಂತ ಪೋಕಳೆ -೨೦೦೨) ವಿಠ್ಠಲನ ಭಕ್ತರಾದ ವಾರಾಕರಿಗಳಲ್ಲಿ ಬ್ರಾಹ್ಮಣರು ಶೂದ್ರವಾರಕರಿಗಳ ಪಾದ ಮುಟ್ಟಿ ನಮಸ್ಕರಿಸುತ್ತಾರೆ. ಎಲ್ಲರೂ ಜೊತೆಯಲ್ಲಿ ಕುಳಿತು ಊಟ ಮಾಡುತ್ತಾರೆ.

---

೧೩. ಡಾ. ಎಂ. ಚಿದಾನಂದ ಮೂರ್ತಿ: ಬೃಹತ್ ಕರ್ನಾಟಕ ಭಾಷಿಕ -ಸಾಂಸ್ಕೃತಿಕ ಪುಟ-೧೦೩

೧೪. ಅದೇ

"Varkarsi doctorines are in practice even stronger than Lingayat doctrines" ಎಂದು ಭಗವಾನ್ ಲಾಲ್ ಇಂದ್ರಾಜಿ ಉದ್ಗರಿಸುತ್ತಾರೆ. [೧೫]

ಕನಕದಾಸರು ಸಮಕಾಲೀನರಾದ ಪುರಂದರ ದಾಸರು ಕೂಡ ಪಂಡರಾಪುರದ ವಿಠ್ಠಲನ ಭಕ್ತರಾಗಿದ್ದು ಅವರ ಕೀರ್ತನೆಗಳ ಅಂಕಿತವೂ ಪುರಂದರ ವಿಠ್ಠಲನೆಂದೆ ಇದೆ. ಬ್ರಾಹ್ಮಣೇತರಾದ ಪುರಂದರ ದಾಸರು ವ್ಯಾಸರಾಯರ ದಾಸಕೂಟ– ವ್ಯಾಸಕೂಟಕ್ಕೆ ಸೇರಿದವರಾದರೂ ಮೂಲ ದೈವ ವಿಠ್ಠಲನನ್ನು ತಮ್ಮ ಕೀರ್ತನೆಗಳಲ್ಲಿ ಉಲ್ಲೇಖಿಸಲು ಮರೆಯವುದಿಲ್ಲ. ಧಾರವಾಡ–ಬಾಡ–ಬಂಕಾಪುರದ ಈ ಸೀಮೆಯಲ್ಲಿ ಜನಿಸಿದ ಕನಕದಾಸರು ಕಾಗಿನೆಲೆಯ ಆದಿಕೇಶವನ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸುವುದನ್ನು ಗಮನಿಸಿದರೆ ಕುಲ – ಜಾತಿ ಸಂಬಂಧವಾದ ಯಾವ ದಾಖಲೆಯನ್ನು ಅಷ್ಟಾಗಿ ಉಳಿಸಿಕೊಂಡಂತೆ ತೋರುವುದಿಲ್ಲ. ಕುಲದ ನೆಲೆಯನ್ನೇ ತಿರಸ್ಕರಿಸುವ ಧೋರಣೆಯೊಂದನ್ನು ಕಾಣುತ್ತೇವೆ. ಸಮಕಾಲೀನ ಸಂದರ್ಭದಲ್ಲಿ ಕನಕದಾಸರು ಯಾಕೆ ನಮಗೆ ಮುಖ್ಯವಾಗುತ್ತಾರೆಂಬ ಸಣ್ಣ ಪ್ರಶ್ನೆಯನ್ನು ಹಾಕಿಕೊಂಡರೆ ಅವರು ಶೂದ್ರ ವರ್ಗದ ಪ್ರತಿನಿಧಿ ಎಂಬ ಕಾರಣಕ್ಕಾಗಿ ಮುಖ್ಯರಾಗುತ್ತಾರೋ? ಅಥವಾ ಅವರ ಪ್ರತಿಭೆ – ಲೋಕಾನುಭವ – ಸಾಮಾಜಿಕ ಸಮಾನತೆಯ ಕಾರಣದಿಂದ ಮುಖ್ಯರಾಗುತ್ತಾರೊ ಎಂಬ ಕೆಲವು ಉಪ ಪ್ರಶ್ನೆಗಳು ಉತ್ಪನ್ನವಾಗಬಹುದು. ಇದಕ್ಕೆ ಉತ್ತರಿಸುವುದು ಅಷ್ಟು ಸುಲಭದ ಮಾತಲ್ಲ. ಕನಕದಾಸರು ದಾಸರಾಗುವುದಕ್ಕೆ ಸಾಮಾಜಿಕ, ಧಾರ್ಮಿಕ, ಜಾತಿಯ ಕಾರಣಗಳಿಗಿಂತ ರಾಜಕೀಯ ಕಾರಣವೇ ಪ್ರಧಾನವೆಂಬುವುದು ಸ್ಪಷ್ಟ.

ಕ್ರಾಂತಿಕಾರಕ ಸಮಾಜ ವಿಮರ್ಶನ ಪರಂಪರೆಯಲ್ಲೀ ಕನಕದಾಸರು ತಮ್ಮನ್ನು ತಾವು ಗುರುತಿಸಿಕೊಳ್ಳುವುದಿಲ್ಲ. ಬ್ರಾಹ್ಮಣಪರ, ಸಂಸ್ಕೃತೀಕರಣದ ನಿಲುವಿನೊಂದಿಗೆ ವೈದಿಕಶಾಹಿಯ ಮುಖವಾಣಿಯಾಗಿ ಒಮ್ಮೊಮ್ಮೆ ಕಾಣಿಸಿಕೊಂಡು ಅಚ್ಚರಿ ಮೂಡಿಸುತ್ತಾರೆ. ಇದಕ್ಕಿರುವ ಕೆಲವು ಕಾರಣಗಳನ್ನು ವಿಶ್ಲೇಷಿಸುವುದು ಅಗತ್ಯ.

ಇಸ್ಲಾಂನ ದೇವಾಧಿಪತ್ಯ (Theocracy)ದ ಪರಿಕಲ್ಪನೆ ಮಧ್ಯಕಾಲೀನ ಭಕ್ತಿ ಸಂಪ್ರದಾಯವನ್ನು ಪ್ರಭಾವಿಸಿದೆ. ಧರ್ಮವು ಪ್ರಭುತ್ವವನ್ನು ನಿಯಂತ್ರಿಸಬಹುದೆಂದು ಆಗಲೇ ಸಾಬೀತಾಗಿತ್ತು. ವಿಜಯನಗರದ ಕಾಲದ ವ್ಯವಸ್ಥೆ ಅಂದಿನ ಯುರೋಪಿಯನ್ ಊಳಿಗಮಾನ್ಯ ವ್ಯವಸ್ಥೆಯ ಮಾದರಿಯಾಗಿರಲಿಲ್ಲ. ಬಹುಕಾಲದವರೆಗೂ ಅದರ ಪ್ರಧಾನ ಲಕ್ಷಣ ಆರ್ಥಿಕತೆ ಮತ್ತು ಸೇನೆಯಾಗಿತ್ತು. ವಿಜಯನಗರದ ಔನ್ನತ್ಯ ಹಾಗೂ ಅವನತಿಗೆ ಸಾಕ್ಷಿಯಾದ ಕನಕದಾಸರಲ್ಲಿ ಪರಧರ್ಮ ಸಹಿಷ್ಣುತೆಯ ಭಾವ

---

೧೫. ಅದೇ

ಸಹಜವಾಗಿಯೇ ಇತ್ತು. ಆ ಕಾರಣದಿಂದಲೇ ಮಧ್ಯಕಾಲೀನ ಚರಿತ್ರೆಯಲ್ಲಿ ಕಂಡು ಬರುವ ಮುಸ್ಲಿಂ ದಂಗೆಕೋರರ ವಿರುದ್ಧದ ದನಿ ಅವರ ಕೀರ್ತನೆ-ಕಾವ್ಯಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಪ್ರಭುತ್ವದ ವಿರೋಧದ ದನಿಯೇ ಅವರಲ್ಲಿ ಧರ್ಮವನ್ನು ಬೆಂಬಲಿಸುವ ಬಂಡಾಯವಾಯಿತು. "ರಾಯಮುನಿದರೆ ತಾನು ರಾಜ್ಯವನೆ ಬಿಡಬಹುದು", "ಪಡೆದ ಕ್ಷೇತ್ರವ ಬಿಟ್ಟು ತೆರಳಬಹುದು" ಎನ್ನುವ ಅವರ ಮಾತಿನಲ್ಲಿ ಬಂಡಾಯದ ನಿಲುವು ಸ್ಪಷ್ಟವಾಗಿದೆ. ಯಾವುದೇ ಕಾರಣಕ್ಕೂ "ಕಾಯಜ ಪಿತ ನಿನ್ನ ಅಡಿಯ ಬಿಡಲಾಗದು" ಎಂಬಲ್ಲಿ ಪ್ರಭುತ್ವದ ಆಶ್ರಯದಿಂದ ಮುಕ್ತನಾಗಿ ಧರ್ಮದ ಆಶ್ರಯವನ್ನು ಕಂಡುಕೊಳ್ಳುವ ಭಾವವನ್ನು ಕಾಣಬಹುದು. ಕೊಲ್ಲುವುದರಿಂದ ಕಾರುಣ್ಯಕ್ಕೂ, ಪ್ರಭುತ್ವದಿಂದ ಧರ್ಮಕ್ಕೂ, ಶೂದ್ರತ್ವದಿಂದ ಉತ್ತಮತ್ವಕ್ಕೂ ಪರಿವರ್ತನೆ ಹೊಂದುವ ಅವರ ದೃಷ್ಟಿಯಲ್ಲಿ ಜಾತಿ ವಿರೋಧದ ಜೊತೆಗೆ ಅಧಿಕಾರ ವಿರೋಧದ ನೆಲೆಯೂ ಪ್ರಧಾನವೆನಿಸುತ್ತದೆ. ಅಧಿಕಾರಕ್ಕೆ ವಿರುದ್ಧವಾಗಿ ದಾಸ್ಯತ್ವವನ್ನು ಅವರು ಸ್ವೀಕರಿಸಿದ್ದು ಪ್ರಭುತ್ವಕ್ಕೆ ತೋರಿದ ಪ್ರತಿಭಟನೆ ಎಂದೇ ಭಾವಿಸಬೇಕಾಗುತ್ತದೆ. ಸ್ವತಂತ್ರ ಮನೋವೃತ್ತಿ, ಸ್ವಂತಿಕೆಯ ವ್ಯಕ್ತಿತ್ವವನ್ನು ಹೊಂದಿದ್ದ ಕನಕದಾಸರಿಗೆ ಹರಿದಾಸ ಪಂಥದ ಪರಿಸರ ಅವರ ಅಭಿವ್ಯಕ್ತಿಗೆ ಎಷ್ಟರ ಮಟ್ಟಿಗೆ ಅವಕಾಶ ನೀಡಿದೆ ಎಂಬುದೂ ವಿಚಾರಾರ್ಹವಾಗಿದೆ. ವ್ಯಾಸಕೂಟ, ದಾಸಕೂಟದ ಪರ್ಯಾವರಣದಲ್ಲಿ ಗುರುತಿಸಲ್ಪಡುವ ಕನಕದಾಸರಿಗೆ ತೀರಾ ವೈಯಕ್ತಿಕವಾದ ಅನಿಸಿಕೆ ಆಲೋಚನೆಗೆ ಸಿಕ್ಕ ಅವಕಾಶ ಕಡಿಮೆ ಎಂದೇ ಹೇಳಬೇಕು. ಯಾವುದೆ ಒಂದು ಸಿದ್ಧಾಂತ, ಪಂಥದ ಒಳಗೆ ಬದುಕುವ ವ್ಯಕ್ತಿಗೂ ಈ ಮಾತು ಅನ್ವಯಿಸುತ್ತದೆ. ಹತ್ತನೇ ಶತಮಾನದ ಪಂಪನಿಗೂ ಇದೇ ಬಗೆಯ ದ್ವಂದ್ವ ಕಾಡಿತ್ತು. ಪ್ರಭುತ್ವದ ಒಳಗಡೆ ಶಕ್ತಿ ರಾಜಕಾರಣದ ಅರಿವಿದ್ದ ಪಂಪನಿಗೆ ಅದರೊಳಗೆ ಅದನ್ನು ವಿರೋಧಿಸಿ ಬದುಕುವುದು ಎಷ್ಟು ಕಷ್ಟವೆನ್ನುವುದು ಗೊತ್ತಿದೆ. ಆದರೂ ಕರ್ಣನ ಬಾಯಿಂದ ಹೇಳಿಸುವ ಕುಲದ ಪ್ರಶ್ನೆ, ಇಳಾಧಿನಾಥರನ್ನು ಓಲೈಸಿ ಬಾಳುವ ಕಷ್ಟ, ಜೀಯಾ, ಹಸಾದ ಎಂಬ ಭಾವದಿಂದ ಬದುಕುವುದು ಕಷ್ಟವೆಂದು ಭಾವಿಸುತ್ತಾನೆ. ಈ ನಡುವೆಯೂ ಅವನೂ ಒಡ್ಡಿದ ಪ್ರತಿರೋಧ ವಿಶೇಷವಾದುದ್ದೇ ಆಗಿದೆ. ಆದರೆ ಪಂಪನ ನಿಲುವು ಸಾಂದರ್ಭಿಕ ಅಭಿವ್ಯಕ್ತಿ ಕ್ರಮವಾಗಿ ಕಂಡರೆ ಕನಕದಾಸರದ್ದು ದೂರಗಾಮಿ. ಅದು ಇಂದು-ಹಿಂದು-ಮುಂದುಗಳನ್ನು ಒಳಗೊಂಡು ವಿಸ್ತರಿಸುವಂತದ್ದು. ಗುರು-ಮಠ- ಪರಂಪರೆಗಳು ಒಂದು ಬಗೆಯ ಪ್ರಭುತ್ವದ ಮಾದರಿಯಲ್ಲಿಯೇ ಸಾಗುವ ಒಂದು ನಿರ್ಬಂಧಿತ ವ್ಯವಸ್ಥೆ. ಅನುಯಾಯಿಗಳನ್ನು ಸೃಷ್ಟಿಸುವುದು ಅದರ ಪರಮ ಗುರಿ. ಪರಂಪರೆಯ ಮುಂದುವರಿಕೆಯನ್ನು ಬಯಸುವ ಸಿದ್ಧ ದೃಷ್ಟಿಕೋನಕ್ಕೆ ಬದ್ಧರಾದ ಕನಕದಾಸರಿಂದ ಪೂರ್ಣಪ್ರಮಾಣದ ವೈದಿಕ ವಿರೋಧದ, ಶೂದ್ರವರ್ಗವನ್ನೇ ಕೇಂದ್ರೀಕರಿಸಿದ ಜಾತಿ ವಿರೋಧದ ಆಶಯವನ್ನು

ನಿರೀಕ್ಷಿಸುವುದು ದೂರದ ಮಾತು. ಈ ನಡುವೆಯು ರಾಮಧಾನ್ಯ ಚರಿತ್ರೆಯಂತಹ ಕೃತಿಯನ್ನು ಕನಕದಾಸರು ಬರೆಯುತ್ತಾರೆಂದರೆ ಕನಕದಾಸರ ಒಳಗಿನ ಬಂಡಾಯದ ಸ್ವರೂಪವನ್ನು ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ. ಆಹಾರ ಪದ್ಧತಿಯೊಂದರ ಮೇಲೆ ವೈಚಾರಿಕ ನಿಲುವನ್ನು ತಳೆಯುವ, ಮಧ್ಯಕಾಲೀನ ಬ್ರಾಹ್ಮಣ-ಶೂದ್ರ ತಿಕ್ಕಾಟದ ಮೂಲವನ್ನು ಗ್ರಹಿಸುವ, 'ಜಯಪತ್ರ'ದ ಮಾದರಿಯನ್ನು ನಿರೂಪಿಸುವ ಇವೇ ಮೊದಲಾದ ಹಲವು ಕಾರಣ, ದೃಷ್ಟಿಕೋನಗಳಿಂದ ಕೃತಿಯನ್ನು ಓದಬೇಕಾದ ಅಗತ್ಯವಿದೆ.

ವಚನ ಚಳುವಳಿ 'ನಾಯಕ' ಪ್ರಧಾನ ಚಳುವಳಿಯಾದರೆ, ಹರಿದಾಸರ ಭಕ್ತಿ ಚಳುವಳಿ ಗುರು-ಪರಂಪರೆಯನ್ನಾಧರಿಸಿದ ಚಳುವಳಿ. ಈ ಎರಡು ಚಳುವಳಿಗೆ ಇರುವ ಸಾಮಾನ್ಯ ಆರೋಪವೆಂದರೆ ವೀರಶೈವ ಬ್ರಾಹ್ಮಣವೆನ್ನುವ ಶ್ರೇಷ್ಠತೆಯ ಮಾನದಂಡ ಬಹುಪಾಲು ಶರಣರನ್ನು, ದಾಸರನ್ನು ಸಂತರನ್ನು ತಳಮೂಲ ಸಂಸ್ಕೃತಿ ನೆಲೆಯಿಂದ ಎಬ್ಬಿಸಿ ಪ್ರಧಾನವಾಹಿನಿಗೆ ಒತ್ತಾಯ ಪೂರ್ವಕ ಕರೆತರುವ ಕೆಲಸ ಮಾಡಿದೆ ಎನ್ನುವುದು. ವಚನ ಚಳುವಳಿಗೆ ಜಾತ್ಯಾತೀತ ಮನೋಭಾವ ಇದ್ದರೂ ಅದು ಮುಂದಿನ ದಿನಗಳಲ್ಲಿ ವೀರಶೈವ ಎಂಬ ಧರ್ಮವಾಗಿಯೇ ರೂಪುಗೊಂಡಿತು. ಶರಣ ಚಳುವಳಿಯು ಕೆಳವರ್ಗಗಳ ಮೇಲೆ ಉಂಟುಮಾಡಿದ ಪ್ರಭಾವ, ಪರಿಣಾಮದ ಕಾರಣದಿಂದಲೇ ಅದರ ಉದ್ದೇಶ ವಿಶ್ವಮಾನ್ಯತೆಯನ್ನು ಪಡೆಯಿತು. ಆದರೆ ಭಾರತೀಯ ಭಕ್ತಿ ಪಂಥಗಳಲ್ಲಿ ಶೂದ್ರವರ್ಗದ ಪಾಲ್ಗೊಳ್ಳುವಿಕೆಯನ್ನು ನೋಡಿದರೆ ಕರ್ನಾಟಕದ ದಾಸ ಪಂಥದಲ್ಲಿ ಅದರ ಪ್ರಮಾಣ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಹದಿನಾರನೇ ಶತಮಾನದ ಶೂದ್ರ ಮೇಧಾವಿ ಸಂತರಾಗಿ ಕನಕದಾಸರನ್ನು ಬಿಟ್ಟರೆ ಮತ್ತೆ ಬ್ರಾಹ್ಮಣೇತರರಾಗಿ ಕಾಣುವವರು ಪುರಂದರದಾಸರು ಮಾತ್ರ. ಉಳಿದ ಶೂದ್ರವರ್ಗ ಕನಕದಾಸರ ಕಾರಣದಿಂದಲಾದರೂ, ಅವರ ಪ್ರಭಾವಕ್ಕೆ ಒಳಗಾಗಿ ಬೆಂಬಲಿಗರಾಗಿಯಾದರೂ ದಾಸಪಂಥವನ್ನು ಯಾಕೆ ಸ್ವೀಕರಿಸಲಿಲ್ಲ? ಎಂಬುವುದು ಒಂದು ಪ್ರಶ್ನೆಯಾದರೆ ಕುರುಬರ ಸಾಂಸ್ಕೃತಿಕ ನಾಯಕನಾದ ಕನಕದಾಸರ ಪರಂಪರೆ ಕುರುಬರಲ್ಲಿ ಯಾಕೆ ಮುಂದುವರೆಯಲಿಲ್ಲ ಎಂಬುದು ಎರಡನೆ ಪ್ರಶ್ನೆ. ದಾಸರಾಗುವುದು ಅಷ್ಟು ಸುಲಭವಲ್ಲ ಎನ್ನುವ ಧಾರ್ಮಿಕ ಆಚಾರ-ವಿಚಾರಗಳ ಚೌಕಟ್ಟು ಪ್ರಾಯಶಃ ಬಹು ಸಂಖ್ಯಾತ ಸಾಮಾನ್ಯ ವರ್ಗವನ್ನು ಅನುಯಾಯಿಗಳಾಗದಂತೆ ತಡೆದಿರಬಹುದು ಅಥವಾ ಕನಕದಾಸರು ಜಾತಿಯ ಕಾರಣದಿಂದ ಅನುಭವಿಸಿದ ಹಿಂಸೆಯೂ ಕಾರಣವಾಗಿರಬಹುದು. ಆದರೆ ಕನಕದಾಸರ ಕೀರ್ತನೆ, ಕಾವ್ಯಗಳಲ್ಲಿ ಹೇಳುವ, ಕೇಳುವ ಪರಂಪರೆಯ ಹೊಳಹುಗಳನ್ನಾಧರಿಸಿ ಹೇಳುವುದಾದರೆ ಕನಕದಾಸರಿಗೆ ಅವರ ಮಾತುಗಳನ್ನು ಕೇಳುವ ವರ್ಗವೊಂದು ಇತ್ತೆಂಬುದು ಸ್ಪಷ್ಟವಾಗುತ್ತದೆ. 'ಕೃತಿ ಪೇಳ್ದ ಕನಕದಾಸೋತ್ತಮ, ಕೇಳ್ದ ಸುಜ್ಞಾನವಧೂಟಿ'. ಕನಕದಾಸರ ಪತ್ನಿಯೋ, ಉಪ

ಪತ್ನಿಯೋ, ಶಿಷ್ಯಳೋ ಎನ್ನುವುದಕ್ಕಿಂತ ಕನಕದಾಸರ ಕೇಳುವ ಪರಂಪರೆಯ ಒಂದು ಕೊಂಡಿಯಾಗಿ ವಧೂಟಿಯನ್ನು ಪರಿಭಾವಿಸಬಹುದು.

ಕರ್ನಾಟಕ ಹಾಗೂ ಆಂಧ್ರದ ಬಾಂಧವ್ಯ ಬೆಸೆಯುವಲ್ಲಿ ಕನಕದಾಸರ ಕೊಡುಗೆ ಅನನ್ಯವಾದದು. ಕರ್ನಾಟಕದ ಜನರಿಗೆ ತಿರುಪತಿ ಹೆಚ್ಚು ಆಪ್ತವಾಗುವುದಕ್ಕೆ ಕನಕದಾಸರೇ ಒಂದು ಅರ್ಥದಲ್ಲಿ ಕಾರಣ. ಇಂದಿಗೂ ಕನಕದಾಸರಂತೆ ಗೋಪಾಳಬುಟ್ಟಿ, ಶಂಖ, ಜಾಗಟೆ ಹಿಡಿದು ಗೋವಿಂದ ನಾಮ ಸ್ಮರಣೆ ಮಾಡುತ್ತಾ ಜನರನ್ನು ತಿರುಪತಿಗೆ ಕರೆದೊಯ್ಯುವ 'ಚೆನ್ನದಾಸರು' ಕರ್ನಾಟಕದಾದ್ಯಂತ ಕಾಣಸಿಗುತ್ತಾರೆ.

ಶಂಖದಾಸ, ಡೊಂಬಿದಾಸ, ಡಂಗದಾಸರೆಂಬ ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಡುವ ಇವರು ಚೆನ್ನದಾಸರ ಪಂಗಡಕ್ಕೆ ಸೇರಿದ ಅಲೆಮಾರಿಗಳು, ಭಿಕ್ಷೆ ಬೇಡುವ ವೃತ್ತಿ ಜೀವನವನ್ನು ಆಧರಿಸಿದ ಈ ಅಲೆಮಾರಿ ವರ್ಗದ ಮೇಲೆ ವೈಷ್ಣವ ಧರ್ಮದ ಪ್ರಭಾವ ಹೆಚ್ಚಾಗಿದೆ. ರಾಮಾನುಜಾಚಾರ್ಯರ ಕಾಲದಲ್ಲಿ ವೈಷ್ಣವ ದೀಕ್ಷೆ ಪಡೆದ ಕೆಳವರ್ಗದ ಜನರಾದ ಇವರು ಹಾಡುವ ಹಾಡುಗಳಲ್ಲಿ ಕನಕದಾಸರ ಕೀರ್ತನೆಗಳಿವೆ. ಕನಕದಾಸ ಪರಂಪರೆಯ ಕೊಂಡಿಯಾಗಿ ಇವರನ್ನು ಅಧ್ಯಯನ ಮಾಡಲು ಸಾಕಷ್ಟು ಅವಕಾಶಗಳಿವೆ. "ಎಲ್ಲಾರು ಮಾಡುವುದು ಹೊಟ್ಟೆಗಾಗಿ", "ಏಕೆ ನಡುಗಿದೆ ತಾಯೆ", "ತಲ್ಲಣಿಸದಿರು ಕಂಡ್ಯ ತಾಳು ಮನವೆ" ಇತ್ಯಾದಿ ಕೀರ್ತನೆಗಳನ್ನು ಇವರು ಹಾಡುತ್ತಾರೆ, ತಿರುಪತಿಯನ್ನು ಕೇಂದ್ರೀಕರಿಸಿಕೊಂಡ ಕನಕ ಚರಿತ್ರೆಯ ಅಧ್ಯಯನಕ್ಕೆ ಚೆನ್ನದಾಸರು ಪ್ರಮುಖ ಆಕರವಾಗಲಿದ್ದಾರೆ. ತೆಲುಗು ಮಾತ್ರ ಭಾಷೆ ಹೊಂದಿರುವ ಇವರು ತೆಲುಗಿನಲ್ಲಿ ಮಾಲದಾಸರಿ ಎಂದು ಗುರುತಿಸಿಕೊಂಡಿದ್ದಾರೆ. ಕೃಷ್ಣ ದೇವರಾಯನ 'ಅಮುಕ್ತ ಮಾಲ್ಯ'ದ ಕೃತಿಯಲ್ಲಿ ಇವರ ಉಲ್ಲೇಖ ಬರುತ್ತದೆ. ಕನಕ ದಾಸ ಹುಟ್ಟಿನಿಂದ ಯಾವ ಕುಲದವನಾದರೂ ದಾಸ ಪಂಥದ ಅನುಯಾಯಿಗಳಾದ ಈ ದಾಸವರ್ಗದ ಅನೇಕ ಕರುಹುಗಳು ಕನಕದಾಸನಲ್ಲಿದೆ. ಈ ಕುರಿತು ಹೆಚ್ಚಿನ ಅಧ್ಯಯನಗಳಾಗಬೇಕಾಗಿದೆ.[೧೭]

ಕನಕದಾಸರು ಹುಟ್ಟಿನಿಂದ ಶುದ್ಧ ಕುರುಬರೋ, ಬೇಡರೋ, ದಾಸಜಾತಿ ಪಂಗಡದವರೋ ಎನ್ನುವುದೋ ಈಗ ಮುಖ್ಯವಲ್ಲ. ತಿಮ್ಮಪ್ಪ ನಾಯಕನು ಕನಕದಾಸನಾದ ಪರಿವರ್ತನೆಯ ನಡುವಿನ ಹಂತದಲ್ಲಿ ಶೂದ್ರತ್ವದ ಪ್ರತಿನಿಧೀಕರಣ ಅವರಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುವುದು ಮುಖ್ಯವಾಗುತ್ತದೆ. ತಿಮ್ಮಪ್ಪ ಕನಕದಾಸನಾಗುವ ನಡುವಣ ಚರಿತ್ರೆಯ ಗೆರೆಗಳು ಮಾಸಿಹೋಗಿವೆ. ವೈದಿಕ ಧರ್ಮವೇ ಶ್ರೇಷ್ಟವೆಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿದ ಮಧ್ಯಕಾಲೀನ ಸಾಮಾಜಿಕ ಧಾರ್ಮಿಕ

---

೧೭. ವಿವರಗಳಿಗೆ ನೋಡಿ: ಡಾ.ಯಲ್ಲಪ್ಪ ಬಿ ಹಿಮ್ಮಡಿ: ಚೆನ್ನದಾಸರ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

ಪರಿಸರವು ಇಸ್ಲಾಂ. ಕ್ರಿಶ್ಚಿಯನ್ ಮಿಷಿನರಿಗಳಿಗೆ ಉತ್ತರವೆಂಬಂತೆ ಆಹಾರ ಪದ್ಧತಿಯ ಮೂಲಕ ಜಾತಿಯನ್ನು ನಿರ್ದಿಷ್ಟ ಪಡಿಸುವ ವ್ಯವಸ್ಥೆಯೊಂದು ಆಗಲೇ ರೂಪುಗೊಂಡಿತ್ತು. ಗೋವಿನ ಹಾಡಿನ ರೂಪಕದಂತೆ ಕನಕದಾಸರನ್ನು ಪರಿಭಾವಿಸಿದರೂ ಆಶ್ಚರ್ಯವಿಲ್ಲ. ಹುಲಿಯ ಹುಟ್ಟು ಗುಣವನ್ನು ನಿರಾಕರಿಸಿ ಗೋವಾಗಿಸುವ ತಂತ್ರ ಕನಕದಾಸರ ವಿಷಯದಲ್ಲೂ ಕೆಲಸ ಮಾಡಿದೆ. ಮಧ್ಯಕಾಲೀನ ರಾಜಕೀಯ ಬಿಕ್ಕಟ್ಟುಗಳನ್ನಿಟ್ಟು ನೋಡಿದರೆ ಕನಕದಾಸರಿಗೆ ಇದು ಅನಿವಾರ್ಯವಾಗಿಯೂ ಕಂಡಿದೆ. ಭಕ್ತಿಯೆಂಬುದು ಅಸಹಾಯಕತೆಯ ಒಂದು ಲಕ್ಷಣವೆಂಬುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

## ೧.೩ ಸ್ಮೃತಿ ಚರಿತ್ರೆಯ ಭಾಗವಾಗಿ ಕನಕದಾಸರು:

ಅಕ್ಷರೀಕೃತ ಆಲೋಚನೆಗಳ ಮೂಲಕ ಕಟ್ಟುವ ಚರಿತ್ರೆಯ ಚೌಕಟ್ಟಿನಲ್ಲಿಯೇ ಹಲವು ದೋಷಗಳಿವೆ. ಗತಕಾಲವೆಂಬುದು ವಿಸ್ಮೃತಿಗೆ ಸಂಬಂಧಿಸಿರುವುದು. ಚರಿತ್ರೆಯನ್ನು ಗತಕಾಲದ ಸ್ಥಗಿತ ಚಿತ್ರಗಳ ಶೋಧಕ್ಕಾಗಿಯೇ ಅಧ್ಯಯನ ಮಾಡುವ ಸಂದರ್ಭದಲ್ಲಿ ನಿರ್ದಿಷ್ಟ ವಿಷಯವಾದ ತುಣುಕುಗಳನ್ನು ಜೋಡಿಸಿ ಚರಿತ್ರೆಯನ್ನು ಕಟ್ಟುತ್ತೇವೆ. ಜನಸಂಸ್ಕೃತಿಯ ವಿವಿಧ ನಡವಳಿಕೆಗಳು ವಿಭಿನ್ನ ಕಾಲಘಟ್ಟಗಳಲ್ಲಿ ಹೇಗೆ ಪರಸ್ಪರ ಪರ ವಿರುದ್ಧದ ಸಂಗತಿಗಳನ್ನು ಒಳಗೊಂಡಿದೆ ಎಂಬುದನ್ನು ಹುಡುಕಿ ತೆಗೆಯುವ ಸಂದರ್ಭದಲ್ಲಿ ಅಖಂಡವಾಗಿರದ ಚರಿತ್ರೆಯ ನೆಲೆಗಟ್ಟನ್ನು ಆಶ್ರಯಿಸುವುದು ಯೋಗ್ಯವೆನಿಸುವುದಿಲ್ಲ. ಭಾಷಿಕ ಪರಿಕರಗಳು ಸಂಸ್ಕೃತಿಯ ಜೊತೆಗೆ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುವ ಸನ್ನಿವೇಶದಲ್ಲಿ ಅವು ಕೂಡ ಅರ್ಥಸಾಧ್ಯತೆಯ ದೃಷ್ಟಿಯಿಂದ ಪಲ್ಲಟಕ್ಕೂ ಒಳಗಾಗುವ ಅಪಾಯವಿದೆ. ಹಾಗಾಗಿ ಐತಿಹಾಸಿಕ ನಿಜ (Fact) ಗಳನ್ನು ದಾಖಲಿಸಲು ಬಳಸುವ ಗ್ರಹಿಕೆಯ ಚೌಕಟ್ಟು ಪಠ್ಯಕೇಂದ್ರಿತವಾಗಿದ್ದು ಕರ್ತೃ ಹಾಗೂ ಕೃತಿಯನ್ನು ಮಾತ್ರ ನಂಬುವ ಮನೋಸ್ಥಿತಿಯನ್ನು ಸೃಷ್ಟಿಸಿದೆ. ಸಾಹಿತ್ಯ ಚರಿತ್ರೆಗಳಲ್ಲಿ ರೂಪಿತವಾದ ಸಿದ್ಧ ಮಾದರಿಗಳು ಇತರ ಮಾದರಿಗಳನ್ನು ನಿರಾಕರಿಸುವ ಮಟ್ಟಕ್ಕೆ ಬೆಳೆದು ನಿಂತಿವೆ. ಚರಿತ್ರೆಯ ಮರು ಓದು, ಪುನಾರಚನೆಯ ಆಶಯ ನೆನಪುಗಳ ವ್ಯವಸ್ಥಿತ ಜೋಡಣೆಯನ್ನು ಪಠ್ಯದ ನೆಲೆಯ ಆಚೆಗೂ ವಿಸ್ತರಿಸಬಹುದಾದ ಸಾಧ್ಯತೆಯನ್ನು ಹೊಂದಿದೆ. ಚರಿತ್ರೆ ಮತ್ತು ಅದರ ಪಠ್ಯಗಳನ್ನು ಮರು ಓದಿಗೆ ಒಗ್ಗಿಸಿಕೊಳ್ಳುವ ಸಂದರ್ಭದಲ್ಲಿ ಅದನ್ನು ಒಡೆದು ಕಟ್ಟುವ ಸಾಂಸ್ಕೃತಿಕ ಪ್ರಕ್ರಿಯೆಯೊಂದು ರೂಪುಗೊಳ್ಳುವುದು ಅನಿವಾರ್ಯವಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಕೂಡ ಕೃತಿಕೇಂದ್ರಿತವಾಗಿದ್ದು ಸಾಂಸ್ಕೃತಿಕ ಪಠ್ಯವೊಂದರ ಇತರ ಆಯಾಮಗಳಿಗೆ ಅಲ್ಲಿ ಜಾಗವಿಲ್ಲದಂತಾಗಿದೆ. ಸ್ಮೃತಿ ಚರಿತ್ರೆಯೊಂದು ಸಂಪೂರ್ಣ ಗೈರು ಹಾಜರಾಗಿದೆ. ರಾಷ್ಟ್ರೀಯತೆಗೆ ನೆನಪುಗಳು ಬೇಕು. ಚರಿತ್ರೆ ಬೇಕು. ಸಾಂಸ್ಕೃತಿಕ ನಾಯಕರೂ ಪಠ್ಯಗಳೂ

ಬೇಕು. ಕನ್ನಡ ಸಾಹಿತ್ಯ ಪರಂಪರೆ ಆಕಾರಗೊಂಡದ್ದು ಈ ಬೇಕುಗಳಿಗೆ ಉತ್ತರ ರೂಪದಲ್ಲಿ.[೧೮]

ದಾಸ ಸಾಹಿತ್ಯವನ್ನು ಸೃಷ್ಟಿಸಿದ ಹರಿದಾಸರು ಅಕ್ಷರೀಕೃತ ಆಲೋಚನೆಗಳ ವಾರಸುದಾರರಲ್ಲ, ಧ್ವನಿ ಅಥವಾ ಮೌಖಿಕ ಸಂಪ್ರದಾಯದ ಪ್ರತಿಪಾದಕರು. ಹಾಡು, ಕುಣಿತ, ತಾಳ, ತಂಬೂರಿಗಳ ಮೂಲಕ ಜನಮನದಲ್ಲಿ ನೆಲೆನಿಂತ ದಾಸರು ಪರಿವ್ರಾಜಕರಾಗಿ ಊರೂರು ತಿರುಗಾಡಿ ತಾವು ಕಂಡ ಜನಜೀವನ. ಸಂಸ್ಕೃತಿಯನ್ನು ಆಚಾರ ವಿಚಾರಗಳನ್ನು ಪರಾಮರ್ಶಿಸುತ್ತಲೇ ಅದರ ಒಳಿತು ಕೆಡುಕುಗಳನ್ನು ಪರಂಪರೆಯೊಂದಿಗೆ ರವಾನಿಸುವ ಕೆಲಸವನ್ನು ಮಾಡಿದ್ದಾರೆ. ಹರಿದಾಸ ವಾಙ್ಮಯದ ಸಂವಹನ ಮತ್ತು ಪ್ರಸಾರದ ಮಾಧ್ಯಮಗಳು ಹೆಚ್ಚು ಜನಮುಖೀ ಧೋರಣೆಯನ್ನು ಹೊಂದಿದೆ. ದಾಸರ ಹಾಡುಗಳನ್ನು ಲಿಪಿ ಮಾಡುವ ಒಂದು ವರ್ಗವೆ ಇದ್ದಂತೆ ತೋರುತ್ತದೆ. ಏಕೆಂದರೆ ಕನಕದಾಸರ ಕೀರ್ತನೆಗಳು ಬೇರೆ ಬೇರೆ ಲಿಪಿಗಳಲ್ಲಿ ದೊರೆಯುತ್ತವೆ. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಶೋಧನಾ ಪ್ರತಿಷ್ಠಾನ ಹಾಗೂ ಸುಬ್ರಹ್ಮಣ್ಯ ಮಠಗಳಲ್ಲಿ ಕನಕದಾಸರ ತುಳು ಹಾಗೂ ನಂದಿನಾಗರಿ ಲಿಪಿಗಳಲ್ಲಿ ದೊರೆಯುವ ತಾಡೋಲೆಗಳಿವೆ. ಹದಿನೇಳು - ಹದಿನೆಂಟನೇ ಶತಮಾನದಲ್ಲಿ ವಿಶೇಷವಾಗಿ ವಿಜಯದಾಸರು, ಶ್ರೀ ಪ್ರಸನ್ನ ವೆಂಕಟದಾಸರು ಎಲ್ಲೆಡೆಯು ಸುತ್ತಾಡಿ ದಾಸರ ಹಾಡಿನ ಹಸ್ತ ಪ್ರತಿಗಳನ್ನು ಸಂಗ್ರಹಿಸಿದರು. ತಾಡೋಲೆಗಳಿದ್ದ ಕೀರ್ತನೆಗಳನ್ನು ಬರಹದ ರೂಪಕ್ಕಿಳಿಸಿದರು. ಕೆಲವು ಕಾಗದದ ಹಸ್ತಪ್ರತಿಗಳಿವೆ.

ಕನಕದಾಸರು ಕೇವಲ ಪಠ್ಯಗಳಲ್ಲಿ ಮಾತ್ರ ಉಳಿದುಕೊಂಡು ಬಂದಿಲ್ಲ. ಸ್ಮೃತಿ ಚರಿತ್ರೆಯ ಮೂಲಕ ಇಂದಿಗೂ ಉಳಿದುಕೊಂಡು ಬಂದಿದ್ದಾರೆ. ಜನಪದ ಕಲಾ ರೂಪಗಳು ಯಕ್ಷಗಾನ, ಚಿತ್ರಕಲೆ, ಸಂಗೀತ ಹೀಗೆ ಹಲವು ಮಾಧ್ಯಮಗಳನ್ನು ಇದರಲ್ಲಿ ಹೆಸರಿಸಬಹುದು. ಕಾಲದ ಸಾಂಸ್ಕೃತಿಕ ಜರಡಿಯಲ್ಲಿ ಹಾದು ಬಂದರೂ ಇಂದಿಗೂ ತನ್ನ ನೈಜತೆಯನ್ನು ಉಳಿಸಿಕೊಂಡು ಬರುವಲ್ಲಿ ಸಫಲವಾಗಿವೆ, ಆಧುನಿಕ ಮಾಧ್ಯಮಗಳಲ್ಲಿ ಒಂದಾದ ಸಿನಿಮಾ ಕೂಡ ಈ ಸಂವಹನದ ಒಂದು ಭಾಗ. ಕನಕದಾಸರನ್ನು ಸಿನಿಮಾ ಮಾಧ್ಯಮದಲ್ಲಿ ಕಟ್ಟುವ ಪ್ರಯತ್ನದಲ್ಲಿ ಸ್ಮೃತಿ ಚರಿತ್ರೆ ಹೆಚ್ಚು ಕೆಲಸ ಮಾಡಿದೆ. ಭಕ್ತಿಯನ್ನು ಒಂದು ಪ್ರ್ಯಾಕ್ಟೀಸ್ ಆಗಿ ಸಾರ್ವಜನಿಕ ನೆನಪಿನ ಭಾಗವಾಗಿ, ಸಮುದಾಯದ ಆಚರಣೆಯಾಗಿ ಕೀರ್ತನೆ ಪರಂಪರೆಯ ಭಾಗವಾಗಿ ಕಂಡು ಕೀರ್ತನೆಯ ಪಠ್ಯಗಳನ್ನು

೧೮. ಡಾ. ಶಿವರಾಮ ಪಡಿಕಲ್ : ಕನಕನ ಸುತ್ತಮುತ್ತ ಕನಕ ಸುತ್ತಮುತ್ತ–ಜಿಜ್ಞಾಸೆಯ ಸಂಕಥನ, ಪುಟ:೭೫

ಅನುಸಂಧಾನ ಮಾಡಿದರೆ ಹೊಸ ಬಗೆಯ ಸಾಂಸ್ಕೃತಿಯ ಮೌಲ್ಯದ ಮರುನಿರೂಪಣೆ ಸಾಧ್ಯವಾಗಬಹುದು.[೧೯]

ಸ್ಮೃತಿಯು ಯಾವಾಗಲೂ ಸಮುದಾಯದ ಅನುಭವಕ್ಕೆ ನಿಕಟವಾದುದು. ಅದು ದಾಖಲೆಯ ಮೂಲಕ ಉಳಿದು ಬರಬಹುದಾದ ಚರಿತ್ರೆಯ ಜಗತ್ತಿನಿಂದ ಭಿನ್ನವಾದುದು. ಆದ್ದರಿಂದ ಕನಕದಾಸರನ್ನು ಸಮುದಾಯಗಳ ಸಾಂಸ್ಕೃತಿಕ ನೆನಪಿನ ಚರಿತ್ರೆಯಲ್ಲಿ ನೆಲೆಗೊಳಿಸಿಯೇ ವಿವೇಚನೆ ಮಾಡಬೇಕು. ಸ್ಮೃತಿ ಅಥವಾ ನೆನಪು ಎನ್ನುವುದು ಜನಪದ ಸಂಕಂಥನದ ಒಂದು ಭಾಗ. ಇತಿಹಾಸವು ನೆನಪಿನ ಒಂದು ಅಂಶವೇ ಆಗಿದೆ, ಇತಿಹಾಸ ಕಟ್ಟಿಕೊಡುವ ಕನಕನ ದಿವ್ಯ ಚರಿತ್ರೆಗಿಂತ ನಮ್ಮ ಜನಪದ ಕಲಾ ಪ್ರಕಾರಗಳು ಕಟ್ಟಿಕೊಡುವ ಕನಕ ಭಿನ್ನವಾಗಿದ್ದಾನೆ. ಲಾವಣಿ, ಗೀತ, ಭಜನೆ ಮುಂತಾದ ಕಲಾ ಪ್ರಕಾರಗಳಲ್ಲಿ ಕನಕದಾಸರ ಅನುಸಂಧಾನ ನಡೆಸುವ ಬಗೆಯನ್ನು ಚರ್ಚಿಸುತ್ತ ಡಾ. ವೀರೇಶ್ ಬಡಿಗೇರ ಈ ಅಭಿಪ್ರಾಯಕ್ಕೆ ಬರುತ್ತಾರೆ: 'ಲಿಖಿತ ಚರಿತ್ರೆ ಹಾಗೂ ಮನಸ್ಸುಗಳಿಗೆದುರಾಗಿ ಕಲಾವಿದರು ಅನೇಕ ಯುಗಗಳ ಅನೇಕ ಸಂಗತಿಗಳನ್ನು ತನ್ನ ಸದ್ಯದ ವಾಸ್ತವವೆಂದು ಅವುಗಳೊಂದಿಗೆ ಬೆಸೆದುಕೊಳ್ಳುತ್ತಾರೆ. ಚರಿತ್ರೆಯಲ್ಲಿ ಕಾಲವು ಘಟನೆಗಳ ಮೊತ್ತವಾದರೆ ಕಲೆಯಲ್ಲಿ ಅದು ಪ್ರತಿಯೊಂದು ಸಂಗತಿಗಳಲ್ಲಿ ಪೂರ್ಣತೆಯ ತುಡಿತವಾಗಿ ತೋರುತ್ತದೆ. ಕನಕ ಕೀರ್ತನೆಗಳನ್ನು ಯಾಕಾಗಿ ರಚಿಸಿದ? ಎನ್ನುವ ಸಂಗತಿಗಿಂತ, ತನ್ನಹೊತ್ತಿಗೆ ತನ್ನ ಅನುಭವಕ್ಕೆ ನಿಲುಕುವ ಕ್ರಮದಲ್ಲಿ ಕನಕನನ್ನು ಅನುಸಂಧಾನಗೊಳಿಸುವ ಕ್ರಮ ಕಲಾವಿದರಿಗೆ ಮುಖ್ಯವಾಗುತ್ತದೆ, ಇಂತಲ್ಲಿ ಕನಕ ಭಾಷಿಕ ದಾಖಲೆಗಳಿಗಿಂತ ಭಿನ್ನವಾದ ನಾದ, ಲಯ-ಹಾಡು ಭಾವ ಭಕ್ತಿ ಹಾಗೂ ಕುಣಿತದ ಸಂಕೀರ್ಣ ರೂಪವಾಗಿ ಪ್ರಧಾನನಾಗುತ್ತಾನೆ. ಕರ್ತೃತ್ವ-ವ್ಯಕ್ತಿತ್ವ ಎರಡನ್ನು ನಿರಸನಗೊಳಿಸುವ ಕ್ರಮವೊಂದು ದಾಸರಿಗೆ ದಕ್ಕಿದೆ. ಕೀರ್ತನೆಯ ಪಠ್ಯಗಳು ಕಲಾವಿದನ ಕೈಯಲ್ಲಿ ಸ್ಥಿರ ಪಠ್ಯಗಳಾಗಿ ಉಳಿಯುವುದಿಲ್ಲ. ಅದನ್ನು 'ಆಸ್ಫೋಟಿಸುವ' ಹಾಗೂ 'ಕ್ರಿಯಾಶೀಲಗೊಳಿಸುವ ಬಗೆಯನ್ನು ಕಾಣುತ್ತೇವೆ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದ (ವ್ಯವಹಾರಿಕ) 'ಧ್ಯಾನಪೂರ್ವ' ಸ್ಥಿತಿಯಲ್ಲಿ ಹಾಡುವ ಈ ಕೀರ್ತನೆಗಳ ಉದ್ದೇಶ ಕನಕದಾಸರೇ ಹೇಳುವಂತೆ 'ಉನ್ನತ ಕಾಗಿನೆಲೆಯಾದಿಕೇಶವನ ಧ್ಯಾನವನ್ನು ಮನ ಮುಟ್ಟಿ ಮಾಡುವುದು ಮುಕ್ತಿಗಾಗಿ, ಆನಂದಕ್ಕಾಗಿ'. ಹಾಗಾಗಿ ಕೀರ್ತನೆಗಳ ಉದ್ದೇಶ ಆನಂದವೆನ್ನುವುದು ಜನಪದರ ದೃಷ್ಟಿಯನ್ನೇ ಬಿಂಬಿಸುತ್ತದೆ'

**ಸ್ಮೃತಿ ಚರಿತೆಯ ಭಾಗವಾಗಿ ಕನಕದಾಸರನ್ನು ಗುರುತಿಸುವ ಮುಖ್ಯಾಂಶಗಳು ಈ ಕೆಳಗಿನಂತಿವೆ:**

೧. ಹರಿದಾಸರು ಜಂಗಮ ಸ್ವರೂಪಿಗಳು, ಭಕ್ತಿಯನ್ನು ಆದರಿಸಿ ಭಗವಂತನ

೧೯. ಅದೇ. ಪುಟ : ೬೬

ಅದರಲ್ಲೂ ನಾರಾಯಣನ ನಾಮಸ್ಮರಣೆಯ ಮೂಲಕ ಮುಕ್ತಿಯನ್ನು ಪಡೆಯಲು ಹಂಬಲಿಸುವವರು. ಕನಕದಾಸರೂ ಕೂಡ ತಮ್ಮ ಕುಲಬಾಂಧವರಾದಿಯಾಗಿ ಸಾಮಾನ್ಯ ವರ್ಗದವರು ಪೂಜಿಸುವ 'ಬಣಗುದೈವ' ಗಳನ್ನು ನಿರಾಕರಿಸಿ ಹರಿಯೇ ಸರ್ವೋತ್ತಮನೆಂದು ಸಾರಿದರು. ಭಕ್ತಿಯನ್ನು ಮೈದುಂಬಿಕೊಂಡು ಕುಣಿಯುತ್ತಾ, ಹಾಡುತ್ತ 'ಮಧುಕರ ವೃತ್ತಿ' ಆಧರಿಸಿದ ಅವರಲ್ಲಿ ಪಠ್ಯವೆನ್ನುವುದು ಕಂಠಸ್ಥವೇ ಹೊರತು ಲಿಖಿತವಲ್ಲ. ಭಕ್ತಿಯ ಉನ್ಮಾದದ ಕ್ಷಣದಲ್ಲಿ ಹುಟ್ಟಿದ ಆ ರಚನೆಗಳು ಊರಿಂದ ಊರಿಗೆ ಹೋಗುವಾಗ ಬದಲಾವಣೆಗೆ ಬಳಸಲ್ಪಟ್ಟಿರಬಹುದು. ಪ್ರಕ್ಷಿಪ್ತವಾಗಿರಲೂಬಹುದು, ಕನಕದಾಸರ ಕೀರ್ತನೆಗಳಲ್ಲಿ ಇಂತಹ ಪಾಠಾಂತರಗಳು ಕಂಡುಬರುತ್ತವೆ. ಇದು ಕೆಲವೊಮ್ಮೆ ಉದ್ದೇಶಿತ ಸ್ಖಾಲಿತ್ಯವೆನಿಸುವುದಿಲ್ಲ. ಇಂದಿಗೂ ತತ್ವಪದಗಳನ್ನು ಹಾಡುತ್ತಾ ಬರುವ ತಂಬೂರಿ ಸಂಪ್ರದಾಯದ ಎಷ್ಟೋ ಕಲಾವಿದರು ಇದನ್ನು 'ಕಣ್ಣಿನ ಪಠ್ಯವಾಗಿ ಕಾಣದೆ ಕಂಠಪಠ್ಯ' ವಾಗಿಸಿದ್ದಾರೆ. ಕನಕದಾಸರು ಕಂಡ ಅನುಭಾವವನ್ನು ತಮ್ಮ ಶೈಲಿಗೆ ಒಗ್ಗಿಸಿಕೊಂಡು ಹಾಡುವ ಸಂಪ್ರದಾಯ ಸ್ಮೃತಿ ಪರಂಪರೆಯ ಮೂಲಕವೇ ಅವರಿಗೆ ದೊರೆತಿದೆ.

ಪಲ್ಲವಿ : ತನು ನಿನ್ನದು ಜೀವನ ನಿನ್ನದು
ಅಂತರ : ಅನುದಿನದಲ್ಲಿ ಬರುವ ಸುಖ ದುಃಖ ನಿನ್ನದಯ್ಯ,
ಆ, ಆ, ಆ,
ಸಂಗಡಿಗರು : ತನು ನಿನ್ನದು ಜೀವನ ನಿನ್ನದು.

ಅವರಿಗೆ ಬೇಕಾಗುವ ಹಾಗೆ ತಾಳಮುರಿತ ಮಾಡಿಕೊಂಡು ಹಾಡುತ್ತಾರೆ. ತಂಬೂರಿ ಮೀಟಿ ತೆಗೆದ ಆಲಾಪದಲ್ಲಿ ಕನಕನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ, ಭಜನೆಯ ಪಠ್ಯಗಳು ಸ್ಥಿರ ಪಠ್ಯಗಳಲ್ಲಿರುವುದರಿಂದ ಹಾಡುವ ಕಲಾವಿದ, ಪರಿಕರಗಳು ತಾಳ-ರಾಗಗಳ ಬೆಸುಗೆಯಿಂದ ಬದಲಾವಣೆಗೆ ಒಳಗಾಗುತ್ತಾ ಹೊಸ ಪಠ್ಯಗಳ ಸೇರ್ಪಡೆಗಳಂತಹ ಸಾಂಸ್ಕೃತಿಕ ಪ್ರಕ್ರಿಯೆಗಳು ಘಟಿಸಿವೆ, ಭಜನೆ ಪಠ್ಯಗಳಲ್ಲದೇ ಕೆಲವು ಗೀಗೀ ಪದಗಳಲ್ಲೂ ಕನಕ ಕಾಣಿಸಿಕೊಂಡಿದ್ದಾನೆ. ಬೆಣ್ಣೂರಿನ (ಬಾಗಲಕೋಟೆ ಜಿಲ್ಲೆ) ದಿ. ವಿಠ್ಠಪ್ಪಶೇಲಾರ, ಬಾದಾಮಿಯ ಹಣವಂತ, ಭೀ. ಹಡಪದ, ಬೆಣ್ಣೂರಿನ ಸಾಂಬಣ್ಣ ಮೇಟಿ, ಮುದೋಳ್ ತಾಲ್ಲೂಕಿನ ಕಮಲವ್ವ ಪತ್ತಾರ, ಮೊದಲಾದ ಕಲಾವಿದರ ಗೀಗೀ ಪದಗಳು, ಡೊಳ್ಳಿನ ಪದಗಳಲ್ಲಿ ಕನಕನ ಸಾಹಿತ್ಯದ ರೂಪಗಳನ್ನು ಬಳಸಿ ಹಾಡುತ್ತಾರೆ. ಕನಕನನ್ನು ಆಂಶಿಕ ಹಾಡುಗಾರಿಕೆಯ ಭಾಗವಾಗಿ ತರುತ್ತಾರೆ.

ಮಾನ ಅಪಮಾನ ಆತಗ ಸವನ
ಅವತಾರ ಗಿವತಾರ ಅರಿಯದವನಿಗ
ವರಗುರು ಕಾಗಿನೆಲೆ ಆದಿಕೇಶವ ಕಡಕ
ಘನಯೋಗಿಗಳಿಗೊಪ್ಪುವ ಮಾತಿದು .... ಗೀಯ ಗೀಯ ಗೀಯ ....

ಡೊಳ್ಳು ಕುಣಿತಕ್ಕಾಗಿಯೇ ಕನಕದಾಸರು ರಚಿಸಿದ

ದೇವಿ ನಮ್ಮ ದೇವರು ಬಂದಾರು ಬನ್ನಿರೆ
ಸ್ವಾಮಿ ನಮ್ಮ ದೇವರು ಬಂದಾರ ಬನ್ನಿರೆ
ಬನ್ನಿರೇ, ನೋಡ ಬನ್ನಿರೆ ॥ಪ॥
ಕಣಿ ಹೇಳುವ ರೂಪದಲ್ಲಿ
ಕಣಿಯ ಹೇಳಬಂದೆ ನಾರಾಯಣನಲ್ಲದಿಲ್ಲವೆಂದು ಸಿಕ್ಕ
ಬಣಗುದೈವದ ಗೊಡವೆ ಬೇಡ ನರಕ ತಪ್ಪದು ॥ಪ॥

ಕುರುಬ ಸಮುದಾಯದವರು ಹಾಡುವ "ಜಾತಿ ಪ್ರೀತಿಯ ದ್ಯೋತಕವಾಗಿ" ಡೊಳ್ಳಿನ ಪದಗಳಲ್ಲೂ ಕಾಣಿಸಿಕೊಳ್ಳುತ್ತಾನೆ.

ದನವ ಕಾಯಲು ದಂಡ ನಾಯಕನಾಗಿ
ಊರ ಕಾಯುವ ವಾಲೀಕಾರನಾಗಿ
ಕಲಿಯಾಗಿ ಇರದು ಕವಿಯಾಗಿ ಬರದಾನ
ಕುರುಬನಾಗಿ ಕುರಿಯ ಕಾಯ್ದಾನ

ಕಮಲವ್ವ ಪತ್ತಾರ ಹಾಡಿದ ಹೆಂಗಸರ ಹಾಡಿನಲ್ಲೂ ಕನಕ ಕಾಣಿಸುತ್ತಾನೆ. ಇದು ಹೆಂಗಸರ ಹಾಡುಗಳಾಗಿ ಪ್ರಸಿದ್ದ. ಹೆಂಗಸರು ಈ ಭಜನೆ ಪರಂಪರೆಯಿಂದ ಹೀಗೆ ಪ್ರಭಾವಿತರಾಗಿದ್ದರೆನ್ನುವುದು ತಿಳಿಯುತ್ತದೆ.

ಮನಸೆಂಬ ರೊಟ್ಟಿಗೆ
ಕನಕನೆಂಬ ಜುನಕಾ ತೊಡೆದು
ಭಕ್ತಿಯೆಂಬ ತುತ್ತು ಮಾಡಿ
ಬಾಯಿ ಚಪ್ಪರಿಸಿರೋ

ಈ ಮೊದಲಾದ ಹಾಡುಗಳನ್ನು ಹಂಪಿ ಸುತ್ತ ಮುತ್ತಲ ಪ್ರದೇಶದಿಂದ ಬಡಿಗೇರರು ಸಂಪಾದನೆ ಮಾಡಿದ್ದಾರೆ. [೨೦]

ಇಂತಹ ಅನೇಕ ಹಾಡುಗಳಲ್ಲಿ ಕಾಣಿಸುವ ಕನಕನ ವ್ಯಕ್ತಿತ್ವವನ್ನು

---

೨೦. ಡಾ. ವೀರೇಶ್ ಬಡಿಗೇರ : ಕನಕನ ಸುತ್ತಮುತ್ತ ಕನಕ ಸುತ್ತಮುತ್ತ-ಜಿಜ್ಞಾಸೆಯ ಸಂಕಥನ ಪುಟ: ೧೪೧

ಶೋಧಿಸಬೇಕಾಗಿದೆ. ಇಂದಿನ ನವ ಮಾಧ್ಯಮಗಳ ಕಾರಣದಿಂದಾಗಿ ಅರ್ಥ ಕಳೆದುಕೊಳ್ಳುತ್ತಿರುವ ಜನಪದ ಹಾಡುಗಳನ್ನು ರಕ್ಷಿಸುವ ಮೂಲಕ ಕನಕ ಕೇಂದ್ರಿತ ದೇಶೀ ಅಭಿವ್ಯಕ್ತಿಯನ್ನು ವಿಸ್ತರಿಸುವ ಅಗತ್ಯವಿದೆ.

೨. ಕನಕದಾಸರು ಒಂದು ಊರಿನಲ್ಲಿ ನೆಲೆ ನಿಂತವರಲ್ಲ. ಊರೂರು ತಿರುಗುತ್ತ ಅನುಭವ ಸಂಪತ್ತನ್ನು ಗಳಿಸಿಕೊಂಡವರು. ಕನಕದಾಸರು ಸಂಚರಿಸಿದ ಸ್ಥಳಗಳನ್ನು ಕನಕ ನೆಲೆ ಎಂದು ಗುರುತಿಸಿ ಮಾಡುವ ಚಾರಿತ್ರಿಕ ಶೋಧವೂ ಸ್ಮೃತಿ ಪರಂಪರೆಯ ಭಾಗವಾಗಿ ಬರುತ್ತದೆ. ಅವರು ಪರ್ಯಟನ ಚಕ್ರದ ಅಧ್ಯಯನವೇ ಕುತೂಹಲಕರವಾದದ್ದು. ಬಾಡ, ಕಾಗಿನೆಲೆ, ಬಂಕಾಪುರ, ಸೋಸಲೆ, ಮದನಪಲ್ಲಿ, ಕುಂದಕೂರು, ಮಳೂರು, ಕದರಮಂಡಲಗಿ, ಕನಕಗಿರಿ, ಶ್ರೀರಂಗಪಟ್ಟಣ, ಮೇಲುಕೋಟೆ, ಬೇಲೂರು, ಉಡುಪಿ, ಸೋಂದೆ, ಚಂದ್ರಗುತ್ತಿ, ಕೆಳದಿ, ಹಂಪೆ ಮೊದಲಾದ ಕರ್ನಾಟಕದ ಪ್ರದೇಶಗಳಲ್ಲದೆ ತಿರುವಾಂಕೂರಿನ "ಕನಕಕೊಳ", ತಿರುಪತಿ, ರಾಜಸ್ಥಾನದ ಜಯಪುರ ಅರಮನೆಯ ಮುಂಭಾಗದಲ್ಲೀರುವ ಕನಕ ಬೃಂದಾವನ, ಮಂತ್ರಾಲಯದೊಂದಿಗಿರುವ ಕನಕನ ಬಾಂಧವ್ಯವೇ ಮೊದಲಾದ ಅಂತರ್ ರಾಜ್ಯ ಸಂಬಂಧಗಳು ಕನಕ ಪರ್ಯಟನ ಚರಿತ್ರೆಯ ಆಕರಗಳು. ಪ್ರೊ. ಸುಧಾಕರರು ಕನಕನೆಂಬ ಹೆಸರಿಗೆ ಸಂಬಂಧಿಸಿದ ೩೧ ಸ್ಥಳ ನಾಮಗಳನ್ನು ೫ ಗುಡ್ಡಗವಿಗಳ ಹೆಸರುಗಳನ್ನು ಉಲ್ಲೇಖಿಸುತ್ತಾರೆ.

೩. ಚಿತ್ರಕಲೆ ಹಾಗೂ ಶಿಲ್ಪಕಲೆಗಳಲ್ಲೂ ಕನಕದಾಸರ ಚಿತ್ರಗಳು ಕಾಣಿಸಿಕೊಂಡು ಅವೂ ಕೂಡ ಭಿನ್ನವಾದ ಆಲೋಚನೆಯನ್ನು ನಮ್ಮೊಳಗೆ ಸೃಜಿಸುತ್ತವೆ. ಮೋಹನ ತರಂಗಿಣಿಯಲ್ಲಿ ಬರುವ ಚಿತ್ರಕಲೆಯ ಅನೇಕ ಪಾರಿಭಾಷಿಕ ಪದಗಳು, ಕನಕದಾಸರಿಗಿದ್ದ ಕಲಾಸಕ್ತಿಯನ್ನು ಬಿಂಬಿಸುತ್ತದೆ. ಭಾವಚಿತ್ರ, ಚಿತ್ರ, ಚಿತ್ರಪಟ, ರೂಹು, ಪಟಚಿತ್ರ ಇತ್ಯಾದಿ ಉಲ್ಲೇಖಗಳು ಅವರ ಕೃತಿಯಲ್ಲಿ ಬರುತ್ತದೆ. ಕನಕ ದಾಸರ ಕಾಲಕ್ಕಾಗಲೇ ಕಾಗದದ ಬಳಕೆ ಶುರುವಾದಂತೆ ತೋರುತ್ತದೆ. ಕಲಾವಿದನ ಕಣ್ಣಲ್ಲಿ ಕನಕದಾಸರು ಹೇಗೆ ಮೈದೋರಿದ್ದಾರೆ ಎನ್ನುವುದು ಕುತೂಹಲದ ವಿಷಯ. ಕನಕದಾಸರನ್ನು ಕುರಿತು ಮುಮ್ಮಡಿ ಕೃಷ್ಣರಾಜರ ಕಾಲದ್ದೆಂದು ಹೇಳಲಾದ ಚಿತ್ರವೊಂದು ಶ್ರೀಕ್ಷೇತ್ರ ಧರ್ಮಸ್ಥಳದ ಮಂಜೂಷ ವಸ್ತು ಸಂಗ್ರಹಾಲಯದಲ್ಲಿದೆ. ತಲೆಗೆ ಕುಲಾವಿ ಹಾಕಿದ್ದು ಉದ್ದನೆಯ ನಿಲುವಂಗಿ ತೊಟ್ಟು ಮೈಮೇಲೆ ಇನ್ನೊಂದು ಬಟ್ಟೆ ಶಲ್ಯದಂತೆ ಹಾಕಿದ, ಕಚ್ಚೆ ಪಂಚೆ ಉಟ್ಟು ನಿಂತಿರುವ ಚಿತ್ರ. ಕೈಗಳು ಮುಗಿದ ಭಂಗಿ. ಬಲಗೈಯಲ್ಲಿ ಸೋರೆ ಬುರುಡೆಯ ಏಕನಾದವಿದೆ. ತೆಳುವಾದ ಗಡ್ಡ–ಮೀಸೆ, ಒಂದೆಳೆಯ ಮುತ್ತಿನ ಹಾರ ಧರಿಸಿದ್ದಾರೆ, ದೇಹದ ಗಾತ್ರ ಚಿಕ್ಕದು. ಚಿತ್ರದಲ್ಲಿ ಕನಕ – ಪುರಂದರ

ದಾಸರು ಎದುರು ಬದುರಾಗಿ ನಿಂತಿದ್ದಾರೆ. ಪುರಂದರ ದಾಸರ ವೇಷಭೂಷಣ ಭಿನ್ನವಾಗಿದೆ. ಅವರು ಬಲಗೈಯಲ್ಲಿ ಜ್ಞಾನ ಮುದ್ರೆಯನ್ನು ಎಡಗೈಯಲ್ಲಿ ಅಲಂಕೃತವಾದ ಯಾಳಿಮುಖ ಮತ್ತು ಹಕ್ಕಿಯೊಂದರ ಶಿಲ್ಪವಿರುವ ತಂಬೂರಿಯನ್ನು ಅದರೊಂದಿಗೆ ತಾಳಗಳನ್ನು ಹಿಡಿದಿದ್ದಾರೆ. ತಲೆಯಲ್ಲಿ ಶಿಖೆ ಇದ್ದು ತ್ರಿಪುಂಡ್ರನ್ನು ಧರಿಸಿದ್ದಾರೆ, ಜರಿ ಅಂಚಿನ ಕಚ್ಚೆ ಪಂಚೆ, ಚಿನ್ನದ ಕಂಕಣ ಎರಡೆಳೆಯ ಮುತ್ತಿನ ಸರವಿದೆ. ಈ ಚಿತ್ರದ ಮೇಲುಗಡೆ ಮೋಡದಲ್ಲಿ ಹಾರುವ ಜೋಡಿಹಕ್ಕಿಗಳ ಚಿತ್ರವಿದ್ದು ಅಲ್ಲಿ ಹೀಗೆ ಬರೆಯಲಾಗಿದೆ:

'ದಾಸವರೇಣ್ಯರಾದ ಕನಕದಾಸರು, ಪುರಂದರದಾಸರು ಇವರ ಐಕ್ಯತೆಯನ್ನು ತೋರಿಸುವ ಚಿತ್ರ'[೨೧]

ಮೇಲಾಗದಲ್ಲಿ ಜೋಡಿ ಹಕ್ಕಿಗಳನ್ನು ತೋರಿಸಿ, ವಿಶ್ವಭ್ರಾತೃತ್ವ ಶಾಂತಿ ಭಕ್ತಿಯ ಪ್ರಚಾರಕ್ಕೆ ತೊಡಗಿರುವ ಈ ದಾಸರು ಜೋಡಿ ಹಕ್ಕಿಗಳಂತೆ ಬಾಳಿದರೆಂಬುದನ್ನು ಅರ್ಥಗರ್ಭಿತವಾಗಿ ತೋರಿಸಲಾಗಿದೆ. ಇದನ್ನು ಮೈಸೂರು ನಗರದಿಂದ ಸಂಗ್ರಹಿಸಲಾಗಿದ್ದು ಕಲಾಕಾರ ಯಾರೆಂದು ತಿಳಿಯದು ಎಂದಿದೆ. ಈ ಬರಹ ಕಲಾಕಾರನ ಬರಹವಲ್ಲವೆನ್ನುವುದು ಸ್ಪಷ್ಟ. ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಪುರಂದರದಾಸರಷ್ಟೇ ಸಮಾನವಾದ ಕೊಡುಗೆಯನ್ನು ಕನಕದಾಸರು ನೀಡಿದ್ದಾರೆ.

ಈ ಚಿತ್ರದಾಚೆಯ ಸಾಂಸ್ಕೃತಿಕ ವಿವರಗಳು ಭಿನ್ನವೆನಿಸುತ್ತವೆ. ಮಧ್ಯಕಾಲೀನ ಭಕ್ತಿ ಪಂಥದ ಶೂದ್ರವರ್ಗದ ಪ್ರತಿನಿಧಿಯಾಗಿ ಕಾಣಿಸುವ ಕನಕ ತನ್ನ ಜಾತಿಯ ನೆಲೆಯ ಕುರುಹುಗಳನ್ನು ಉಳಿಸಿಕೊಂಡಂತೆ ತೋರುತ್ತಾನೆ. ಇದೊಂದು ಜಾತಿ ಶ್ರೇಣಿಕರಣದ ಮಾದರಿಯೂ ಹೌದು. ಕನಕ ದಾಸರ ಕುರಿತು ದೊರೆಯುವ ಇನ್ನೆರಡು ಚಿತ್ರಗಳಲ್ಲೂ ಕೂಡ ಜಾತಿ ರಾಜಕಾರಣದ ಸೂಕ್ಷ್ಮ ಆಯಾಮಗಳಿವೆ. ದೈನ್ಯ, ದೀನ, ತಗ್ಗಿದ, ಬಗ್ಗಿದ ಭಾವದಲ್ಲೇ ಕನಕನನ್ನು ಗ್ರಹಿಸುವಂತಾಗಿದೆ. ಶಬ್ದಗಳಲ್ಲಿ ಹೇಳಲಾಗದ ಎಷ್ಟೋ ಸಂಗತಿಗಳನ್ನು ಚಿತ್ರ ಹೇಳುತ್ತದೆ. ಧ್ವನಿ ಲಿಪಿಯಾಚೆಯ ಕಲಾ ಕೇಂದ್ರದ ಮೂಲಕ ಕನಕನನ್ನು ತಿಳಿದುಕೊಳ್ಳುವ ಕಲಾವಿದನ ಧೋರಣೆ ವಿಶಿಷ್ಟವೆನಿಸುತ್ತದೆ. ಆದರೆ ಅದು ಅಷ್ಟೇ ಪೂರ್ವಗ್ರಹವನ್ನು ಹೊಂದಿದೆ. ಕನಕದಾಸರನ್ನು ಶೂದ್ರರೆನ್ನುವ ನೆಲೆಯಿಂದ ಗುರುತಿಸುವ ಈ ಚಿತ್ರದಲ್ಲಿ ಬ್ರಾಹ್ಮಣ್ಯ ವಿಜೃಂಭಿಸಿದೆ. ಜ್ಞಾನ ಮುದ್ರೆಯ ಮೂಲಕ ಅಧಿಕಾರವನ್ನು ಸ್ಥಾಪಿಸುವ ನಿಲುವೊಂದು ಇಲ್ಲಿ ವ್ಯಕ್ತವಾಗಿದೆ. ಕನಕದಾಸರು ತಿರುಮಲೆ ತಾತಾಚಾರ್ಯ, ವ್ಯಾಸರಾಯರನ್ನು ಗುರುವೆಂದು ಕರೆಯುತ್ತಾರೆಯೇ ಹೊರತು ಪುರಂದರ ದಾಸರನ್ನಲ್ಲ. ಪುರಂದರ ದಾಸರ ಕೀರ್ತನೆಗಳಲ್ಲಿ ಕನಕದಾಸರ

೨೧. ಡಾ. ಅ.ಲ.ನರಸಿಂಹನ್ : ಚಿತ್ರಕಲೆಯಲ್ಲಿ ಕನಕದಾಸರು, ಕನಕ ಸುತ್ತಮುತ್ತ–ಜಿಜ್ಞಾಸೆಯ ಸಂಕಥನ ಪುಟ:೧೬೫

ಉಲ್ಲೇಖವಿದೆ. ಆದರೆ ಕನಕದಾಸರ ಕೀರ್ತನೆಗಳಲ್ಲಿ ನೇರವಾಗಿ ಪುರಂದರ ದಾಸರನ್ನು ಗುರುವೆಂದು ಕರೆದ ಹಾಗೆ ಕಾಣಿಸುವುದಿಲ್ಲ. ಆದರೆ ಚಿತ್ರಕಾರನ ಈ ರಚನೆ ಪಠ್ಯದಾಚೆಗಿನ ಯಾವುದೋ ಸತ್ಯವನ್ನು ನಿರ್ದೇಶಿಸುತ್ತಿದೆ ಎಂಬುವುದು ಸ್ಪಷ್ಟ. ಪುರಂದರ ದಾಸರು ಉಪದೇಶ ನೀಡುವ ಈ ಭಂಗಿಗೆ ಯಾವುದೇ ಲಿಖಿತ ದಾಖಲೆಗಳಿಲ್ಲ. ಅದು ಪುರಂದರ ದಾಸರೆನ್ನುವುದಕ್ಕಿಂತ ವಾದಿರಾಜರೆಂದರೆ ಈ ಚಿತ್ರ ಹೆಚ್ಚು ಅರ್ಥವಾದೀತು. ಆದರೆ ಜ್ಞಾನ - ಅಧಿಕಾರ, ಪ್ರಧಾನ - ಅಧೀನ ನೆಲೆಯ ಹಲವು ಆಯಾಮಗಳು ಚಿತ್ರದ ಒಳರಚನೆಯಲ್ಲಿ ಕಾಣಬಹುದು. ಹೀಗೆ ಸ್ಮೃತಿ ಪರಂಪರೆಯ ಮೂಲಕ ತೆಗೆದುಕೊಳ್ಳುವ ಕನಕದಾಸರ ವ್ಯಕ್ತಿತ್ವ ಬದುಕಿಗೆ ಭಿನ್ನ ಭಿನ್ನ ಆಯಾಮಗಳನ್ನು ಗುರುತಿಸಲು ಸಾಧ್ಯವಿದೆ. ಹಾಗೆಯೇ ಉಡುಪಿಯ 'ಕನಕನ ಕಿಂಡಿ' ಹೇಳುವ ಐತಿಹ್ಯಗಳನ್ನು ಸ್ಮೃತಿ ಪರಂಪರೆಯ ಭಾಗವಾಗಿ ವಿಮರ್ಶಿಸಿದರೆ ಹೊಸ ಹೊಳಹುಗಳು ಸಿಗಬಹುದು. ಈಗಾಗಲೇ ಬನ್ನಂಜೆ ಗೋವಿಂದಾಚಾರ್ಯರು ಈ ಕೆಲಸವನ್ನು ಆರಂಭಿಸಿದ್ದಾರೆ. ಹೀಗೆ ಕನಕದಾಸರಿಗೆ ಸಂಬಂಧಿಸಿದ ಸ್ಥಳಗಳನ್ನು ಚರಿತ್ರೆಯ ಸ್ಥಳೀಯ ಮೂಲಗಳನ್ನು ಬಳಸಿಕೊಂಡು ಚರಿತ್ರೆಯ ಪುನಾರಚನೆಯ ಸಾಧ್ಯತೆ ಇದೆ ಎನ್ನುವುದು ಗಮನಾರ್ಹ.

ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ದೇವಾಲಯ ಮಂಜೂಷಾ ವಸ್ತು ಸಂಗ್ರಹಾಲಯದಲ್ಲಿರುವ ವರ್ಣಚಿತ್ರ



ದಾಸವರೇಣ್ಯರಾದ ಕನಕದಾಸರು ಪುರಂದರದಾಸರು, ಇವರ ಐಕ್ಯತೆಯನ್ನು ತೋರಿಸುವ ಚಿತ್ರ, ಮೇಲಾಗದಲ್ಲಿ ಜೋಡಿಹಕ್ಕಿಗಳನ್ನು ತೋರಿಸಿ, ವಿಶ್ವಭ್ರಾತೃತ್ವ, ಶಾಂತಿ, ಭಕ್ತಿಯ ಪ್ರಚಾರಕ್ಕೆ ತೊಡಗಿರುವ ಈ ದಾಸರು ಜೋಡಿಹಕ್ಕಿಗಳಂತೆ ಬಾಳಿದ್ದರೆಂಬುದನ್ನು ಅರ್ಥಗರ್ಭಿತವಾಗಿ ತೋರಿಸಲಾಗಿದೆ. ಇದನ್ನು ಮೈಸೂರು ನಗರದಿಂದ ಸಂಗ್ರಹಿಸಲಾಗಿದ್ದು, ಕಲಾಕಾರ ಯಾರೆಂದು ತಿಳಿಯದು.

ಮಧ್ಯಕಾಲೀನ ಇತಿಹಾಸದಲ್ಲಿ ಕನಕದಾಸರು ಎಲ್ಲಾ ಶೋಷಿತ ಸಮುದಾಯಗಳ ಪ್ರತಿನಿಧಿಯಾಗಿ ಕಂಡು ಬಂದಿದ್ದಾರೆ. ಕೇವಲ ಧಾರ್ಮಿಕ ಚರಿತ್ರೆಯ ಭಾಗವಾಗಿ ಮಾತ್ರ ಅಲ್ಲ, ಒಟ್ಟು ಕನ್ನಡದ ಸಂಸ್ಕೃತಿಯ ಭಾಗವಾಗಿ ಅವರು ಕಾಣಿಸಿಕೊಳ್ಳುವ ಔಚಿತ್ಯವನ್ನು ಗುರುತಿಸಿಕೊಳ್ಳಬೇಕು. ಇದುವರೆಗಿನ ಇತಿಹಾಸದ ತಿಳಿವು ಕನಕದಾಸರನ್ನು ಕಟ್ಟಿಕೊಟ್ಟ ರೀತಿಯಲ್ಲಿ ಕೆಲವು ಮಿತಿಗಳೂ ಇವೆ. ಜೊತೆಗೆ ಅನೇಕ ಬಗೆಯ ಪೂರ್ವಾಗ್ರಹಗಳೂ ಕೆಲಸ ಮಾಡಿವೆ. ವಿಜಯನಗರದ ಚರಿತ್ರೆಯಲ್ಲಿ ಕನಕದಾಸರ ಪ್ರತಿನಿಧೀಕರಣವು ದಾಸಪಂಥಗಳ ಸಂದರ್ಭದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಪ್ರಮುಖ ಕಾರಣ ಜಾತಿನೆಲೆ ಒಂದಾದರೆ ಇನ್ನೊಂದು ಧಾರ್ಮಿಕ ಚೌಕಟ್ಟು. ಕನಕನ್ನು ಹುಡುಕುವ ಆಕರಗಳು ಕೇವಲ ಪಠ್ಯಕೇಂದ್ರಿತವಾಗಿ ಮಾತ್ರವಲ್ಲ; ಪಠ್ಯದಾಚೆಯೂ ಅದು ವಿಸ್ತರಿಸಿಕೊಂಡಾಗ ಮಧ್ಯಕಾಲೀನ ಇತಿಹಾಸದಲ್ಲಿ ಕನಕದಾಸರ ಪ್ರತಿನಿಧೀಕರಣದ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಸಂಸ್ಕೃತಿಯ ಪರಿವ್ಯಾಖ್ಯೆಗಳು ಆಳುವ ವರ್ಗದ ಪರವಾಗಿರದೆ ಜನಮುಖಿಯಾಗಿರಬೇಕೆಂಬ ಅಭಿಪ್ರಾಯಕ್ಕೆ ಕನಕದಾಸರಲ್ಲಿ ಸಾಕಷ್ಟು ನಿದರ್ಶನಗಳು ದೊರೆಯುತ್ತದೆ. ಕನಕ ಚಿಂತನೆಯ ಹಿಂದಿನ ರಾಜಕೀಯ ಧೋರಣೆಯನ್ನು ಅರ್ಥೈಸಿಕೊಳ್ಳಲು ಅಂದಿನ ರಾಜಕೀಯ, ಧಾರ್ಮಿಕ ವಿನ್ಯಾಸವನ್ನು ತಿಳಿದುಕೊಳ್ಳಬೇಕಾದುದು ಅಗತ್ಯ. ಮೌಖಿಕ ಪರಂಪರೆ, ಜನಪದ ಹಾಡಿನ ಮಟ್ಟುಗಳಲ್ಲಿ, ಚೆನ್ನದಾಸರ ಧಾರ್ಮಿಕ ಆಚರಣೆಗಳಲ್ಲಿ, ಚಿತ್ರಕಲೆ, ಪರ್ಯಟನೆಯ ನೆಲೆಗಳಲ್ಲಿ, ಕರ್ನಾಟಕ ಸಂಗೀತ ಮೊದಲಾದ ಕಡೆಗಳಲ್ಲಿ ಕನಕನ ಅಸ್ಮಿತೆ ಕಾಣುತ್ತದೆ. ಕನಕದಾಸರು ಮತ್ತು ಅವರ ಕೃತಿಗಳು ಹಾಗೂ ಬದುಕು ಬರಹಗಳ ಚಾರಿತ್ರಿಕ ವಿನ್ಯಾಸವನ್ನು ಪ್ರವೇಶಿಸುವ ಪೂರ್ವದಲ್ಲಿ ಕನಕ ಪ್ರತಿನಿಧೀಕರಣದ ತಿಳುವಳಿಕೆ ಹೆಚ್ಚು ಚರ್ಚೆಗೆ ಪೂರಕವಾಗಬಲ್ಲದು.

## ಅಧ್ಯಾಯ ೩

# ಸಮೂಹ ಸೃಷ್ಟಿಯ ಕಥನವಾಗಿ ಕನಕ ಚರಿತ್ರೆ : ಬದುಕು ಬರಹಗಳ ಅನುಸಂಧಾನ

ಕರ್ನಾಟಕದ ಬಹುಮುಖ್ಯ ಸಾಂಸ್ಕೃತಿಕ ಆಕರಗಳನ್ನು ಹಲವು ಕಾಲಗಳಿಂದ ಜತನದಿಂದ ಕಾಯ್ದುಕೊಂಡು ಬಂದು ಚರಿತ್ರೆ ಕಟ್ಟಿದ ಕೀರ್ತಿ ನಿಜವಾಗಿಯೂ ಜನಸಾಮಾನ್ಯರಿಗೆ ಸಲ್ಲುತ್ತದೆ. ಮಾನವ ಕುಲ ಎಂದಿನಿಂದ ಪ್ರಾರಂಭವಾಯಿತೋ ಅಂದಿನಿಂದಲೇ ಇತಿಹಾಸದ ಕಾಲಕ್ರಮವು ಪ್ರಾರಂಭವಾಯಿತು. ಅದನ್ನು ಕಾಲಕ್ಕೆ, ದೇಶಕ್ಕೆ, ಜಾತಿ, ಧರ್ಮಕ್ಕೆ ಸೀಮಿತಗೊಳಿಸಿ ನೋಡುವ ಪರಿಪಾಠನ್ನು ಕಲಿಸಿದ ಪಾಶ್ಚಾತ್ಯರ ಚರಿತ್ರೆಯ ನೋಟಗಳ ಕಾರಣದಿಂದ ಕಾಲದೇಶಗಳಿಂದ ಬೇರೆಯೇ ಆದ ಇತಿಹಾಸ ರಚನಾತಂತ್ರಗಳು ನಮ್ಮಿಂದ ದೂರವಾದವು. ಈ ಕಾರಣದಿಂದಲೇ ಗತವನ್ನು ವರ್ತಮಾನದೊಂದಿಗೆ ಬೆಸೆಯಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣ ಹೊಂದಿತು. ಧರ್ಮ ಜಾತಿಯ ನೆಲೆಯಿಂದ ರೂಪಿಸಲ್ಪಟ್ಟ ಚಿಂತನಕ್ರಮಗಳನ್ನು ಸಾಮ್ರಾಜ್ಯಶಾಹಿಯ ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳುವುದರೊಂದಿಗೆ ಇಡೀ ಭಾರತದ ಚರಿತ್ರೆಯನ್ನು ಅದರ ವೈವಿಧ್ಯತೆಯನ್ನು ನಾಶಮಾಡುವುದರ ಮೂಲಕ ಏಕಾಕೃತಿಯ ನೋಟವಾಗಿ ಉಳಿಯುವಂತೆ ಮಾಡಿವೆ.

ಈ ನೆಲದ ಬಹುಸಂಖ್ಯಾತ ಅಲಕ್ಷಿತ ನೆಲೆಯ ಚಹರೆಯನ್ನೇ ನಾಶಪಡಿಸಿ ಅದರ ಅಸ್ತಿತ್ವದ ಮೂಲ ಪ್ರಶ್ನೆಗಳನ್ನೇ ತಿರಸ್ಕರಿಸಿ ರಚಿಸಲ್ಪಟ್ಟ ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಆಳುವ ವರ್ಗದ ದರ್ಪವಿದೆ. ವರ್ಣಾಶ್ರಮ ಧರ್ಮಗಳನ್ನು ವ್ಯವಸ್ಥಿತವಾಗಿ ಕಾಪಾಡಿಕೊಂಡು ಬಂದ ಕ್ರೌರ್ಯವಿದೆ. ಅದು ಎಲ್ಲಿಯವರೆಗೆ ಈ ನಾಡಿನ ಜನಸಮುದಾಯದ ಜೀವನ ಕಥನದ ಸಹಜ ನಿರೂಪಣೆಯಾಗುವುದಿಲ್ಲವೋ ಅಲ್ಲಿಯವರೆಗೆ ಇದು ಪ್ರಭುತ್ವದ ವೈಭವೀಕರಣಕ್ಕೆ ಮಾತ್ರ ಮೀಸಲಾಗಿರುತ್ತದೆ. ಕಳೆದುಹೋದ ನಮ್ಮ ಸಮಾಜ ಜೀವನದ ಕಥನಗಳನ್ನು ಹೊಸದಾಗಿ ನಿರೂಪಣೆಗೊಳಿಸುವುದಕ್ಕಿರುವ ಆಧಾರಗಳು ಯಾವುವು? ಎಂಬ ಮೂಲಭೂತ ಪ್ರಶ್ನೆಗೆ ಸಾಹಿತ್ಯದಂತಹ ಸೃಜನಶೀಲ ನೆಲೆಯ ಹುಡುಕಾಟಗಳು ಮಾತ್ರ ಉತ್ತರ ನೀಡಬಲ್ಲದು. ಚರಿತ್ರೆಗೂ ಸಾಹಿತ್ಯಕ್ಕೂ ಇರುವ ನಿಕಟ ಸಂಬಂಧದ ಕಾರಣದಿಂದಾಗಿ ಇದರ ಮೂಲಕವೇ ಹೊಸ ಅನುಸಂಧಾನಕ್ಕೆ ತೊಡಗಬೇಕಾಗುತ್ತದೆ. ಕೃತಿ, ಕೃತಿಕಾರನ ಬದುಕು-ಬರಹಗಳನ್ನು ಈ ಅನುಸಂಧಾನದ ಮಾರ್ಗಗಳಾಗಿ ಕಂಡುಕೊಳ್ಳುವ

ಸಂದರ್ಭದಲ್ಲಿ ಒಟ್ಟು ಕರ್ನಾಟಕದ ಚರಿತ್ರೆಯೇ ಪುನರ್ ರಚನೆಯ ಪ್ರಕ್ರಿಯೆಗೆ ಒಳಪಡುತ್ತದೆ. ಈ ನೆಲದ ಜೊತೆಗಿನ ಗಾಢ ಸಂಬಂಧದಿಂದ ಸಮುದಾಯದ ಬದುಕಿಗೆ ಅಂಟಿಕೊಂಡು ನಿರೂಪಿಸಲ್ಪಡುವ ಇಂತಹ ಕಥನಗಳು ಬಹುರೂಪಿ ನಿರೂಪಣೆಗಳನ್ನೊಳಗೊಂಡಿರುತ್ತದೆ. ಕನಕನ ಕೃತಿಗಳ ಮಧ್ಯಯುಗೀನ ಚರಿತ್ರೆಯ ಮರು ನಿರೂಪಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗಮನಿಸುವ ಸಂದರ್ಭದಲ್ಲಿ ತಳವರ್ಗಗಳ ಅಲಕ್ಷಿತ ಸಮುದಾಯಗಳ ಬಹುರೂಪಿ ಚರಿತ್ರೆಯ ಕಥನಗಳು ಕಾಣಿಸಿಕೊಳ್ಳುತ್ತವೆ.

ಸಂಸ್ಕೃತಿಗಳು ಯಾವತ್ತು ಅವ್ಯಕ್ತ ಸ್ವರೂಪದಲ್ಲಿ ಚರಿತ್ರೆಯನ್ನೆ ಆತ್ಮಕಥನವಾಗಿ ಮಂಡಿಸುತ್ತವೆ [೧] ಎಂಬ ತಿಳುವಳಿಕೆಯ ನೆಲೆಯಿಂದ ಹೊರಟರೆ ಕನಕ ಚರಿತ್ರೆಯೂ ಇದಕ್ಕಿಂತ ಭಿನ್ನವೆನಿಸುವುದಿಲ್ಲ. ಮಧ್ಯಕಾಲೀನ ಜನಜೀವನ ಸಂಸ್ಕೃತಿ–ಪ್ರಕೃತಿಗಳನ್ನು ಕನಕ ಸಾಹಿತ್ಯ ಗರ್ಭೀಕರಿಸಿಕೊಂಡಿದೆ. ಇವೆಲ್ಲವೂ ನಿರೂಪಣೆಗೊಳ್ಳುವ ಮಾದರಿ ಆತ್ಮಕಥನದ ಜಾಡನ್ನೇ ಅನುಸರಿಸುತ್ತವೆ. 'ರಾಮಧ್ಯಾನ ಚರಿತ್ರೆ'ಯಂತಹ ಕೃತಿಗಳನ್ನು ಆ ಕಾಲದ ಸಾಂಸ್ಕೃತಿಕ ನಿರೂಪಣೆಯಾಗಿ ನೋಡುವುದು ಎಷ್ಟು ಮುಖ್ಯವೊ ಅಷ್ಟೇ ಮುಖ್ಯ ಅದನ್ನು ಕನಕದಾಸರಂತಹ ಎಷ್ಟೋ ಶೂದ್ರವರ್ಗಗಳ ಬಹುರೂಪಿ ಆತ್ಮಕಥನಗಳಾಗಿ ವಿಸ್ತರಿಸಿಕೊಳ್ಳುವುದು.

### ಕನಕನನ್ನು ಕಟ್ಟಿಕೊಟ್ಟ ಚರಿತ್ರೆಯ ಸ್ವರೂಪ

ಕನಕನನ್ನು ಬಹು ಆಕೃತಿಗಳ ಮೂಲಕ ನಿರ್ವಚಿಸಿಕೊಳ್ಳಲು ಯತ್ನಿಸುವ ಸಮುದಾಯದ ಕಥನಗಳು ಕರ್ನಾಟಕದ ಸಾಂಸ್ಕೃತಿಕ ಸ್ವರೂಪವನ್ನು ಒಳಗೊಂಡು ವಿಸ್ತರಿಸುವುದನ್ನು ಕಾಣಬಹುದಾಗಿವೆ. ಕನಕನನ್ನು ಕುರಿತು ಏಕಮಾದರಿಯ ಕಥನಗಳಿಲ್ಲ; ಅವು ಬಹುತ್ವದ ಕಥನಗಳಾಗಿ ಸೃಷ್ಟಿಸಲ್ಪಟ್ಟವು. ಇವುಗಳೇ ಒಬ್ಬ ಸಾಂಸ್ಕೃತಿಕ ನಾಯಕನನ್ನು ರೂಪುಗೊಳಿಸುವಂತವು. ಕನಕನ ಜೊತೆಗಿರುವ 'ನಾಯಕ' ವಿಶೇಷಣವು ಅವನೊಬ್ಬ ಸಮುದಾಯದ ನಾಯಕನೆನ್ನುವ ಪರಿಜ್ಞಾನವನ್ನು ನಮ್ಮ ಮುಂದಿಡುತ್ತದೆ. 'ವಿಜಯನಗರದ ದಂಡನಾಯಕರ ಮನೆತನದಲ್ಲಿ ಜನಿಸಿ ತಾವು ೭೮ ಗ್ರಾಮಗಳನ್ನು ಆಳುತ್ತಿದ್ದರೆಂಬ ಪ್ರತೀತಿಯಿದೆ'. ಕನಕದಾಸನನ್ನು ೨೧ನೇ ಶತಮಾನದವರೆಗೂ ಕಾಯ್ದುಕೊಂಡು ಬಂದ ಕುತೂಹಲಗಳು ಚರಿತ್ರೆಯನ್ನು ವಿವಿಧ ನೆಲೆಯಲ್ಲಿ ನಿರೂಪಿಸುವ ಕ್ರಮದಿಂದಲೇ ಹುಟ್ಟಿಕೊಂಡಿರುವಂಥದ್ದು. ಅದು ಯಾವ ಕಾಲದಲ್ಲಿ ಪುರಾಣವಾಯಿತು? ಯಾವ ಸಂದರ್ಭದಲ್ಲಿ ಐತಿಹ್ಯವಾಗಿ ಬದಲಾಯಿತು? ಚರಿತ್ರೆಯೊಂದಿಗಿನ ಇದರ ಸಂಬಂಧವೇನು? ಈ ಮೊದಲಾದ ಅನೇಕ ಪ್ರಶ್ನೆಗಳೊಂದಿಗೆ

---

೧. ಡಾ. ಮೊಗಳ್ಳಿ ಗಣೇಶ; ಅವ್ಯಕ್ತ ಚರಿತ್ರೆ , ಪುಟ ೧೫

ಮುಖಾಮುಖಿಯಾಗುತ್ತಲೇ ಕನಕ ಚರಿತ್ರೆಯೊಂದು ಜನಸಮುದಾಯದ ಒಡಲಲ್ಲಿ ಸದ್ದಿಲ್ಲದೆ ತನ್ನ ತಾತ್ವಿಕ ನೆಲೆಯನ್ನು ಕಂಡುಕೊಂಡಿದೆ. ಪುರಾಣ-ಐತಿಹ್ಯ ಇತಿಹಾಸದಾಚೆ ಸಾಮಾಜೀಕರಣಗೊಂಡಿದೆ. ಮಧ್ಯಕಾಲೀನ ಕರ್ನಾಟಕದ ಚರಿತ್ರೆಗೆ ಕನಕನಂತಹ ಒಬ್ಬ ಸಾಂಸ್ಕೃತಿಕ ನಾಯಕನ ಅನಿವಾರ್ಯತೆ ಇತ್ತು ಎಂಬ ಕಾರಣಕ್ಕಾಗಿಯೇ ಕನಕನ ಬಗೆಗಿನ ಅಧ್ಯಯನ, ಸಂಶೋಧನೆ, ವಿಮರ್ಶೆಗಳು ಹತ್ತು ಹಲವು ಮುಖಗಳನ್ನು ಆಧರಿಸಿ ಅವನ ಬಗೆಗಿನ ಜಿಜ್ಞಾಸೆಯನ್ನು ಜೀವಂತವಾಗಿರಿಸಿಕೊಂಡಿದೆ. ವಿವಿಧ ಮಗ್ಗಲುಗಳಿಂದ ಅವನ ಬಗೆಗಿನ ಕುತೂಹಲವನ್ನು ಕೆದಕಲು ಸಾಧ್ಯವಾಗಿದೆ. ಕನಕನ ವ್ಯಕ್ತಿತ್ವದ ಹರವು ಆ ಕಾಲದ ಧರ್ಮ-ಸಂಸ್ಕೃತಿ- ರಾಜಕಾರಣದೊಂದಿಗೆ ತಳಕು ಹಾಕಿ ಕೊಂಡಿರುವುದೂ ಈ ಬಗೆಯ ಕುತೂಹಲಕ್ಕೆ ಕಾರಣವಾಗಿದೆ.

### ಕನಕ-ಸಮೂಹ ಸೃಷ್ಟಿಯ ನಾಯಕ

ಕನಕನನ್ನು ಪ್ರವೇಶಿಸಲು ನಮಗೆ ಎರಡು ದಾರಿಗಳಿವೆ. ಒಂದು ಕನಕನ ಕೃತಿಗಳ ಒಳಗಿನ ಗುರುತುಗಳ ಮೂಲಕ ಅವನನ್ನು ಪ್ರವೇಶಿಸುವುದು; ಇನ್ನೊಂದು ಕನಕ ಕೃತಿಯಾಚೆಯ ಹೊರಗಿನ ಗುರುತುಗಳ ಮೂಲಕ ಪ್ರವೇಶಿಸುವುದು. ಕನಕದಾಸನ ಹುಟ್ಟು, ಬಾಲ್ಯದ ಪರಿಸರದ ಬಗೆಗಿನ ವಸ್ತುನಿಷ್ಠ ಮಾಹಿತಿಗಳ ಕೊರತೆ ಇರುವುದರಿಂದಲೇ ಕನಕ ಚರಿತ್ರೆಯನ್ನು ಒಟ್ಟಾಗಿ ಗ್ರಹಿಸದೆ ಬಿಡಿ ಬಿಡಿ ಘಟನೆಗಳ ಮೂಲಕ ನಿರೂಪಿಸುವ ಕ್ರಮವನ್ನು ಕಾಣುತ್ತೇವೆ. ಇಲ್ಲಿಯವರೆಗೆ ಕನಕನನ್ನು ಕೇಂದ್ರೀಕರಿಸಿದ ಅಧ್ಯಯನಗಳು ಕೀರ್ತನೆಕಾರ ಕನಕದಾಸ ಬೇರೆ; ಕವಿ ಕನಕದಾಸ ಬೇರೆ, ಮೋಹನ ತರಂಗಿಣಿ, ನಳಚರಿತ್ರೆಯ ಕವಿ ಕನಕದಾಸನೇ ಬೇರೆ, ಪುರಾಣ-ಐತಿಹ್ಯ-ಇತಿಹಾಸ ಜಾನಪದ ಕಥನಗಳ ಮೂಲಕ ತೆರೆದುಕೊಳ್ಳುವ ಕನಕನೇ ಬೇರೆ ಎಂದು ಭಾವಿಸಲಾಗುತ್ತದೆ. ಇಂಥಹ ಪರಿಕಲ್ಪನೆಗಳು ಕನಕನನ್ನು ಅರ್ಥೈಸುವುದಕ್ಕೆ ತೊಡಕುಗಳನ್ನು ತಂದೊಡ್ಡುತ್ತವೆ. ಅವನು ಪ್ರತಿನಿಧಿಸುವ ಮೌಲ್ಯಗಳು ಎಲ್ಲಾ ಹಂತದಲ್ಲಿಯೂ ಒಂದೇ ಬಗೆಯಾಗಿದೆ. ಭಕ್ತಿಯಲ್ಲೂ, ಕಾವ್ಯದಲ್ಲೂ, ವ್ಯಕ್ತಿತ್ವದಲ್ಲೂ ಪ್ರಖರ ವೈಚಾರಿಕತೆಯನ್ನು ಕಾಯ್ದುಕೊಳ್ಳುವ ಉದ್ದೇಶ ಹೊಂದಿರುವ ಕನಕನ ಆಶಯ ಎಲ್ಲಿಯೂ ಭಂಗವಾಗುವುದಿಲ್ಲ. ಎಲ್ಲಾ ಕಡೆಯೂ ಕನಕನ ಅಸ್ತಿತ್ವ ಒಂದೇ ಆಗಿ ಕಾಣಿಸುತ್ತದೆ. ವ್ಯಕ್ತಿತ್ವ ಮತ್ತು ಕೃತಿತ್ವದಲ್ಲಿ ಎಲ್ಲೂ ಕನಕನೆಂಬ ನಿಜದ ಅಸ್ಮಿತೆ ಗೈರುಹಾಜರಾಗುವುದಿಲ್ಲ. ಆದರೂ ಅವನನ್ನು ಹುಟ್ಟಿನಿಂದ ಸಾವಿನವರೆಗೆ ಅಖಂಡವಾಗಿ ಕಟ್ಟಿಕೊಳ್ಳುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಏಕೆಂದರೆ ಕನಕನಿಗೆ ಅನುಯಾಯಿಗಳಿಲ್ಲ. ಬಸವಣ್ಣನ ಹಾಗೆ, ಅಲ್ಲಮನ ಹಾಗೆ ಪ್ರಸಿದ್ಧಿ ಪಡೆದ ಪೂರ್ವಕಾಲದ ಕನಕ ಚರಿತ್ರೆಯನ್ನು ಯಾರೂ ಬರೆದಿಲ್ಲ. ಬಸವಣ್ಣನಿಗೊಂದು ಪುರಾಣವಿದೆ. ಕನಕನಿಗೆ ಪುರಾಣವಿಲ್ಲ. ಕನಕ ಪುರಾಣಕ್ಕಿಂತಲೂ ಚರಿತ್ರೆಗೇ ಹೆಚ್ಚು ಸಮೀಪನಾಗುತ್ತಾನೆ. ವ್ಯಕ್ತಿಗತವಾಗಿ ಹಾಗೆ ಅಖಂಡವಾಗಿ ಚರಿತ್ರೆಯನ್ನು

ಕಟ್ಟಿಕೊಳ್ಳುವಲ್ಲಿಯೂ ಕೆಲವು ಅಪಾಯಗಳಿವೆ. ಧರ್ಮ-ಪುರಾಣ-ಜಾತಿಯ ಚೌಕಟ್ಟಿಗೆ ವ್ಯಕ್ತಿತ್ವವನ್ನು ಹೊಂದಿಸಿದಷ್ಟೂ ನೈಜತೆ ಮರೆಯಾಗಿ ಬಿಡುತ್ತದೆ. ಕನಕದಾಸರೊಂದು ತೆರೆದ ಪುಸ್ತಕ. ಪ್ರತೀ ಕಥನದಲ್ಲೂ ಅವರೊಂದು ಅಪೂರ್ವ ಶಕ್ತಿಯಾಗಿ ಕಾಣುತ್ತಾರೆ. ಅವರ ಪ್ರತಿಯೊಂದು ಐತಿಹ್ಯ- ಪುರಾಣ ಕಥೆಗಳ ಹಿಂದೆಯೂ ಒಂದು ವೈಚಾರಿಕತೆ ಕೆಲಸ ಮಾಡುತ್ತದೆ. ಕನಕ ಚರಿತ್ರೆಯನ್ನು ಹಾಗೆ ನೋಡಲು ಸಾಧ್ಯವಾಗಿರುವುದೆ ಅದರ ವಿಶಿಷ್ಟತೆ.

ಬಸವಣ್ಣ ಮೊದಲು ಧಾರ್ಮಿಕ ನಾಯಕ; ನಿರ್ದಿಷ್ಟ ಸಮುದಾಯದ ಒಂದರ ನಾಯಕ. ಅಂಬೇಡ್ಕರ್ ಕೂಡ ಹಾಗೆ. ಆಮೇಲೆ ಇವರಿಬ್ಬರೂ ಸಮುದಾಯದಿಂದ ಸಮೂಹದ ಕಡೆ ಚಲಿಸಿದ ನಾಯಕರು. ಆದರೆ ಗಾಂಧಿ ಒಬ್ಬ ಸಮೂಹ ನಾಯಕ. ಕನಕನೂ ಒಬ್ಬ ಸಮೂಹ ನಾಯಕ. ಸಮುದಾಯವು ಯಾವಾಗಲೂ ತನ್ನ ನಾಯಕ ಉದಾತ್ತನಾಗಿರಬೇಕೆಂದು ಬಯಸುತ್ತದೆ. ಅವನ ವರ್ಣರಂಜಿತ ಚರಿತ್ರೆಯಲ್ಲಿ ಮೈ ಮರೆತು ಬಿಡಬಹುದು. ಮಧ್ಯಯುಗೀನ ಕರ್ನಾಟಕದಲ್ಲಿ ಕನಕನನ್ನು ಸಮುದಾಯದ ನಾಯಕನೆಂಬ ಮಾನ್ಯತೆ ಪಡೆಯುವ ಯಾವ ಕ್ರಾಂತಿಯೂ ಆಗಿಲ್ಲ. ಅವನು ಸಮೂಹ ನಾಯಕನಾಗಿ ಬೆಳೆದ. ಹಾಗಾಗಿ ಕನಕ ಎಂದರೆ ಒಬ್ಬ ವ್ಯಕ್ತಿಯಲ್ಲ; ಒಂದು ಸಮೂಹದ ಶಕ್ತಿ. ಆ ಶಕ್ತಿ ಎಲ್ಲಾ ದಲಿತ, ಹಿಂದುಳಿದ, ಅಲೆಮಾರಿ, ಅರೆ ಅಲೆಮಾರಿ ಶೋಷಿತ ನೆಲೆಯ ಪ್ರಜ್ಞೆಯಾಗಿ ರೂಪುಗೊಳ್ಳುತ್ತಾ ಹೋಗುತ್ತದೆ. ಒಬ್ಬ ಪಾಳೇಗಾರನಾಗಿದ್ದ ಕನಕನಾಯಕ ಆಳುವ ವರ್ಗದ ಸಹಜ ದೌರ್ಬಲ್ಯಗಳನ್ನು ಮೀರಿ ಮಹಾನ್ ಸಂತನಾದ ಈ ನಡುವಿನ ಪಲ್ಲಟವನ್ನು ಗ್ರಹಿಸದೆ ಇದಕ್ಕಿರುವ ಕಾರಣಗಳಿಗೆ ಉತ್ತರ ಕಂಡುಕೊಳ್ಳುವುದು ಸುಲಭವಲ್ಲ. ಕನಕ ಚರಿತ್ರೆಗಳ ಬಹುಪಾಲು ಕಥನಗಳು ಯಾರಿಗೂ ಗೋಚರವಾಗದೆ ಲುಪ್ತವಾಗಿದೆ. ಖಾಲಿ ಅವಕಾಶಗಳಲ್ಲಿ ತುಂಬುವುದು ಏನನ್ನು? ಕನಕ ಬದುಕಿನ ಅನೇಕ ಸ್ಥಿತ್ಯಂತರಗಳಿಗೆ ಒಳಗಾದ ವ್ಯಕ್ತಿ.

ಈ ಎಲ್ಲಾ ವೈರುಧ್ಯಗಳನ್ನು ಒಂದು ಮಾಡಿದ ಕನಕನೆಂಬ ಸೈನಿಕನ ಸಾಮಾಜಿಕ ಚರಿತ್ರೆಯು ವಿಜಯನಗರದ ಪ್ರಭು ಚರಿತ್ರೆಗಿಂತ ಬೇರೆಯದೇ ಆದುದು ಎನ್ನುವುದು ಇಲ್ಲಿಯ ಮುಖ್ಯವಾದ ತಿಳುವಳಿಕೆ. ಕನಕನ ಕೃತಿಗಳು ನಿರೂಪಿಸುವ ಕನಕ ಚರಿತ್ರೆಯ ಸ್ವರೂಪ ಅವನ ನುಡಿ ಸಾಮಗ್ರಿಯನ್ನು ಅಖಂಡವಾದ ಅನುಸಂಧಾನಕ್ಕೆ ಒಳಪಡಿಸುತ್ತದೆ. ಇದು ಒಂದು ಕಡೆಯಾದರೆ, ಇನ್ನೊಂದು ಅವನ ನಡೆ ಸಾಮಾಗ್ರಿ. ಅವನ ಬದುಕಿನ ನಿರಂತರ ಪರ್ಯಟನೆಯ ಸಾಧನವಾಗಿಯೂ ಪರಿಗಣಿಸಿ ವಿಶ್ಲೇಷಣೆಗೆ ಒಳಪಡಿಸಬೇಕು. ಕನಕನ ಜೀವನದ ಬಗೆಗೆ ದೊರೆಯುವ ಆಕರಗಳು ಅವನನ್ನು ಐತಿಹಾಸಿಕ ವ್ಯಕ್ತಿಯಾಗಿ ಕಾಣುವುದಕ್ಕಿಂತ ಸಾಂಸ್ಕೃತಿಕ ನಾಯಕನನ್ನಾಗಿ ಕಾಣುವುದಕ್ಕೆ ಹೆಚ್ಚು ಒತ್ತು ಕೊಡುತ್ತದೆ. ಹಲವು ಮೌಖಿಕ ಸಂಕಥನಗಳು ಕಾಣಸಿಗುತ್ತವೆ. ಇವೆಲ್ಲವೂ ಕನಕ ಚರಿತ್ರೆ ಕಟ್ಟುವ

ಕೃತಿಯ ಹೊರಗಿನ ಗುರುತುಗಳಾಗಿ ಕಾಣಿಸುವಂತವು. ಪೌರಾಣಿಕ ಕಥನ ತಂತ್ರಗಳು, ಐತಿಹ್ಯಗಳು, ಈ ವಿಭಾಗಕ್ಕೆ ಸೇರುತ್ತವೆ. ಅವನ ಬಗೆಗೆ ಕೃತಿಯೊಳಗಿನ ಗುರುತುಗಳು ಕಡಿಮೆ. ಅತಿಮಾನುಷ ಶಕ್ತಿಯೊಂದಿಗೆ ಸಮೀಕರಿಸಿದೆ. ಕನಕನನ್ನು ಇತಿಹಾಸದ ಭಾಗವಾಗಿಸಿದ ಕಥನಗಳು, ಕನಕನ ವ್ಯಕ್ತಿತ್ವವನ್ನು ಏಕರೂಪಿ ದಾಸಸಾಹಿತ್ಯದ ಚೌಕಟ್ಟಿನೊಳಗೆ ತುರುಕಲು ಪ್ರಯತ್ನಿಸಿವೆ. ಜೊತೆಗೆ ಇದುವರೆಗೆ ಕನಕದಾಸನ ಬಗೆಗೆ ಬಂದ ವಿಮರ್ಶೆ, ಸಂಶೋಧನೆಗಳು ವಸ್ತು ಸಂಗತಿಯನ್ನು ಮತ್ತಷ್ಟು ಬೆಳೆಸಿ ಜಾತಿಯ ಬಗೆಗಿನ ವಾಗ್ವಾದವನ್ನು ಸೃಷ್ಟಿಸಿದೆ. ಈ ಹಿನ್ನಲೆಯಲ್ಲಿ ಕನಕಚರಿತ್ರೆಯನ್ನು ಇನ್ನೊಮ್ಮೆ ಪುನರ್ ಆಲೋಚಿಸುವ ಅಗತ್ಯವಿದೆ.

**ಕನಕನ ಕೃತಿಗಳ ಒಳಗಿನ ಗುರುತುಗಳು:** ಕನಕದಾಸನ ಕೃತಿಗಳ ಮೂಲಕ ಅವನ ಜೀವನದ ಬಗೆಗೆ ದೊರೆಯುವ ಮಾಹಿತಿ ಅತ್ಯಲ್ಪವೆಂದೇ ಹೇಳಬೇಕು. ಕನಕನ ಹುಟ್ಟು ಬಾಲ್ಯದ ಪರಿಸರದ ಹಿನ್ನೆಲೆಯನ್ನು ಅವನ ಕೃತಿಗಳು ನೀಡುವ ಆಧಾರದ ಮೇಲೆ ಕೆಲವು ಊಹೆಗಳನ್ನು ಮಾಡಲಾಗಿದೆ.

### ೧. ಜನ್ಮ ವೃತ್ತಾಂತ

ತನ್ನ ಪೂರ್ವಜನ್ಮದ ಕಥೆಯ ಮೂಲಕ ತನ್ನನ್ನು ಗುರುತಿಸಿಕೊಳ್ಳುವ ಕನಕದಾಸನ ನಿಲುವು ಕೆಲವೊಮ್ಮೆ ಆಶ್ಚರ್ಯವನ್ನು ಹುಟ್ಟಿಸುತ್ತದೆ. ವೈಷ್ಣವ ದೇವರು, ಧರ್ಮದ ಮೂಲಕವೇ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವಲ್ಲಿ ತನ್ನ ಮೂಲ, ಕುಲ, ಜಾತಿಯ ಬಗೆಗೆ, ತನ್ನ ವೈಯಕ್ತಿಕ ವಿವರಗಳು ತಂದೆ-ತಾಯಿ ಜನ್ಮಸ್ಥಾನಗಳ ಕುರಿತು ದಿವ್ಯವಾದ ಉಪೇಕ್ಷೆಯ ಭಾವವಿದೆ. ತಾನು ಯಮನ ಅವತಾರವೆಂಬ ಜನ್ಮಾಂತರದ ಪ್ರಜ್ಞೆಯೊಂದು ಆವರಿಸಿ ಬೆಳೆದು ನಿಂತಿದೆ. ತನ್ನನ್ನು ತಾನು ಪರದೇಶಿಯೆಂದು ಕರೆದುಕೊಳ್ಳುವ ಆತ್ಮನಿರ್ಭರತೆ ಇದೆ.

ಎಷ್ಟು ಮಾಡಲು ನಿನ್ನ ಬಂಟನೊ-ವೈಷ್ಣವರ
ಹುಟ್ಟು ದಾಸಿಯ ಮಗನು ಪರದೇಶಿಯೋ [೨]

ಇನ್ನೊಂದು ಕೀರ್ತನೆಯಲ್ಲಿ

ತಂದೆ-ತಾಯಿಗಳಾರು ಇದ್ದ ಊರಾವುದು
ಹೊಂದಿದ್ದ ಮನೆಯೆಲ್ಲಿ ಇದ್ದ ಸತಿ ಸುತರಾರು
ಹಿಂದಿದ್ದ ಕುಲಗೋತ್ರ ನಾಮಂಗಳೆನಗೆಷ್ಟು
ಬಂದಂಥ ಸುಖ ದು:ಖವೆಷ್ಟು

೨. ಪ್ರೊ. ಸುಧಾಕರ: ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು ಪುಟ;೨೧೮

ಅಂದು ಕೊಂದವರಾರು ಇಂದು ಕಾಯ್ವರದಾರು
ದಂದುಗವನಿದನೆಲ್ಲ ನೀ ಬಲ್ಲೆ ನಾನರಿಯೆ.[೩]

ಕನಕದಾಸರ ಕೀರ್ತನೆಗಳೆಲ್ಲವೂ ಒಂದರ್ಥದಲ್ಲಿ ಆತ್ಮ ಚರಿತ್ರೆಗಳೇ ಅವು ತನ್ನನ್ನು ತಾನು ವಿವರಿಸಿಕೊಳ್ಳುತ್ತಲೇ ವಿಸ್ತರಿಸುವುದನ್ನು ಕಾಣಬಹುದು. ಜನಸಮುದಾಯದೊಂದಿಗೆ ತನ್ನ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ನಿರಂತರ ಹಂಬಲವನ್ನು ಉಳಿಸಿಕೊಂಡೆ ಬೆಳೆಯುವುದು ವಿಶೇಷ. ಕನಕದಾಸ ತಾನ್ಯಾರೆಂಬುದನ್ನು ನಿರ್ದೇಶಿಸುತ್ತಾ ಹೋಗುವುದು ಬಸವಣ್ಣನ ಹಾಗೆ ದೀನ ದಲಿತರ, ಶೋಷಿತರ ಕಾಯಕ ನಿಷ್ಠೆಯ ತತ್ವದ ಮೂಲಕ. ತಿರುಪತಿಯಾತ್ರೆ, ಪಂಚಾನ್ನ ಪರಮಾನ್ನ, ಭೋಗಭಾಗ್ಯ, ಪಟ್ಟೆಪಟ್ಟಾವಳಿ ಪಟ್ಟೆನಾಮದ ಪ್ರದರ್ಶನ ಮುತ್ತಿನಾಭರಣ, ಸತ್ತಿಗೆಯ ನೆರಳು – ಈ ಮೊದಲಾದ ಯಾವ ವಸ್ತು, ವೈಭೋಗ, ಐಹಿಕ ಸುಖಗಳು ಬೇಡ – ಗಂಜಿ ಉಂಡು ಬದುಕುವ ಕೆಲಸದಾಳುಗಳ ಮಗನ, ಮಗನ ಮಗನೆನಿಸೆನ್ನ ಎಂಬ ಇಂಗಿತವನ್ನು ವ್ಯಕ್ತಪಡಿಸುತ್ತಾರೆ.

ತಿಳಿಯ ಬರದೆಲೆ ಮನವೆ, ತೀರ್ಥಯಾತ್ರೆಯ ಫಲವು ॥ಪ॥
ಸುಲಭದಲಿ ಸದ್ಗತಿಯ ಸೂರೆಗೊಂಬುವರಿಗಲ್ಲದೆ.

ನೂರೆಂಟು ತಿರುಪತಿಯ ಯಾತ್ರೆಯನ್ನು ನಾನೊಲ್ಲೆ
ವಾರದೊಂದ್ಹೊತ್ತು ಉಪವಾಸವನು ನಾನೊಲೊಲ್ಲೆ
ಸಾರ ರೇಣುವೆಯುಂಡು ಕಡೆಯ ಬಾಗಿಲ ಕಾಯ್ವ
ನೀರ ಗೌಡಿಯ ಮಗನ ಮಗನ ಮಗನೆನಿಸೆನ್ನ ॥೧॥

ಪಂಚಾನ್ನ ಪರಮಾನ್ನವಾವುದನ್ನು ನಾನೊಲ್ಲೆ
ಚಂಚಲಗೊಳಿಸುವ ಭೋಗ ಭಾಗ್ಯವ ನಾನೊಲ್ಲೆ
ಹಿಂಚದೆ ದಾಸೋಹ ಮಾಳ್ಪವರ ಮನೆಯ ಕಾಯ್ವ
ಉಂಚ ಗೌಡಿಯ ಮಗನ ಮಗನ ಮಗನೆನಿಸೆನ್ನ ॥೨॥

ಪಟ್ಟೆ ಪಟ್ಟಾವಳಿ ದುಕೂಲವನು ನಾನೊಲ್ಲೆ
ಪಟ್ಟೆ ನಾಮದ ಬರಿಯ ಪ್ರದರ್ಶನ ನಾನೊಲ್ಲೆ
ಸೃಷ್ಟಿಯೊಳು ನಿನ್ನ ಭಜಿಪ ಭಕ್ತರ ಮನೆ ಕಾಯ್ವ
ಮುಟ್ಟುಗೌಡಿಯ ಮಗನ ಮಗನ ಮಗನೆನಿಸೆನ್ನ ॥೩॥

ಮುತ್ತಿನಾಭರಣ ತಾಳಿ ಪದಕವ ನಾನೊಲ್ಲೆ
ಸತ್ತಿಗೆಯ ನೆರಳಿನಲಿ ಸಾಗುವುದ ನಾನೊಲ್ಲೆ

೩. ಪ್ರೊ. ಸುಧಾಕರ: ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು ಪುಟ; ೧೯೫

ನಿತ್ಯ ನಿನ್ನ ನೆನೆವರ ಮನೆಯ ಬಾಗಿಲ ಕಾಯ್ವ
ತೊತ್ತು ಗೌಡಿಯ ಮಗನ ಮಗನ ಮಗನೆನಿಸೆನ್ನ ॥೪॥
ಆಶೆ ಪಾಶಗಳೆಂಬ ಜಂಜಾಟ ನಾನೊಲ್ಲೆ
ದೇಶಾನುದೇಶಗಳ ತಿರುಗಾಟ ನಾನೊಲ್ಲೆ
ಶ್ರೀಶಾದಿಕೇಶವನ ಭಜಿಪರ ಮನೆಯ ಕಾಯ್ವ
ಕಸಗೌಡಿಯ ಮಗನ ಮಗನ ಮಗನೆನಿಸೆನ್ನ ॥೫॥

ನೀರ ಗೌಡಿ, ಉಂಚಗೌಡಿ, ಮುಟ್ಟುಗೌಡಿ, ತೊತ್ತುಗೌಡಿ, ಕಸಗೌಡಿ ಇವೆಲ್ಲವೂ ಶೂದ್ರಾತಿ ಶೂದ್ರ ನೆಲೆಯ ಕಾಯಕ ನಿಷ್ಠ ಸ್ತ್ರೀಯರು. ಇವರನ್ನು ತನ್ನ ತಾಯಿಯರು ಎಂದುಕೊಳ್ಳುವಲ್ಲಿ ದಾಸರಿಗೆ ಅಭಿಮಾನವಿದೆ. ಕನಕದಾಸರನ್ನು ಜಾತಿ ಅಭಿಮಾನದ ಕಟ್ಟೆಗಳಿಗೆ ಕಟ್ಟಿಹಾಕುವ ನಾವು ಈ ಕೀರ್ತನೆಯನ್ನು ಹೆಚ್ಚಾಗಿ ಗಮನಿಸಿಲ್ಲ. ಬಹು ಸಂಸ್ಕೃತಿಯ ಹಿನ್ನೆಲೆಯಲ್ಲಿ ಗುರುತಿಸಲ್ಪಡುವ ಇಂತಹ ಹೆಣ್ಣು ಮಕ್ಕಳ ಕಥನಗಳನ್ನು ನಮ್ಮ ಪ್ರಧಾನ ಸಂಸ್ಕೃತಿ ಚರಿತ್ರೆ ಗುರುತಿಸಿಲ್ಲ. ಆದರೆ ಕನಕದಾಸರು ನೀರು ತರುವ ಕೆಲಸದಾಳು, ಕೆಳಗೆ ಬಿದ್ದ ಕಾಳು ಕಡ್ಡಿ ಹೆಕ್ಕಿ ತರುವ (ಉಂಚ) ಕೆಲಸದಾಕೆ, ಪಾತ್ರೆ ಪರಟೆಗಳನ್ನು ಉಜ್ಜುವ ಮುಟ್ಟುಗೌಡಿಯಾದವಳ, ಕಸಹೊರಲು ನೇಮಕ ಗೊಂಡವಳ ಮೊಮ್ಮಗ, ಮಗನ ಮಗ ನಾನು ಎಂದು ಹೇಳಿಕೊಳ್ಳುವ ಮೂಲಕ ಬಸವಣ್ಣನ ಜಾತಿನಿರಚನದ ಆಶಯಕ್ಕಿಂತಲೂ ಒಂದು ಹೆಜ್ಜೆ ಮುಂದೆಯೇ ಸಾಗುತ್ತಾರೆ. ಬಸವಣ್ಣನಲ್ಲಿ ಕೆಳವರ್ಗದ ಪುರುಷರ ಮೂಲದ ತನ್ನ ಅಸ್ತಿತ್ವದ ನಿರ್ವಚನವಿದ್ದರೆ ಕನಕದಾಸರಲ್ಲಿ ತಳವರ್ಗದ ಸ್ತ್ರೀ ಮೂಲದ ಅಸ್ತಿತ್ವ ನಿರ್ವಚನವಿದೆ. ಹೀಗೆ ಹೇಳುವಲ್ಲಿ ಕನಕದಾಸರಿಗೆ ವಚನಕಾರರ ಪ್ರಭಾವವಿದ್ದರೂ ತನ್ನ ಮಾತಿನ ಹಿಂದಿನ ಉದ್ದೇಶ ಸ್ಪಷ್ಟವಿದೆ. ಕನಕನ ತಾಯಿಯೆಂದು ಗುರುತಿಸಲ್ಪಡುವ ಬಚ್ಚಮ್ಮ ಇಂತಹ ಪಾತ್ರಗಳ ಮೂಲಕ ಪ್ರತಿನಿಧೀಕರಣಗೊಳ್ಳುವುದು ಸಮೂಹದ ಕಥನವಾಗುವ ಕನಕ ಚರಿತ್ರೆಗೊಂದು ಹೊಸ ತಿರುವು. ಸ್ತ್ರೀ ಚರಿತ್ರೆಯ ಮಾನವೀಯ ನೆಲೆಯೊಂದು ಇಲ್ಲಿ ಬಿಚ್ಚಿಕೊಳ್ಳುವುದು ವಿಶೇಷವೇ ಆಗಿದೆ. ಚರಿತ್ರೆ ಪ್ರಾರಂಭವಾಗುವುದೇ ಹೆಣ್ಣಿನಿಂದ. ಆದರೆ ಸ್ತ್ರೀಯರಿಗೆ ಚರಿತ್ರೆಯಲ್ಲಿ ಸ್ಥಾನವೇ ದೊರೆಯದಿರುವುದು ವಿಪರ್ಯಾಸ. ಇತಿಹಾಸವನ್ನು ಪುನಾರಚಿಸುವಲ್ಲಿ ಸ್ತ್ರೀ ಚರಿತ್ರೆಯನ್ನು ಎಲ್ಲಿಂದ ಪ್ರಾರಂಭಿಸಬೇಕೆನ್ನುವುದಕ್ಕೆ ಈ ಮೇಲಿನ ಕೀರ್ತನೆ ಕೆಲವು ಸೂಕ್ಷ್ಮಹೊಳಹುಗಳನ್ನುನೀಡಬಲ್ಲದು.

### ಸೈನಿಕನ ಆತ್ಮ ಕಥನವಾಗಿಯೂ ಕನಕ ಚರಿತ್ರೆ

ಕನಕನ ಕೃತಿಗಳಲ್ಲಿ ಸ್ತ್ರೀ ಚರಿತ್ರೆ ಎಳೆಗಳು ಗೋಚರಿಸಿದ ಹಾಗೆ ಸೈನಿಕನ

---

೪. ಪ್ರೊ. ಸುಧಾಕರ; ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು ಪುಟ; ೪೧೧

ಚರಿತ್ರೆಯೊಂದು ಅವನ ಆತ್ಮಕಥಾನಕದ ಭಾಗವಾಗಿ ಕಾಣಿಸುತ್ತದೆ. ಕನಕನ ಕೃತಿಯೊಳಗೂ ಕೃತಿಯ ಹೊರಗೂ ಅವನೊಬ್ಬ ಸೇನಾಧಿಪತಿಯಾಗಿದ್ದನೆನ್ನುವುದಕ್ಕೆ ಸಾಕಷ್ಟು ಗುರುತುಗಳಿವೆ. ಆದರೆ ಇತಿಹಾಸದ ಪ್ರಧಾನ ಆಕರವೆನಿಸುವ ಶಾಸನಗಳಲ್ಲಿ ಈ ಗುರುತುಗಳಿಲ್ಲ. ಶಾಸನಗಳಾಗಲಿ, ತಾಮ್ರಪಟ, ಸ್ತಂಭಲೇಖನಗಳು ರಾಜಕೀಯದ ಗುರುತುಗಳು. ಇವುಗಳು ಕನಕ ಚರಿತ್ರೆಯನ್ನು ಉಳಿಸಿಕೊಂಡಿಲ್ಲ. ಕನಕನ ಹುಟ್ಟಿನ ಬಗೆಗಿನ ಐತಿಹ್ಯಗಳು ಬಾಡ-ಬಂಕಾಪುರ-ಕಾಗಿನೆಲೆ-ಬೇಲೂರು[೫] -ಶ್ರೀರಂಗಪಟ್ಟಣ (ಹಳೆ ಮೈಸೂರು ಭಾಗ) ಹೀಗೆ ಹಲವು ಊಹೆಗಳ ಮೂಲಕ ಹರಿದು ಬರುತ್ತದೆ. ಆದರೆ ಕನಕನ ಬದುಕಿನ ಮಹತ್ವದ ಕುರುಹುಗಳನ್ನೊಳಗೊಂಡ ಬಾಡ-ಬಂಕಾಪುರಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ದೊರೆತಿದ್ದು ಎಲ್ಲಿಯೂ ಅದರಲ್ಲಿ 'ಕನಕ' ಅಥವಾ' 'ತಿಮ್ಮಪ್ಪ' ನ ಉಲ್ಲೇಖಗಳಿಲ್ಲ. ಕೃಷ್ಣದೇವರಾಯನ ವ್ಯಕ್ತಿತ್ವವನ್ನು ವರ್ಣರಂಜಿತವಾಗಿ ವಿವರಿಸಿದ ತೆಲುಗು, ಸಂಸ್ಕೃತ, ಕನ್ನಡ ಕೃತಿಗಳಲ್ಲಿ ಕನಕನೆಂಬ ಕೀರ್ತನೆಕಾರನಾಗಲಿ, ಕವಿಯನ್ನಾಗಲಿ ಹುಡುಕುವುದು ಸಾಧ್ಯವಿಲ್ಲ. ವಿಜಯನಗರ ಸಾಮ್ರಾಜ್ಯವನ್ನು ಸಂದರ್ಶಿಸಿದ ವಿದೇಶಿ ಪ್ರವಾಸಿಗಳ ಬರವಣಿಗೆಗಳಲ್ಲೂ ಕನಕನಿಗೆ ಸಂಬಂಧಿಸಿದ ದಾಖಲೆಗಳಿಲ್ಲ. ವಿಜಯನಗರದ ಉತ್ಕರ್ಷಕ್ಕೆ ಕಾರಣವಾದ ಕೃಷ್ಣದೇವರಾಯನ ಚರಿತ್ರೆಯೇ ವಿಜಯನಗರದ ಚರಿತ್ರೆ ಎಂಬಂತೆ ಮಧ್ಯಕಾಲೀನ ಚರಿತ್ರೆಯ ರಚನೆಗಳು ಬಿಂಬಿಸಲ್ಪಟ್ಟಿವೆ.

ಕೃಷ್ಣದೇವರಾಯನಿಗಿಂತಲೂ ಪೂರ್ವದಲ್ಲಿ ಬಹಳ ಶ್ರಮಪಟ್ಟ ಸಾಮ್ರಾಜ್ಯ ಕಟ್ಟಿದ ಇಮ್ಮಡಿ ಹರಿಹರ, ೧ನೇ ದೇವರಾಯ, ಪ್ರೌಢದೇವರಾಯ, ಚರಿತ್ರೆಗಳು ಕೃಷ್ಣದೇವರಾಯನ ಪ್ರಸಿದ್ಧಿಯ ಬೆಳಕಿನಲ್ಲಿ ಮಸುಕಾಗಿವೆ. ವಿಜಯನಗರದ ಚರಿತ್ರೆ ಎಂದರೆ ಕೃಷ್ಣದೇವರಾಯನ ಚರಿತ್ರೆಯೇ ಎಂಬಷ್ಟರ ಮಟ್ಟಿಗೆ ವ್ಯಕ್ತಿ ಕೇಂದ್ರಿತವಾಗಿ ಕಟ್ಟಲ್ಪಟ್ಟಿರುವುದರಿಂದ ಅದು ಅಸಮಗ್ರವೆಂಬ ತಿಳುವಳಿಕೆ ನಮಗೆ ಮೂಡದೇ ಇರುವುದಿಲ್ಲ. ಚರಿತ್ರೆಯ ರಚನಾಕ್ರಮದಲ್ಲಿಯೇ ಇಂತಹ ಲೋಪ-ದೋಷಗಳು ಮತ್ತು ತಾರತಮ್ಯದ ಮನಸ್ಸುಗಳು ಕಾಣಿಸಿಕೊಂಡಿವೆ. ಕೃಷ್ಣದೇವರಾಯನ ಚರಿತ್ರೆಯೊಂದಿಗೆ ತಳಕು ಹಾಕಿಕೊಂಡ ಕನಕ ಚರಿತ್ರೆಯ ರಚನೆಯಲ್ಲಿಯೂ ಇಂತಹದೇ ತೊಡಕುಗಳಿವೆ. ಕೃಷ್ಣದೇವರಾಯನ ಚರಿತ್ರೆಯನ್ನು ಸಂಘಟಿಸುವಲ್ಲಿ ನೆರವಾದ ಶಾಸನಗಳ ಆಧಾರದ ಮೂಲಕ ಕನಕನ ಅಸ್ತಿತ್ವವನ್ನು ಹುಡುಕಬಹುದೇ ಎಂಬ ಕುತೂಹಲಕ್ಕೆ ಅಲ್ಲಿ ಉತ್ತರ ದೊರೆಯುವುದಿಲ್ಲ. ಕೃಷ್ಣದೇವರಾಯನ ಆಶ್ರಯದಲ್ಲಿದ್ದ ವ್ಯಾಸರಾಯರಿಗೆ ಸಂಬಂಧಿಸಿದ ಶಾಸನ ದೊರೆಯುವುದರ ಜೊತೆಗೆ ಕನಕದಾಸರ ಸಮಕಾಲೀನರಾದ ಪುರಂದರದಾಸರ

---

೫. ಕನಕದಾಸರಿಗೂ ಬೇಲೂರಿಗೂ ಇರುವ ಸಂಬಂಧವನ್ನು ಗುರುತಿಸಿ ಇದೇ ಅವರ ಜನ್ಮ ಸ್ಥಳವೆಂಬ ವಾದವು ಇವೆ. ವಿವರಗಳಿಗೆ – ಹ.ಕ. ರಾಜೇಗೌಡ : ಸಾಹಿತ್ಯಶೋಧ ಪುಟ ೧೬೦

ಮಕ್ಕಳಾದ ಲಕ್ಷಣದಾಸ, ಹೆಬಣದಾಸ, ಮಧ್ವಪದಾಸರ ಉಲ್ಲೇಖಗಳು ದೊರೆಯುತ್ತವೆ.

ಹೊಸಪೇಟೆ ತಾಲೂಕಿನ ಕಮಲಾಪುರ ಗ್ರಾಮದಲ್ಲಿ ಕ್ರಿ.ಶ.೧೫೨೬ ರಲ್ಲಿ ದೊರೆತ ತಾಮ್ರ ಶಾಸನದಲ್ಲಿ ಈ ವಿವರಗಳಿವೆ. ಕಮಲಾಪುರದ ಕುಂಬಾರಕುಂಟೆಯ ಹತ್ತಿರದ ಬಂಡೆಯಲ್ಲಿರುವ ಶಾಸನ (೧೫೧೮)ದಲ್ಲಿ ರಾಮಾನುಜ ಯತಿಗಳನ್ನು ಸ್ತುತಿಸಿದ ಅಪರೂಪದ ಶ್ಲೋಕವಿದೆ. ಆದರೆ ಕನಕನ ತಂದೆ ಡಣಾಯಕನಾಗಿದ್ದ ಕಾಲಕ್ಕೆ ಸಂಬಂಧಿಸಿ ಬೀರಪ್ಪ/ಬೀರೇಗೌಡ/ ಬೀರನಾಯಕ ಈ ಮೊದಲಾದ ಯಾವ ವಿಶೇಷಣಗಳುಳ್ಳ ಹೆಸರುಗಳೂ ಕೃಷ್ಣದೇವರಾಯನ ಶಾಸನಗಳಲ್ಲಿ ದೊರೆಯುವುದಿಲ್ಲ. ಆ ಕಾಲದ ಸುಮಾರು ಐವತ್ತಕ್ಕೂ ಹೆಚ್ಚು ಅಧಿಕಾರಿಗಳ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಪ್ರಧಾನಿ, ಅಧಿಕಾರಿ, ಬಾಗಿಲಕಾಯಕ, ಅರಮನೆ ಬೇಹಾರಿ, ನಾಯಕತನ, ಅಮಾತ್ಯ, ದಳವಾಯಿ, ಭಂಡಾರಿ, ಅಮರನಾಯಕ ಹೀಗೆ ಅನೇಕ ಹುದ್ದೆಗಳ ಹೆಸರು ದೊರೆಯುತ್ತವೆ.[೬] ಅದರಲ್ಲಿ ಬೀರಪ್ಪನನ್ನು ಹೋಲುವ ಯಾವ ಹೆಸರುಗಳು ದೊರೆಯುವುದಿಲ್ಲ. ದಾಸ, ದಾಸಯ್ಯನ ಗುರುತಿನಲ್ಲಿ ಎರಡು ಹೆಸರುಗಳಿವೆ. ಪ್ರಧಾನಿಯಾಗಿದ್ದ ತಿಂಮದಾಸಯ್ಯನ ಉಲ್ಲೇಖ ಮತ್ತು ೧೫೨೪ ರ ಬೇಲೂರು ಶಾಸನದಲ್ಲಿ ರಂಗದಾಸನ ಮಗ ತಿಂಮರಸನೆಂಬ ವಿವರಗಳನ್ನು ಗಮನಿಸುವುದಾದರೂ ಇದು ಕನಕದಾಸನಿಗೆ ಸಂಬಂಧಿಸಿದ್ದು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಕನಕದಾಸರ ಗುರು ಪರಂಪರೆಯ ವ್ಯಾಸತೀರ್ಥರಿಗೆ ಕೃಷ್ಣದೇವರಾಯ ಹಲವು ಪ್ರದೇಶಗಳನ್ನು ದಾನವಾಗಿ ನೀಡಿದ್ದಾನೆ. ಕಮಲಾಪುರ ಶಾಸನ, ಶಿವಮೊಗ್ಗ ಜಿಲ್ಲೆಯ ಕೂಡ್ಲಿ ಶಾಸನ (೧೫೨೭), ಶ್ರೀರಂಗಪಟ್ಟಣದ ತಾಮ್ರಶಾಸನ(೧೫೧೬), ಸೋಸಲೆ ತಾಮ್ರಪಟ (೧೫೨೧) ಮೊದಲಾದ ಶಾಸನಗಳನ್ನು ಗಮನಿಸಬಹುದು. ಕನಕದಾಸರಿಗೆ ಸಂಬಂಧಿಸಿದ ಬಂಕಾಪುರ ವೇಂಕೆಯ ಹಾನಗಲ್ಲು ಸೀಮೆಯ ಗೌರಾಪುರವನ್ನು ವ್ಯಾಸರಾಯರಿಗೆ ದಾನವಾಗಿ ನೀಡಿದ ವಿವರವನ್ನು ಶಿವಮೊಗ್ಗ ಜಿಲ್ಲೆಯ ಕೂಡ್ಲಿ ಶಾಸನ ದಾಖಲಿಸುತ್ತದೆ. ಗದಗ ಶಾಸನವೊಂದರಲ್ಲಿ ತಿಮ್ಮಪ್ಪನಾಯಕನೆಂಬ ಹೆಸರಿದೆ. ೧೫೧೯ರ ವೀರನಾರಾಯಣ ದೇವಾಲಯದ ಉತ್ತರ ಪ್ರಾಕಾರದ ಗೋಡೆಯಲ್ಲಿ ಸೇರಿರುವ ಈ ಶಾಸನ 'ಕೃಷ್ಣದೇವರಾಯನು ರಾಜ್ಯವಾಳುತ್ತಿರುವ ಬಾಗಿಲ ನಾಗಿನಾಯ್ಕನ ಮಗ ನಯನಪ್ಪ ನಾಯಕರು, ತಿಮ್ಮಪ್ಪ ನಾಯಕ ಅಯ್ಯನವರು ಉಂಬಳಿಯಾಗಿತ್ತ ಗದುಗಿನ ಸೀಮೆಯೊಳಗಿನ ಬಟ್ಟಕೆರೆಯ ಗ್ರಾಮದ ಬೆನಕನ ಕೊಪ್ಪದ ನಡುವೆ ಎರಡು ಅರವಂಡಿಕೆಗಳನ್ನು ಪರುವೊತ್ತೊಡೆಯರಿಗೆ ದಾನವಾಗಿ' ನೀಡಿರುವುದನ್ನು ತಿಳಿಸುತ್ತದೆ. ತಿಮ್ಮಪ್ಪ[೭] ಎನ್ನುವ ಹೆಸರು ಕನಕನಿಗಿದೆ ಎಂದು ಒಪ್ಪುವುದಾದರೆ ಕೃಷ್ಣದೇವರಾಯನ ಕಾಲದ ಹಲವಾರು ಅಧಿಕಾರಿಗಳ ಹೆಸರು ತಿಮ್ಮಪ್ಪ ಎಂದಿದೆ. ೧೫೧೪ ರಲ್ಲಿ ತಿಮ್ಮಪ್ಪ ನಾಯಕನೆನ್ನುವವನು ವೀರಕೃಷ್ಣದೇವರಾಯನ ಬಾಗಿಲ ಕಾಯಕ ಮಾಡಿಕೊಂಡಿದ್ದು,

ಸವದತ್ತಿ ಎಲ್ಲಮ್ಮ ಗುಡಿಯ ಆವರಣದಲ್ಲಿ ಪಡುವಣ ಬಾಗಿಲ ಕಲ್ಲಿನ ಮಟ್ಟವನ್ನು ಹಾಗೂ ಅದರ ಮೇಲಿನ ಉಪ್ಪರಿಗೆಯನ್ನು ಕಟ್ಟಿಸಿದನೆಂಬ ಉಲ್ಲೇಖವಿದೆ.

ಕನಕ ಮೂಲತಃ ಒಬ್ಬ ಸೈನಿಕ. ಒಂದು ಜನಸಮೂಹದ ನಾಯಕ. ವಿಜಯನಗರ ಕಾಲದ ಭೂದಾನವನ್ನು ಉಲ್ಲೇಖಿಸುವ ಅನೇಕ ಶಾಸನಗಳು ಆಗ ಅಮರನಾಯಕರೆನ್ನುವ ವಿಶಿಷ್ಟ ಸೇನಾಧಿಕಾರಿಗಳ ವರ್ಗವಿದ್ದ ಬಗ್ಗೆ ಆಧಾರಗಳನ್ನು ಒದಗಿಸುತ್ತದೆ. ಪ್ರಭುತ್ವವನ್ನು ಕಾಯ್ದ ಪ್ರಮುಖ ಎರಡು ಅಂಗಗಳಲ್ಲಿ ರೈತ ಮತ್ತು ಸೈನಿಕ ಮುಖ್ಯವಾಗಿದ್ದರು. ಅದರಲ್ಲೂ ಮುಖ್ಯವಾಗಿ ಸೈನ್ಯವನ್ನು ಕಟ್ಟುವುದು ಪ್ರಧಾನ ಅಗತ್ಯಗಳಲ್ಲಿ ಒಂದಾಗಿತ್ತು. ವಿಜಯನಗರದ ಅರಸರ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಭೂಮಿಯನ್ನು ಬೇಸಾಯ ಮಾಡಿ, ಆಹಾರ ಬೆಳೆದು, ಸರಕಾರಕ್ಕೆ ತೆರಿಗೆ ಪಾವತಿ ಮಾಡುತ್ತಿದ್ದ ರೈತರ ಕೊಡುಗೆ ಒಂದು ಬಗೆಯಲ್ಲಿ ಆಡಳಿತಕ್ಕೆ ಆಂತರಿಕ ಭದ್ರತೆ ನೀಡಿದ್ದರೆ ಅಮರನಾಯಕರು ರಾಜ್ಯಾಡಳಿತದಲ್ಲಿ ಮುಖ್ಯ ಸೈನ್ಯಾಡಳಿತ ಅಧಿಕಾರಿಗಳಾಗಿ ಕಾಣಿಸಿಕೊಂಡು ರಾಜ್ಯದ ಬಾಹ್ಯ ಆಡಳಿತಕ್ಕೆ ಕಾರಣರಾಗಿದ್ದರು. ರಾಜನಿಗೆ ಸೇವೆಯನ್ನು, ಸಲ್ಲಿಸುವ ಷರತ್ತಿನ ಮೇಲೆ, ವಿಧೇಯತೆ, ನಿಷ್ಠೆ, ಸಹಾಯವನ್ನು ಸಲ್ಲಿಸುವ ಕರಾರಿನ ಮೇಲೆ ದೊರೆಗಳಾದ ಈ ಅಮರನಾಯಕರು ರಾಜನಿಗೆ ಸೇರಿದ ಭೂಮಿಯನ್ನು ಅವನ ಪ್ರತಿನಿಧಿಯಾಗಿ ಅನುಭವಿಸುತ್ತಾ ತನ್ನನ್ನು ಅವಲಂಬಿಸಿದವರಿಗೆ ಅದನ್ನು ಹಂಚುತ್ತಿದ್ದರು.

ಅಮರನಾಯಕರಲ್ಲಿ ಬೇರೆ ಬೇರೆ ವರ್ಗಗಳಿದ್ದವು. ಪ್ರಥಮ ಶ್ರೇಣಿಯ ನಾಯಕರು ಹೆಚ್ಚು ಅಧಿಕಾರವನ್ನು ಹೊಂದಿದ್ದರು. ಪದಾತಿದಳ, ಕುದುರೆ ಆನೆಗಳನ್ನು ಪಂಚವಾದ್ಯಗಳಾದ ಕೊಂಬುಕಹಳೆ, ಶಂಖಭೇರಿ, ಜಯಗಂಟೆ ಹಾಗೂ ತಮ್ಮಟೆಗಳನ್ನು ಬಳಸುವ ಅಧಿಕಾರವನ್ನು ಹೊಂದಿದ್ದರು. ಸಾಮಂತ, ಸಿಂಹಾಸನ ಚಾಮರ, ಪಲ್ಲಕ್ಕಿ, ಅಶ್ವಾರೋಹಿಪಡೆ, ಆನೆಗಳು ಡೋಲಿಗಳು ಇವುಗಳನ್ನು ಉಪಯೋಗಿಸಬಹುದಾಗಿತ್ತು. ಎರಡನೆಯ ವರ್ಗದ ಅಧಿಕಾರಿಗಳಿಗೆ ಈ ಸೌಲಭ್ಯಗಳಲ್ಲಿ ಹೆಚ್ಚಿನವು ಇರಲಿಲ್ಲ. ತಮಗೆ ಸೇರಿದ ಯಾವುದೇ ಭೂಮಿಯನ್ನು ಚಕ್ರವರ್ತಿಯ ಹೆಸರನ್ನು ಉಲ್ಲೇಖಿಸದೆ ಪರಭಾರೆ ಮಾಡುವಂತಿರಲಿಲ್ಲ. ಕೆಲವು ಹಳ್ಳಿಗಳನ್ನು ಮಾತ್ರ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುತ್ತಿದ್ದರು. ಮೂರನೇ ವರ್ಗದ ಅಮರನಾಯಕರು ಚಕ್ರವರ್ತಿ ಇಲ್ಲವೇ ತನ್ನ ಅಧೀನ ಅಧಿಕಾರಿಯ

---

೭. ವಿವರಗಳಿಗೆ: ಡಾ. ಡಿ.ವಿ. ಪರಶಿವ ಮೂರ್ತಿ(ಸಂ) ಕೃಷ್ಣದೇವರಾಯನ ಶಾಸನಗಳುಪುಟ–೨೪೦

೮. ಯಾವ ತಿಮ್ಮಪ್ಪ ನಾಯಕ ಕನಕದಾಸನಿರಬಹುದು? ಕನಕನಾಯಕನ ತಂದೆ–ಪೂರ್ವಜರು ಕೃಷ್ಣದೇವರಾಯನ ಬಾಗಿಲ ಕಾಯಕ ಮಾಡುತ್ತಿರಬಹುದೆ? ಏಕೆಂದರೆ ಕನಕದಾಸರ ಹಲವಾರು ಕೀರ್ತನೆಗಳಲ್ಲಿ ಬಾಗಿಲ ಕಾಯದ ಪ್ರಸ್ತಾಪ ಬರುತ್ತದೆ. ಈ ವಿಚಾರಗಳನ್ನು ಸಾಧಿಸಲು ಇನ್ನಷ್ಟು ಸಂಶೋಧನೆಯ ಅಗತ್ಯವಿದೆ.

ಹತೋಟಿಯಲ್ಲಿರುತ್ತಿದ್ದರು. ಒಂದರ್ಥದಲ್ಲಿ ಇವರು ಕೆಳವರ್ಗದ ಅಮರನಾಯಕರು. ನ್ಯೂನಿಜ್ ನೀಡುವ ವರದಿಯ ಪ್ರಕಾರ ಈ ಅಮರನಾಯಕರು ರಾಜನಿಗೆ ಸಾಕಷ್ಟು ಸಂಖ್ಯೆಯಲ್ಲಿ ಸೈನ್ಯವನ್ನು ಒದಗಿಸದೇ ಇದ್ದಲ್ಲಿ, ಅಥವಾ ರಾಜನಿಗೆ, ಮೇಲಿನ ಅಧಿಕಾರಿಗಳಿಗೆ ಅವಿಧೇಯತೆ ತೋರಿದಲ್ಲಿ ಉಗ್ರವಾದ ಶಿಕ್ಷೆಯನ್ನು ಒದಗಿಸಲಾಗುತ್ತಿತ್ತು. ಅವನ ಅಧಿಕಾರವನ್ನು, ಭೂಮಿಯನ್ನು ಕಿತ್ತುಕೊಳ್ಳಲಾಗುತ್ತಿತ್ತು. ಜನರ ನಡುವಿರುವ ಅಮರನಾಯಕ ಜನರಿಂದ ದೂರವಿರುವ ಚಕ್ರವರ್ತಿಯ ನಡುವೆ ಕೊಂಡಿಯಾಗಿ ವರ್ತಿಸುತ್ತಿದ್ದರು. ಜನರ ನಿಷ್ಠೆ ಮೊದಲು ಸಲ್ಲುತ್ತಿದ್ದದ್ದು ಅಮರನಾಯಕರಿಗೆ ಹೊರತು ಚಕ್ರವರ್ತಿಗಲ್ಲ. ಈ ಕಾರಣದಿಂದಲೇ ಅನೇಕ ನಾಯಕರು ಮುಂದೆ ಚಕ್ರವರ್ತಿಗಳನ್ನು ಉಪೇಕ್ಷಿಸಿ ತಾವೇ ಸ್ವತಂತ್ರರಾದ ಪಾಳೇಗಾರರೆಂದು ಘೋಷಿಸಿಕೊಂಡರು. ಕರ್ನಾಟಕದ ಅನೇಕ ಪಾಳೇಗಾರರು ವಿಜಯನಗರ ಅರಸರ ದೌರ್ಬಲ್ಯವನ್ನು ಬಳಸಿಕೊಂಡು ಸ್ವತಂತ್ರರಾದದ್ದು ಈಗ ಇತಿಹಾಸ [೮]

ಮಧ್ಯಕಾಲೀನ ಯೂರೋಪಿನ ಊಳಿಗಮಾನ್ಯ (ಫ್ಯೂಡಲ್) ವ್ಯವಸ್ಥೆಗೆ ಹತ್ತಿರದಲ್ಲಿದ ಈ ಅಮರನಾಯಕ ವ್ಯವಸ್ಥೆಯ ಭಾಗವಾದ ವೀರನಾಯಕರು[೯] ಅನುವಂಶಿಕವಾಗಿ ಅಧಿಕಾರವನ್ನು ಭೋಗಿಸಿದಂತವರು. ಒಬ್ಬ ಸಾಮಾನ್ಯ ಅಮರನಾಯಕರಾಗಿದ್ದ ಅವರು ಒಬ್ಬ ನಿಷ್ಠಾವಂತ ಸೈನಿಕನಾಗಿದ್ದರೆಂಬುದು ಅವರ ಕೀರ್ತನೆಗಳ ಮೂಲಕ ಸಾಬೀತಾಗುತ್ತದೆ. ತನ್ನನ್ನು ತಾನು ಮೊನೆಗಾರನೆಂದು ಕರೆದುಕೊಂಡ ಕನಕದಾಸರ ಚರಿತ್ರೆಯಲ್ಲಿ ಸೈನಿಕನೊಬ್ಬನ ಬದುಕಿನ ಕಥೆಯಿದೆ; ವ್ಯಥೆಯಿದೆ. ಸೈನ್ಯವು ಯಾವಾಗಲೂ ಯುದ್ಧ-ಹಿಂಸೆಗೆ ಪ್ರೇರಕ. ವ್ಯಕ್ತಿಯೊಳಗಿನ ಅಹಂಕಾರ, ದರ್ಪಗಳು ಅಧಿಕಾರದ ದ್ಯೋತಕ. ಯುದ್ಧಭೂಮಿಯಲ್ಲಿ ಕನಕನು ತೋರಿದ ಶೌರ್ಯ ನಾಲ್ಕು ದಿಕ್ಕುಗಳಲ್ಲೂ ಹೆಸರನ್ನು ತಂದು ಕೊಡುವಂತದ್ದು. ಹೆಸರು, ಅಧಿಕಾರ, ಅಹಂಕಾರಗಳ ಮೂರ್ತವಾಗಿದ್ದ ಕನಕ 'ಮದರೂಪು' ವಾಗಿದ್ದ; "ದುರದಲ್ಲಿ ನಾಲ್ಕು ದಿಕ್ಕಲಿ ಹೊಕ್ಕು ಹೊಳೆವಂಥ ಬಿರುದು-ಬಿಂಕವ" ಹೊತ್ತಿದ್ದ. "ಪರಬಲವ ಕಂಡರೆ ಉರಿದು ಬೆಂಕಿ"ಯಾಗುತ್ತಿದ್ದ.

ಸ್ವಾರಿ ಹೊರಡಲು ಛತ್ರ ಭೇರಿ ನಿಸ್ಸಾಳಗಳು
ಭೋರೆಂಬ ಭೋಂಕಾಳೆ ಹರಿಯೆ
ಧೀರ ರಾಹುತರಾಣ್ಯ ಭಾರಿ ಪರಿವಾರದಹಂ
ಕಾರ ಭಾರವ ತೊರೆದೆ ಹರಿಯೆ. [೧೦]

---

೮. ಪ್ರೊ.ಕೆ.ಎಸ್. ಶಿವಣ್ಣ(ಸಂ) ಕರ್ನಾಟಕ ಚರಿತ್ರೆ; ಸಂಪುಟ-೨ ಪುಟ-೬೩-೭೦

೯. ಕನಕದಾಸರಿಗೆ ವೀರನಾಯಕನೆಂಬ ಹೆಸರು ಇದ್ದ ಬಗ್ಗೆ ಉಡುಪಿಯ ತಾಮ್ರಪಟ ಉಲ್ಲೇಖಿಸುತ್ತದೆ.

೧೦. ಪ್ರೊ.ಸುಧಾಕರ: ಕನಕದಾಸರ ಕೀರ್ತನೆಗಳು ಮತ್ತು ಮಂಡಿಗೆಗಳು ಪುಟ-೯೨

ಕನಕ ಸೈನ್ಯಕ್ಕೆ ಅರಿಭಯಂಕರನಾದವನು. ಅವನು ಸೈನ್ಯದಲ್ಲಿ ಬಂದು ಸೇರಿಕೊಂಡನೆಂದರೆ ಪರಸೈನ್ಯವು ಕಕ್ಕಾಬಿಕ್ಕಿಯಾಗುತ್ತಿತ್ತು. ಸೈನಿಕ ಧರ್ಮವನ್ನು ಕನಕ ನಿಷ್ಠವಾಗಿಯೇ ನಿಭಾಯಿಸಿದ್ದಾನೆ. ಯುದ್ಧ ಭೂಮಿಯಲ್ಲಿ ಮರಣಕ್ಕೂ ಸಿದ್ಧನಾದ ಯೋಧ.

ರಣದೊಳಗೆ ಅಂಗಾಂಗ ಖಂಡತುಂಡಾಗಿ ಪ್ರತಿ
ರಣವನುತ್ತರಿಸಿ ಮರಣವ ತಾಳಿರೆ
ಪ್ರಣವ ಗೋಚರ ನೀನು ಗೋಚರಿಸಿ ಬಂದೆನ್ನ
ಹೆಣಕೆ ಪ್ರಾಣವ ಪ್ರಯೋಗಿಸಿದಂತರಾತ್ಮ [೧೧]

ಬೆನ್ನಿಗೆ ಭರ್ಜಿಯಿಂದ ಚುಚ್ಚಿದಾಗ ಉಂಟಾದ ಗಾಯದಿಂದ ರಕ್ತ ಇಳಿಯುತ್ತಿದ್ದರೂ ದೊರೆತನಕ್ಕಾಗಿ ಮೊನೆಗಾರತನಕ್ಕಾಗಿ ದುಡಿಯುವ ನಿಷ್ಠೆಯನ್ನು ಮೆರೆಯುವ ಕನಕ ಎಂದೂ ಪರಬಲಕ್ಕೆ, ದಂಡಿಗಂಜುವ ಬಂಟನಲ್ಲ. ಮೋಹನ ತರಂಗಿಣಿಯಲ್ಲಿ ಬಾಣಾಸುರ ಅನಿರುದ್ಧರ ಯುದ್ಧ ಸನ್ನಿವೇಶವನ್ನು ಕವಿ ವರ್ಣಿಸುವಾಗಲಂತೂ ಯೋಧ ಪರಿಭಾಷೆಗಳು ಓತಪ್ರೋತವಾಗಿ ಹರಿಯುತ್ತವೆ.

ಅಜವಿಂಡ ಹೊಕ್ಕ ಹೆಬ್ಬುಲಿಯಂತೆ ಸೊಕ್ಕಿದ
ಗಜವಿಂಡ ಸಿಂಹ ಹೊಕ್ಕಂತೆ
ಭುಜಗ ಸಮೂಹವ ಖಗರಾಜ ಹೊಕ್ಕಂತೆ
ಕುಜನರ ಕುಟ್ಟಿ ಹಾಯ್ಕಿದನು [೧೨]

ಯುದ್ಧಗಳಲ್ಲಿ ಸ್ವತಃ ಅನುಭವಿರುವ ಕನಕದಾಸರು ಬದುಕಿದ್ದ ಕಾಲ ರಾಯಚೂರು ಕಾಳಗ, ರಕ್ಕಸತಂಗಡಿಯ ಕಾಳಗ ಮುಂತಾದವು ನಡೆದಿರುವ ಸಂದರ್ಭದಲ್ಲಿ. ಯುದ್ಧ – ಹಿಂಸೆಯ ಪರಿಭಾವನೆಗಳು, ಒಟ್ಟು ರಾಜಕೀಯವನ್ನು ಪ್ರತಿನಿಧಿಸುವ ಕಾಲಘಟ್ಟದಲ್ಲಿ ಕನಕದಾಸರು ಬದುಕಿದ್ದರೆನ್ನುವುದಕ್ಕೆ ಇವು ಸಾಕ್ಷಿಯನ್ನು ಒದಗಿಸುತ್ತವೆ.

ಈಗ ನಿರೂಪಿತವಾದ ಸಾಹಿತ್ಯ ಚರಿತ್ರೆಯಲ್ಲಿ ಪಂಪನ ಕಾಲವನ್ನು ವೀರಯುಗವೆಂದು ಕರೆಯಲಾಗಿದೆ. ಪಂಪ ಬಳಸಿದ ವೀರತ್ವದ ಅನೇಕ ಪರಿಭಾಷೆಗಳು ಅವನೊಬ್ಬ ಕವಿಯೂ, ಕಲಿಯೂ ಆಗಿ ಬಿಂಬಿಸುವುದಕ್ಕೆ ಪೂರಕವಾಗಿ ಮೂಡಿ ಬಂದಿದೆ. ವೀರ ಯುಗವೆಂಬುವುದು, ಸುವರ್ಣಯುಗವೆಂಬುವುದು ೧೦ನೇ ಶತಮಾನಕ್ಕೆ ಮುಗಿದುಹೋಯಿತು ಎಂಬ ಚರಿತ್ರೆಕಾರರ ಚರಿತ್ರೆಯ ಅವಧೀಕರಣ ಪ್ರಜ್ಞೆಗೆ ಕನಕ ಕೃತಿಗಳು ನಿಜವಾದ ಸವಾಲನ್ನು ಒಡ್ಡುತ್ತವೆ. ಚರಿತ್ರೆಯನ್ನು ಕಾಲದ ದೃಷ್ಟಿಯಿಂದ

---

೧೧. ಪ್ರೊ. ಸುಧಾಕರ: ಕನಕದಾಸರ ಕೀರ್ತನೆಗಳು ಮತ್ತು ಮಂಡಿಗೆಗಳು ಪುಟ–೯೭
೧೨. ಮಂಜುನಾಥನ್ ಜಿ.ಜಿ.(ಸಂ) ಮೋಹನ ತರಂಗಿಣಿ: ಪುಟ–೪೬೩

ಕಟ್ಟುವ ಕ್ರಮವನ್ನು, ಕಾಲದ ಗೆರೆಗಳನ್ನು ನಿರಾಕರಿಸುತ್ತಲೇ ಕನ್ನಡಿಗರ ಜೀವನದಲ್ಲಿ ಬೆರೆತ ಸಾರ್ವಕಾಲಿಕ ಮೌಲ್ಯ ಪ್ರಜ್ಞೆಯನ್ನು ಎತ್ತಿಹಿಡಿಯುತ್ತದೆ. ಕವಿರಾಜಮಾರ್ಗಕಾರ ವರ್ಣಿಸಿದ ಕನ್ನಡಿಗರ ಸ್ವಭಾವವನ್ನು ಒಂದು ಕಾಲಕ್ಕೆ ಸೀಮಿತಗೊಳಿಸಿ ನೋಡುವುದು ಸಾಧ್ಯವಿಲ್ಲ. ಅಖಂಡ ಕರ್ನಾಟಕದ, ಕನ್ನಡಿಗರ ಆ ಹೊತ್ತಿನಿಂದ ಇವತ್ತಿನವರೆಗೂ ಇರುವ ಕನ್ನಡಿಗರ ಮೂಲಸ್ವಭಾವವೆಂದು ಪರಿಗಣಿಸಿದಾಗ ಒಂದು ಕೃತಿಯನ್ನು ಅವಧೀಕರಣಕ್ಕೆ ಒಳಪಡಿಸುವ ಉದ್ದೇಶ ನಿರಚನಗೊಳ್ಳುತ್ತದೆ. ಕನಕ ತಾನು ಪ್ರತಿಪಾದಿಸಿದ ವೀರಮೌಲ್ಯ ಅದು ಅವನ ಕಾಲಘಟ್ಟದ ಮೌಲ್ಯವೆಂದು ಪರಿಗಣಿಸಬಾರದು, ಅದು ಪಂಪನಿಗಿಂತ ಹಿಂದೆಯೂ ಪಂಪನಿಗಿಂತ ಮುಂದೆಯೂ ಇದ್ದ-ಇರಬಹುದಾದ ಮೌಲ್ಯವೆಂದು ಪರಿಭಾವಿಸಿದಾಗ ಇಡೀ ಸಾಹಿತ್ಯ ಚರಿತ್ರೆಯನ್ನು ಅಖಂಡವಾಗಿ ನೋಡಲು ಸಾಧ್ಯವಾಗುತ್ತದೆ. ಕನಕ ದೊರೆತನ, ಯುದ್ಧ-ಹಿಂಸೆಗಳಿಗೆ ಬೇಸತ್ತು ಸಂತ-ದಾಸನಾದವನೆಂಬುದಕ್ಕೆ ಅವನ ಕೀರ್ತನೆಗಳಲ್ಲಿ ಸಾಕಷ್ಟು ಉದಾಹರಣೆಗಳು ದೊರೆಯುತ್ತದೆ. ಪ್ರಭುತ್ವವನ್ನು ನಿರಾಕರಿಸುವ ಅವನ ದೃಷ್ಟಿಯಲ್ಲಿ ಯುದ್ಧ-ಹಿಂಸೆಗಳೇ ನಿರ್ಣಾಯಕವಾದ ಪಾತ್ರವನ್ನು ವಹಿಸಿದ್ದವು. ಇತಿಹಾಸದಲ್ಲಿ ಕಾಣಸಿಗುವ ಸಾಮ್ರಾಟ ಅಶೋಕನ ನಿಲುವು ಮತ್ತೆ ಮರುಕಳಿಸುವುದು ಕನಕ ಕಥನದಲ್ಲಿಯೇ. ಹೇಗೆ ಅಶೋಕ ಕಳಿಂಗ ಯುದ್ಧದಿಂದ ಹಿಂಸೆಯಿಂದ ಅಹಿಂಸೆಗೆ ತಿರುಗಿದನೋ ಹಾಗೆಯೇ ಕನಕದಾಸ ರಾಯಚೂರು ಕಾಳಗ(?)ದ ನಂತರ ಅಹಿಂಸೆಗೆ ತಿರುಗಿರಬೇಕು. ಅಶೋಕನೂ ಬೌದ್ಧ ಧರ್ಮ ಸ್ವೀಕರಿಸಿ ಸಂತನಾದರೆ ಕನಕ ಶ್ರೀ ವೈಷ್ಣವ ಧರ್ಮ ಸ್ವೀಕರಿಸಿ ದಾಸನಾದ. ಅಶೋಕನೂ ಪ್ರಭುತ್ವದ ಪ್ರತಿನಿಧಿಯಾದಂತೆ ಕನಕನೂ ಪ್ರಭುತ್ವದ ಪ್ರತಿನಿಧಿಯಾಗಿದ್ದ. ಅಶೋಕನ ಕಾಲ ಹಾಗೂ ನಿಲುವನ್ನು ಕನಕನ ಕಾಲದವರೆಗೂ ವಿಸ್ತರಿಸಿ ನೋಡಲು ನಮಗೆ ಸಾಧ್ಯವಾಗುವುದಾದರೆ ಮಧ್ಯಕಾಲೀನ ಚರಿತ್ರೆಯ ಗ್ರಹಿಕೆಗಳೇ ಭಿನ್ನವಾಗಬಹುದು. ಪಂಪನಲ್ಲಿಯೂ ಇದೇ ಬಗೆಯ ಧೋರಣೆ ಇದ್ದರು ಅವನೊಬ್ಬ ಪ್ರಭುವಾಗಿ, ದೊರೆಯಾಗಿ ಯುದ್ದದಲ್ಲಿ ಭಾಗವಹಿಸಿದ ಬಗ್ಗೆ ನಮಗೆ ದಾಖಲೆಗಳಾಗಲಿ, ಊಹಿಸುವ ಅವಕಾಶವಾಗಲಿ ದೊರೆತಿಲ್ಲ. 'ಒಲ್ಲೆಸಿ ಬಾಳುವುದೇ ಕಷ್ಟಂ, ಇಳಾದಿನಾಥರಂ' ಎಂಬ ಪಂಪನ ಧೋರಣೆಗೂ 'ದೊರೆತನವ ಬಿಡಿಸಿ ಸುಸ್ಥಿರ ಮಾರ್ಗವ ತೋರಿಸಿದೆ' ಎಂಬ ಕನಕನ ನಿಲುವಿಗೂ ಬಹಳಷ್ಟು ಅಂತರವಿದೆ. ಪಂಪ ಅರಿಕೇಸರಿಯ ಆಸ್ಥಾನದಲ್ಲಿದ್ದು ಕವಿಯಾಗಿ ಕಲಿತನದ ಬಗೆಗೆ ಮಾತಾಡಿದರೆ ಕನಕದಾಸ ಒಬ್ಬ ಪಾಳೇಗಾರನಾಗಿ, ಯೋಧನಾಗಿ ಕಲಿತನದ ಬಗ್ಗೆ ವಿವರಿಸಿದ್ದಾನೆ. ಪಂಪನ ಹಾಗೆ ಕವಿಯಾಗಿ ಕನಕ ಪ್ರಭುವನ್ನು ಸಂತೃಪ್ತ ಪಡಿಸುವ ಊಳಿಗಕ್ಕೆ ಒಳಗಾದವನಲ್ಲ. ಕನಕನಿಗೆ ಯುದ್ಧ-ಹಿಂಸೆಯಿಂದ ವಿಮುಖನಾಗುವ ಮಾರ್ಗವಾಗಿ ಸಾಹಿತ್ಯದ ನೆರವು ದೊರೆತಿದೆಯೇ ಹೊರತು ಅದನ್ನು ವೈಭವೀಕರಿಸುವ ನೆಲೆಯಿಂದಲ್ಲ. ಯುದ್ಧದ ಅತ್ಯಂತಿಕ ಸ್ಥಿತಿ ಸಾವು. ಇನ್ನೇನು ಸಾವು. ಬಂದು ಕದ ತಟ್ಟುತ್ತಿದೆ ಎನ್ನುವಾಗಲೇ

ಕನಕನಿಗೆ ಜ್ಞಾನೋದಯವಾಗಿದೆ. ಯುದ್ಧದ ಭೀಕರತೆ ಭಗವಂತನ ಅಭಯವಾಗಿ ಪರಿವರ್ತಿತವಾಗಿದೆ.

ಇವಿಷ್ಟು ಕನಕ ಕೃತಿಯ ಒಳಗಿನ ಗುರುತುಗಳಾಗಿ ಅವನ ವೈಯಕ್ತಿಕ ಬದುಕಿನ ಪರಿಚಯ ನೀಡಿದರೆ ಇನ್ನು ಕೃತಿಯ ಹೊರಗಿನ ಗುರುತುಗಳು ಕನಕ ಚರಿತ್ರೆಯನ್ನು ಭಿನ್ನವಾಗಿ ಕಟ್ಟಿಕೊಡುತ್ತವೆ.

**ಕನಕನ ಕೃತಿಗಳ ಹೊರಗಿನ ಗುರುತುಗಳು:** ಕನಕ ಚರಿತ್ರೆ ರಚಿಸುವಲ್ಲಿ ಮೌಖಿಕ ಪರಂಪರೆಯ ಅನೇಕ ರೂಪಗಳು ಕಾಣಸಿಗುತ್ತವೆ. ಇವು ಕನಕನ್ನು ತನ್ನ ತಿಳುವಿನ ನೆಲೆಯಲ್ಲಿ ಪುನರ್ ರಚಿಸಿಕೊಳ್ಳುತ್ತಲೇ ಹೋಗುತ್ತವೆ. ಜನ ಸಮೂಹವು ತನ್ನ ನಡುವೆ ಸೃಷ್ಟಿಸಿಕೊಂಡ ಇಂತಹ ಕಥನಗಳಲ್ಲಿ ರೋಚಕತೆ, ಅತಿಮಾನುಷತೆಯು ಆರೋಪಿಸಲ್ಪಟ್ಟಿದೆ. ಈ ಕೆಳಗಿನ ಅಂಶಗಳಲ್ಲಿ ಇದನ್ನು ಗುರುತಿಸಬಹುದು.

**೧. ಪುರಾಣ – ಐತಿಹ್ಯ – ಚರಿತ್ರೆಗಳ ಮುಖಾಮುಖಿ :**

ಸಮೂಹ ಸೃಷ್ಟಿಯ ನಾಯಕನನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಂತಹ ಜನಪದ ನೆಲೆಯ ಐತಿಹ್ಯ–ನೆನಪಿನ ಚರಿತ್ರೆಗಳು, ಲಾವಣಿ, ಜನಪದ ಕಥನ ಪ್ರಕಾರಗಳು, ಇವು ದೀರ್ಘಕಾಲದಿಂದಲೂ ಕನಕನ ಬದುಕಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ತಮ್ಮದೇ ನೆಲೆಯಲ್ಲಿ ಕಟ್ಟಿಕೊಟ್ಟಿವೆ. ಅತ್ಯಂತ ಕೆಳಸ್ತರ(History from below)ದಿಂದಲೂ ಜನಪದರು ತಮ್ಮ ಚರಿತ್ರೆಯನ್ನು ರಚಿಸಿಕೊಂಡ ವಿಚಾರ ಒಟ್ಟು ನಮ್ಮ ಸಾಂಸ್ಕೃತಿಕ ವಿವರಗಳಲ್ಲಿ ಕಣ್ಮರೆಯಾಗಿವೆ. ಅವುಗಳು ನಿರಾಧಾರವೆಂಬ ದಿವ್ಯ ನಿರ್ಲಕ್ಷ್ಯ, ಉಪೇಕ್ಷೆಗೆ ಒಳಗಾಗಿವೆ. 'ಸಮುದಾಯಗಳ ಆತ್ಮ ಕಥನವೇ ಮೌಖಿಕ ಇತಿಹಾಸ'ವೆಂಬ ತಿಳುವಳಿಕೆ ಇತ್ತೀಚೆಗಿನ ಹಲವು ಅಧ್ಯಯನಗಳಲ್ಲಿದೆ. ಒಂದು ಜನ ಸಮೂಹವು ತನ್ನ ಅಸ್ತಿತ್ವದ ಮೂಲ ನೆಲೆಗಳನ್ನು ಮತ್ತು ಅವುಗಳು ನಂಬಿಕೊಂಡು ಬಂದ ಬಹುರೂಪಿಯಾದ ಸಾಂಸ್ಕೃತಿಕ ನಿರೂಪಣೆಗಳನ್ನು ಒಟ್ಟಾರೆಯಾಗಿ ಶೋಧಿಸಿದಾಗ ಹುಟ್ಟುವ ಚಹರೆಗಳು ಆಯಾ ಸಮೂಹದ ಒಳತುಡಿತ ಮಿಡಿತಗಳನ್ನು ಧ್ವನಿಸುತ್ತಿರುತ್ತವೆ. ಅದರಲ್ಲೂ ತಳಸಮುದಾಯಗಳು ಇಂತಹ ಧ್ವನಿ ಸಾಮಗ್ರಿಗಳ ಮೂಲಕವೇ ಕಟ್ಟಿಕೊಂಡ ಸಾಂಸ್ಕೃತಿಕ ಗುರುತುಗಳು ಅವುಗಳ ಇರುವಿಕೆಯನ್ನು ಮತ್ತೆ ಮತ್ತೆ ಸ್ಪಷ್ಟಪಡಿಸುವುದಕ್ಕೆ ತೊಡಗುತ್ತವೆ. ಈ 'ಇರುವಿಕೆ'ಯನ್ನು ಕಥನವಾಗಿಸುವಲ್ಲಿ ನೆನಪುಗಳ ಚರಿತ್ರೆ ತನ್ನದೇ ಆಯಾಮಗಳ ಮೂಲಕ ವಿಸ್ತರಿಸುತ್ತಾ ತನ್ನ ಕೇಂದ್ರವನ್ನು ತಾನೇ ರೂಪಿಸಿಕೊಳ್ಳುತ್ತದೆ. ಜೊತೆಗೆ ಹಲವು ಅಭಿವ್ಯಕ್ತಿ ಸಾಧ್ಯತೆಗಳ ಮೂಲಕ ರೂಪಾಂತರಗೊಳ್ಳುತ್ತಲೇ ಇರುತ್ತದೆ. ನೆನಪು ಮೌಖಿಕ ಕಥನಗಳಾಗುವ ಈ ಸಂದರ್ಭದಲ್ಲಿ ಚರಿತ್ರೆಯು ನಿಷ್ಟವಾಗುವ ಕಾಲ ದೇಶಗಳ ಗಡಿಯನ್ನು ಮೀರಿ ವರ್ತಮಾನವನ್ನು ಆವರಿಸಿಕೊಂಡು ಬೆಳೆಯುವ ಪರಿ

ವಿಶಿಷ್ಟವಾದುದು. ಸಾಮಾನ್ಯವಾಗಿ ಮೌಖಿಕ ಕಥನಗಳು ವರ್ತಮಾನಕ್ಕೆ ಮುಖಾಮುಖಿಯಾಗುವ ರೀತಿಯಲ್ಲಿಯೇ ಗತದ ಹುಡುಕಾಟಗಳಿವೆ. ಏಕೆಂದರೆ ಅದು ವರ್ತಮಾನವನ್ನು ಪ್ರಶ್ನಿಸುವುದಿಲ್ಲ. ಆದರೆ ಅದಕ್ಕೆ ಪರ ವಿರುದ್ಧದ ಪ್ರತಿಕ್ರಿಯೆಯನ್ನು ಮಾತ್ರ ತೋರಬಲ್ಲದು. ಮೌಖಿಕ ಕಥನವು ಕಾಲ ಬದ್ಧವಾದುದಲ್ಲ, ಅದು ವ್ಯಕ್ತಪಡಿಸುವ ಕಾಲಾತೀತ ಹಂಬಲ ಚರಿತ್ರೆಯ ಕಾಲ ಬದ್ಧತೆಯನ್ನು ಪ್ರಶ್ನಿಸುವಂತದು. ಯಾವಾಗ ಅದು ಕಾಲ ಬದ್ಧತೆಯೆಡೆಗೆ ಚಲಿಸುತ್ತದೋ ಆಗ ಸ್ಥಗಿತಗೊಳ್ಳುವ ಅಪಾಯವಿದೆ. ಹೀಗೆ ಕಾಲವನ್ನು ಮೀರುವುದು ಕೂಡ ಮೌಖಿಕ ಇತಿಹಾಸಕ್ಕೆ ಅನಿವಾರ್ಯವೆನಿಸುತ್ತದೆ. ಪ್ರಭುತ್ವ, ಯಜಮಾನ್ಯ ಕಥನಗಳ ಮುಂದೆ, ತನ್ನ ಶಾಸನ, ಅಕ್ಷರೀಕೃತ ಪತ್ಯ ಅಥವಾ ಇನ್ಯಾವುದೇ ಲಿಖಿತ ಅಧಾರಗಳ ಮುಂದೆ ಅಸ್ಮಿತೆಯನ್ನು ಕಂಡುಕೊಳ್ಳಬೇಕಾದಾಗ ಅದು ಸಹಜವಾಗಿ ಐತಿಹ್ಯವನ್ನು, ಪುರಾಣವನ್ನು ಆಶ್ರಯಿಸಿಕೊಳ್ಳುತ್ತದೆ. ಅತಿಮಾನುಷ ಘಟನೆಗಳ ಸುತ್ತ ತನ್ನ ಪರ್ಯಾವರಣ ರೂಪಿಸಿಕೊಳ್ಳಬೇಕಾಗುತ್ತದೆ. ಇದು ಒಂದು ನೆಲೆಯಲ್ಲಿ ಲಿಖಿತ ಚರಿತ್ರೆಯ ಮಾದರಿಗೆ ಒಡ್ಡಿದ ಸವಾಲಾಗಿರುತ್ತದೆ. ಒಂದು ಕಾಲದ ಚರಿತ್ರೆಯನ್ನು ಎಂತಹ ದಾಖಲೆಗಳು ಸೃಷ್ಟಿಸಬಲ್ಲವು ಎಂಬುದು ಒಂದು ಜಿಜ್ಞಾಸೆಯ ವಿಷಯ. ಶಾಸ್ತ್ರಗಳು ವೈದಿಕ ನೆಲೆಯ ಮುಖವಾಣಿಗಳಾದರೆ ಶಾಸನಗಳು ರಾಜರ ಮುಖವಾಣಿಗಳು. ಆದರೆ ಮೌಖಿಕ ಕಥನಗಳು ಸಮುದಾಯದ ನಡುವಿನಿಂದ ಹುಟ್ಟಿ ಬಂದವು. ಒಂದರ್ಥದಲ್ಲಿ ಇವು ಸಾಮ್ರಾಜ್ಯಶಾಹಿ ವ್ಯವಸ್ಥೆಯ ಹೊರಡಿಸುವ ನಿರೂಪಗಳ ದಾಳಿಯಿಂದ ತಪ್ಪಿಸಿಕೊಳ್ಳುವ ಒಂದು ಪ್ರಯತ್ನವು ಹೌದು. ಅದು ತಾನು ರೂಪಿಸುವ ಸಾಂಸ್ಕೃತಿಕ ವೀರರ ವಿವರಗಳಿಗೆ ತಾನು ನಿರ್ಮಿಸುವ ಚೌಕಟ್ಟು ಎಂತಹದ್ದೆಂಬ ಸ್ಪಷ್ಟತೆ ಇದೆ. ತನ್ನ ನಾಯಕನಿಗೆ ಅತಿಮಾನುಷತೆಯನ್ನು ಆರೋಪಿಸುವ ಮೂಲಕ ಸಮುದಾಯದ ನೆನಪಿನ ಚರಿತ್ರೆಯಲ್ಲಿ ಅವನಿಗೊಂದು ಶಾಶ್ವತ ಸ್ಥಾನ ಕಲ್ಪಿಸುವುದು ಮತ್ತು ಅವನನ್ನು ಆರಾಧನೆಯ ಭಾಗವಾಗಿ ಮಾಡುವುದು ಇಲ್ಲಿಯ ಒಂದು ಕಲ್ಪಿತ ಉದ್ದೇಶ. ಕಥನಗಳು ಹೆಚ್ಚು ರೋಚಕ, ರಮ್ಯ, ಮಾಂತ್ರಿಕವಾದಷ್ಟು ಬಹುಕಾಲದವರೆಗೆ ಅವುಗಳಿಗೆ ಹೆಚ್ಚು ಸಾಂಸ್ಕೃತಿಕ ಮಹತ್ವ ದೊರೆಯುತ್ತದೆ. ಗತವನ್ನು ಪುನರ್ ಅಭಿನಯಿಸುವಂತೆ ನಿರೂಪಿತವಾಗುವ ಮೌಖಿಕ ಇತಿಹಾಸಗಳು ಸಮಷ್ಟಿ ಪ್ರಜ್ಞೆಯಿಂದಲೇ ರಚಿತವಾಗಿರುತ್ತವೆ. ಜನಪದರ ಇಂತಹ ಸೂಕ್ಷ್ಮಕಥನ ಸಂವಿಧಾನಗಳು ಇಡೀ ಇತಿಹಾಸವನ್ನು ಪಾವಿತ್ರೀಕರಿಸಿ ನೋಡುವ, ಆಧ್ಯಾತ್ಮಿಕವಾಗಿ, ಮುಕ್ತಿಯ ಸಾಧನವಾಗಿ ವಿಸ್ತರಿಸಿಕೊಳ್ಳುತ್ತಾ ಹೋಗುವ ರೀತಿ ಆಶ್ಚರ್ಯ ಹಾಗೂ ಕುತೂಹಲವನ್ನು ಹುಟ್ಟಿಸುವಂತಹದ್ದು. ಲಿಖಿತ ಆಧಾರಗಳು ಪ್ರಭುತ್ವ, ಧರ್ಮ, ಜಾತಿ ಆಧಾರಿತವಾಗಿ ಬಹುರೂಪಿ ಆಕೃತಿಗಳನ್ನು ಪ್ರತಿನಿಧಿಸುವ ವ್ಯಕ್ತಿ ನಿಷ್ಟತೆಯನ್ನು ಮೆರೆಯುವ ರೂಪಕವಾದಂತೆಲ್ಲಾ ಮೌಖಿಕ ಸಾಕ್ಷ್ಯವು ಸಮುದಾಯವು ತನ್ನ ಪರ್ಯಾಯ ಮಾರ್ಗದ

ಹುಡುಕಾಟಕ್ಕೆ ತೊಡಗುತ್ತದೆ. ಕನಕನನ್ನು ಪರಿಚಯಿಸುವ ಮೌಖಿಕ ಕಥನಗಳ ಸ್ವರೂಪವನ್ನು ಗಮನಿಸುವುದಾದರೆ ಅವುಗಳಿಗೆ ಯಾವುದೇ ಅಖಂಡ ಸ್ವರೂಪಗಳಿಲ್ಲ. ಮಂಟೇಸ್ವಾಮಿ, ಕುಮಾರ ರಾಮನ ಕಥನಗಳ ಹಾಗೆ ಒಂದು ಸಮಗ್ರ ಸ್ವರೂಪದಲ್ಲಿ ದೊರೆಯುವುದಿಲ್ಲ. ಕನಕ ಕಥನಗಳು ಬಿಡಿ ಬಿಡಿಯಾಗಿ ಸಮಾಜದೊಂದಿಗೆ ಸ್ಥಾಪಿಸಿಕೊಳ್ಳುವ ಸಾಂಸ್ಕೃತಿಕ ಸಂಬಂಧ ಮುಖ್ಯವಾದುದು. ಮೌಖಿಕ ಕಥನಗಳ ಬಹು ಆಕೃತಿಗಳ ಮೂಲಕ ಕನಕನನ್ನು ವಿವರಿಸಿಕೊಳ್ಳುವಾಗಲೂ ಕೂಡ ವರ್ತಮಾನವು ಬೆರಳು ಮಾಡುವ ಗತ ಕಥನದ ಸಾಂಕೇತಿಕತೆಯನ್ನು, ಇತಿಹಾಸದಾಚೆಯ ಸತ್ಯವನ್ನು ಪುನರ್ ಶೋಧಿಸಬೇಕಾಗುತ್ತದೆ. ಅದು ಏಕಕಾಲದಲ್ಲಿ ಮಧ್ಯಕಾಲೀನ ತಳಸಮುದಾಯಗಳ ಆತ್ಮಕಥನವಾಗಿಯೂ ಜಾತ್ಯಾತೀತ ಮಾನವ ಸಂಬಂಧಗಳ ಪುನರ್ ನಿರೂಪಣೆಯಾಗಿಯೂ, ಪ್ರಭುತ್ವಕ್ಕೆ ಒಡ್ಡಿದ ಪ್ರತಿರೋಧದ ಮಾಪನವಾಗಿಯೂ ಗುರುತಿಸಿಕೊಳ್ಳಬೇಕಾಗುತ್ತದೆ. ಒಟ್ಟು ಕರ್ನಾಟಕದ ಸಾಂಸ್ಕೃತಿಕ ಸಂದರ್ಭದಲ್ಲಿ ತಮ್ಮ ಅಸ್ತಿತ್ವವನ್ನು ಸಾಧಿಸ ಹೊರಟ ಹಲವಾರು ತಳ ಸಮುದಾಯಗಳ, ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಆತ್ಮ ಚರಿತ್ರೆಯಾಗಿಯೂ ಕನಕನನ್ನು ಈ ಮೌಖಿಕ ಕಥನಗಳ ಮೂಲಕ ಮರುನಿರೂಪಿಸಲು ಸಾಧ್ಯವಾಗಬೇಕಾಗಿದೆ. ಕನಕನನ್ನು ನಮ್ಮೆದುರು ಅನಾವರಣಗೊಳಿಸುವ ಮೌಖಿಕ ಕಥನ ಮಾದರಿಗಳಲ್ಲಿ ಎರಡು ಪ್ರಮುಖ ಧಾರೆಗಳಿವೆ.

೧) ಒಂದು ತಿಮ್ಮಪ್ಪನೆಂಬ ಪಾಳೆಗಾರನ ಸುತ್ತ ಹೆಣೆದ ಕಥನಗಳು.
೨) ಎರಡು ಸಂತ ಕನಕದಾಸನ ಸುತ್ತ ಹೆಣೆದ ಕಥನಗಳು.

ಈ ಎರಡು ಮಾದರಿಗಳು ರೂಪಿಸಿದ ಕನಕನ ಬದುಕಿನ ವಿವರಗಳಲ್ಲಿ ಜಾತಿವಾದ ಕೆಲಸ ಮಾಡಿದರೂ ನಿಖರವಾಗಿ ಇವೆರಡನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ಬ್ರಾಹ್ಮಣ ಹಾಗೂ ಶೂದ್ರ ಕಥನಗಳೆಂದು ಬೇಕಾದರೆ ವಿಂಗಡಿಸಿಕೊಳ್ಳಬಹುದು. ಏಕೆಂದರೆ ಕನಕನ ಹುಟ್ಟು ಬಾಲ್ಯ ಸಾಧನೆ- ಸಿದ್ಧಿಯ ಒಟ್ಟು ನೋಟದಲ್ಲಿ ನೋಡಬಯಸುವ ಕಾರಣಕ್ಕಾಗಿ ಅವನ ಅಖಂಡ ಚರಿತ್ರೆ ರೂಪಿಸಬೇಕಾದರಿಂದ ಸಂತ ಶ್ರೇಷ್ಠ ಕನಕದಾಸ ನಮಗೆಷ್ಟು ಮುಖ್ಯನೋ, ವಿಜಯನಗರದ ಪಾಳೇಗಾರ, ಪ್ರಭುತ್ವ ಪ್ರತಿನಿಧಿ ಕನಕನಾಯಕನೂ ನಮಗಷ್ಟೇ ಮುಖ್ಯ. 'ಕನಕನ ಜೀವನ ಚರಿತ್ರೆಯ ಮೊದಲ ಮತ್ತು ಕಡೆಯ ಪುಟಗಳನ್ನು ಕಳೆದುಕೊಂಡ ಸಂಪುಟ' [೧೩] ವೆನಿಸಿದರು. ದೊರೆಕಿದ ಮಾಹಿತಿಗಳ ಮೂಲಕವೂ ಕನಕನ ಜೀವನ ಪರಿಸರವನ್ನು ಮರುನಿರೂಪಿಸಲು ಸಾಧ್ಯವಿದೆ.

**ಕನಕನ ಜೀವನ ಪರಿಸರ:** ಕನಕ ನಾಯಕನು ಬದುಕಿದ್ದ ಪರಿಸರ ಹುಟ್ಟು ಅವನ ಜಾತಿಯ ಬಗೆಗಿನ ಕುತೂಹಲ, ಅವನ ಆಳ್ವಿಕೆಯ ವೈಖರಿ, ದಾಸತ್ವದ ಸ್ವೀಕಾರ,

---

೧೩. ಡಾ.ಸಾ.ಶಿ.ಮರುಳಯ್ಯ; ಕನಕದಾಸರ ಸಮಗ್ರ ಜೀವನ ಚರಿತ್ರೆ; ಕನಕಾವಲೋಕನ ಪುಟ-೧೩

ಪರ್ಯಟನೆ, ಈ ಮೊದಲಾದ ಹಲವು ಅಂಶಗಳನ್ನು ಕರ್ನಾಟಕದ ಒಟ್ಟು ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಲ್ಲಿ ಗ್ರಹಿಸಿದಾಗ ಬೇರೆಯದೇ ಆದ ಕೆಲವು ತಿಳುವಳಿಕೆಗಳನ್ನು ಪಡೆಯಲು ಸಾಧ್ಯವಿದೆ. ಬಾಡ ಬಂಕಾಪುರದಿಂದ ವಿಜಯನಗರದ ಹಂಪಿ, ಬೇಲೂರು, ಕೊಡಗು–ಉಡುಪಿ– ಚಂದ್ರಗುತ್ತಿ ಹೀಗೆ ಅವನ ಪರ್ಯಟನೆಯ ಚಲನೆ ಅದರೊಂದಿಗೆ ತಳಕು ಹಾಕಿಕೊಂಡಿದೆ. ಐತಿಹ್ಯ. ಪುರಾಣಗಳು ಕನಕನ ಮೂಲ ಚರಿತ್ರೆಯ ಮಾನವ ಶಾಸ್ತ್ರೀಯ ನೆಲೆಯತ್ತ ಬೆರಳು ಮಾಡಿ ತೋರಿಸುತ್ತವೆ. ಪ್ರತಿಯೊಬ್ಬ ಐತಿಹಾಸಿಕ ಪುರುಷನಿಗೂ ಒಂದಿಲ್ಲೊಂದು ಪುರಾಣ ಕಥೆಗಳನ್ನು ನಿರೂಪಿಸುವುದು. ಜನಪದರ ವಿಶೇಷತೆಯಾಗಿದೆ. ಕನಕನಿಗೂ ಅಂತಹ ಪುರಾಣ ಕಥೆಗಳಿವೆ. ಜನನ ಪೂರ್ವ ವೃತ್ತಾಂತವಿದೆ. ಜನ್ಮಾಂತರದ ಪರಿಕಲ್ಪನೆಯಿದೆ. ಕನಕದಾಸರೇ ಸ್ವತಃ ಇದನ್ನು ಉಲ್ಲೇಖಿಸಿದ್ದಾರೆ.

೧. ಯಮ ಕನಕನಾಗಿ ಹುಟ್ಟಿದ ಕಥನ

ಯಮನು ಮುನ್ನೆ ಮಾಂಡವ್ಯ ಶಾಪದಿಂದೆರಡು ಜ
ನುಮ ಶೂದ್ರಯೋನಿಯೊಳಗೆ ಪುಟ್ಟಿದೆನು ಮೊದಲ
ಜನುಮ ವಿದುರನಾಗಿ ಕುರುಬರ ಕುಲದಲ್ಲಿ ಜನಿಸಿದೆನಗೀ ಜ
ನುಮದಲ್ಲಿ ಮುಕ್ತಿ ಎಂತು ಎಂಬೆ॥ [೧೪]

ಈ ಉಗಾಭೋಗದ ಪೂರ್ಣಭಾಗ ದೊರೆಯದೆ ಇದ್ದರೂ ದೊರೆತ ಈ ಭಾಗದಲ್ಲಿ ಕನಕನ ಜನ್ಮ ರಹಸ್ಯದ ಸಂಕ್ಷಿಪ್ತ ಕಥನವಿದೆ. ಈ ಕಥೆಯ ಪ್ರಕಾರ ಮೂಲತಃ ಕನಕದಾಸರು ಯಮಾಂಶ ಸಂಭೂತರು, ಮಾಂಡವ್ಯ ಮುನಿಗಳ ಶಾಪದಿಂದ ಯಮನು ಮೊದಲ ಎರಡು ಜನ್ಮ ಶೂದ್ರಯೋನಿಯಲ್ಲಿ ಜನಿಸಿದ. ಮೂರನೆಯದಾಗಿ ಕುರುಬ ಕುಲದಲ್ಲಿ ಕನಕನೆಂಬ ಅಭಿಧಾನ ಹೊತ್ತು ಹುಟ್ಟಿದನೆಂಬ ಐತಿಹ್ಯ. ಇದಕ್ಕೆ ಸಂಬಂಧಿಸಿದ ಕಥೆಯೊಂದು ಹೀಗಿದೆ; "ಒಮ್ಮೆ ಅಣಿಮಾಂಡವ್ಯನೆಂಬ ಋಷಿಯು ತಪೋನಿರತನಾಗಿ ಸಮಾಧಿ ಸ್ಥಿತಿಯಲ್ಲಿದ್ದನು. ಕೆಲವು ಮಂದಿಕಳ್ಳರು ಆತನ ಆಶ್ರಮದಲ್ಲಿ ಅಡಗಿಕೊಂಡು, ಬೆನ್ನಟ್ಟಿ ಬಂದ ರಾಜದೂತರನ್ನು ವಂಚಿಸಿ ಪಾರಾಗಲೆತ್ನಿಸಿದರು. ರಾಜಭಟರು ಕಳ್ಳರ ಬಗ್ಗೆ ಮಾಂಡವ್ಯನಲ್ಲಿ ಪ್ರಶ್ನಿಸಲಾಗಿ ಅವನು ಮೌನದಿಂದಿದ್ದನು. ಅವರು ಈತನೂ

---

೧೪. ಇದು ಕನಕದಾಸರ ಉಗಾಭೋಗವೆಂದು ಗುರುತಿಸಲ್ಪಟಿದೆ. ಇದನ್ನು ಕನಕದಾಸರೇ ರಚಿಸಿದರೋ ಅಥವಾ ಇನ್ಯಾರಾದರು ರಚಿಸಿ ಕನಕನ ಜನ್ಮ ರಹಸ್ಯದ ಅತಿಮಾನುಷತೆಯನ್ನು ವಿಜೃಂಭಿಸಿದರೂ ತಿಳಿಯದು. ಆದರೆ ಇದನ್ನು ಸಂಪಾದನೆ ಮಾಡಿದ ಬಿ.ಶಿವಮೂರ್ತಿ ಶಾಸ್ತ್ರಿಗಳು ಮತ್ತು ಶ್ರೀ ಕೆ.ಎಂ. ಕೃಷ್ಣರಾವ್ ಅವರು ಇದು ಕನಕ ರಚನೆ ಎಂದೂ, ಇದೇ ಉಗಾಭೋಗದಲ್ಲಿ ವ್ಯಾಸರಾಯರಿಗೆ ಮೂರು ಜನ್ಮಗಳೆಂದೂ, ಶ್ರೀಪುರಂದರ ದಾಸರಿಗೆ ಎರಡು ಜನ್ಮಗಳೆಂದು ಹೇಳಲಾಗಿದೆ. ಆ ಭಾಗ ತಮಗೆ ದೊರೆತಿಲ್ಲವೆಂದು ತಿಳಿಸಿದ್ದಾರೆ. ವಿವರಗಳಿಗೆ: ಕನಕದಾಸರ ಕೀರ್ತನೆಗಳು ಪುಟ–೭೮

ಕಳ್ಳರ ಸಹಚರನೆಂದು ತಿಳಿದು ಅವನನ್ನು ಕಳ್ಳರೊಡನೆ ರಾಜನ ಬಳಿಗೆ ಕರೆದೊಯ್ದು ನಿಲ್ಲಿಸಿದರು. ರಾಜನು ಇವನನ್ನು ವಿಚಾರಿಸಿದಾಗ ಧ್ಯಾನಸ್ಥಿತಿಯಲ್ಲಿದ್ದ ಮಾಂಡವ್ಯನೂ ಮೌನವಾಗಿಯೇ ಇದ್ದನು. ಇದರಿಂದ ಕುಪಿತನಾದ ದೊರೆಯು ಕಳ್ಳರ ಜೊತೆಯಲ್ಲಿ ಇವನನ್ನು ಶೂಲಕ್ಕೇರಿಸಲು ಆಜ್ಞೆ ಮಾಡಿದನು. ರಾಜಭಟರು ಅಂತೆಯೇ ಅವನನ್ನು ಶೂಲಕ್ಕೇರಿಸಿದರು. ಕಳ್ಳರು ಸತ್ತರು. ಅಣಿಮಾಂಡವ್ಯ ಋಷಿಯು ಸಾಯಲಿಲ್ಲ. ಅವನ ಮಹಿಮೆಗೆ ಅಚ್ಚರಿಗೊಂಡ ದೊರೆಯು ತನ್ನ ಅಕೃತ್ಯಕ್ಕಾಗಿ ಪಶ್ಚಾತ್ತಾಪ ವ್ಯಕ್ತಪಡಿಸಿ ಕ್ಷಮಿಸಲು ಪ್ರಾರ್ಥಿಸಿದನು. ಅವನು ದೊರೆಯನ್ನು ತಿರಸ್ಕಾರದಿಂದ ನೋಡಿ ಶೂಲವನ್ನು ಮುರಿದು ದೇಹ ತ್ಯಾಗ ಮಾಡಿದನು.

ಶೂಲದ ಮುಳ್ಳು ಚುಚ್ಚಿದ್ದರಿಂದ ಮಾಂಡವ್ಯರು ಅಣಿ ಮಾಂಡವ್ಯರಾದರು. ದೊರೆಗೆ ನೀಚ ಜನ್ಮ ಪ್ರಾಪ್ತವಾಯಿತು. ಮಾಂಡವ್ಯರನ್ನು ಯಮದೂತರು ಯಮನಲ್ಲಿಗೆ ಕರೆದೊಯ್ದರು. ಆಗ ಅಣಿಮಾಂಡವ್ಯ "ನಾನು ಯಾವ ಪಾಪವನ್ನು ಮಾಡಿದವನಲ್ಲ. ನನಗೆ ನರಕದ ಶಿಕ್ಷೆ ಪ್ರಾಪ್ತವಾಗಲು ಕಾರಣವೇನು" ಎಂದು ಕೇಳಿದನು. "ನೀನು ಬಾಲ್ಯದಲಿ ನೊಣಗಳನ್ನು ಕೊಲ್ಲುತ್ತಿದ್ದೆ. ಅದರ ಫಲವಾಗಿ ನಿನಗೆ ನರಕ ಪ್ರಾಪ್ತಿಯಾಯಿತು" ಎಂದು ಹೇಳಿದನು. ಅದಕ್ಕೆ ಅಣಿಮಾಂಡವ್ಯನು ಕುಪಿತನಾಗಿ "ಅಯ್ಯಾ ಯಮರಾಜ, ಬಾಲ್ಯದಲ್ಲಿ ಮಕ್ಕಳು ಪಾಪಕ್ಕೇ ಗುರಿಯಾಗ ತಕ್ಕವರಲ್ಲ. ಮಕ್ಕಳು ಮಾಡಿದ ಪಾಪ, ಹೆತ್ತವರ ಪಾಲಿಗೆ ಸೇರಿದುದು. ಇಷ್ಟರ ಮಟ್ಟಿನ ಧರ್ಮಸೂಕ್ಷ್ಮವನರಿಯದೆ ನನಗೆ ನರಕ ದೊರೆಯುವಂತೆ ಮಾಡಿರುವ ನೀನು ಭೂಲೋಕದಲ್ಲಿ ಶೂದ್ರಯೋನಿಯಲ್ಲಿ ಜನಿಸು" ಎಂದು ಶಾಪವಿತ್ತನು. ಯಮನು ಪ್ರಾರಬ್ಧಕರ್ಮ ವಶದಿಂದ ತನ್ನಿಂದಾದ ಅಪರಾಧವನ್ನು ಮೂರು ಬಾರಿ ಇಲ್ಲ ಇಲ್ಲ ಇಲ್ಲವೆಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದರಿಂದ ಅವನು ಮೂರು ಬಾರಿ ಶೂದ್ರ ಯೋನಿಯಲ್ಲಿ ಜನ್ಮವೆತ್ತ ಬೇಕಾಗಿ ಬಂದಿತು" [೧೫]

ಈ ಕತೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇದರ ನಿರೂಪಕರು ಯಾರು ಎಂಬುದು ಸ್ಪಷ್ಟವಾಗುತ್ತದೆ. ಜನ್ಮಾಂತರ ಕಲ್ಪನೆಯ ಹಿಂದಿನ ವೈಷ್ಣವ ಧರ್ಮಿಯ ರಾಜಕಾರಣವನ್ನು ಗುರುತಿಸಿಬಹುದು. ಕನಕನ ಚರಿತ್ರೆ ಕಟ್ಟುವಲ್ಲಿ ಇವರದ್ದೆ ಪ್ರಮುಖ ಕೊಡುಗೆ. ಇದಕ್ಕೆ ಪೂರಕವಾಗಿ 'ಕುರುಬನಿಗೇಕೋ ಕೋಣನ ಮಂತ್ರ' ಎಂಬ ವ್ಯಾಸರಾಯರ ಮಾತನ್ನು ನೆನಪಿಸಿಕೊಳ್ಳಬಹುದು. ಮಾದಾರ ಚೆನ್ನಯ್ಯನ ಭಕ್ತಿಗೆ ಶಿವ ಅಂಬಲಿ ಕುಡಿದಂತೆ ಕನಕನ ಭಕ್ತಿಗೆ ಕೃಷ್ಣ ಗಂಜಿ ಕುಡಿದ ಕತೆ, ಶ್ವಾನ-ಹಾವಿನಲ್ಲಿ ಕನಕ ಬ್ರಾಹ್ಮಣರಿಗೆ ದೇವರನ್ನು ತೋರಿಸಿದ ಕತೆ ಮೊದಲಾದ ಶೂದ್ರ ವಸ್ತು ಪ್ರಪಂಚಗಳ

೧೫. ಕೊರಟಿ ಶ್ರೀನಿವಾಸರಾವ್: ಶ್ರೀಕನಕದಾಸರು, ಪುಟ:೧೦

ಮೂಲಕ ಕನಕನ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ಉದ್ದೇಶವನ್ನು ನೋಡಿದರೆ ಮಧ್ಯಕಾಲೀನ ಸಮಾಜದ ಬಹುಸಂಖ್ಯಾತ ಪಶುಪಾಲಕ ಸಂಸ್ಕೃತಿ ಪ್ರತಿನಿಧಿಸುವ ಬೇಡರು, ಕುರುಬರು, ಒಕ್ಕಲಿಗರು ಮುಂತಾದವರನ್ನು ಸೆಳೆದುಕೊಳ್ಳುವ ಧಾರ್ಮಿಕ ಹುನ್ನಾರವೊಂದು ಸ್ಪಷ್ಟವಾಗುತ್ತದೆ. ವ್ಯಾಸರಾಯರು ತಮ್ಮ ಹಿಂದಿನ ಜನ್ಮದಲ್ಲಿ ಪ್ರಹ್ಲಾದನಾಗಿಯೂ ಮುಂದಿನ ಜನ್ಮದಲ್ಲಿ ಶ್ರೀ ರಾಘವೇಂದ್ರರಾಯರಾಗಿಯೂ ಶ್ರೇಷ್ಠ ಜನ್ಮ ಪಡೆಯುತ್ತಾರೆ. ಪುರಂದರದಾಸರೂ ನಾರದನ ಅಂಶ ಸಂಭೂತರೆನಿಸಿಕೊಳ್ಳುತ್ತಾರೆ. ಆದರೆ ಕನಕ ಮಾತ್ರ ಅಣಿಮಾಂಡವ್ಯರ ಶಾಪದಿಂದ ಮತ್ತೆ ಶೂದ್ರಯೋನಿ, ಅಂತ್ಯಜಯೋನಿಯಲ್ಲಿ ಜನಿಸುತ್ತಲೇ ಇರುತ್ತಾರೆ. ಯಮ ವಿದುರ–ಧರ್ಮವ್ಯಾಧ–ಕನಕದಾಸರಾಗಿ ಹುಟ್ಟಿದ ನಂತರವೂ ಮತ್ತೆ ರಾಘವೇಂದ್ರ ಸ್ವಾಮಿಗಳ ಕಾಲದಲ್ಲಿ ಅಂತ್ಯಜನಾಗಿ ಊರ ಹೊರಗೆ ಬದುಕುವ 'ಹೆಸರಿಲ್ಲದ ವ್ಯಕ್ತಿ' ಯಾಗಿ ಹುಟ್ಟುತ್ತಾನೆ. ಅವನನ್ನು ರಾಘವೇಂದ್ರ ಯತಿಗಳು 'ಕನಕ'ನೆಂದು ಗುರುತಿಸುತ್ತಾರೆ. ಕನಕ ಮತ್ತೆ ಮತ್ತೆ ಶೂದ್ರ ಜಗತ್ತಿನ ಪ್ರತಿನಿಧಿ ಎಂಬಂತೆ ಅವನ ಕುರಿತು ಐತಿಹ್ಯಗಳು ಸೃಷ್ಟಿಯಾಗುತ್ತವೆ. ಇದನ್ನೆ ಕನಕ ಚರಿತ್ರೆ ಎಂದು ನಮ್ಮ ಮುಂದಿಡಲಾಗುತ್ತಿದೆ. ಕನಕನೇಕೆ ಶ್ರೇಷ್ಠತೆಯ ಮಾನದಂಡದ ಮೂಲಕ ವಿವರಿಸಲ್ಪಡುವುದಿಲ್ಲ? ಎಂಬ ಪ್ರಶ್ನೆಗೆ ಉತ್ತರಿಸಲು ಮಾನವ ಶಾಸ್ತ್ರಿಯ ನೆಲೆಯ ಚಿಂತನೆಗೆ ನಾವು ತೊಡಗಬೇಕಾಗುತ್ತದೆ.

ವಿಜಯನಗರ ಸಾಮ್ರಾಜ್ಯದ ಉಗಮ–ವಿಕಾಸದ ಎಲ್ಲಾ ಹಂತಗಳಲ್ಲೂ ಪಶುಪಾಲಕ ಸಮುದಾಯವು ಮಹತ್ವದ ಪಾತ್ರವನ್ನು ವಹಿಸಿದೆ. ಹಸು, ಕೋಣ, ಕುರಿ–ಮೇಕೆ ಮೊದಲಾದ ಪ್ರಾಣಿವರ್ಗವನ್ನು ಆಶ್ರಯಿಸಿಕೊಂಡೆ ಮಾನವ ಇತಿಹಾಸ ಪ್ರಾರಂಭವಾಗಿರುವುದು ಧರ್ಮ–ಪುರಾಣ ಇತಿಹಾಸವನ್ನು ಹೊಸ ದೃಷ್ಟಿಯಿಂದ ವಿವೇಚಿಸುವುದಕ್ಕೆ ಒತ್ತಾಯಿಸುತ್ತದೆ. ಪ್ರಾಣಿಲೋಕ ಹಾಗೂ ಮಾನವ ಲೋಕಗಳ ಸಾದೃಶ್ಯ ಸಂಬಂಧಗಳ ಮೂಲಕವೇ ಮಾನವ ಆದಿಯ ನೆಲೆಯನ್ನು ಗುರುತಿಸಬೇಕಾಗುತ್ತದೆ. ಪ್ರಪಂಚದ ವೃತ್ತಿ ಇತಿಹಾಸದಲ್ಲಿ ಪಶುಪಾಲನೆಯೇ ಅತ್ಯಂತ ಪ್ರಾಚೀನವಾದುದು.[೧೬]

ಅನಂತರವೇ ಮಾನವ ನಾಗರೀಕತೆಯತ್ತ ಹೊರಳಿದ್ದು. ವಿಶ್ವದ ಪ್ರಾಚೀನ ಸಂಸ್ಕೃತಿಗಳು ಆರಂಭಗೊಂಡಿದ್ದೇ ಪಶುಪಾಲನೆಯಿಂದ. ಸುಮೇರ, ಬ್ಯಾಬಿಲೋನ, ಈಜಿಪ್ತ ಮೊದಲಾದ ಪ್ರಾಚೀನ ನಾಗರೀಕತೆಗಳ ಅಧ್ಯಯನ ಈ ಹಿನ್ನೆಯಲ್ಲಿ ಕುತೂಹಲಕಾರಿಯಾಗಿದೆ.

---

೧೬. ಚಂದ್ರಕಾಂತ ಬಿಜ್ಜರಗಿ: ಹಾಲುಮತ ಸನಾತನ ಧರ್ಮ,ಪುಟ–೩೭೮

ಈ ಸಂಸ್ಕೃತಿಗಳಲ್ಲಿರುವ ಪ್ರಾಣಿರೂಪಕಗಳ ಮೂಲಕ ಇವುಗಳ ಮೂಲ ನೆಲೆಯನ್ನು ಗುರುತಿಸಲು ಸಾಧ್ಯವಿದೆ. ವಿಜಯನಗರದ ಸುತ್ತಮುತ್ತಲಿನ ಪರಿಸರ (ಹಂಪಿ, ಕೊಪ್ಪಳ, ಚಿತ್ರದುರ್ಗ)ದಲ್ಲಿ ಬೇಡ, ಗೊಲ್ಲ, ಕುರುಬ ಸಮುದಾಯಗಳು ಎದುರಿಸಿದ ಸಾಂಸ್ಕೃತಿಕ ಪಲ್ಲಟಗಳು ಒಟ್ಟು ವಿಜಯನಗರದ ಗತ ಇತಿಹಾಸದ ಮೇಲೂ ಬೆಳಕು ಚಲ್ಲುತ್ತವೆ. ಮೂಲತಃ ಪಶುಪಾಲಕ ವೃತ್ತಿಯನ್ನು ಆಧರಿಸಿದ್ದ ಈ ಸಮುದಾಯಗಳು ಕ್ರಮೇಣ ಪಶುಸಂಪತ್ತು ಕ್ಷೀಣಿಸುತ್ತಿದ್ದಂತೆ ಭೂಮಿ ಸಂಬಂಧ ಹೊಂದಿ ಒಕ್ಕಲು ಸಮುದಾಯವಾಗಿ ರೂಪುಗೊಂಡರು. ಇವರ ಜೀವನ ಕ್ರಮಗಳು ಸ್ಪಷ್ಟ ಆಕಾರಕ್ಕೆ ಬರುವ ಹೊತ್ತಿಗಾಗಲೇ ವಿಜಯನಗರದ ಅರಸರು ಅವರನ್ನು ಸಾಮ್ರಾಜ್ಯ ರಕ್ಷಣೆಯ ಅಸ್ತ್ರವಾಗಿರಿಸಿಕೊಂಡರು. ಇದರಿಂದ ವಿಜಯನಗರದ ಸೈನ್ಯ ಬಲವನ್ನು ಹೆಚ್ಚಿಸಿ ಆ ಮೂಲಕ ಸೈನಿಕ ಸಮುದಾಯವಾಗಿ ಬೆಳೆಯಲು ಸಾಧ್ಯವಾಯಿತು. ವಿಜಯನಗರದ ಪತನಾನಂತರ ಈ ಸಮುದಾಯಗಳು ಹಂಪಿ ಪರಿಸರವನ್ನು ಬಿಟ್ಟು ಚಿತ್ರದುರ್ಗ, ಕೊಪ್ಪಳ ಮೊದಲಾದ ಪ್ರದೇಶಕ್ಕೆ ವಲಸೆ ಹೋಗಿರಬಹುದಾದ ಸಾಧ್ಯತೆಯನ್ನು ಊಹಿಸಿಕೊಳ್ಳಬಹುದು. [೧೭]

ವಿಜಯನಗರವನ್ನು ಕೇಂದ್ರೀಕರಿಸಿಕೊಂಡ ವ್ಯಾಸಕೂಟಕ್ಕೆ ಕನಕನನ್ನು ಪಶುಪಾಲಕ ಸಂಸ್ಕೃತಿಯ ಚಹರೆಗಳ ಮೂಲಕ ಸ್ವೀಕರಿಸುವುದು ಕಾಲದ ಅಗತ್ಯವಾಗಿತ್ತು. ಹಿಂದೂ ಧಾರ್ಮಿಕ ಪರಿಸರದಲ್ಲಿ ಉಂಟಾಗುತ್ತಿದ್ದ ಶೈವ, ವೈಷ್ಣವ ಧರ್ಮಗಳ ತಿಕ್ಕಾಟ ತಾರಕಕ್ಕೇರಿದ ಸಂದರ್ಭದಲ್ಲಿ ಬೆಟ್ಟ, ಗುಡ್ಡ, ಗವಿಗಳಲ್ಲಿ ಅವಿತು ಸೈನಿಕ ನೆಲೆಯ ಸಾಮ್ರಾಜ್ಯ ರಕ್ಷಣೆಗೆ ನೆರವಾದ ಈ ಪಶುಪಾಲಕ ಸಮುದಾಯಗಳು ಧರ್ಮ ರಕ್ಷಣೆಯ ಪರಭಾರೆಯನ್ನು ವಹಿಸಿಕೊಳ್ಳಬೇಕಾಯಿತು. ಕನಕನಂತಹ ಸಮುದಾಯ ನಾಯಕ, ಸೈನಿಕ ನಾಯಕ ವೈಷ್ಣವ ಧರ್ಮದ ಜನ್ಮತಃ ಪ್ರತಿನಿಧಿಯಾಗುವಂತೆ ಮಾಡಿರುವ ಹಿಂದೆ ಧರ್ಮ ರಾಜ ಕಾರಣವಿದೆ. ಇಡೀ ಪಶುಪಾಲಕ ಸಂಸ್ಕೃತಿಯನ್ನು ವೈಷ್ಣವ ಧರ್ಮೀಯಗೊಳಿಸುವ ಒತ್ತಾಸೆಯಿದೆ. ಶೈವರು, ವೀರಶೈವರು ತಮ್ಮ ತತ್ವಗಳನ್ನು ಪ್ರಚಾರಮಾಡುವುದಕ್ಕಾಗಿ ಮಾದಾರ ಚೆನ್ನಯ್ಯನನ್ನು ಬಳಸಿಕೊಂಡಂತೆ, ಕನಕದಾಸರನ್ನು ವೈಷ್ಣವ ಮತದ ಪ್ರಚಾರಕ್ಕಾಗಿ ಬಳಸಲಾಗಿದೆ ಎಂಬ ಡಾ. ಅರವಿಂದ ಮಾಲಗತ್ತಿ[೧೮]ಯವರ ಅಭಿಪ್ರಾಯವನ್ನು ಇನ್ನೂ ವಿಸ್ತರಿಸಿ ಹೇಳುವುದಾದರೆ ಕನಕನ ಮೂಲಕ ಅವನ ಸಮುದಾಯವನ್ನು ಆಕರ್ಷಿಸುವ ಉದ್ದೇಶ ಇನ್ನೂ ಸ್ಪಷ್ಟವಾಗಿ ಈ ಕಥನಗಳ ಮೂಲಕ ಅನಾವರಣಗೊಳ್ಳುತ್ತದೆ. ಮಾದಾರ ಚೆನ್ನಯ್ಯನ ಮನೆಯಲ್ಲಿ ಶಿವ ಅಂಬಲಿ ಕುಡಿದಿರುವುದೂ, ಉಡುಪಿಯಲ್ಲಿ ಕೃಷ್ಣ ಕನಕನ ಕೈಯಿಂದ ಗಂಜಿ ಕುಡಿದಿರುವುದು ಒಟ್ಟಾರೆಯಾಗಿ ಶೈವ-ವೈಷ್ಣವ ಧರ್ಮಗಳ ಮೇಲಾಟ ದಲಿತ, ಶೂದ್ರ ಸಮುದಾಯವನ್ನು ತಮ್ಮತ್ತ ಮಾಡಿಕೊಳ್ಳಲು ನಡೆಸಿದ ಸೆಣಸಾಟವಾಗಿ ತೋರುತ್ತದೆ. ಕನಕನನ್ನು ಒಟ್ಟು

೧೭. ಮೊಗಳ್ಳಿ ಗಣೇಶ್:ಅವ್ಯಕ್ತ ಚರಿತ್ರೆ, ಪುಟ-೭೨

ಪಶುಪಾಲಕ ಸಂಸ್ಕೃತಿಯ ಪ್ರತಿನಿಧಿಯಾಗಿ ಗುರುತಿಸಿಕೊಂಡರೆ ಅವನ ಕಥನಗಳ ಹಿಂದಿನ ಕೋಣ, ಯಮ, ಶ್ವಾನ, ಹಾವು ಪರಿಕಲ್ಪನೆಯು ಸ್ಪಷ್ಟವಾಗಿ ಮೂಡುತ್ತದೆ. ಕನಕ–ಕೃಷ್ಣ ನಡುವಿನ ಸಂಬಂಧವೂ ಇದೇ ತಾತ್ವಿಕ ನೆಲೆಯಲ್ಲಿ ನಿರ್ವಚಿಸಲ್ಪಡುತ್ತದೆ. ಕನಕ ಕೃಷ್ಣ ಸಂಪ್ರದಾಯವನ್ನು ಅನುಸರಿಸುವುದಕ್ಕೆ ಕಾರಣವಾದ ಪ್ರಧಾನ ಅಂಶಗಳಿಗಿಂತ ಉಪ ಸಾಂಸ್ಕೃತಿಕಾಂಶಗಳು ಇದಕ್ಕೇ ಪೂರಕವಾಗಿ ಒದಗಿ ಬರುತ್ತದೆ. ಹಾಗಾಗಿ ಕನಕನಿಗೆ ಜನ್ಮಾಂತರದ ಸಂಗತಿಗಳನ್ನು ಆರೋಪಿಸಲಾಗಿದೆ. ಜಾತಿ ನಿಷ್ಠವಾಗಿರುವ ಇಂತಹ ಕಥನದ ಮೂಲ ಆಶಯಗಳನ್ನು ಒಡೆಯದೆ ನಮಗೆ ಕನಕ ಮತ್ತು ಅವನ ಕೃತಿಗಳು ಅರ್ಥವಾಗುವುದಿಲ್ಲ.

೨) <u>ಕನಕದಾಸರ ಪವಾಡದ ಕಥನಗಳು:</u> ಕನಕ ಚರಿತ್ರೆಯ ಹೊರ ಗುರುತುಗಳಾಗಿ ಕನಕದಾಸರಿಗೆ ಸಂಬಂಧಿಸಿದ ಐತಿಹ್ಯ, ಪವಾಡ, ಪರ್ಯಟನದ ಕಥಾನಕಗಳು ಕನಕನನ್ನು ಎತ್ತಿ ಹಿಡಿಯಬೇಕಾದ ಹಲವು ಕಾರಣಗಳಿಗಾಗಿ ಸೃಷ್ಟಿಯಾದ ಕನಕನ ಜಾಣ್ಮೆಯನ್ನು ಬಿಂಬಿಸುವ ಘಟನೆಗಳು ರಾಜಕೀಯಾರ್ಥದ ಚರಿತ್ರೆಗಳೇ ಆಗಿವೆ. ಕನಕದಾಸರ ಬಾಳೆ ಹಣ್ಣಿನ ಕಥೆ, 'ನಾನು ಹೋದರೆ ಹೋದೇನು', ಮುಷ್ಟಿಯಲ್ಲಿ ಸಾಲಿಗ್ರಾಮವನ್ನು ಗೌಪ್ಯೀಕರಿಸಿದ ಘಟನೆ ಇವೆಲ್ಲವೂ ಕನಕ ಜಾಣ್ಮೆಯನ್ನು ಸೂಚಿಸುವುದಕ್ಕಾಗಿ ಸೃಷ್ಟಿಸಲ್ಪಟ್ಟರೆ, ಉಡುಪಿ ಕೃಷ್ಣನಮೂರ್ತಿ ತಿರುಗಿಸಿದ ಪ್ರಸಂಗ, ತಿರುಪತಿಯಲ್ಲಿ ಸ್ತೋತ್ರಮಾಡಿ ಭೂಕಂಪ ನಿಲ್ಲಿಸಿದ್ದು, ಚಲಿಸದ ತೇರನ್ನು ಚಲಿಸುವಂತೆ ಮಾಡಿದ ಐತಿಹ್ಯಗಳು, ಮದಿಸಿದ ಆನೆಯೊಂದು ಕನಕದಾಸರನ್ನು ಹೊತ್ತು ನಡೆದ ಕತೆ ಮೊದಲಾದವು ಕನಕನ ವ್ಯಕ್ತಿತ್ವದ ಶ್ರೇಷ್ಠತೆಯನ್ನು ಬಿಂಬಿಸುವುದಾಗಿ ರಚಿತವಾದವುಗಳಾಗಿವೆ. ಈ ಕಥನಗಳ ಮೌಖಿಕ ನಿರೂಪಣೆಗಳ ಮೂಲಕವೇ ವಿಸ್ತಾರವಾದ ಆಯಾಮ ಪಡೆದಿರುವುದು ವಿಶೇಷ. 'ಮೌಖಿಕ ನಿರೂಪಣೆಗಳು ನಮ್ಮ ಸಂಸ್ಕೃತಿಯನ್ನು ಪುನಾರಚಿಸಿಕೊಳ್ಳಲು ಸಹಾಯ ಮಾಡುವ ಅತ್ಯುತ್ತಮ ಸಾಮಗ್ರಿಗಳಾಗಿವೆ. ಅವು ಗತಕಾಲದ ಪಳೆಯುಳಿಕೆಗಳಲ್ಲ; ಬದಲು ವರ್ತಮಾನಕಾಲದ ಬೆಳಕಿಂಡಿಗಳು' ಎಂಬ ಡಾ.ಪುರುಷೋತ್ತಮ ಬಿಳಿಮಲೆಯವರ ಮಾತು ವಿಚಾರ ಯೋಗ್ಯವಾದುದು. [೧೯]

ಭಾರತದಲ್ಲಿ ಜ್ಞಾನ ಪರಂಪರೆಯ ವಾರಸುದಾರರಾದ ವೈದಿಕರು ತಮ್ಮ ಸಾಂಸ್ಕೃತಿಕ ಆಶಯಗಳಿಗೆ ಅನುಗುಣವಾಗಿ ಇಲ್ಲಿನ ಧರ್ಮ, ಸಮಾಜ ನೀತಿಗಳನ್ನು ರೂಪಿಸಿಕೊಂಡರು. ಇತಿಹಾಸವೂ ವೈದಿಕ ಕೇಂದ್ರಿತ ರಚನೆಯೇ ಆಗಿದೆ. ವಸಾಹತು

---

೧೮. ಡಾ. ಅರವಿಂದ ಮಾಲಗತ್ತಿ: ಕನಕದಾಸರ ಕೆಲವು ಐತಿಹ್ಯಗಳ ಅರ್ಥವ್ಯಾಪ್ತಿ, ಕನಕ ಸಾಹಿತ್ಯ ದರ್ಶನ ಪುಟ–೯೦

೧೯. ಡಾ. ಪುರುಷೋತ್ತಮ ಬಿಳಿಮಲೆ; ಮೌಖಿಕ ಸಂಕಥನಗಳ ಮಹತ್ವ; ಸಂಸ್ಕೃತಿ ಶೋಧ,ಪುಟ–೧೬೩

ಆಡಳಿತಗಾರರು ಭಾರತಕ್ಕೆ ಬಂದಾಗ ಅವರಿಗೆ ಇಲ್ಲಿಯ ಸಂಸ್ಕೃತಿ ಪರಿಜ್ಞಾನ ಸಂಪ್ರದಾಯಗಳ ವಿಶೇಷತೆ, ಇತಿಹಾಸಗಳ ಆಕರಗಳನ್ನು ನೀಡಿದ ವರ್ಗವೂ ಕೂಡ ಇದೇ ಆಗಿದೆ. ದೇಶದ ಬಹುಸಂಖ್ಯಾತ ಜನವರ್ಗಕ್ಕೆ ತಮ್ಮ ಸಂಸ್ಕೃತಿಯನ್ನು ಗುರುತಿಸಿಕೊಂಡು ಚರ್ಚಿಸಲು ಅವಕಾಶವಿಲ್ಲದೆ ಹೋಯಿತು. ಎಲ್ಲದಕ್ಕೂ ವೇದ, ಶಾಸ್ತ್ರಗಳನ್ನು ಉಲ್ಲೇಖಿಸಿ ಧರ್ಮ, ದೇವರು, ಜಾತಿ, ವರ್ಗ ಅಸ್ತಿತ್ವವನ್ನು ಪ್ರತಿಪಾದಿಸುತ್ತ ಬಂದ ಈ ಸನಾತನ ಜ್ಞಾನ ಪರಂಪರೆ ಇಲ್ಲಿ ಘಟಿಸುವ ಪ್ರತಿಯೊಂದು ಭೌತಿಕ ಘಟನೆ ಸನ್ನಿವೇಶಗಳನ್ನು ತನ್ನ ಅಭಿವ್ಯಕ್ತಿಯ ನೇರಕ್ಕೆ ಪುನರ್ ಸಂಘಟಿಸುತ್ತಾ ಬಂದಿರುವುದೂ ಕೂಡ ಬಹು ಸಂಖ್ಯಾತರ ಸಂಸ್ಕೃತಿ ಕಥನಗಳನ್ನು ಉಪೇಕ್ಷಿಸುವುದಕ್ಕೇ ಕಾರಣವಾಗಿವೆ. ಕನಕದಾಸರ ಸುತ್ತ ಸೃಷ್ಟಿಯಾದ ಪವಾಡ, ಐತಿಹ್ಯಗಳನ್ನು ಸೃಷ್ಟಿಸಿದವರು ಉಚ್ಚವರ್ಗದವರೆ ಎಂಬ ವಾದದ ನಡುವೆಯೂ ಈ ಕಥನಗಳು ನಿರೂಪಿಸುವ ಸಾಂಸ್ಕೃತಿಕ ಒಳನೋಟಗಳನ್ನು ಗ್ರಹಿಸಬೇಕಾಗಿದೆ. ಕನಕದಾಸರನ್ನು ಕೇಂದ್ರೀಕರಿಸಿಕೊಂಡು ಬೆಳೆದ ಹಲವಾರು ಪವಾಡಗಳಲ್ಲಿ ಬಹಳ ಮುಖ್ಯವಾದ ಈ ಕೆಳಗಿನವುಗಳನ್ನು ಕನಕ ಚರಿತ್ರೆಗೆ ಪೂರಕವಾಗಿ ಗಮನಿಸಬಹುದು. ೧) ಶ್ರೀ ಕೃಷ್ಣನ ಆಭರಣ ಒತ್ತೆಯಾಗಿಟ್ಟದ್ದು ೨)ಯಾರಿಗೂ ಕಾಣದಂತೆ ಬಾಳೆಹಣ್ಣು ತಿನ್ನುವ ಕಥೆ ೩) ಗಂಜಿ-ರೊಟ್ಟಿ ನೈವೇದ್ಯ ೪) ಮೀನು ಹೂವಾದದ್ದು ೫) ಮದ್ಯ ಜೇನು ತುಪ್ಪವಾದುದು ೬) ದೇವರನ್ನು ತೋರಿಸಿದ ಪ್ರಸಂಗ ೭)ಸ್ವರ್ಗಕ್ಕೆ ನಾ ಹೋದರೆ ಹೋದೆನು ೮) ಕುರುಬನಿಗೇಕೆ ಕೋಣನ ಮಂತ್ರ ೯) ತಿರುಪತಿಯಲ್ಲಿ ಭೂಕಂಪ ನಿಲ್ಲಿಸಿದ್ದು ೧೦.) ತಿರುಪತಿಯಲ್ಲಿ ತೇರು ಎಳೆದದ್ದು ೧೧) ಮದವೇರಿದ ಆನೆಯನ್ನು ನಂಜನಗೂಡಿಗೆ ತಂದದ್ದು ೧೨) ಬಾಡದಿಂದ ಆದಿಕೇಶವನನ್ನು ತಂದದ್ದು ೧೩) ಇಂಗಳ ಗುಂದಿಯಲ್ಲಿ ಚೆನ್ನಕೇಶವನನ್ನು ಸ್ಥಾಪಿಸಿದ್ದು. ೧೪) ಪದ್ಮಾವತಿ ಕಲ್ಯಾಣ ಮಹೋತ್ಸವಕ್ಕೇ ಹೋದದ್ದು ೧೫) ಬಾಳೆಎಲೆ ತೆಪ್ಪ ಮಾಡಿ ನದಿ ದಾಟಿದ್ದು ೧೬) ಕನಕನ ಕಿಂಡಿಯ ಪವಾಡ ಮೊದಲಾದವು ಕನಕನ ಹಿರಿಮೆಯನ್ನು ಬಿತ್ತರಿಸುವ ಉದ್ದೇಶಕ್ಕಾಗಿಯೇ ರಚನೆಯಾದಂತವು. ಇವೆಲ್ಲವನ್ನು ಪುರೋಹಿತರೆ ರಚಿಸಿದರು ಎಂಬ ಪೂರ್ವಗ್ರಹವನ್ನು ಇಟ್ಟು ನೋಡುವುದಕ್ಕಿಂತಲೂ ಜಾತಿಯ ನೆಲೆಯಲ್ಲಿ ಹಲವು ಘಟನೆಗಳಿಂದ ಅವಮಾನಿತರಾದ ಕನಕದಾಸರು ಮತ್ತು ಅವರನ್ನು ಬೆಂಬಲಿಸುವರ ಬೌದ್ಧಿಕ ಪ್ರತಿರೋಧದ ಧನಾತ್ಮಕ ಮಾದರಿಯಾಗಿಯೂ ಗುರುತಿಸಲು ಸಾಧ್ಯವಿದೆ. ಕೆಲವೊಮ್ಮೆ ಪರ್ಯಾಯಗಳನ್ನು ಸೃಷ್ಟಿಸಿಕೊಳ್ಳುವುದೂ ಪ್ರತಿರೋಧದ ಒಂದು ಹಂತವೇ ಆಗಿರುತ್ತದೆ. ಕನಕದಾಸರನ್ನು, ಶೈವ ವೈಷ್ಣವ ಬಣಗಳು ತಮ್ಮೆಡೆಗೆ ಸೆಳೆದುಕೊಳ್ಳುವ ತಂತ್ರಕ್ಕಾಗಿ ಈ ಪವಾಡಗಳನ್ನು ಐತಿಹ್ಯಗಳನ್ನು ಸೃಷ್ಟಿಸಿವೆ ಎಂಬ ವಾದ ಒಂದು ಕಡೆಗಿದ್ದರೆ ಕನಕದಾಸರು ತಮ್ಮ ಅಸ್ಮಿತೆಯನ್ನು ಸಾಧಿಸಿಕೊಳ್ಳಲು

ಮತ್ತು ಅವರನ್ನು ಆದರಿಸುವ ವರ್ಗ ಅವರ ಶ್ರೇಷ್ಠತೆಯನ್ನು ಸ್ಥಾಪಿಸಿಕೊಳ್ಳಲು ಬಳಸಿಕೊಂಡ ಪರ್ಯಾಯ ಮಾರ್ಗವೂ ಇದಾಗಿದೆ ಎನ್ನುವುದು ಇನ್ನೊಂದು ವಾದ. ವ್ಯಾಸರಾಯ, ವಾದಿರಾಜರಂತಹ, ಯತಿ ಶ್ರೇಷ್ಠರಿಗೆ ಕನಕದಾಸರ ಬಗೆಗಿನ ಆದರ, ಅಭಿಮಾನಕ್ಕೆ ಅವರೊಳಗಿನ ಮಾನವೀಯ ಮಿಡಿತವೂ ಕಾರಣವಿರಬಹುದು. ಜಾತಿ ನೆಲೆಯ ಒಂದೇ ಕಾರಣಕ್ಕೆ ಮತ್ತೆ ಮತ್ತೆ ಅಪಮಾನಿತನಾಗುವ ಈ ಸಂತಶ್ರೇಷ್ಠನ ಬಗೆಯ ಕರುಣೆ, ಕಳಕಳಿಯೂ ಇಂತಹ ಕಥನಗಳ ಸೃಷ್ಟಿಗೆ ಪೂರಕವಾಗಿರಬಹುದಾದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಧರ್ಮ, ಜಾತಿ ಸಮಾನತೆಯ ಆಶಯಗಳು ಆ ಕಾಲದ ಸಮಾಜವನ್ನು ಹೆಚ್ಚು ಪ್ರಖರವಾಗಿ ಆವರಿಸಿಕೊಳ್ಳುತ್ತಿದ್ದ ಆ ಕಾಲಘಟ್ಟದಲ್ಲಿ ಇಂತಹ ಮೌಢ್ಯಗಳ ವಿರುದ್ಧ ಕನಕದಾಸರು ಎತ್ತಿದ ದನಿ ಸಕಾರಣವಾಗಿತ್ತು. ಹರಿದಾಸ ಪಂಥದ ಮುಖ್ಯ ಧ್ಯೇಯವೂ ಅದೇ ಆಗಿತ್ತು.

ವೈಷ್ಣವ ಪಂಥ ತನ್ನ ಘನತೆಯನ್ನು ಎತ್ತಿ ಹಿಡಿಯಬೇಕಾದ ಅನಿವಾರ್ಯತೆಯಲ್ಲಿ ಮನುಷ್ಯರೊಳಗಿನ ಭೇದ ಭಾವವನ್ನು ನಿರಾಕರಿಸಿ ಹರಿಮತವನ್ನು ಹೆಚ್ಚು ಸಮಾಜಮುಖಿಗೊಳಿಸಬೇಕು ಮತ್ತು ಜೈನ ಹಾಗೂ ವೀರಶೈವ ಧರ್ಮಗಳಿಗೆ ಎದುರಾಗಿ ತಮ್ಮ ಮತವನ್ನು ಪ್ರಚಾರ ಮಾಡುವ ಉದ್ದೇಶ ಹೊಂದಿತ್ತು. ಈ ಕಾರಣದಿಂದಾಗಿ ಕನಕದಾಸರಂತಹ ಒಬ್ಬ ಬ್ರಾಹ್ಮಣೇತರ ಸಂತನನ್ನು ಬಿಟ್ಟುಕೊಟ್ಟರೆ ತಮ್ಮ ತತ್ವ ಸಿದ್ಧಾಂತಗಳಿಗೆ ಒದಗಬಹುದಾದ ಅಪಾಯವನ್ನು ಗ್ರಹಿಸಿದ ಅಂದಿನ ಯತಿ ಸಮುದಾಯ ಕನಕನನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯಲ್ಲಿಯೂ ಇಂತಹ ಪವಾಡಗಳನ್ನು ಸೃಷ್ಟಿಸಿರಬಹುದಾದ ಸಾಧ್ಯತೆಗಳಿವೆ. ಯತಿಗಳ ಈ ಉದಾತ್ತತೆ ಅರ್ಥೈಸಿಕೊಳ್ಳಲಾಗದ ಮತಾಂಧ ಪುರೋಹಿತ ವರ್ಗಕ್ಕೆ ಕನಕನ ವ್ಯಕ್ತಿತ್ವವನ್ನು ಪರಿಚಯಿಸುವ ಕೆಲಸವೂ ಈ ಮೂಲಕ ನಡೆಯಬೇಕೆಂಬ ಉದ್ದೇಶವೂ ಇದರ ಹಿಂದಿದೆ. ಈ ಎಲ್ಲಾ ಕಥನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇವು ಕೂಡ ಪರ್ಯಾಯ ಜ್ಞಾನ ಪರಂಪರೆಯ ಮಾದರಿ ಕಥನಗಳೇ ಆಗುತ್ತವೆ. ನಮ್ಮ ಭಾರತೀಯ ಸನಾತನ ಜ್ಞಾನ ಪರಂಪರೆ ಬ್ರಾಹ್ಮಣರಿಂದ ಶೂದ್ರ ಸಮುದಾಯಗಳಿಗೆ ನೀತಿ, ತತ್ವ, ಆಚಾರಗಳನ್ನು ಕಥನವಾಗಿ ಹೇಳುವುದರ ಮೂಲಕ ಅವರನ್ನು ನಿಯಂತ್ರಿಸುವುದಕ್ಕೆ ತೊಡಗಿಕೊಂಡಿರುವುದು ಇಂದಿನ ವಾಸ್ತವ. ಇದಕ್ಕೆ ಪರ್ಯಾಯವಾದ ಮಾದರಿಗಳು (ಕಥನ) ನಮ್ಮಲ್ಲಿ ಎಲ್ಲಿವೆ ಎಂದರೆ ಕೆಲವಷ್ಟು ಜಾನಪದ ಕಥನ ಮಾದರಿಗಳಲ್ಲಿ, ಕ್ವಚಿತ್ತಾಗಿ ಪುರಾಣಗಳಲ್ಲಿ, ಕೆರೆಗೆ ಹಾರದ ಭಾಗೀರಥಿ, ಗೋವಿನ ಹಾಡು, ಭೂತಾರಾಧನೆಯ ಕೆಲವು ಕಥನ ಪ್ರಕಾರಗಳು, ಪುರಾಣಗಳಲ್ಲಿ ಬರುವ ಧರ್ಮವ್ಯಾಧನಂತಹ ಪ್ರಸಂಗಗಳು ಒಟ್ಟಾರೆಯಾಗಿ ಬ್ರಾಹ್ಮಣ್ಯದ ನೆಲೆಯನ್ನು ಧಿಕ್ಕರಿಸುವ ಈ ನಾಡಿನ ದೇಸಿಕಥೆಗಳಿವು. ಬಸವಣ್ಣ ಅನುಸರಿಸುವ ಶೂದ್ರ ಸಂವೇದನೆಯ

ಅನುಸಂಧಾನಗಳು ಬ್ರಾಹ್ಮಣ್ಯಕ್ಕೆ ಒಡ್ಡಿದ ಪ್ರತಿ ಕಥನಗಳೇ ಆಗಿವೆ. ಕನಕದಾಸರನ್ನು ಕೇಂದ್ರೀಕರಿಸಿಕೊಂಡ ಈ ದೇಸಿಯ ಕಥನಗಳು ಸ್ಥಾಪಿತ ಜ್ಞಾನ ಪರಂಪರೆಯನ್ನು ಮರುವಿವೇಚನೆಗೆ ಒಳಪಡಿಸುತ್ತವೆ.

## ೧. ಶ್ರೀ ಕೃಷ್ಣನ ಆಭರಣ ಒತ್ತೆಯಾಗಿಟ್ಟ ಪ್ರಸಂಗ

ಈ ಸ್ಥಾಪಿತ ಜ್ಞಾನ ಪರಂಪರೆ ಹೇಳುವುದು ಏನನ್ನು? ಬ್ರಾಹ್ಮಣ್ಯದ ಶ್ರೇಷ್ಠತೆಯನ್ನು ದೇವರಿಗೆ ಅರ್ಪಿಸಿದ ನೈವೇದ್ಯದ ಅನ್ನವನ್ನು ಸ್ವೀಕರಿಸುವ ಹಕ್ಕು ಯಾರಿಗಿದೆ ಎಂದು ಕೇಳಿದರೆ ಅದು ಬ್ರಾಹ್ಮಣರಿಗೆ ಮಾತ್ರ. ಶೂದ್ರರಿಗೆ ಹಂಚುವ ಅನ್ನ ಅದು ಧರ್ಮದ ಅನ್ನ, ಇವತ್ತಿಗೂ ಮುನ್ನೆಡೆದುಕೊಂಡು ಬರುತ್ತಿರುವ ಪಂಕ್ತಿ ಭೇದವನ್ನು ಮಧ್ಯಕಾಲೀನ ಕನಕ ಕಥನವೊಂದು ಹೇಗೆ ನಿರಾಕರಿಸುತ್ತದೆ ಎನ್ನುವುದು ಶ್ರೀಕೃಷ್ಣನ ಆಭರಣ ಒತ್ತೆಯಾಗಿಟ್ಟ ಪ್ರಸಂಗದ ಮೂಲಕ ವಿವರಿಸಬಹುದು. ಇದು ಈಗಾಗಲೇ ಸ್ಥಾಪಿತವಾದ ಚರಿತ್ರೆಯ ನಿರಾಕರಣೆ ಮತ್ತು ಮರುನಿರೂಪರಣೆಯ ಆಶಯಕ್ಕೆ ಬದ್ಧವಾಗಿದೆ. ಉಡುಪಿಗೆ ಬಂದ ಕನಕದಾಸರನ್ನು ವಿಶ್ವಾಸದಿಂದ ನೋಡಿದ ವಾದಿರಾಜರು ಕನಕದಾಸರಿಗೂ ನೈವೇದ್ಯದ ಅನ್ನ ನೀಡಬೇಕೆಂಬ ಮನವಿಗೆ ಸ್ಪಂದಿಸದ ಮಠದ ಬ್ರಾಹ್ಮಣರು ಉದ್ದೇಶಪೂರ್ವಕವಾಗಿ ಕನಕದಾಸರಿಗೆ ನೈವೇದ್ಯವನ್ನು ನೀಡದೆ ಉಪೇಕ್ಷಿಸುತ್ತಾರೆ. ಆತ್ಮಗೌರವವನ್ನು ಕಾಯ್ದುಕೊಂಡು ಬಂದ ಕನಕದಾಸರು ಉಪವಾಸ ನಿರತರಾಗಿ ಬ್ರಾಹ್ಮಣರ ವರ್ತನೆಗೆ ಮೌನವಾಗಿ ಪ್ರತಿಭಟಿಸುತ್ತಾರೆ, ಪ್ರತಿಭಟನೆ ಫಲಿಸದಿದ್ದಾಗ ಅಸಹಾಯಕತೆಯನ್ನು ಆತ್ಮ ಗೌರವವಾಗಿಸುವುದಕ್ಕಾಗಿ ತನ್ನಲ್ಲಿರುವ ವಸ್ತುಗಳನ್ನೇ ವ್ಯಾಪಾರಿಗಳ ಬಳಿ ಅಡವಿಟ್ಟು ಹಣತಂದು ಕೃಷ್ಣನಿಗೆ ನೈವೇದ್ಯ ತಾನೇ ತಯಾರಿಸಿ ಅರ್ಪಿಸಿ ಸೇವಿಸುವ ಪರಿಪಾಠವನ್ನು ರೂಢಿಸಿಕೊಂಡರು. ಇದನ್ನು ಸಹಿಸದ ಕುಹಕಿಗಳು ಕೃಷ್ಣನ ಆಭರಣಗಳನ್ನೇ ಕನಕದಾಸರು ಕದ್ದು ಅಡವಿಟ್ಟಿದ್ದಾರೆಂಬ ಆರೋಪ ಮಾಡಿ ಅವರ ನೈವೇದ್ಯ ಕೈಂಕರ್ಯ ತಡೆಯುವ ಪ್ರಯತ್ನ ಮಾಡುತ್ತಾರೆ. ಸ್ವತಃ ಕೃಷ್ಣನೇ ಕನಕದಾಸರಿಗೆ ಅಡವಿಡಲು ಆಭರಣ ಕೊಟ್ಟ ಕಥೆ ಈ ಘಟನೆಗೆ ಸೇರಿದ್ದು. ಆಮೇಲೆ ಕನಕದಾಸರು ತಮ್ಮ ಸಾತ್ವಿಕ ಪ್ರತಿಭಟನೆಯ ಮೂಲಕ ಬ್ರಾಹ್ಮಣರಿಗೆ ಸಲ್ಲಬೇಕಾದ ಉಡುಪಿ ಕೃಷ್ಣನ ನೈವೇದ್ಯದ ಅನ್ನವನ್ನು ದಕ್ಕಿಸಿಕೊಂಡಿದ್ದು ಈಗ ಚರಿತ್ರೆ. ಇತಿಹಾಸ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಅನ್ನ ಸರ್ವರಿಗೂ ಸಮನಾಗಿ ಸಲ್ಲಬೇಕಾದುದೆಂಬ ತನ್ನ ಸಿದ್ಧಾಂತವನ್ನು 'ರಾಮಧಾನ್ಯ ಚರಿತೆ'ಯ ಮೂಲಕ ಪ್ರತಿಪಾದಿಸಿದ ಕನಕದಾಸರು ಮಧ್ಯಕಾಲೀನ ಚರಿತ್ರೆ ಕಂಡ ಅಪೂರ್ವ ಕ್ರಾಂತಿಕಾರಕ ಸಂತ. ಧರ್ಮ, ಜಾತಿಗಿಂತಲೂ ಹಸಿದವನಿಗೆ ಅನ್ನ ಮುಖ್ಯವೆಂದು ಅವರು ಪ್ರತಿಪಾದಿಸಿದರು. ಇಂತಹ ಉದಾತ್ತ ಸಂಯಮದ ಸ್ಥಿತಿಯಲ್ಲಿಯೇ "ತಲ್ಲಣಿಸದಿರು ಕಂಡ್ಯ ತಾಳು ಮನವೆ" ಎಂಬ ಕೀರ್ತನೆ ಹುಟ್ಟಲು ಸಾಧ್ಯ. ಅನ್ನ ಮತ್ತು ಅರಿವಿನ

ಪ್ರಶ್ನೆಯೊಂದಿಗೆ ಮುಖಾಮುಖಿಯಾಗುವ ಈ ಕೀರ್ತನೆಯನ್ನು ಭಿನ್ನ ಆಲೋಚನ ವಿಧಾನದಲ್ಲಿ ನೋಡಲು ಸಾಧ್ಯವಾಗುತ್ತದೆ. ಕಾರ್ಲ್‌ಮಾರ್ಕ್ಸ್‌ನ ವರ್ಗಸಿದ್ಧಾಂತದ ಮೂಲ ಹೊಳಹುಗಳನ್ನು ಕನಕದಾಸರು ತನ್ನ ವ್ಯಕ್ತಿ ಬದುಕಿನ ಚಿಂತನೆಯ ಮೂಲಕವೇ ಅಂದೇ ಕಂಡಿದ್ದರು.

## ೨. ಗಂಜಿ–ರೊಟ್ಟಿಯ ನೈವೇದ್ಯ

ಕೃಷ್ಣನ ನೈವೇದ್ಯದ ಅನ್ನವನ್ನು ನಿರಾಕರಿಸಿದ ಪುರೋಹಿತಶಾಹಿಗಳಿಗೆ ಉತ್ತರವೆಂಬಂತೆ ಕೃಷ್ಣನಿಗೆ ಅನ್ನ ನೈವೇದ್ಯದ ಬದಲು ಜನ ಸಾಮಾನ್ಯರ ಆಹಾರವಾದ ಗಂಜಿ–ರೊಟ್ಟಿಯನ್ನೆ ಅರ್ಪಿಸಿದ್ದು ಕನಕದಾಸರ ವರ್ಗಸಮಾನತೆಯ ಸಿದ್ಧಾಂತಕ್ಕೆ ಮಾದರಿ. ವೈದಿಕರು ಶ್ರೀ ಕೃಷ್ಣನಿಗೆ ತಯಾರಿಸುತ್ತಿದ್ದ ನೈವೇದ್ಯದ ಸ್ಥಾನದಲ್ಲಿ ಗಂಜಿ–ರೊಟ್ಟಿಯ ಆಚರಣೆಯನ್ನು ಜಾರಿಗೆ ತಂದದ್ದು ಅವರ ಕ್ರಾಂತಿಕಾರಕ ಹೆಜ್ಜೆ. ಇಂದಿಗೂ ಈ ನೆನಪಿಗಾಗಿ ಶ್ರೀ ಕೃಷ್ಣನ ಮಹಾಪೂಜೆಯ ನೈವೇದ್ಯದ ಸಮಯದಲ್ಲಿ ಕನಕದಾಸರು ಮಾಡಿದ ರೊಟ್ಟಿಯ ಮಾದರಿಯ ರೊಟ್ಟಿ ಮತ್ತು ಗಂಜಿಯನ್ನು ಬೆಳ್ಳಿಯ ಕರಂಡದಲ್ಲಿಟ್ಟು ಶಾಲ್ಯಾನ್ನದ ಜೊತೆಗೆ ನೈವೇದ್ಯ ಸಲ್ಲಿಸುವ ಪರಿಪಾಠವಿದೆ. ಕನಕದಾಸರು ನಿರಾಕರಿಸುವ ಅನ್ನದ ಸಾಂಕೇತಿಕ ಶ್ರೇಷ್ಠತೆಯ ಭ್ರಮೆ ರಾಗಿಯ ಮೂಲಕ ನಿರಚನಗೊಳ್ಳಿಸುವುದೆ ಶೂದ್ರ ಸಂವೇದನೆಗಳನ್ನು ಸಮಾಜದಲ್ಲಿ ಸ್ಥಾಪಿಸುವ ಸ್ಪಷ್ಟ ಗುರುತುಗಳಾಗಿವೆ. ಬ್ರಾಹ್ಮಣ್ಯವನ್ನು ಮುಖಾಮುಖಿಗೊಳ್ಳುತ್ತಲೇ ತಳವರ್ಗದ ಸಂವೇದನೆಯೊಂದನ್ನು ಸದ್ದಿಲ್ಲದೆ ಕಟ್ಟುವ ಸನ್ನಾಹ ಅದರಲ್ಲಿ ಅಡಗಿದೆ. ಕನಕದಾಸರ ಬದುಕಿನಲ್ಲಿ ನಡೆದ ಹೆಚ್ಚಿನ ಪವಾಡಗಳು ಮುಖಾಮುಖಿಯಾಗುವುದೇ ಶೂದ್ರ – ಬ್ರಾಹ್ಮಣ ಪರಿಕಲ್ಪನೆಯಲ್ಲಿ. ಅವರು ಬ್ರಾಹ್ಮಣ್ಯವನ್ನು ಎದುರುಗೊಳ್ಳುವುದು ಧಾರ್ಷ್ಟ್ಯದಿಂದಲ್ಲ; ಮೆಲುವಾಗಿ ತಿವಿಯುವ 'ತಾಳುವಿಕೆ' ಯಿಂದ. ಎಲ್ಲಿಯೂ ಕನಕದಾಸರು ಬ್ರಾಹ್ಮಣರನ್ನು ನೇರವಾಗಿ ದೂಷಿಸುವುದನ್ನು ಅವರ ಬರಹಗಳಲ್ಲಿ ನಾವು ಕಾಣುವುದಿಲ್ಲ. ಶೂದ್ರ ಸಂವೇದನೆಯ ಕಪ್ಪು ಕನ್ನಡಕದಿಂದ ಅವರು ಬ್ರಾಹ್ಮಣ್ಯವನ್ನು ನೋಡುವುದಿಲ್ಲ. ಅವರ ದೃಷ್ಟಿಯಲ್ಲಿ ಬ್ರಾಹ್ಮಣ್ಯವೆನ್ನುವುದು ಮನುಷ್ಯನ ಮೂಲ ಪ್ರವೃತ್ತಿ ಅಲ್ಲ. ಅದು ತೊಗಲಿಗಂಟಿದ ಧರ್ಮ. ಆಧ್ಯಾತ್ಮದ ನೆಲೆಯಲ್ಲಿ ಅದು ಆತ್ಮೋನ್ನತಿಯ ಉದಾತ್ತ ಮಾರ್ಗ. ಕರ್ಮಶುದ್ಧ ಬದುಕಿನ ವ್ಯಾಖ್ಯಾನ. ಅದನ್ನು ಜಾತಿಯ ನೆಲೆಯಲ್ಲಿ ಸ್ವೀಕರಿಸಿ ಶ್ರೇಷ್ಠತೆಯ ಭ್ರಮೆಯಲ್ಲಿ ಮುಳುಗಿರುವವರ ವಿರುದ್ಧ ಅವರ ಸಾತ್ವಿಕ ಪ್ರತಿಭಟನೆಯಿದೆ. ಬ್ರಾಹ್ಮಣ್ಯದೊಂದಿಗೆ ಎದುರಾಗುವ ಕೆಲವು ಪ್ರಸಂಗಗಳ ಮೂಲಕ ಇದನ್ನು ಇನ್ನಷ್ಟು ವಿವರಿಸಬಹುದು.

## ೩. ಕನಕನ ಕಿಂಡಿ ಮತ್ತು ಶೂದ್ರ ಸಂವೇದನೆ:

ಉಡುಪಿ ಕೇಂದ್ರಿತವಾದ ಕನಕದಾಸರ ಬದುಕಿನ ಅನೇಕ ಘಟನೆಗಳು ಶೂದ್ರ ಸಂವೇದನೆಯ ನೆಲೆಯಲ್ಲಿ ಹುಟ್ಟಿಕೊಂಡಿವೆ. ಕರ್ನಾಟಕದ ಕರಾವಳಿ ತೀರದ ಪ್ರದೇಶವಾದ ಉಡುಪಿ ಆಗ ತಾನೇ ಪೋರ್ಚುಗೀಸರ ಆಗಮನ, ಕ್ರೈಸ್ತ ಮಿಷನರಿಗಳ ಮತ ಪ್ರಚಾರದ ಕೇಂದ್ರವಾಗುವ ಸನ್ನಾಹದಲ್ಲಿತ್ತು. ಉಡುಪಿ, ಮಂಗಳೂರು, ಭಟ್ಕಳ ಈ ಸಮುದ್ರ ತೀರದ ಊರುಗಳಲ್ಲಿ ಹಿಂದುತ್ವ ತನ್ನ ವೈದಿಕ ಪರಂಪರೆಯ ಮೂಲಸತ್ವಗಳಿಂದ ಗಟ್ಟಿಗೊಳ್ಳಬೇಕಾದ ಅಗತ್ಯ ರಾಜಕೀಯ ಪ್ರನಾಳಿಕೆಯ ಭಾಗವಾಗಿರುವುದು ವಿಜಯನಗರ ಸಾಮ್ರಾಜ್ಯದ ಚರಿತ್ರೆಯ ಉದ್ದಕ್ಕೂ ನಾವು ಗಮನಿಸುವ ಅಂಶವಾಗಿದೆ. ಕರಾವಳಿಯ ಪರಿಸರದಲ್ಲಿ ಅತಿ ಪ್ರತಿಷ್ಠಿತವಾದ ಉಡುಪಿ ಕ್ಷೇತ್ರ ಮಧ್ವಾಚಾರ್ಯರ ತಪಸ್ಸಿನ ಕ್ಷೇತ್ರವೆಂದೇ ಪ್ರಸಿದ್ಧ. ಅಲ್ಲದೆ ವಿಜಯನಗರದ ಪ್ರಸಿದ್ಧ ವೈಷ್ಣವ ದೊರೆ ಕೃಷ್ಣದೇವರಾಯನು ಕೂಡ ತುಳುವ ವಂಶಕ್ಕೆ ಸೇರಿದ್ದು ಕೃಷ್ಣನ ಹೆಸರಿನ ಮೂಲಕವೇ ಗುರುತಿಸಿಕೊಂಡಿದ್ದಾನೆ. ಆದರೆ ಮಧ್ವಾಚಾರ್ಯರ ಕಾರಣದಿಂದ ಉಡುಪಿ ಕೃಷ್ಣ ಹೇಗೆ ಪ್ರಸಿದ್ಧನಾದನೋ ಹಾಗೆಯೇ ಕನಕನ ಕಾರಣದಿಂದಲೂ ಅವನ ಕೀರ್ತಿ ಮತ್ತಷ್ಟು ಉಜ್ವಲವಾಯಿತು ಎನ್ನುವುದು ಇನ್ನೊಂದು ಅಂಶ. ಉಡುಪಿ-ಕೃಷ್ಣ-ಕನಕನ ಕಿಂಡಿಯ ಕುರಿತಾದ ಐತಿಹ್ಯ-ಪವಾಡಗಳು ನಿರೂಪಿಸುವ ಚರಿತ್ರೆಯು ಕನಕನ ಶೂದ್ರತ್ವವನ್ನು ಮತ್ತೆ ಮತ್ತೆ ಸ್ಥಾಪಿಸುವ ಅದಕ್ಕೆ ಪರ್ಯಾಯವಾಗಿ ಬ್ರಾಹ್ಮಣರ, ವೈದಿಕರ ನಿಲುವನ್ನು ಸಮರ್ಥಿಸುವ ನೆಲೆಯಲ್ಲೇ ಗಟ್ಟಿಗೊಂಡಿರುವುದನ್ನು ಕಾಣುತ್ತೇವೆ. ವೈದಿಕರ ದೇವರು ಶೂದ್ರನಿಗೂ ದರ್ಶನ ನೀಡಿದ ಎನ್ನುವುದು ಇದರ ಹಿಂದಿನ ಹೆಮ್ಮೆಯಾಗಿ ಕಾಣುತ್ತದೆ. ಆದರೆ ಕನಕನ ಕಿಂಡಿಯ ಹಿಂದಿನ ಸತ್ಯಾಸತ್ಯತೆಯನ್ನು ವಿಮರ್ಶಿಸಿದರೆ ಕನಕದ್ದಾಸರಿಗೂ ಕನಕನ ಕಿಂಡಿಗೂ ಯಾವ ಸಂಬಂಧವೇ ಇಲ್ಲ ಎಂಬ ಒಂದು ವಾದ ಸಂಶೋಧಕರ ನಡುವಿದೆ.(ವಿವರಗಳಿಗೆ ಚಂದ್ರಕಾಂತ ಬಿಜ್ಜರಿಗೆಯವರ ಕೃತಿಯನ್ನು ನೋಡಬಹುದು) ೧೯ನೇ ಶತಮಾನದ ನಂತರದಲ್ಲಿ ಇಲ್ಲಿ ಕಿಂಡಿ ಮಾಡಿದ ನಂತರವಷ್ಟೇ ಈ ಪವಾಡ ಕತೆ ಸೃಷ್ಟಿಸಲಾಯಿತು ಎಂದು ಅವರು ನಂಬುತ್ತಾರೆ.

ಉಡುಪಿಯನ್ನು ಕೇವಲ ಧಾರ್ಮಿಕ ಕ್ಷೇತ್ರವೆಂದು ಗುರುತಿಸುವುದಕ್ಕಿಂತಲೂ ನಾಡಿನ ಸಾಂಸ್ಕೃತಿಕ ರೂಪವಾಗಿ ನೋಡುವುದರಲ್ಲಿ ಹೆಚ್ಚು ಔಚಿತ್ಯವಿದೆ. ಇಲ್ಲಿಯ ಸಂಸ್ಕೃತಿ ಚಹರೆಗಳು ಹೆಚ್ಚು 'ಸಂಕೀರ್ಣವೂ ಹಾಗು ಪ್ರತಿಭೇಧಗಳಿಂದಲೂ' ಕೂಡಿದೆ. ಉಡುಪಿಯನ್ನು ರೂಪಿಸಿದ ಮಧ್ವ ಸಿದ್ಧಾಂತವು ಜೀವ ತಾರತಮ್ಯವನ್ನು ತನ್ನ ಧಾರ್ಮಿಕ ಪಾತಳಿಯಲ್ಲಿ ಗಟ್ಟಿಗೊಳಿಸಿರುವುದನ್ನು ಹಾಗೆಯೇ ಹಲವು ವಿಕೃತಿಗಳ ಮೂಲಕ ಇಂದಿಗೂ ಮುಂದುವರೆದುಕೊಂಡು ಬಂದಿದೆ. "ಮಠಗಳ ಆವರಣದಲ್ಲಿ ಹರಡಿಕೊಂಡಿರುವ ರಥಬೀದಿ ಉಡುಪಿ ಮುಖ್ಯವಾಗಿ ಬ್ರಾಹ್ಮಣ ಜಗತ್ತು. ಮಂತ್ರಘೋಷ,

ಹರಿಸಂಕೀರ್ತನೆಗಳು, ಪೂಜೆ ಪುನಸ್ಕಾರ, ಉತ್ಸವ ಆರಾಧನೆಗಳ, ಘಂಟೆ ನಗಾರಿ ಸದ್ದುಗಳ, ದೈವ ಸಂಬಂಧಿ ವ್ಯಾಪಾರಿ ವಹಿವಾಟುಗಳ ಜಗತ್ತು" [೨೦] ಸಾಂಸ್ಕೃತಿಕ ಲೋಕಕ್ಕೇ ಉಡುಪಿ 'ಬ್ರಾಹ್ಮಣರ ಹೋಟೆಲ್' ಮೂಲಕವೇ ಪರಿಚಯಿಸಲ್ಪಟ್ಟಿರುವುದರಿಂದ ಇಂದಿಗೂ ದಲಿತರ ಹೋಟೆಲ್ ಎಂಬ ಪರ್ಯಾಯ ಪದವನ್ನು ಹುಟ್ಟಿಸಿಕೊಳ್ಳಲು ಸಾಧ್ಯವಾಗದೇ ಇರುವ ಜಾತಿಯ ಬಿಕ್ಕಟ್ಟಿನ ಸಂಕೇತವಾಗಿರುರುವುದು ಈ ಸಾಂಸ್ಕೃತಿಕ ರಾಜಕಾರಣದ ಸ್ವರೂಪವೇ ಆಗಿದೆ. ದಲಿತರಿಗೆ ಪ್ರವೇಶವಿಲ್ಲದ ಉಡುಪಿ ಶ್ರೀ ಕೃಷ್ಣನ ದರ್ಶನವನ್ನು ಗಾಂಧೀಜಿ ನಿರಾಕರಿಸಿರುವುದು ಕೂಡ ಮಠದ ಬ್ರಾಹ್ಮಣರ ಧೋರಣೆಯನ್ನು ವಿರೋಧಿಸಲು ಎನ್ನುವುದು ಈಗಾಗಲೇ ತಿಳಿದ ಸತ್ಯ. ಸ್ತ್ರೀ ಲಂಪಟತನ, ಹಾದರ, ಮದ, ಮತ್ಸರಗಳಿಗೆ ಮೊದಲಿನಿಂದಲೂ ಇಲ್ಲಿಯ ಮಠಾಧಿಪತಿಗಳು ಈಡಾಗಿರುವುದನ್ನು ಬೋಳಾರು ಬಾಬು ರಾಯರ 'ವಾಗ್ದೇವಿ' ಯಂತಹ ಕಾದಂಬರಿಗಳು ಸೂಚಿಸುತ್ತದೆ. ಸೂಳೆಗಾರಿಕೆಯನ್ನು ರಾಜಾರೋಷವಾಗಿ ನಡೆಸುವ ಇಲ್ಲಿನ ಕೆಲವು ಮಠಾಧಿಪತಿಗಳು ಅಕ್ರಮ ಸಂತಾನ ಪಡೆದ ಬಗ್ಗೆಯೂ ಇಲ್ಲಿಯ ಜನ ಮಾತಾಡಿಕೊಳ್ಳುತ್ತಾರೆ. ಸೂಳೆಯರ ದೊಡ್ಡ ಪರಂಪರೆ ಇರುವ ಈ ಧಾರ್ಮಿಕ ಕೇಂದ್ರವನ್ನು ಇನ್ನೊಂದು ಬಗೆಯಲ್ಲಿ ನೋಡಲು ಹೊರಟರೆ ಉಡುಪಿಯ ಇತಿಹಾಸ ಬೇರೆ ರೀತಿಯೇ ಕಾಣಬಹುದು. ಆಧುನೀಕರಣ ಹಾಗೂ ಭೂ ಮಂಡಲೀಕರಣಗಳು ಉಡುಪಿಯ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಚಹರೆಗಳನ್ನು ಹೊಸದಾಗಿ ನಿರ್ಮಿಸಿದೆ : ಪರಿಷ್ಕರಿಸಿದೆ ಹಾಗೂ ಬಾದಿಸಿದೆ. ಉಡುಪಿ ಮೂಲತಃ ಶೈವ ಸಂಪ್ರದಾಯವನ್ನು ಪ್ರತಿಪಾದಿಸುವ ಸ್ಥಳ. ಶಿವಳ್ಳಿ ಎನ್ನುವ ಹೆಸರು ಸುಮಾರು ೫-೬ ನೇ ಶತಮಾನದಿಂದಲೂ ಪ್ರಸಿದ್ಧಿ ಪಡೆದ ಈ ಗ್ರಾಮದಲ್ಲಿ ಕಾಡು ದಟ್ಟವಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಅದರ ಸೂಚಕವಾಗಿ ಒಳಕಾಡು, ಅಜ್ಜರಕಾಡು, ಕುಂಟಲಕಾಡು ಹೀಗೆ ಕರೆಯಲ್ಪಡುವ ಅನೇಕ ಸ್ಥಳಗಳು ದೊರೆಯುತ್ತವೆ. ಉಡುಪಿಯ ಶೈವಕ್ಷೇತ್ರವಾಗುವುದಕ್ಕೂ ಮೊದಲು ಜೈನರ ೮ನೇ ತೀರ್ಥಂಕರಾದ ಚಂದ್ರನಾಥ ಜಿನರ ಬಸದಿ ಮತ್ತು ೧೪ನೇಯ ತೀರ್ಥಂಕರ ಅನಂತನಾಥ ಜಿನರ ಸಮಾಧಿ ಸ್ಥಳವೆಂಬ ಅಭಿಪ್ರಾಯವೂ ಇದೆ. [೨೧]

ದಕ್ಷಿಣ ಭಾರತದ ಅನೇಕ ಜೈನ ಮಂದಿರಗಳನ್ನು ಶೈವಕ್ಷೇತ್ರಗಳಾಗಿ ಪರಿವರ್ತಿಸಿದ ಕೀರ್ತಿ ಸಿದ್ಧ ಸಂಪ್ರಾದಾಯದ ಸಿದ್ಧರಿಗೆ ದೊರೆಯುತ್ತದೆ. "ಅರೆಕಾಡಿನ ಈ ಕರಾವಳಿ ಪ್ರದೇಶ ಸಹಜವಾಗಿಯೇ ಪಶುಪಾಲಕರನ್ನು ಆಕರ್ಷಿಸಿತು. ಸಮುದ್ರದ ಬದಿಯಲ್ಲಿ ಬಿದ್ದಿರುವ ಪಶುಗಳನ್ನು ಕಾಯುವ ವೇಣುಗೋಪಾಲನ ವಿಗ್ರಹವು ದೊರೆತಿದ್ದು ಅದನ್ನು

೨೦. ಡಾ. ರಾಜಾರಾಮ ತೋಳ್ಪಾಡಿ: ಉಡುಪಿಯ ಕನಕ: ಕನಕನ ಉಡುಪಿ: ಕನಕನ ಸುತ್ತ ಮುತ್ತ: ಸಂಕಥನಗಳ ಜಿಜ್ಞಾಸೆ ಪುಟ-೧೯೯

೨೧. ಚಂದ್ರಕಾಂತ ಬಿಜ್ಜರಗಿ ದಾರ್ಶನಿಕ ಕವಿ ಕನಕದಾಸರು : ಪುಟ ೩೩೭

ತಂದು ಮಧ್ವ ಸರೋವರದ ಪಶ್ಚಿಮ ಭಾಗದಲ್ಲಿ ಪೂರ್ವಾಭಿಮುಖವಾಗಿ ಬಯಲಿನಲ್ಲಿ ಸ್ಥಾಪಿಸಲಾಯಿತು. ಈ ಬಯಲು ಆಲಯಕ್ಕೆ ಮೇಲ್ಛಾವಣಿ ಇರಲಿಲ್ಲ. ಅಲ್ಲಿಯ ದನಗಾಹಿಗಳೇ ಕೃಷ್ಣನನ್ನು ಪೂಜಿಸುತಿದ್ದರು. ಪೂಜೆಯ ನಂತರ ಕೃಷ್ಣನಿಗೆ ಪ್ರಿಯವಾದ 'ಗೋಪಾಲ ಕಾಲ' ನಡೆಯುತ್ತಿತ್ತು. 'ಗೋಪಾಲ ಕಾಲಾ' ಎಂದರೆ ದನಗಾಹಿಗಳು ತಮ್ಮ ತಮ್ಮ ಮನೆಗಳಿಂದ ತಂದ ಬುತ್ತಿಗಳನ್ನು ಕೃಷ್ಣನ ಮುಂದೆ ಗುಡ್ಡೆ ಹಾಕುವುದು ದೇವರಿಗೆ ಅರ್ಪಿಸಿ ಎಲ್ಲರೂ ತಮಗೆ ಇಷ್ಟಬಂದ ಪಲ್ಲ್ಯೆ, ರೊಟ್ಟಿ, ಗಂಜಿ, ಖಾದ್ಯ ಅನ್ನವನ್ನು ಅದು ನನ್ನದು-ತನ್ನದು ಎಂಬ ಭೇದ ಭಾವವಿಲ್ಲದೆ ಪ್ರಸಾದ ರೂಪದಲ್ಲಿ ಎಲ್ಲರೂ ಊಟಮಾಡುವುದು. ಈ ರೀತಿಯ ಗೋಪಾಲ ಕಾಲಾಪ್ರಸಾದ ಪದ್ಧತಿಯು ಎಲ್ಲ ಕೃಷ್ಣಮಂದಿರಗಳಲ್ಲಿ ಭಜನೆಯ ನಂತರ ನಡೆಯುತ್ತದೆ. ಇದರಲ್ಲಿ ಮಡಿ-ಮೈಲಿಗೆ, ಜಾತಿಯ ಭೇದ ಭಾವ, ಮೇಲರಿಮೆ-ಕೀಳರಿಮೆಗಳಿರುವುದಿಲ್ಲ. ವಿಚಿತ್ರವೆಂದರೆ ಇಂಥ ಮಹತ್ವದ ಪ್ರಸಾದ ಪದ್ಧತಿ ಉಡುಪಿಯ ಕೃಷ್ಣಮಂದಿರದಲ್ಲಿ ಇಂದು ನೋಡಲು ಸಿಗುವುದಿಲ್ಲ" ೨೨

ಮುಂದೆ ಮಧ್ವಾಚಾರ್ಯರು ಈ ಕ್ಷೇತ್ರವನ್ನು ತಮ್ಮ ಸಾಧನೆಯ ನೆಲೆಯಾಗಿಸಿಕೊಂಡು ವೈಷ್ಣವ ಮತ ನಿಷ್ಠೆ ಮೆರೆದರು. ಮಧ್ವಾಚಾರ್ಯರಿಂದ ಪೂಜಿಸಲ್ಪಟ್ಟ ಕೃಷ್ಣನೆಂಬ ಘನ ವಿಶೇಷಣ ದೊರೆತ ಮೇಲೆ ಕೃಷ್ಣನ ಕೀರ್ತಿ ಹೆಚ್ಚಾಯಿತು ಎಂಬ ವಾದವೊಂದರ ಮೂಲಕ ಉಡುಪಿಯ ಕೃಷ್ಣ ಚರಿತ್ರೆಯನ್ನು ಪುನರ್ ರಚಿಸಲು ತೊಡಗಲಾಗಿದೆ.

ಕ್ರಿ.ಶ ೧೪೩೦ರಲ್ಲಿ ಉಡುಪಿ ಕೃಷ್ಣನ ಉತ್ತರ ದಿಕ್ಕಿನ ಭಿತ್ತಿ ಶಾಸನವು ಹೇಳುವ ಹಾಗೆ 'ವಿಜಯನಗರ ಇಮ್ಮಡಿ ದೇವರಾಯನ ಕಾಲದಲ್ಲಿ ಅಣ್ಣಪ್ಪ ವೊಡೆಯರು ಬಾರಕೂರು ಪ್ರದೇಶದ ರಾಜ್ಯ ಪಾಲರಾಗಿದ್ದರು. ಆ ಸಂದರ್ಭದಲ್ಲಿ ಶ್ರೀ ಕೃಷ್ಣ ಮಂದಿರದ ಮೇಲೆ ದಾಳಿ ಮಾಡಿ, ಎರಡು ವರ್ಷಗಳವರೆಗೆ ಬೀಗ ಜಡಿದು ಅಲ್ಲಿಯ ಪೂಜೆ ಸ್ಥಗಿತಗೊಳಿಸಿದ್ದರು. ಐತಿಹಾಸಿಕವಾಗಿ ಇದೊಂದು ಮಹತ್ವದ ಘಟನೆ. ಆದರೆ ಯಾವ ಕಾರಣಕ್ಕಾಗಿ ಶ್ರೀ ಕೃಷ್ಣಮಂದಿರದ ಮೇಲೆ ದಾಳಿಯಾಗಿ ಅಲ್ಲಿಯ ಪೂಜೆ ನಿಂತಿತು ಎನ್ನುವುದರ ಬಗ್ಗೆ ಶಾಸನದಲ್ಲಿ ವಿವರ ದೊರೆಯುವುದಿಲ್ಲ. ಉಡುಪಿ ಶ್ರೀ ಕೃಷ್ಣನ ಉತ್ತರ ದಿಕ್ಕಿನ ಭಿತ್ತಿ ಶಾಸನ (SII Vol - VI No. 796. P. 296)

೧೦ .......................................................................................

೧೧ ಸುವಲ್ಲಿ ಅ ದೇವರಾಯಮಹಾರಾಯರು ಸಿಂಗಣದಣನಾ

೧೨ ಯಕರ ನಿರೂಪದಿಂದ ಬಾರಕೂರ ರಾಜ್ಯವನು ಅಣಂಪವೊ

೨೨. ಚಂದ್ರಕಾಂತ ಬಿಜ್ಜರಗಿ ದಾರ್ಶನಿಕ ಕವಿ ಕನಕದಾಸರು : ಪುಟ: ೩೪೪

೧೩ ಡೆಯರು ಪಾಲಿಸುತ್ತಿಹಾ ಕಾಲದಲ್ಲಿ ಸಿಂಗರಸರು ಬರಸಿಕೊ
೧೪ ಟ ಸಿಲಶಸನ ದ ಕ್ರಮವಂತೆಂದರೆ ॥ ಪ್ರಕು ಆನಂದ
೧೫ ಸ [೦] ತ್ಸರದಲ್ಲು ಅಣಂಪವೊಡೆಯರು ಶಿವಳಿಯ ಗ್ರಾ
೧೬ ಮಕ್ಕೆ ದಾಳಿಯ ಮಾಡಿ ನಾಡವಿ (ರಿ)ಂತವಾದ್ದಲ್ಲಿ ಬಾರ್ಕೂರ ಹ
೧೭ ತ್ತು ಕೇರಿಮೊದಲಾದ ಕಟ್ಟಳೆಯವರು ಕು[ಡಿ] ಶಿವಳ್ಳಿಯ ಗ್ರಾಮ
೧೮ ಮ ಸಂತ್ಯೆಸುವಲ್ಲಿ ಅಲ್ಲಿಯ ದೇವಾಸ್ತಾನದ ಅನ್ಯಮನ್ಯಂಗಳು
೧೯ ತಪ್ಪಿದಲ್ಲಿ ಉಡುಪಿನ ಶ್ರೀ ಕೃಷ್ಣದೇವರ ಪ್ರತಿಮಾಛಲನೆ ವಾದ್ದ
೨೦ ಲ್ಲಿ ಶ್ರೀ ಕೃಷ್ಣದೇವರಿಗೆ ಕಟ್ಟಳೆಯವರು ಅರಸಿಗೆ ಬಿಂನಾ
೨೧ ಹ ಮಾಡಿದಲ್ಲಿ ಅಂಣಪ್ಪವೊಡೆಯರ ನಿರೂಪದಿಂ ಸಿಂಗರಸ
೨೨ ವೊಡೆಯರು ಕೊಟುದು ಸಗುರಿಯ ಅಧಿವಾಸದೊಳಗೆ
೨೩ ..........................................................................

ಶಾಸನ ಭಾಗವು ಉಲ್ಲೇಖಿಸುವ ಹಾಗೆ 'ಶಿವಳ್ಳಿ ಗ್ರಾಮ ಸಂತ್ಯೆಸುವಲ್ಲಿ ಅಲ್ಲಿಯ ದೇವಸ್ಥಾನದ ಅನ್ಯಮನ್ಯಂಗಳು ತಪ್ಪಿದಲ್ಲಿ ಉಡುಪಿಯ ಶ್ರೀ ಕೃಷ್ಣದೇವರ ಪ್ರತಿಮಾಛಲನವಾದಲಿ,' ಎಂಬಲ್ಲಿ ಗೋಚರಿಸುವ ಸತ್ಯವೆನೆಂದರೆ ಶಿವಳ್ಳಿ ಗ್ರಾಮಸ್ಥರು ಹಾಗೂ ದೇವಸ್ಥಾನದ ಮಠಾಧೀಶರು, ಅರ್ಚಕರ ನಡುವೆ ನಡೆದ ಜಗಳ ತಾರಕಕ್ಕೇರಿದ ಕಾರಣದಿಂದಾಗಿ ರಾಜ್ಯಪಾಲರು ಮಧ್ಯೆ ಪ್ರವೇಶಿಸಬೇಕಾಗಿ ಬಂತು. ಈ ಜಗಳ ಯಾವುದಕ್ಕಾಗಿ ನಡೆದಿರಬಹುದು ಎಂದು ಊಹಿಸುವುದು ಕಷ್ಟ. ಕೆಲವರ ಅಭಿಪ್ರಾಯದ ಪ್ರಕಾರ ಅಲ್ಲಿಯ ಮೂಲ ವಿಗ್ರಹವನ್ನು ಬದಲಿಸಲು ಪ್ರಯತ್ನಿಸಿದ್ದರಿಂದ ಅರಸರು ದೇವಾಲಯದ ಮೇಲೆ ದಾಳಿ ಮಾಡಿ ಅಲ್ಲಿಯ ಪೂಜಾರಿಗಳನ್ನು ಬಂಧಿಸಿದ್ದರು ಇಲ್ಲವೆ ಹೊರಗಟ್ಟಿದ್ದರು. 'ಪ್ರತಿಮಾಛಲನೆ' ಎಂಬ ಪದ ಸೂಚಿಸುವ ಹಾಗೆ ಕೃಷ್ಣಮೂರ್ತಿಯೂ ಪೂಜೆಗೆ ಯೋಗ್ಯವಲ್ಲದ ಸ್ಥಿತಿ ತಲುಪಿತ್ತು ಎಂದು ತಿಳಿಯಬಹುದಾಗಿದೆ. ಚಂದ್ರಕಾಂತ ಬಿಜ್ಜರಗಿಯವರು ಗುರುತಿಸುವ ಹಾಗೆ ಮಂದಿರದ ಮೇಲೆ ನಡೆದ ದಾಳಿ ಮತ್ತು ಮಂದಿರದ ಪೂಜಾರಿಗಳು ಕೆಲಸವಿಲ್ಲದೆ ಬೀದಿಗೆ ಬಿದ್ದ ಚರಿತ್ರೆ ಶಾಸನೋಕ್ತವಾಗಿದ್ದರೂ ಉಡುಪಿ ಚರಿತ್ರೆಯಲ್ಲಿ ಅದು ಲುಪ್ತವಾದ ಸಂಗತಿಯನ್ನು ಗಮನಿಸಿದರೆ ಇದರ ಹಿಂದೆ ಬೇರೆಯದೆ ಆದ ರಾಜಕಾರಣವಿರುವುದು ಸ್ಪಷ್ಟವಾಗುತ್ತದೆ.

'ಪ್ರತಿಮಾ ಛಲನೆ'ಯ ಶಾಸನೋಕ್ತ ಘಟನೆಯ ಹಿನ್ನೆಲೆಯನ್ನು ಗಮನಿಸಿ ಕನಕ–ಉಡುಪಿ ಸಂಬಂಧದ ನೆಲೆಗಳನ್ನು ಇನ್ನೊಂದು ಬಗೆಯಲ್ಲಿ ಯೋಚಿಸಲು ಸಾಧ್ಯವಿದೆ. ವಾದಿರಾಜರು ಕನಕದಾಸರು ಈ ಕ್ಷೇತ್ರವನ್ನು ಪ್ರವೇಶಿಸುವುದಕ್ಕೆ ಪೂರ್ವದಲ್ಲಿ ನಡೆದ ಈ ಘಟನೆಯು ಆ ಕಾಲದ ಧಾರ್ಮಿಕ ಸಂಘರ್ಷದ ಕಥನವಾಗಿಯು

ಕಾಣಬಹುದು. ಉಡುಪಿ ಕೃಷ್ಣನ ಚರಿತ್ರೆಗೆ ಕಳಂಕ ಪ್ರಾಯವಾದ ಈ ಘಟನೆಯನ್ನು ತೆರೆಗೆ ಸರಿಸುವ ಹುನ್ನಾರವಾಗಿ ಕನಕ ಚರಿತ್ರೆಗೆ ತಳುಕು ಹಾಕುವುದರ ಮೂಲಕ ಒಟ್ಟು ಪ್ರಕರಣದ ಗಮನವನ್ನು ಬೇರೆಡೆಗೆ ತಿರುಗಿಸಿ ಕೃಷ್ಣ ಚರಿತ್ರೆಯನ್ನು ಹೊಸತಾಗಿ ಕಟ್ಟಲು ಕನಕನನ್ನು ಬಳಸಿಕೊಂಡಂತೆ ತೋರುತ್ತದೆ. ಶಿವಳ್ಳಿ ಗ್ರಾಮದ ಗ್ರಾಮಸ್ಥರು ಹಾಗೂ ಅರ್ಚಕರ ನಡುವಿನ ಜಗಳದ ಹಿಂದೆ ಸೂಕ್ಷ್ಮವಾದ ಜಾತಿ ರಾಜಕಾರಣವಿರಬಹುದಾದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಅಲ್ಲದೆ ಉಡುಪಿ ಒಂದು ಕಾಲದಲ್ಲಿ ಜೈನಧಾರ್ಮಿಕ ನೆಲೆ ಆಗಿತ್ತು ಎಂದು ವಿದ್ವಾಂಸರು ಗುರುತಿಸುವುದನ್ನು ನೋಡಿದರೆ ಇದರ ಹಿಂದಿನ ಧಾರ್ಮಿಕ ಸಂಘರ್ಷದ ಸ್ವರೂಪ ಸ್ಪಷ್ಟವಾಗುತ್ತದೆ. ಈ ಸಂಘರ್ಷ ರೂಪು ತಳೆಯುವುದಕ್ಕಿರುವ ಎರಡು ಮುಖ್ಯ ಸಾಧ್ಯತೆಗಳು – ಒಂದು ಅದು ಜೈನ – ಬ್ರಾಹ್ಮಣ ಧರ್ಮೀಯರ ನಡುವಿನ ತಿಕ್ಕಾಟ. ಎರಡು ಶೂದ್ರ – ದಲಿತ ವರ್ಗಗಳ ನಡುವೆ ನಡೆದ ಹೋರಾಟ. ಎರಡಕ್ಕೂ ಕೇಂದ್ರ ಕೃಷ್ಣ ಮಠದ ಪೂಜಾರಿಗಳು. ಸ್ಪೃಶ್ಯ–ಅಸ್ಪೃಶ್ಯ ಶ್ರೇಷ್ಠ–ಕನಿಷ್ಠ ಎಂಬ ಮಾನವ ಶ್ರೇಣೀಕರಣ ವಿರುದ್ಧ ದನಿ ಎತ್ತಿದ ಕನಕದಾಸರ ಮೂಲಕ ವಾದಿರಾಜರು ಒಟ್ಟು ಸಂಘರ್ಷಕ್ಕೆ ತಣ್ಣನೆಯ ಪ್ರತಿಭಟನೆ ಹೂಡಿದಂತೆ ತೋರುತ್ತದೆ. ವಾದಿರಾಜರು ಬರುವ ಹೊತ್ತಿಗೆ ಮಠದ ಆರ್ಥಿಕ ವ್ಯವಸ್ಥೆ ಸುಧಾರಣೆ ಹೊಂದಿತ್ತು. ಮಠದ ಆದಾಯಕ್ಕೆ ಹಲವು ಗದ್ದೆಗಳನ್ನು ದೇವಾಲಯಕ್ಕೆ ಉಂಬಳಿಯಾಗಿ ನೀಡಲಾಗಿತ್ತು. ಇನ್ನೂ ಸುಸಜ್ಜಿತವಲ್ಲದ ದೇವಾಲಯವನ್ನು ತನ್ನ ಸುಪರ್ದಿಗೆ ತೆಗೆದುಕೊಂಡ ವಾದಿರಾಜರು ಆ ಪರಿಸರದಲ್ಲಿ ಮಾಡಿದ ಜಾತಿ ನೆಲೆಯ ಸಾಮಾಜಿಕ ಸುಧಾರಣೆಗೆ ಇಂತಹ ಅನೇಕ ಘಟನೆಗಳಿಗೆ ಸಾಕ್ಷಿಯಾಗಿದ್ದವು. ಒಟ್ಟು ಶೂದ್ರರ ಪ್ರತಿನಿಧಿಯಾಗಿ ಕಾಣಿಸಿಕೊಂಡ ಕನಕನನ್ನು ಉದಾತ್ತವಾಗಿ ನಡೆಸಿಕೊಳ್ಳುವುದು ವಾದಿರಾಜರಿಗೆ ಅನಿವಾರ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಕನಕನನ್ನು ಬೇಲೂರಿನಿಂದ ಉಡುಪಿಗೆ ಕರೆದುಕೊಂಡು ಬಂದ ವಾದಿರಾಜರ ಉದ್ದೇಶ ಹೆಚ್ಚು ಸಾಮಾಜಿಕವಾದುದು. ಒಟ್ಟು ಎರಡು ಬಾರಿ ಕನಕದಾಸರು ಉಡುಪಿಗೆ ಬಂದರೆಂಬ ವಿವರಗಳು ದೊರೆಯುತ್ತವೆ. ಅಲೆಮಾರಿಗಳಾದ ಕನಕದಾಸರು ತಮ್ಮ ಜೀವಿತ ಕಾಲದಲ್ಲಿ ಅತ್ಯಂತ ಹೆಚ್ಚು ಪ್ರಚಾರದಲ್ಲಿದ್ದ ತಿರುಪತಿ, ಪಂಡರಾಪುರ, ಶ್ರೀಶೈಲ, ಮೊದಲಾದ ಕಡೆ ಸಂಚರಿಸಿದ್ದಾರೆ. ಈ ಯಾವ ದೇವಸ್ಥಾನದಲ್ಲಿಯೂ ಬ್ರಾಹ್ಮಣ್ಯೇತರರ ಪ್ರವೇಶ ನಿರ್ಬಂಧ ಇದ್ದಂತಿಲ್ಲ. ಉಡುಪಿಯಲ್ಲಿ ಮಾತ್ರ ಇತ್ತೆ? ಎನ್ನುವುದು ಸಂದೇಹಾಸ್ಪದ ವಿಚಾರ. ಕೃಷ್ಣ ತಿರುಗಿದ ಕನಕನ ಕಿಂಡಿ ಎಂಬ ಕಥೆಯೇ ಸುಳ್ಳು ಎಂದು ವಾದಿಸುವುದಕ್ಕಿರುವ ಇನ್ನೊಂದು ಪ್ರಬಲ ಆಧಾರವೆಂದರೆ ಶ್ರೀ ಕೃಷ್ಣನ ಶಿಲಾಮಯ ಮಂದಿರ ನಿರ್ಮಾಣವಾದ ಕಾಲ ೧೬೧೩ ಅದರ ಕಳಸಾರೋಹಣ ನಡೆದದ್ದು ೧೬೧೪.[೨೩] ಉಡುಪಿ ಶ್ರೀಕೃಷ್ಣ ಮಂದಿರದ ಹೊರಭಿತ್ತಿಯಲ್ಲಿರುವ

೧-೧-೧೬೧೪ರ ಶಾಸನದ ಪಾಠವು ಉಲ್ಲೇಖಿಸುವ ಹಾಗೆ ಶ್ರೀವಾದಿರಾಜರ 'ಕರಕಮಲ ಸಂಜಾತರಾದ ಶ್ರೀ ಮದ್ವೇದ ವೇದ್ಯ ತೀರ್ಥ ಶ್ರೀಪಾದಂಗಳವರು ತಮ್ಮ ಪೂಜಾ ಪರ್ಯಾಯದಲ್ಲಿ "ಉಡುಪಿಯ ಶ್ರೀಕೃಷ್ಣ ದೇವರ ಮಠಊ ಮೊದಲೆ ಮರಗೆಲಸವಾಗಿ ಯಿರಲಾಗಿ ಶ್ರೀಕೃಷ್ಣ ದೇವರನೂ ಹೊರ ಮಂಟಪಕ್ಕೆ ಬಿಜೆ ಮಾಡಿಸಿ ಅಲ್ಲಿಯೂ ದೇವರ ಪೂಜೆಯನು ಸಾಂಗವಾಗಿ ನಡೆಸುತ್ತಲೆ ದೇವರ ಗರ್ಭಾಗಾರಮುಂದಣ ಮಠವನೂ ಶಿಲಾಮಯ ಮಾಡಿಸಿ..................." ಎಂಬ ವಿವರಗಳೊಂದಿಗೆ ಮುಂದುವರಿಯುತ್ತದೆ. ಕೆಳದಿ ವೆಂಕಟಪ್ಪ ನಾಯಕ ತುಳು ಮತ್ತು ಮಲೆ ರಾಜ್ಯವನ್ನು ಆಳುವ ಸಂದರ್ಭದಲ್ಲಿ ಹಾಕಿದ ಶಾಸನ ಈ ಶಾಸನದ ಕಾಲಕ್ಕಾಗಲೇ ವಾದಿರಾಜರಾಗಲಿ, ಪುರಂದರದಾಸರಾಗಲಿ, ಕನಕದಾಸರಾಗಲಿ ಜೀವಂತವಾಗಿರಲಿಲ್ಲ ಎನ್ನುವುದು ಗಮನಾರ್ಹ ಅಂಶ. ವಾದಿರಾಜರು ಕಾಲವಾದ ೧೪ ವರ್ಷಗಳ ನಂತರ ಅವರ ಶಿಷ್ಯರಾದ ವೇದ ವೇದ್ಯ ತೀರ್ಥರು ಪರ್ಯಾಯ ಪೂಜೆ ಪ್ರಾರಂಭಿಸಿದರು ಎಂದರೆ ಅಲ್ಲಿಯ ವರೆಗೂ ಶ್ರೀಕೃಷ್ಣ ದೇವಾಲಯವು ಶಿಲಾಮಯವಾಗಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಜೊತೆಗೆ ಕನಕದಾಸರು ಉಡುಪಿಗೆ ಬಂದ ಕಾಲ ಸರಿಸುಮಾರು ೧೫೪೮-೪೯ ರಲ್ಲಿ ಎಂದು ಅಂದಾಜಿಸಲಾಗಿದೆ. ಕನಕ ಉಡುಪಿಗೆ ಬರುವಾಗ ಉಡುಪಿಯಲ್ಲಿ ಶಿಲಾಮಯ ಮಂದಿರವಿರಲಿಲ್ಲ. ಹುಲ್ಲು ಬಿದಿರಿನ ಚಪ್ಪರ ಮಾತ್ರವಿತ್ತು ಎಂಬುದು ಸ್ಥಳಿಯರ ಅಭಿಪ್ರಾಯ. ಅಲ್ಲದೆ ಇದಕ್ಕೆ ಪೂರಕವಾದ ಇನ್ನೊಂದು ವಿಚಾರವೆಂದರೆ ಕನಕದಾಸರು ತಮ್ಮ ಕಾವ್ಯ ಸಾಹಿತ್ಯದಲ್ಲಿ ಕನಕನ ಕಿಂಡಿಯನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಅವರು ತಮಗಾದ ಅವಮಾನವನ್ನಾಗಲಿ, ಕೃಷ್ಣ ಮೆರೆದ ಪವಾಡವನ್ನಾಗಲಿ ಎಲ್ಲಿಯೂ ಉಲ್ಲೇಖಿಸಿಲ್ಲ. ಕೃಷ್ಣ ಮೆರೆದ ಪವಾಡಗಳೆಲ್ಲ ಪುರಾಣೋಕ್ತವಾದವುಗಳೇ. ಅದನ್ನು ಹೊರತುಪಡಿಸಿ ತಮ್ಮ ಬದುಕಿಗೆ ಸಂಬಂಧಿಸಿ ಕೃಷ್ಣ ಕೃಪೆಯ ಉಲ್ಲೇಖಗಳು ಬೇರೆ ಬೇರೆ ಸಂದರ್ಭದಲ್ಲಿ ಬರುತ್ತದೆ. ಆದರೆ ಇಲ್ಲಿ ಎಲ್ಲಿಯೂ ಕೃಷ್ಣ ತಿರುಗಿದ ಘಟನೆ ದೊರೆಯುವುದಿಲ್ಲ. ಭಕ್ತ ಕನಕದಾಸ ಚಲನಚಿತ್ರದಲ್ಲಿ ತೋರಿಸುವಂತೆ 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ' [೨೪] ಕೀರ್ತನೆಗೂ ಈ ಘಟನೆಗೂ ಯಾವ

---

೨೩. ಚಂದ್ರಕಾಂತ ಬಿಜ್ಜರಗಿ-ದಾರ್ಶನಿಕ ಕವಿ ಕನಕದಾಸ, ಪುಟ-೩೫೮

೨೪. 'ಬಾಗಿಲನು ತೆರೆದು' ಕೀರ್ತನೆಗೆ ಟಿಪ್ಪಣಿ ಬರೆಯುತ್ತಾ ಪ್ರೊ.ಸುಧಾಕರರು, 'ಉಡುಪಿಯ ಕೃಷ್ಣನ ದರ್ಶನಕ್ಕೆ ಮಡಿವಂತರು ಅವಕಾಶ ನೀಡದೆ ಬಾಗಿಲು ಮುಚ್ಚಿದಾಗ, ಕನಕದಾಸರು ಮಡಿವಂತರಲ್ಲದ ಮಡಿವಂತರೊಡನೆ ವಾದ ಮಾಡುವುದು ಮೂರ್ಖತನವೆಂದು ಭಾವಿಸಿಯೋ ಏನೋ ದೇವರೊಡನೆ ವಾದ ಮಾಡುತ್ತಾರೆ. ನೀನೇ ಬಾಗಿಲು ತೆರೆದು ಸೇವೆಗೆ ಅವಕಾಶ ಮಾಡಿ ಕೊಡು ಎಂದು ಹಲವು ದೃಷ್ಟಾಂತಗಳನ್ನು ಅವನಿಗೆ ನೀಡಿದ್ದಾರೆ' ಎಂದು ಬರೆದಿದ್ದಾರೆ.

ಸಂಬಂಧವೂ ತೋರುವುದಿಲ್ಲ. ಆದರೆ ಈ ಕೀರ್ತನೆ ಉಡುಪಿಯಲ್ಲೇ ರಚಿಸಿದ್ದಲ್ಲ ಎಂದು ಹೇಳುವುದಕ್ಕೇ ಇರುವ ಆಧಾರ ಕೀರ್ತನೆಯ ಕೊನೆಯಲ್ಲಿ ಬಳಕೆಯಾದ ಅಂಕಿತ 'ಕಾಗಿನೆಲೆಯಾದಿ ಕೇಶವ'. ಈ ಕೀರ್ತನೆ ಉಡುಪಿಯ ಘಟನೆಯ ಯಾವ ಚರಿತ್ರೆಯನ್ನು ಕಟ್ಟಿ ಕೊಡುವುದಿಲ್ಲ. ಬದಲಿಗೆ ಈ ಸಮಾಜದಲ್ಲಿ ಅವಜ್ಞೆಗೆ ಒಳಗಾದ ದೀನರು, ದುರ್ಬಲರ ಪರವಾಗಿ ಮಾತ್ರ ಮಾತಾಡುತ್ತದೆ.ಪಟ್ಟಭದ್ರ ಹಿತಾಸಕ್ತಿಗಳು ರೂಪಿಸಿರುವ ಬಾಗಿಲು ಬಯಲಾಗಬೇಕೆಂಬ ಆಶಯ ಕೀರ್ತನೆಯಲ್ಲಿದೆ. ಇಲ್ಲಿ ಬಾಗಿಲೊಂದು ರೂಪಕವಾಗಿ ಬಳಕೆಯಾಗುತ್ತದೆ. ಎಲ್ಲಾ ಕಾಲದ ಸಾಮಾಜಿಕ ತಲ್ಲಣದ ಧ್ವನಿಯಾಗಿಯೂ ಕೀರ್ತನೆ ಸಮಕಾಲೀನಗೊಳ್ಳುತ್ತದೆ. ಪ್ರಾಣಿ, ಶಿಶು, ಮತ್ತು ಹೆಣ್ಣು ಈ ಮೂರು ಆತಂಕಿತ ಜೀವಗಳು. ನಿರಂತರ ಆಕ್ರಮಣಕ್ಕೇ ಒಳಗಾಗುತಿರುವ ಈ ಜೀವಗಳಿಗೆ ರಕ್ಷಣೆಯ ಅಗತ್ಯವಿದೆ, ಎಂದು ಹೇಳುವ ಮೂಲಕ ಜೀವಸಂವೇದನೆಯ ಹೊಸ ವ್ಯಾಖ್ಯಾನವೊಂದನ್ನು ಕೀರ್ತನೆ ಒಳಗೊಂಡಿದೆ. 'ಕರಿರಾಜ ಕಷ್ಟದಲಿ ಆದಿ ಮೂಲಾ ಎಂದು ಕರೆಯಲಾಕ್ಷಣ ಬಂದು ಒದಗಿದೆಯೋ ನರಹರಿಯೆ'- ಎಂಬ ಮೊದಲ ಚರಣದಲ್ಲಿ ಪ್ರಾಣಿವರ್ಗದ ಬಗೆಗಿನ ಆತಂಕ ಎದ್ದು ಕಾಣುತ್ತದೆ. ಅಲಕ್ಷಿತ ಜೀವ ಸರಪಳಿಯನ್ನು ಕಾಯ್ದುಕೊಳ್ಳುವ ಪರಿಸರ ಪ್ರೇಮವೂ ಈ ಕೀರ್ತನೆಯ ಭಾಗ. ಮೊಸಳೆ ರೂಪಿ ನಗರೀಕರಣ ಪ್ರಾಕೃತಿಕ ಸಂಪತ್ತನ್ನು ನಿಧಾನವಾಗಿ ನುಂಗಿ ಹಾಕುತ್ತಾ ತನ್ನ ಕಬಂಧ ಬಾಹು ಚಾಚುತ್ತ ಮುನ್ನುಗ್ಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಕಾಡು-ನಾಡಿನ ರಕ್ಷಣೆಯಾಗಬೇಕಾದ ಅನಿರ್ವಾಯತೆಯೆಡೆಗೆ ಕೀರ್ತನೆ ಬೆರಳು ಮಾಡುತ್ತದೆ.

ಎರಡನೆ ಚರಣದಲ್ಲಿ ಶಿಶು ಸಂವೇದನೆ ಎದ್ದು ಕಾಣುವ ಅಂಶ.

ಕಡುಕೋಪದಿಂ ಖಳನು ಖಡುಗವನು ಕೈಪಿಡಿದು ನಿ
ನ್ನೊಡೆಯನೆಲ್ಲಿಹನೆಂದು ಜಡಿದು ನುಡಿಯೆ
ದೃಢ ಭಕುತಿಯಲಿ ಶಿಶುವು ಬಿಡದೆ ನಿನ್ನನು ಭಜಿಸೆ
ಸಡಗರದಿ ಸ್ತಂಭಂದಿದೊಡೆದೆ ನರಹರಿಯೆ ॥

ಮಕ್ಕಳು ಮತ್ತು ಹೆಣ್ಣು ಸಮಾಜದಲ್ಲಿ ಅವಜ್ಞೆಗೆ ಒಳಗಾಗಿವೆ. ಇವರನ್ನು ರಕ್ಷಿಸಬೇಕಾದುದು ಅವರ ಭಾವನೆಗಳನ್ನು ಗೌರವಿಸಬೇಕಾದುದು ಪ್ರಭುತ್ವ ಮಾಡಬೇಕಾದ ಕೆಲಸ. ಇವರ ಮೇಲೆ ನಿರಂತರ ಅನ್ಯಾಯಗಳು ನಡೆಯುತ್ತಿದ್ದರೂ ಮೂಕವಾಗಿರುವ ಸಮಾಜವನ್ನು ಎಚ್ಚರಿಸುವ ಕೆಲಸವಾಗಬೇಕಾದುದು ಅಗತ್ಯ. ಸ್ತ್ರೀಯರ ಮೇಲಿನ ಅತ್ಯಾಚಾರ, ದೌರ್ಜನ್ಯವನ್ನು ಖಂಡಿಸುವ ಸ್ತ್ರೀ ಸಂವೇದನೆಯ ನೆಲೆಯಲ್ಲಿಯೂ ಕೀರ್ತನೆ ಅಲಕ್ಷಿತ ವರ್ಗದ ಪರವಾದ ಕಾಳಜಿ ತೋರುವ ಮೂಲಕ ಚರಿತ್ರೆಯ ಪುನಾರಚನೆಯ ಅಭಿಲಾಷೆಯನ್ನು ವ್ಯಕ್ತಪಡಿಸುತ್ತದೆ. "ಯಮಸುತನ

ರಾಣಿಗಕ್ಷಯವಸನವನಿತ್ತೆ" ಎನ್ನುವ ಮೂರನೆಯ ಚರಣದಲ್ಲಿ ಹೆಣ್ಣು ಅನುಭವಿಸಿದ ಅವಮಾನವನ್ನು ದ್ರೌಪದಿಯ ಪ್ರತಿನಿಧೀಕರಣದ ಮೂಲಕ ನಿರೂಪಣೆಗೊಳ್ಳುತ್ತದೆ.

ಕನಕನ ಕಿಂಡಿಗೆ ಸಂಬಂಧಿಸಿದ ಇನ್ನೊಂದು ಪಠ್ಯ 'ಏಕೆ ನಡುಗಿದೆ ತಾಯೆ ಭೂಮಿ' ಎಂಬ ಕೀರ್ತನೆ. ಕನಕದಾಸರು ಉಡುಪಿಯಲ್ಲಿದ್ದಾಗ ಭೂಕಂಪವಾಯಿತೆಂದೂ ಅದರಿಂದ ಕೃಷ್ಣ ಮಠದ ಪಶ್ಚಿಮ ಗೋಡೆಯಲ್ಲಿ ಬಿರುಕು ಬಿಟ್ಟಿತೆಂದೂ ಆ ಬಿರುಕು ತೆಗೆದು ಶ್ರೀವಾದಿರಾಜ ಯತಿಗಳು ಕನಕನ ಕಿಂಡಿ ನಿರ್ಮಿಸಿದರೆಂದೂ ಐತಿಹ್ಯವಿದೆ. 'ಭೂಂಕಪವನ್ನು ವಸ್ತು ವಾಗಿಸಿಕೊಂಡು ರಚಿತವಾದ ಮೊಟ್ಟ ಮೊದಲ ಕೀರ್ತನೆ ಇದು'. ಬನ್ನಂಜೆ ಗೋವಿಂದಚಾರ್ಯರು ತಮ್ಮ 'ಕನಕೋಪನಿಷತ್ತು' ಕೃತಿಯಲ್ಲಿ *"ಉಡುಪಿ ಮಠಗಳ ತಾಡವಾಲೆಯನ್ನು ಶೋಧಿಸುವಾಗ ನನಗೊಂದು ಅಪೂರ್ವವಾದ ಸಂಗತಿ ತಿಳಿಯಿತು. ಹಳೆಯ ಕಡತಗಳನ್ನು ಅಭ್ಯಸಿಸಿದ ಹಿರಿಯರೊಬ್ಬರ ಪರಿಚಯವಾಯಿತು. ಅವರು ಒಂದು ಹಳೆಯ ತಾಡವಾಲೆಯನ್ನು ಶೋಧಿಸಿದ್ದರು. ಅದರಲ್ಲಿ ಹೀಗೊಂದು ಒಕ್ಕಣೆ ಇತ್ತು. ಕನಕದಾಸರು ಉಡುಪಿಯಲ್ಲಿದ್ದಾಗ ಚಿಕ್ಕದೊಂದು ಭೂಕಂಪವಾಯಿತು. ಆ ಭೂಕಂಪಕ್ಕೆ ಕೃಷ್ಣನ ಎದುರುಗಡೆಯ ಚಂದ್ರ ಶಾಲೆ ಗೋಡೆ ಬಿರುಕು ಬಿಟ್ಟಿತ್ತು. ಅದರ ಎದರುಗಡೆಯೆ ಕನಕದಾಸರ ಗುಡಿಸಲಿತ್ತು. ಆ ಗೋಡೆ ಕಿಂಡಿಯ* ಮೂಲಕ ಕೃಷ್ಣ ಕನಕದಾಸರಿಗೆ ದರ್ಶನವಿತ್ತ. ಇದರ ನೆನಪಿಗಾಗಿ ವಾದಿರಾಜರು ಆ ಬಿರುಕು ಬಿಟ್ಟ ಜಾಗದಲ್ಲಿ ಶಾಶ್ವತವಾಗಿ ಕಿಟಕಿಯನ್ನು ರಚಿಸಿದರು ಮತ್ತು ಅದಕ್ಕೆ ಕನಕನ ಕಿಂಡಿ ಎಂದು ಹೆಸರಿಟ್ಟರು. ಇತಿಹಾಸಕ್ಕೇ ಒಂದು ಹೊಸ ಬೆಳಕು. ನನಗೆ ಹಿರಿಯರಿಂದ ಈ ಸಂಗತಿ ತಿಳಿದಾಗ ಕೊಪ್ಪರಿಗೆ ಸಿಕ್ಕಷ್ಟು ಖುಷಿಯಾಯಿತು. ಕನಕದಾಸರ ಜೀವನದ ಒಂದು ಅಪೂರ್ವ ಸಂಗತಿಗೆ ದಾಖಲೆ ಸಿಕ್ಕಿತು" ಎಂದು ಉಲ್ಲೇಖಿಸಿದ್ದಾರೆ.[೨೫] ಕನಕನಿಗೆ ಕೃಷ್ಣ ತಿರುಗಿದ ಕಥೆ ಸುಳ್ಳು ಎಂಬುವುದನ್ನು ಪ್ರತಿಪಾದಿಸುವುದಕ್ಕಾಗಿ ತಾಡವಾಲೆಯ ಉಲ್ಲೇಖಿತ ವಿಷಯದ ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ 'ಏಕೆ ನಡುಗಿದೆ ತಾಯಿ ಭೂಮಿ ನಡು ರಾತ್ರಿಯೊಳು' ಕೀರ್ತನೆಗೂ ಈ ಭೂಕಂಪಕ್ಕೂ ಏನಾದರು ಸಂಬಂಧವಿದೆಯೆ? ಎಂಬ ಚರ್ಚೆಯನ್ನು ಕೈಗೆತ್ತಿಕೊಂಡಿದ್ದಾರೆ. ಈ ಕೀರ್ತನೆಯಲ್ಲಿ ಬರುವ 'ಗುರುವೆ ಕೇಳಯ್ಯ' ಎಂಬ ಸಾಲು ವಾದಿರಾಜರ ಜೊತೆಗಿನ ಸಲುಗೆಯಿಂದ ಏಕವಚನದಲ್ಲಿ ಅವರನ್ನು ಸಂಬೋಧಿಸಿದ್ದರಿಂದ ಇದು ಉಡುಪಿಯಲ್ಲೇ ರಚಿತವಾಗಿರಬೇಕು ಇಲ್ಲವೆ ವಾದಿರಾಜರ ಜೊತೆ ತಿರುಪತಿಗೆ ಹೋಗಿ ಅಲ್ಲಿ ಉಡುಪಿಯ ಈ ಘಟನೆಯನ್ನು ನೆನಪಿಸಿ ಕೊಂಡಿರಬೇಕೆಂದೂ ಊಹಿಸಿದ್ದಾರೆ. ಈ ಕೀರ್ತನೆಯ ಕೊನೆಯ ಚರಣ ಬಹಳ ಮಹತ್ವದೆಂದು ಅಲ್ಲಿ ಭೂಕಂಪಕ್ಕೆ ತಾನೇ ಕಾರಣವಾದನೇ ಎಂಬ ಪರಿಹಾಸದ ನುಡಿಯನ್ನು ಕನಕದಾಸರು ಹೇಳಿದ್ದಾರೆ ಎಂಬ ಬನ್ನಂಜೆಯವರು ತಮ್ಮ ಅಭಿಪ್ರಾಯ ಮುಂದುವರಿಸುತ್ತ,

ಧರೆಯೊಳಗೆ ಕರ್ಮಿಗಳು ಹೆಚ್ಚಿ ಕವಿತ್ವವ ಕಲಿತು
ನರಕುರಿಗಳೆಲ್ಲರೂ ನಡೆಗೆಟ್ಟರೆಂದು।
ಗುರುವೆ ಕೇಳಯ್ಯ ಕನಕಪ್ರಿಯ ತಿರುಪತಿಯ
ಗಿರಿಯಾದಿಕೇಶವನೆ ಒಲಿದು ನಿಲ್ಲಿಸಿದ ॥ (ಏಕೆ ನಡುಗಿದೆ ತಾಯಿ ಭೂಮಿ)

ಕರ್ಮಿಗಳು ಎಂದರೆ ವೈದಿಕ ಕರ್ಮಗಳನ್ನು ಆಚರಣೆ ಮಾಡುವವರು ಅನುಷ್ಠಾನವಂತರು. ಹಿಂದೆ ಕೆಲವರು ಹಾರುವರು ಮಾತ್ರ ಕರ್ಮಿಗಳಾಗಿದ್ದರು. ಈಗ ಕರ್ಮಿಗಳ ಸಂಖ್ಯೆ ಹೆಚ್ಚಿ ಬಿಟ್ಟಿದೆ. ಕಲಿಗಾಲ ಕುರಿಕಾಯುವ ನರಕುರಿಗಳೂ ಕರ್ಮಿಗಳಾಗಿ ಬಿಟ್ಟಿದ್ದಾರೆ. ಜತೆಗೆ ಕವಿತ್ವವನ್ನೂ ಕಲಿತು ಹಾಡು ಹೊಸೆಯ ತೊಡಗಿದ್ದಾರೆ. ಹೀಗೆ ಮಂದಿ ನಡೆಗೆಟ್ಟರೆಂದು ನಡುಗಿದೆಯಾ ತಾಯಿ? ಇದು ತನ್ನನ್ನೇ ಕುರಿತು ಕನಕದಾಸರ ಪರಿಹಾಸ. ಅವರ ಕುಲ ಬಾಂಧವರು ಮತ್ತು ಮಡಿವಂತರು ಅವರ ಬಗೆಗೆ ಆಡುತ್ತಿದ್ದ ಮಾತನ್ನು ಅವರೇ ಆಡಿಕೊಂಡು ನಗುತ್ತಾರೆ. ಊರ ಮಂದಿಗೆ ಇಷ್ಟವಾಗದ ತನ್ನ ನಡೆ ಪೊಡೆವಿಗೊಡೆಯಗೆ ಇಷ್ಟವಾಯಿತು, ಪೊಡೆವಿಗೊಡೆಯನ ರಾಣಿಗೆ ಇಷ್ಟವಾಯಿತು. ಅದಕ್ಕೆಂದೆ ಅವಳು ನಡುಗಿದಳು. ನಡುಗಿ ಕೃಷ್ಣನ ದರ್ಶನ ಮಾಡಿಸಿದಳು. ಇದು ಸೊಲ್ಲಿನ ಒಳ ಧ್ವನಿ. ಈ ದೃಷ್ಟಿಯಿಂದ ಈ ಹಾಡು ಐತಿಹಾಸಿಕವಾಗಿ ತುಂಬ ಮಹತ್ವದ್ದಾಗುತ್ತದೆ. ಇದನ್ನು ಈ ತನಕ ಯಾರು ಗಮನಿಸದೆ ಇದ್ದದ್ದು ನಿಜಕ್ಕೂ ವಿಸ್ಮಯಕಾರಕ" [೨೬] ಎಂದು ಬರೆದಿದ್ದಾರೆ.

ಈ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಕನಕದಾಸರು ತನ್ನನ್ನೇ ತಾನು ಮಾಡಿಕೊಂಡ ಪರಿಹಾಸದ ಹಿಂದೆ ಸೂಕ್ಷ್ಮವಾದ ಸಾಮಾಜಿಕ ವಿಡಂಬನೆಯಿದೆ. ಸಮಾಜವು ಕಾಲಗತಿಯಲ್ಲಿ ಪಡೆದ ಜನಮುಖಿ ಸ್ಥಿತ್ಯಂತರದ ನಿರೂಪಣೆಗಳಿವೆ. ಕನಕದಾಸರು ಉಡುಪಿಯ ಭೂಕಂಪವನ್ನು ನೆನೆದು ಬರೆದಿದ್ದಾರೆಂದು ಹೇಳಲಾಗದಿದ್ದರೂ ಉಡುಪಿಯ ಜಾತಿ ಶ್ರೇಣೀಕೃತ ಚರಿತ್ರೆಯ ಮೇಲೆ ಬೆಳಕು ಚೆಲ್ಲಲು ಈ ಕೀರ್ತನೆಯೊಂದು ಆಕರವೆನ್ನುವುದನ್ನು ಮರೆಯಲಾಗದು. ದೇವರು-ಮತ-ಮಠ-ಜಾತಿಗಳನ್ನು ಇಟ್ಟುಕೊಂಡು ಹೇಗೆ ಪಾಳೇಗಾರಿಕೆಯ ಪರಂಪರೆಯೊಂದು ಉಡುಪಿ ಪರಿಸರದಲ್ಲಿ ಬೆಳೆದು ಬಂತು ಎನ್ನುವುದರ ಕುರಿತು ವಿಚಾರಿಸುವ ಅಗತ್ಯವಿದೆ. 'ಉಡುಪಿ ಚರಿತ್ರೆಯನ್ನು ಜಿನಾಲಯದಿಂದ ಪ್ರಾರಂಭಿಸಿ, ಶಿವಾಲಯದಿಂದ ಮುಂದುವರಿಸಿ ಕೊನೆಗೆ ಮಧ್ವಾಲಯಕ್ಕೇ ಮಂಗಳ ಹಾಡುವ ಪರಂಪರೆಗೆ ಭಿನ್ನವಾಗಿ

---

೨೫. ಬನ್ನಂಜೆ ಗೋವಿಂದಾಚಾರ್ಯ : ಕನಕೋಪನಿಷತ್ತು, ಪುಟ-೧೦೬

೨೬. ಅದೇ ಪುಟ: ೧೧೦

ಮಣ್ಣಿನ ಮಕ್ಕಳ ಮೌಖಿಕ ಪರಂಪರೆಯಲ್ಲಿ ಬೇರೆಯೇ ಆದ ಚಾರಿತ್ರಿಕ ಆಕರಗಳು ಕಾಣುತ್ತವೆ.' ೨೭

ಉಡುಪಿ ಕೃಷ್ಣ ಮಠಕ್ಕೆ ೮ ರಕ್ಷಕ ದೇವರ ಅಥವಾ ಪರಿವಾರ ದೇವಾಲಯಗಳಿವೆ ಈ ರಕ್ಷಕ ದೇವರುಗಳ ಪರಿಕಲ್ಪನೆಯೆ ಪಾಳೇಗಾರಿಕೆಯ ಪ್ರಜ್ಞೆಯಿಂದ ಕೂಡಿದೆ. ಅಧೀನ–ಪ್ರಧಾನವೆಂಬ ವರ್ಗಶ್ರೇಣೀಕರಣದಿಂದ ಕೂಡಿದೆ. ಇಲ್ಲಿರುವ ನಾಲ್ಕು ಶಕ್ತ್ಯಾಲಯಗಳು, ನಾಲ್ಕು ನಾಗಾಲಯಗಳು, ಸುಮಾರು ಮೂರು ಕಿ.ಮಿ ಸುತ್ತಮುತ್ತಲಿನ ಪರಿಧಿಯಲ್ಲಿ ಈ ೮ ರಕ್ಷಕ ದೇವಾಲಯಗಳಿವೆ. ನಾಲ್ಕು ದಿಕ್ಕಿನಲ್ಲಿರುವ ದೇವಿ ದೇವಸ್ಥಾನಗಳು (ಪೂರ್ವಕ್ಕೇ ಕಡಿಯಾಳಿ ಮಹಿಷ ಮರ್ದಿನಿ, ಉತ್ತರಕ್ಕೇ ಅಂಬಾಗಿಲು ದುರ್ಗಾ ಪರಮೇಶ್ವರಿ, ದಕ್ಷಿಣಕ್ಕೆ ಬೈಲೂರು ಮಹಿಷಮರ್ದಿನಿ, ಪಶ್ಚಿಮಕ್ಕೆ ಕನ್ನರಪಾಡಿ ಜಯದುರ್ಗಾ ದೇವಾಲಯ) ವಿಶೇಷವಾಗಿವೆ. ಅಲ್ಲದೆ ಪಾಂಗೋಡು, ಮಾಗೋಡು, ಮುಚ್ಚಿಲಗೋಡು, ಅರಿತೋಡುಗಳಲ್ಲಿ ನಾಗಾಲಯಗಳಿವೆ. ಈ ರಕ್ಷಕ ದೇವಾಲಯಗಳು ಮಧ್ಯಕಾಲೀನ ಚರಿತ್ರೆಯಲ್ಲಿ ಮತಧರ್ಮಗಳ ಹೆಸರಿನಲ್ಲಿ ನಡೆಸಿದ ಸಂಘರ್ಷವನ್ನು ಹುದುಗಿಸಿಕೊಂಡಿವೆ. ಮಾತೃ ಪ್ರಧಾನ ಸಂಸ್ಕೃತಿಯ 'ಅಳಿಯ ಕಟ್ಟಿನ' ಆಯರಚನೆಯ ಸಾಮಾಜಿಕ ವ್ಯವಸ್ಥೆ ಇರುವ ತುಳುನಾಡಿನಲ್ಲಿ ಪಿತೃ ಪ್ರಧಾನ ಮೌಲ್ಯಗಳು ಪಲ್ಲಟಗೊಂಡಿರುವ ಸೂಕ್ಷ್ಮತೆಯನ್ನು ಈ ಧಾರ್ಮಿಕ ರಾಜಕಾರಣದ ಸ್ವರೂಪದಲ್ಲಿ ಗುರುತಿಸಬಹುದು. ಕೃಷಿ ಪ್ರಧಾನ ಸಂಸ್ಕೃತಿಯ ದ್ಯೋತಕವಾಗಿ ಕಂಡು ಬರುವ ಸಂಜುರ್ಲಿ, ಪಿಲಿ ಚಾಮುಂಡಿ, 'ಸತ್ಯ ದೇವತೆ' ತನ್ನಿಮಾನಿಗದಂತಹ ಭೂತಾರಾಧನೆಯ ಸ್ಥಾನಗಳು ಕ್ರಮೇಣ ಅಪಮೌಲೀಕರಣಕ್ಕೇ ಒಳಗಾಗಿ 'ಮಹಿಷಮರ್ಧಿನಿ' ಎಂಬ ಅಭಿನಾಮದ ಮೂಲಕ ಪ್ರಧಾನಗೊಳಿಸಲು ನಡೆಸಿದ ಪ್ರಯತ್ನವೇ ಮಡಿ ಪರಂಪರೆಯ ಗೋಡೆ ಕಟ್ಟಲು ಪೂರಕವಾಯಿತು. ಮಾತೃಮೂಲೀಯ ಸಂಸ್ಕೃತಿ ವಿಜೃಂಭಣೆಯ ನೆವದಲ್ಲಿ ಕೃಷಿ ಪ್ರಧಾನ ಸಂಸ್ಕೃತಿ ಕುರುಹು ಆಗಿರುವ ಕೋಣನನ್ನು ಕೊಲ್ಲುವ ಮೂಲಕ ವೈದಿಕ ಪರಂಪರೆ ಗಟ್ಟಿಗೊಂಡ ಬಗೆಯನ್ನು ಈ ಪರಿಸರದಲ್ಲಿ ಕಾಣಬಹುದು. ಮೂಲತಃ ಇದ್ದ ಭಗವತಿಯ ಲಿಂಗರೂಪಿ ಆರಾಧನೆ ಈ ರೀತಿ 'ಮಹಿಷಮರ್ಧಿನಿ'ಯಾಗುವ ಸ್ಥಿತ್ಯಂತರದ ಕುರುಹುಗಳನ್ನು ಕಡಿಯಾಳಿ, ಬೈಲೂರುಗಳಲ್ಲಿ ಕಾಣಬಹುದು. ಬೈಲೂರಿನಲ್ಲಿ ಕಂಡು ಬರುವ ಕೋಣರೂಪಿ ಮನುಷ್ಯ ಶರೀರದ ಮಹಿಷಾಸುರ ದುರ್ಗೆಯ ಕ್ರೌರ್ಯಕ್ಕೆ ಬಲಿಯಾಗುವ ಪ್ರತಿಮೆ ನೆಲಮೂಲ ಸಂಸ್ಕೃತಿಯನ್ನು ಜಾತಿಶ್ರೇಣೀಕರಣದ ಮೂಲಕ ತುಳಿದು ಹಾಕುವ ಮಧ್ಯಕಾಲೀನ ಚರಿತ್ರೆಯ ವಿಕೃತಿಯ ಮೂಲಕ ವಿವರಿಸಿಕೊಂಡಾಗ ಮಾತ್ರ ಕನಕ–ಕೃಷ್ಣರ ಸಂಬಂಧಕ್ಕೆ

---

೨೭. ರವಿ ರಾ ಅಂಚನ್; ಉಡುಪಿಯ ಕೃಷ್ಣಮಠ–ಒಂದು ಅವಲೋಕನ 'ನೀ ಮಾಯೆಯೊಳೊಗೊ ನಿನ್ನೊಳು ಮಾಯೆಯೋ', ಪುಟ:೧೦೦೭

ಭಿನ್ನ ತಾತ್ವಿಕ ಆಯಾಮ ದೊರೆಯುತ್ತದೆ. ಆಗ ಕನಕ ವೈದಿಕ ಪರಂಪರೆಯ ಇದುವರೆಗಿನ ಏಕಾಕೃತಿಯ ಧಾರ್ಮಿಕ ಧಾಷ್ಟ್ಯಕ್ಕೆ ಒಂದು ತಿರುಬಿಂದುವಾಗುತ್ತಾನೆ (turning point). ಕೋಣನ ತಲೆ ಮನುಷ್ಯ ಶರೀರವು ಶೂದ್ರ ವರ್ಗ, ದುಡಿಯುವ ವರ್ಗದ ಮೇಲೆ ಉಚ್ಚವರ್ಗವು ಸಾಧಿಸಿದ ಹಿಡಿತ, ತೋರಿದ ಕ್ರೌರ್ಯವನ್ನು ಏಕ ಕಾಲದಲ್ಲಿ ಸಂಕೇತಿಸುತ್ತದೆ. ಈ ಸಂಕೇತಗಳ ಮೂಲಕ ಅಭಿವ್ಯಕ್ತಗೊಳ್ಳುವ ದೇವಿಯರು ಶ್ರೀ ಕೃಷ್ಣ ದೇವಾಲಯದ ನಾಲ್ಕು ದಿಕ್ಕಿನಲ್ಲಿ ಕಾಣಿಸಿಕೊಂಡಿರುವುದು ಹೆಚ್ಚು ಕುತೂಹಲಕ್ಕೆ ಕಾರಣವಾಗಿದೆ.

ತುಳುವರು ಮುಖ್ಯವಾಗಿ ದೈವ ಅಥವಾ ಭೂತಗಳನ್ನೇ ಆರಾಧಿಸುವ ಪರಂಪರೆಯುಳ್ಳವರು. ಬಹುಸಂಖ್ಯಾತರಾದ ಬಿಲ್ಲವರು, ಬಂಟರು, ಬೆಸ್ತರು ಕಾಣಿಸಿಕೊಳ್ಳುವ ಈ ಪ್ರದೇಶ ಮೂಲತಃ ಶೂದ್ರನೆಲೆ. ಉಡುಪಿ ಎನ್ನುವುದನ್ನು 'ಉಡು' ಅಥವಾ 'ಚಂದ್ರ'ನೆಂಬ ನಿಷ್ಪತ್ತಿ ಪದದ ಮೂಲಕ ಒಡೆಯುವುದೇ ಒಂದು ಅಪಚಾರ. 'ಒಡಿ' ಎಂಬ ಶಬ್ದವೇ ಇದರ ಮೂಲವೆಂದು ತೋರುತ್ತದೆ. ಉಡುಪಿ ಮೂಲತಃ ಬೇಟೆಗಾರರ, ಪಶುಪಾಲಕರ ತಾಣವಾಗಿತ್ತು. ದಟ್ಟ ಕಾಡಿನಿಂದ ಕೂಡಿದ ಈ ಪ್ರದೇಶದಲ್ಲಿ 'ಒಡಿಕೋರ್ಪಿನಿ' 'ಒಡಿಕಟ್ಟುನಿ' ಎಂಬ ಬೇಟೆಗಾರ ಸಂಪ್ರದಾಯವಿತ್ತು. ಬೇಟೆ ಆರಂಭಕ್ಕೇ ಮೊದಲು ತಮ್ಮ ಆಯುಧಗಳಿಗೆ ತಮ್ಮ ದೇಹದ ರಕ್ತವನ್ನು ಬಲಿಯಾಗಿ ಕೊಡುವ ಮೂಲಕ ಮಾಡುವ ಬೇಟೆಯ ಸಂಕಲ್ಪವೇ 'ಒಡಿ' ಪದದ ಅರ್ಥ. ಅದು ಮುಂದೆ 'ಕೃಷ್ಣಸಂಸ್ಕೃತಿ' ಬೆಳೆದಾಗ 'ಒಡಿ' ಪದದ ಅರ್ಥವಿಸ್ತಾರವಾಗಿ ಗದ್ದೆಗಳನ್ನು ವಿಭಾಗಿಸುವ 'ಕಂಠ' ವೆಂದು ಅಳತೆಯ ಮಾಪಕವಾಯಿತು. ಈ ಒಡಿ> ಒಡಿಪು> ಉಡುಪಿ ಆಗಿರುವ ಸಾಧ್ಯತೆ ಇದೆ. [೨೮]

ಜಲಬೇಟೆ-ನೆಲಬೇಟೆ ತಾಣವಾದ ಉಡುಪಿಯಲ್ಲಿ ಕನಕ-ಕೃಷ್ಣರ ಪವಾಡದ ಕತೆಗಳಂತೆ ಇತರ ಕೆಲವು ಐತಿಹ್ಯಗಳು ದೊರೆಯುತ್ತವೆ. ಅದರಲ್ಲಿ ಒಂದು ಮೀನು ಹೂವಾದದ್ದು ಒಮ್ಮೆ ಕನಕದಾಸರು ಅಮವಾಸ್ಯೆಯ ಪರ್ವದಿನದಂದು ಮಲ್ಪೆಗೆ ಸಮುದ್ರ ಸ್ನಾನಕ್ಕೆ ಹೋಗಿದ್ದರಂತೆ. ಕನಕದಾಸರನ್ನು ಕಂಡ ಒಬ್ಬ ಬೆಸ್ತನು ತಾನು ಹಿಡಿದು ತಂದ ಮೀನುಗಳಲ್ಲಿ ಒಂದೆರಡನ್ನು ಭಕ್ತಿಪೂರ್ವಕವಾಗಿ ಕನಕದಾಸರಿಗೆ ಕಾಣಿಕೆಯಾಗಿ ಅರ್ಪಿಸಿದನು. ಕನಕದಾಸರನ್ನು ಅವಮಾನಿಸುವ ಸಂದರ್ಭಕ್ಕಾಗಿ ಕಾಯುತ್ತಿದ್ದ ಕೆಲವು ಬ್ರಾಹ್ಮಣರು ವಾದಿರಾಜರಲ್ಲಿ ದೂರು ನೀಡಿದರು. "ಗುರುಗಳೇ ನೋಡಿ, ಇಂಥ ಪರ್ವದಿನಗಳಲ್ಲಿಯೂ ಕನಕದಾಸರು ಮೀನು ಹಿಡಿದು ತಂದಿದ್ದಾರೆ. ಇವರೆಂಥ ಭಕ್ತರು?" ಎಂದರು. ಈ ಕುಹಕದ ಮಾತು ಕನಕದಾಸರ ಕಿವಿಗೂ ಬಿತ್ತು. ಅವರು

---

೨೮. ರವಿ ರಾ. ಅಂಚನ್ ಉಡುಪಿಯ ಕೃಷ್ಣಮಠ ಒಂದು ಅವಲೋಕನ : ನೀ ಮಾಯೆಯೊಳಗೋ ನಿನ್ನೊಳು ಮಾಹೇಯೊಳೋ, ಪುಟ-೧೦೧೬

ಅಧೀರರಾಗದೆ, ತಾವು ಭಕ್ತನಿಂದ ತಂದಿರುವ ಮೀನುಗಳನ್ನು ಮನಸ್ಸಿನಲ್ಲಿಯೇ ಕೃಷ್ಣಾರ್ಪಣ ಮಾಡಿ ಗುರುಗಳ ಮುಂದೆ ಬಂದು ನಿಂತರು. ವಾದಿರಾಜರು "ಕನಕದಾಸರೆ ನಿಮ್ಮ ಬಟ್ಟೆಗಂಟಿನಲ್ಲಿ ಏನಿದೆ?" ಎಂದು ಪ್ರಶ್ನಿಸಿದರು. ಅದಕ್ಕೇ ಕನಕದಾಸರು "ಇದುವರೆಗೆ ಅದರಲ್ಲಿ ಮೀನಿತ್ತು. ತಮ್ಮ ದರ್ಶನದಿಂದ ಅದು ಹೂವಾಗಿದೆ" ಎಂದು ಹೇಳುತ್ತಾ ಗಂಟು ಬಿಚ್ಚಿ ತೋರಿಸಿದರು. ಅದು ನಿಜವಾಗಿ ಹೂವಿನ ಹಾರವಾಗಿತ್ತು. ಇನ್ನೊಂದು ಪವಾಡ ಮದ್ಯ ಜೇನು ತುಪ್ಪವಾದದ್ದು. ಭಕ್ತನೊಬ್ಬ ನೀಡಿದ ಮದ್ಯವನ್ನು ಕನಕದಾಸರು ಭಕ್ತಿ ಪೂರ್ವಕವಾಗಿ ವಾದಿರಾಜರಿಗೆ ನೀಡಿದರಂತೆ. ವಾದಿರಾಜರು ಅದನ್ನು ಸ್ವೀಕರಿಸುತ್ತಿದ್ದಂತೆ. ಅದು ಜೇನುತುಪ್ಪವಾಯಿತಂತೆ. ೨೯

ಇವೆರಡು ಘಟನೆಗಳು ವಾದಿರಾಜರ ಪವಾಡಗಳನ್ನು ಹೇಳುವಲ್ಲಿ ಬಳಕೆಯಾದರು ಇದರ ಹಿಂದಿನ ಜಾತಿರಾಜಕಾರಣದ ಸ್ವರೂಪ ಯಾರಿಗೂ ಅರಿವಾಗದಿರದು. ಮುಸಲ್ಮಾನರು ಭಾರತವನ್ನು ಆಕ್ರಮಿಸಿಕೊಂಡ ಮೇಲೆ ಮಾಂಸ ಹೂವಾದ ಕಥೆಗಳು ಒಂದರ ಮೇಲೊಂದರಂತೆ ಹುಟ್ಟಿಕೊಂಡವು. ಮಾಂಸ–ಮದ್ಯಗಳು ಬ್ರಾಹ್ಮಣೀಕರಣಗೊಳ್ಳುವ ಬಗೆಯನ್ನು ಇಲ್ಲಿ ಕಾಣಬಹುದು. ವ್ಯಕ್ತಿಗತವಾಗಿ ಕನಕದಾಸರ ಬದುಕಿನ ಪಲ್ಲಟವಾಗಿದೆ. ವಾದಿರಾಜರ ಜೊತೆಗಿನ ಕನಕ ಸಂಬಂಧವನ್ನು ಗಟ್ಟಿಗೊಳಿಸಲು ಹೆಣೆದ ಕಥೆಯಾಗಿದ್ದರೂ ಕನಕದಾಸರು ದಾಸರಾದ ಮೇಲೆ ಮಾಂಸ ಮದ್ಯಗಳನ್ನು ತ್ಯಜಿಸಿ ಸಸ್ಯಾಹಾರಿಗಳಾದರು ಎನ್ನುವುದನ್ನು ಊಹಿಸಲು ಅವಕಾಶವಿದೆ. ಜೊತೆಗೆ ಹುಟ್ಟಿನ ಕಾರಣಕ್ಕಾಗಿ ಕನಕದಾಸರು ಮತ್ತೆ ಮತ್ತೆ ಅಪಮಾನಕ್ಕೆ ಒಳಗಾಗುತ್ತಿದ್ದರು ಎನ್ನುವುದು ಕೂಡ ಅಷ್ಟೇ ಸತ್ಯ. ಆಹಾರ ಪದ್ಧತಿಗಳ ಮೇಲೆ ಗಂಭೀರ ಚರ್ಚೆಗಳಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಈ ಎರಡು ಐತಿಹ್ಯಗಳು ಮಧ್ಯಕಾಲೀನ ಕನಕ ಚರಿತ್ರೆಯನ್ನು ಸಮಕಾಲೀನ ಸನ್ನಿವೇಶದ ಮೂಲಕ ನೋಡಲು ಒತ್ತಾಯಿಸುತ್ತದೆ. ಕನಕದಾಸರು ಎಲ್ಲಿಯೂ ತಮ್ಮ ಕೃತಿಗಳಲ್ಲಿ ಮಾಂಸ– ಮದ್ಯಗಳನ್ನು ಉದ್ದೇಶ ಪೂರ್ವಕ ಟೀಕಿಸಿ ಬರೆದಿಲ್ಲ. ಆಹಾರ ಪದ್ಧತಿಯ ಕುರಿತು ಅವರ ಗಂಭೀರ ವಿರೋಧಗಳಿರಲಿಲ್ಲ, ಆದರೆ ಶ್ರೇಷ್ಠ–ಕನಿಷ್ಠ ಎನ್ನುವುದರ ಕುರಿತು ಅವರ ವಿರೋಧವಿತ್ತು. ಇಡೀ ರಾಮಧ್ಯಾನ ಚರಿತ್ರೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು, ರಾಗಿ–ಭತ್ತದ ರೂಪಕದ ಮೂಲಕ ಮಾನವ ಚರಿತ್ರೆಯ ವಿಕಾಸವೊಂದನ್ನು ಬಿಚ್ಚಿಡುವಲ್ಲಿ ಆಹಾರ ಮಾನವನ ಹುಟ್ಟಿನ ಶ್ರೇಣಿಕರಣಕ್ಕೇ ಯಾವ ಪಾತ್ರವನ್ನು ವಹಿಸುವುದಿಲ್ಲ ಎನ್ನುವುದನ್ನು ಸಾಧಿಸಿ ತೋರಿಸಿದ್ದಾರೆ.

ವಾದಿರಾಜರು ಉಡುಪಿ ಪರಿಸರದ ಮೋಗೇರ (ಬೆಸ್ತ, ಮೀನುಗಾರ)ರಾಗಿದ್ದ

---

೨೯. ಚಂದ್ರಕಾಂತ ಬಿಜ್ಜರಗಿ ; ದಾರ್ಶನಿಕ ಕವಿ ಕನಕದಾಸರು ಪುಟ–೩೦೫

ಮಟ್ಟು ಗ್ರಾಮದವರನ್ನು ಬ್ರಾಹ್ಮಣರೆಂದು ಸ್ವೀಕರಿಸಿ ಪರಿವರ್ತನೆಗೆ ತಂದವರು. ವಾದಿರಾಜರು. [೩೦] ಸ್ವರ್ಣಕಾರರ ಸಾಮಾಜಿಕ ನೆಲೆಯನ್ನು ಬದಲಿಸಿದವರು. ಇದರಿಂದ ಅಂದಿನ ಸ್ವರ್ಣಕಾರರು ಬ್ರಾಹ್ಮಣತ್ವ ಪಡೆದರು. ಮಧ್ವರು ಕೂಡ ಬ್ರಾಹ್ಮಣೇತರ ಕೆಳವರ್ಗದ ಜನರಿಗೆ ದೀಕ್ಷೆ ನೀಡಿ ವೈಷ್ಣವರನ್ನಾಗಿ ಮಾಡಿ ಮಾಧ್ವರ ಮತಕ್ಕೇ ಸೇರಿಸಿಕೊಂಡರು ಎಂದು ಶಂಬಾ ಜೋಷಿ ಉಲ್ಲೇಖಿಸಿದ್ದಾರೆ. ವಾದಿರಾಜರು ಸಂಪೂರ್ಣ ಮಡಿವಂತಿಕೆಯಿಂದ ನಡೆದುಕೊಳ್ಳದಿದ್ದರೂ ಅತ್ಯಂತ ಔದಾರ್ಯದಿಂದ, ಸ್ವತಂತ್ರ ಪ್ರವೃತಿಯಿಂದ, ಧಾರ್ಮಿಕ ಉದ್ದೇಶದಿಂದ ನಡೆದುಕೊಂಡು ಬಹುಜನರಾಗಿದ್ದ ಕೆಳವರ್ಗದವರನ್ನು ತಮ್ಮತ್ತ ಸೆಳೆದುಕೊಂಡು ನವಬ್ರಾಹ್ಮಣರನ್ನು ಸೃಷ್ಟಿಸಿದರು.

ಕನಕದಾಸರ ಸುತ್ತ ಕೇಂದ್ರಿತವಾದ ಮೀನು ಹೂವಾದ, ಮದ್ಯ ಜೇನಾದ ಕಥನಗಳ ಸತ್ಯಾಸತ್ಯತೆ ಏನೇ ಆಗಿದ್ದರೂ ಕೆಳವರ್ಗದ ಪ್ರತಿನಿಧೀಕರಣದ ಹಾಗೂ ಜನಸಾಮಾನ್ಯರ ಜೊತೆಗಿನ ಸಂಬಂಧದ ಮೂಲಕ ಮಾನವ ಜಾತಿ ಒಂದೇ ಎಂಬ ಮೂಲ ತಾತ್ವಿಕತೆಗೆ ಕನಕದಾಸರು ಹೊರಳಿದರು. ವೈಯಕ್ತಿಕ ಬದುಕಿನ ಆತ್ಮಶುದ್ಧಿಗೆ ಜಾತಿಕಾರಣವಲ್ಲವೆನ್ನುವ ಮೂಲಕ ತಣ್ಣನೆಯ ಸಾಮಾಜಿಕ ಕ್ರಾಂತಿಗೆ ಅವರು ಕಾರಣರಾದರು. 'ಧರೆಯೊಳು ಕರ್ಮಿಗಳು ಹೆಚ್ಚಿ ಕವಿತ್ವವ ಕಲಿತು ನರಕುರಿಗಳೆಲ್ಲರೂ ನಡೆಗೆಟ್ಟರೆಂದು' ಎನ್ನುವ ಧ್ವನಿಯಲ್ಲಿ ಈ ಅಭಿಪ್ರಾಯ ಸ್ಪಷ್ಟವಿದೆ. 'ಬ್ರಾಹ್ಮಣೀಕರಣ' ಗೊಳ್ಳುವುದು ಆ ಕಾಲದ ಸಾಮಾಜಿಕ ಜೀವನಕ್ಕೆ ಅನಿವಾರ್ಯವೆನ್ನುವುದನ್ನು ಕನಕದಾಸರು ವೈಷ್ಣವ ಪಂಥದ ಅನುಯಾಯಿಗಳಾಗಿ ಭಾವಿಸಿದ್ದರಲ್ಲಿ ಆಶ್ಚರ್ಯವೆನಿಸುವುದಿಲ್ಲ. ಆದರೆ ಅದೇ ಸನ್ನಿವೇಶದಲ್ಲಿ ಕೆಳವರ್ಗದ ಪರವಾಗಿ ನಿಲ್ಲುವುದನ್ನು ಮರೆಯುವುದಿಲ್ಲ.

---

೩೦. ಬೇಲೂರು ಕೇಶವ ದಾಸರು ಬರೆದ 'ಶ್ರೀ ಕರ್ಣಾಟಕ ಭಕ್ತ ವಿಜಯ' ದಲ್ಲಿ ವಾದಿರಾಜರು ಹಯಗ್ರೀವನಿಗೆ ಅರ್ಪಿಸುವ ಪ್ರಸಾದದಲ್ಲಿ ಕುಹಕಿಗಳು ವಿಷ ಮಿಶ್ರಣ ಮಾಡಿ ನೈವೇದ್ಯ ಮಾಡುವಂತೆ ಮಾಡಿದರು. ಭಗವಂತನು ವಾದಿರಾಜರಿಗೆ ಶೇಷಾನ್ನವನ್ನೂ ಉಳಿಸದೆ ಭುಂಜಿಸಿ ಕಾರಣ ತಿಳಿಸಿ ತಾನು ಹಸುರು ಬಣ್ಣ ಪಡೆದ ಕಥೆಯನ್ನು ನಿವೇದಿಸಿದನಂತೆ. ವಿಷದ ಕಾರಣದಿಂದ ಹಸುರಾದ ಮೈ ಬಿಳಿಯ ಬಣ್ಣಕ್ಕೇ ತಿರುಗಲು 'ನೀನು ನನಗೆ ಗುಳ್ಳದ ಶಾಖವನ್ನು ನಿವೇದನ ಮಾಡು. ಪಾಪನಾಶಿ ನೀ-ಚಕ್ಷುಷ್ಮತೀ ನದಿಗಳ ದಕ್ಷಿಣಭಾಗದಲ್ಲಿ ಮಟ್ಟು ಎಂಬ ಗ್ರಾಮವಿದೆ. ಅಲ್ಲಿನ ಬ್ರಾಹ್ಮಣರು ಕರ್ಮಾಭ್ರಷ್ಟರಾಗಿದ್ದಾರೆ. ಅವರನ್ನು ಶುದ್ಧಿಗೊಳಿಸಿ ಅವರಿಂದಲೇ ವೃತಾಂಕ ಬೆಳೆಸಿ ತರಿಸಿ ನನಗೆ ಸಮರ್ಪಣೆ ಮಾಡು' ಎಂದು ಹಯಗ್ರೀವ ಅಪ್ಪಣೆ ಮಾಡಿದನಂತೆ. ವಾದಿರಾಜರು ಹಯಗ್ರೀವನ ಅಪ್ಪಣೆಯಂತೆ ಮಟ್ಟಗ್ರಾಮಕ್ಕೆ ತೆರಳಿ ಬ್ರಾಹ್ಮಣರನ್ನು ಶುದ್ಧೀಕರಣ ಮಾಡಿ ಅವರಿಗೆ ಗುಳ್ಳ (ಬದನೆಕಾಯಿ) ಬೆಳೆಯುವಂತೆ ಭೂಮಿ ಹಂಚಿಕೆ ಮಾಡಿ ಅವರು ಬೆಳೆದ ಗುಳ್ಳದಿಂದಲೇ ಹಯಗ್ರೀವನ ಹಸಿರು ಬಣ್ಣ ಶ್ವೇತ ವರ್ಣಕ್ಕೇ ತಿರುಗಿತು ಎಂಬ ಐತಿಹ್ಯವಿದೆ. ಇಂದಿಗೂ ಈ ಜಾತಿಯ ಗುಳ್ಳಕ್ಕೇ ಮುಟ್ಟು ಗ್ರಾಮವೇ ಪ್ರಸಿದ್ಧ ಮಧ್ವಮತದವರು ಬದನೇಕಾಯಿಯನ್ನು ನಿಷಿದ್ಧವೆಂದು ಭಾವಿಸಿದರೆ ಮುಟ್ಟಗ್ರಾಮದಲ್ಲಿ ಬೆಳೆದ ಗುಳ್ಳವನ್ನು ವಾದಿರಾಜರು ಪರಿಗೃಹಿತವೆಂದು ಸ್ವೀಕರಿಸುತ್ತಿದ್ದರು. ಬೇಲೂರು ಕೇಶವ ದಾಸರು: ಶ್ರೀಕರ್ಣಾಟಕ ಭಕ್ತ ವಿಜಯ ಪುಟ-೧೪೦,೧೪೧

ಮಧ್ವರು ಮತ್ತು ವಾದಿರಾಜರು ನೀಡುತ್ತಿದ್ದ ಬ್ರಾಹ್ಮಣ್ಯ ದೀಕ್ಷೆಯಿಂದಾಗಿ ಉಡುಪಿ ಪರಿಸರದಲ್ಲಿ ಬ್ರಾಹ್ಮಣರ ಸಂಖ್ಯೆ ಹೆಚ್ಚಾಗಲು ಕಾರಣವಾಯಿತು. ಈ ನಡುವೆ ಉಡುಪಿ ಮಠದಲ್ಲಿ ನೃತ್ಯ ಸೇವೆಯ ಭಜನಾ ಪದ್ಧತಿಯನ್ನು ವಾದಿರಾಜರು ಪ್ರಾರಂಭಿಸಿದ ಸಂದರ್ಭದಲ್ಲಿ ಕೃಷ್ಣನ ಮೇಲೆ ಅನೇಕ ಕೀರ್ತನೆಗಳು ಭಜನೆಯ ರೂಪದಲ್ಲಿ ಸೃಷ್ಟಿಯಾದವು. ಕೇವಲ ಹುಟ್ಟು ವೈದಿಕರ ಸ್ವತ್ತಾಗಿದ್ದ ಅಕ್ಷರ ಲೋಕ ಕೆಳವರ್ಗದ ಜನರಿಗೂ ತೆರೆದುಕೊಂಡ ಬಗೆಯನ್ನು ತನ್ನ ಮೂಲಕ ಕನಕದಾಸರು ಸಮರ್ಥಿಸಿಕೊಂಡಿದ್ದಾರೆ. 'ಕವಿತ್ವವ ಕಲಿತು' ಎನ್ನುವಲ್ಲಿ ಈ ಅಕ್ಷರ ಕ್ರಾಂತಿಯ ಸ್ವರೂಪವೂ ವ್ಯಕ್ತವಾಗುತ್ತದೆ. ಕೆಳವರ್ಗದ ಜನರೆಲ್ಲಾ ಹೀಗೆ ಉಚ್ಚವರ್ಗ ಮಾನ್ಯತೆಗೆ ಪಲ್ಲಟವಾಗುವ ಈ ಸಂಕ್ರಮಣ ಸ್ಥಿತಿಗೆ ಧಾರ್ಮಿಕ ಮೂಲ ಭೂತವಾದಿಗಳು ತೀವ್ರ ಪ್ರತಿರೋಧವನ್ನೊಡ್ಡಿದ್ದಾರೆ. ಅದು ಸಾಮಾಜಿಕ ತಲ್ಲಣಕ್ಕೇ ಕಾರಣವಾಗಿದೆ ಇದನ್ನೇ ವಸ್ತುವಾಗಿಸಿಕೊಂಡು ಕನಕದಾಸರು ವ್ಯಂಗ್ಯವಾಗಿ 'ಭೂಮಿ ನಡುಗುವ' ರೂಪಕದ ಮೂಲಕ ಆ ಕಾಲದ ಸಾಮಾಜಿಕ ಕ್ರಾಂತಿಯ ಪರಿಣಾಮವನ್ನು ಉಲ್ಲೇಖಿಸಿದ್ದಾರೆ. ಒಟ್ಟು ಕರ್ನಾಟಕದ ಸಾಂಸ್ಕೃತಿಕ ಪರಿಸರದ ಪಲ್ಲಟವನ್ನು ಈ ಕೀರ್ತನೆ ಧ್ವನಿ ಪೂರ್ಣವಾಗಿ ಹೊರಗೆಡಹುತ್ತದೆ.

ಇದಕ್ಕೆ ಪೂರಕವಾಗಿ ಇನ್ನೊಂದು ಅಂಶವನ್ನು ಗಮನಿಸಬಹುದು. ಶ್ರೀಕೃಷ್ಣನನ್ನು ಜನಸಾಮಾನ್ಯರ ಬಳಿಗೆ ತರುವಲ್ಲಿಯೂ ಕನಕನ ಶ್ರಮ ಗಮನಾರ್ಹವಾದದ್ದು. ಕೃಷ್ಣ ಮೂಲತಃ ಕೆಳವರ್ಗಗಳ ಆರಾಧ್ಯ ದೈವ. ಸಮೂಹ ದೈವ. ಉಡುಪಿಯ ಬಯಲು ಕೃಷ್ಣನಿಗೆ ಮೊದಲು ಪೂಜೆ ಮಾಡುತ್ತಿದ್ದವರು ದನಗಾಹಿಗಳು. ಪೂಜೆಯ ನಂತರ ಅವರು ಕೃಷ್ಣನಿಗೆ ಇಷ್ಟವಾದ 'ಗೋಪಾಲ ಕಾಲಾ' ನಡೆಸುತ್ತಿದ್ದರು ಎನ್ನುವುದನ್ನು ಈಗಾಗಲೇ ಗಮನಿಸಿದ್ದೇವೆ. ಸಾಮಾನ್ಯವಾಗಿ ಎಲ್ಲಾ ಕೃಷ್ಣಮಂದಿರಗಳಲ್ಲಿ ಈ ಬಗೆಯ ಉಪಾಸನಾ ಪದ್ಧತಿ ಇದೆ. ಈಗೀಗ ಬಣ್ಣದ ತಿಂಡಿಗಳನ್ನಿಟ್ಟು ಪೂಜೆ ಮಾಡಲಾಗುತ್ತದೆ. ಆದರೆ ಉಡುಪಿಯಲ್ಲಿ ಈ ಕ್ರಮ ಇದ್ದ ಹಾಗೆ ತೋರುವುದಿಲ್ಲ. ಜನಸಾಮಾನ್ಯರ ದೈವವಾದ ಕೃಷ್ಣನನ್ನು ಹೇಗೆ ವೈದಿಕವರ್ಗ ತನ್ನ ವೈಯಕ್ತಿಕ ಗುತ್ತಿಗೆಯಾಗಿ ಹಿಡಿದುಕೊಂಡಿತು ಎನ್ನುವುದು ಈಗ ಇತಿಹಾಸ. ಇಂತಹ ಕೃಷ್ಣ ದೀನರ, ದಲಿತರ, ಹೆಣ್ಣುಮಕ್ಕಳ ಪರವಾಗಿದ್ದಾನೆ ಎಂದು ಹೇಳುವ ಮೂಲಕ ಕೃಷ್ಣ ಚರಿತ್ರೆಗೆ ಕನಕದಾಸರು ಹೊಸ ಆಯಾಮ ನೀಡಿದ್ದಾರೆ.

ಕೃಷ್ಣನೇ ಕನಕನ ಕಡೆಗೆ ತಿರುಗಿದ್ದಾನೆ ಎನ್ನುವುದು ಒಂದು ಸಾಂಸ್ಕೃತಿಕ ರೂಪಕ ಅಷ್ಟೇ. ಕನಕನ ಆಗಮನದಿಂದ ಉಡುಪಿ ಪರಿಸರದ ಜಡಗೊಂಡ ಸಾಂಸ್ಕೃತಿಕ ಸಂಗತಿಗಳಿಗೆ ಹೊಸದೊಂದು ಚಾಲನೆ ದೊರೆಯಿತು. ವೈಚಾರಿಕ ಜಾಗೃತಿ ಉಂಟಾಯಿತು. ಒಟ್ಟಿನಲ್ಲಿ ಉಡುಪಿಯ ಸಂಸ್ಕೃತಿಯ ಅಧ್ಯಯನಕ್ಕೆ ಕನಕದಾಸ ಪ್ರಮುಖ

ಕೇಂದ್ರವೆಂಬುದಂತೂ ಸತ್ಯ. ಕನಕನನ್ನು ಬಂಡವಾಳವಾಗಿಸಿ ಹುಂಡಿ ತುಂಬುವ ಧೋರಣೆಯನ್ನು ಬದಿಗಿರಿಸಿ ಕನಕ–ವಾದಿರಾಜರ ಮೂಲಕ ಸಾಮಾಜಿಕ ಸಂಚಲನೆಗೆ ದೊರೆತ ಪ್ರೇರಣೆಯನ್ನು ಇತಿಹಾಸದ ಪುನರ್ ನಿರ್ವಚನವಾಗಿ ಕಾಣಲು ಸಾಕಷ್ಟು ಅವಕಾಶಗಳಿವೆ. ಜಾತಿ, ಧರ್ಮ, ಮೇಲು–ಕೀಳಿನ ಸಂಘರ್ಷದ ಉಡುಪಿ ರೂಪಕವನ್ನು ಮುಂದಿನ ಅಧ್ಯಾಯದಲ್ಲಿ ಕನಕದಾಸರ ರಾಮಧ್ಯಾನ ಚರಿತ್ರೆಗೂ ವಿಸ್ತರಿಸಿ ನೋಡುವ ಪ್ರಯತ್ನ ಮಾಡಲಾಗಿದೆ.

ಧರ್ಮ–ಸಂಸ್ಕೃತಿ ಜಿಜ್ಞಾಸೆಯ ಹೊಸ ಅವತರಣಿಕೆಗಳಾದ ವಚನ ಚಳುವಳಿ, ಸಾಮಾಜಿಕ ಆಂದೋಲನಗಳ ಪರಿಣಾಮವಾಗಿ ಆವಿರ್ಭವಿಸಿದ ಸ್ವ ಸಂಸ್ಕೃತಿ ವಿಮರ್ಶೆಯ ಮಾದರಿಯಾಗಿ ಕಾಣಿಸಿಕೊಂಡ ಹರಿದಾಸ ಆಂದೋಲನ ಧರ್ಮ ಮತ್ತು ಪ್ರಭುತ್ವವನ್ನು ಒಟ್ಟಾಗಿ ನಿರೂಪಿಸಿದವು. ಕನಕದಾಸರ ಬದುಕು–ಬರಹವನ್ನು ವಿಶ್ಲೇಷಣೆಗೆ ಒಳಪಡಿಸುವ ಸಂದರ್ಭದಲ್ಲಿ ನಮಗೆ ಕಾಣಸಿಗುವ ಬಹಳ ಮುಖ್ಯವಾದ ಸಂಗತಿ ಎಂದರೆ ಕನಕನೆಂಬ ವ್ಯಕ್ತಿ ಯಾವುದೇ ಜಾತಿ, ಗುಂಪು, ಧಾರ್ಮಿಕ ಹಿನ್ನೆಲೆಗೆ ಸಂಬಂಧಿಸದೆ ಒಟ್ಟು ಜನ ಸಮೂಹದ ಪ್ರತಿನಿಧಿಯಾಗಿ ಹೇಗೆ ಕಾಣುತ್ತಾನೆ ಎನ್ನುವುದಾಗಿದೆ. ಕನಕದಾಸರಿಗೆ ಸಂಬಂಧಿಸಿದ ಐತಿಹ್ಯ, ಪವಾಡಗಳು ರೂಪಿತವಾದ ಸಾಮಾಜಿಕ, ಸಂದರ್ಭಗಳ ಹಿಂದಿನ ಸಾಂಸ್ಕೃತಿಕ ರಾಜಕಾರಣವನ್ನು ಬಯಲು ಗೊಳಿಸಿದಾಗ ಅಲ್ಲಿ ಕಾಣುವ ಸತ್ಯವೇ ಬೇರೆ. ಕನಕನನ್ನು ಮತ್ತೆ ಮತ್ತೆ ಮುನ್ನಲೆಗೆ ತರುತ್ತಿರುವ ವೈದಿಕ ಪರಂಪರೆ ತನ್ನ ಅಸ್ತಿತ್ವದ ಚಹರೆಗಳನ್ನು ಕನಕ ಚರಿತ್ರೆಯೊಂದಿಗೆ ತಳುಕು ಹಾಕಿಕೊಂಡಿರುವ ಸಂಗತಿ ಗೋಚರವಾಗುತ್ತದೆ. ಕನಕನ ಕೀರ್ತನೆಗಳು, ಪವಾಡಗಳು, ಜನ ಸಂಸ್ಕೃತಿಯ ಬೇರುಗಳ ಕಡೆ ಚಲಿಸುವ ಸಾಮಾಜಿಕ ಸ್ವರೂಪವನ್ನು ವಿಶ್ಲೇಷಿಸಿದಾಗ ಸತ್ಯ ಸಂಗತಿಯ ಅರಿವಾಗುತ್ತದೆ. ಉಡುಪಿ ಎನ್ನುವ ಸಾಂಸ್ಕೃತಿಕ ಕೇಂದ್ರದೊಳಗೆ ಕನಕ ಮೂಡಿಸಿದ ಪಡಿನೆರಳು ದೇಸಿ ಸಾಂಸ್ಕೃತಿಕ ಚಿಂತನೆಗೆ ಅನುವು ಮಾಡಿಕೊಡುವುದರ ಮೂಲಕ ವೈಷ್ಣವ ಪರಂಪರೆ ಜಲಸಂಸ್ಕೃತಿ, ನಾಗಸಂಸ್ಕೃತಿ, ಮಾತೃಸಂಸ್ಕೃತಿ, ಶಿವಸಂಸ್ಕೃತಿಯ ಮೇಲೆ ಸಾಧಿಸಿದ ಮೇಲ್ಮೆ ಹಾಗೂ ಈ ನೆಲದ ಸಂಸ್ಕೃತಿ ನಾಶದ ಪಳಯುಳಿಕೆಗಳು ಈ ಪರಿಸರದಲ್ಲಿರುವುದಲ್ಲಿರುವುದು ವಿಶೇಷವೆನಿಸುತ್ತದೆ. ಉಡುಪಿಯ ಕೃಷ್ಣನು ಯಾರ ಪರವಾಗಿದ್ದಾನೆ ಎನ್ನುವ ಪ್ರಶ್ನೆಗೆ ಕನಕ ಕೀರ್ತನೆಗಳು ಕೊಡುವ ಉತ್ತರದಿಂದಾಗಿ ಕನಕನ ಕಿಂಡಿಯ ರಾಜಕಾರಣವನ್ನು ಭಿನ್ನವಾಗಿ ನಿರ್ವಚಿಸಲು ಸಾಧ್ಯವೆಂಬ ಸಂಗತಿ ಈ ಮೂಲಕ ಅನಾವರಣಗೊಳ್ಳುತ್ತದೆ. ಒಟ್ಟಿನಲ್ಲಿ ಕನಕ ಚರಿತ್ರೆಗೆ ಇಲ್ಲಿ ಹಲವು ದೃಷ್ಟಿಕೋನಗಳಿಂದ ಭಿನ್ನ ಆಯಾಮ ದೊರೆತಿದೆ.

## ಅಧ್ಯಾಯ - ೪

# ಮಧ್ಯಕಾಲೀನ ಪ್ರಭುತ್ವ ಕೇಂದ್ರಿತ ಆಲೋಚನ ಕ್ರಮಗಳು ಮತ್ತು ಕನಕ ಕೃತಿಗಳ ಮರು ಓದು

ಮಧ್ಯಕಾಲೀನ ಕರ್ನಾಟಕದ ರಾಜಕೀಯ ಚರಿತ್ರೆ ಹಲವು ಏಳು ಬೀಳುಗಳನ್ನು ಕಂಡಿದೆ. ಅದರಲ್ಲೂ ಕ್ರಿ.ಶ. ೧೩೩೬ – ೧೭೬೦ ರ ನಡುವಿನ ಕಾಲಘಟ್ಟ ನಮ್ಮ ನಾಡಿನ ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ ಇತಿಹಾಸದಲ್ಲಿ ಬಹುಮುಖ್ಯ ಪಲ್ಲಟಗಳನ್ನು ಅನುಭವಿಸಿದ ಕಾಲ. ವಿಜಯನಗರ ಸಾಮ್ರಾಜ್ಯದಂತಹ ಬಲಿಷ್ಠ ರಾಜಪ್ರಭುತ್ವ ಅಖಂಡ ಕರ್ನಾಟಕವನ್ನು ವೈಭವದಿಂದ ಆಳಿ, ಹಿಂದೆ ಇದ್ದ ರಾಜಕೀಯ ಅನೈಕ್ಯತೆಯ ಸ್ಥಾನದಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಹುಟ್ಟಿಕೊಂಡ ಸಂದರ್ಭ. ಧಾರ್ಮಿಕವಾಗಿಯೂ, ಸಾಮಾಜಿಕವಾಗಿಯೂ ಬಹುಮುಖ್ಯ ತಳಹದಿಯನ್ನು ಹೊಂದಿದೆ. ಸಂತನೊಬ್ಬ, ಧಾರ್ಮಿಕ ನಾಯಕನೊಬ್ಬ ಸಾಮ್ರಾಜ್ಯ ಸ್ಥಾಪನೆಯ ಹಿಂದಿನ ಶಕ್ತಿಯಾಗಿರುವ ಕಥಾ ಪರಂಪರೆ ಕರ್ನಾಟಕದಲ್ಲಿ ಬಹಳ ಹಿಂದಿನದು. ಪ್ರಭುತ್ವ ಮತ್ತು ಧರ್ಮ ಜೊತೆ ಜೊತೆಯಾಗಿ ನಡೆದ 'ಸಂತ ಸಹಯೋಗ ಸಂಪ್ರದಾಯ' ಗಂಗ ಹೊಯ್ಸಳರ ಕಾಲದಿಂದಲೂ ಕರ್ನಾಟಕದಲ್ಲಿತ್ತು. ಗಂಗವಂಶದ ಸ್ಥಾಪಕರಾದ ದಡಿಗ ಮತ್ತು ಮಾಧವರಿಗೆ ಸಿಂಹನಂದಿ ಎಂಬ ಮುನಿಯೂ, ಹೊಯ್ಸಳವಂಶಕ್ಕೆ ಸುದತ್ತಮುನಿಯು ಹಾಗೂ ವಿಜಯನಗರಕ್ಕೆ ವಿದ್ಯಾರಣ್ಯರೂ ನೀಡಿದ ಪ್ರೇರಣೆ, ಪೋಷಣೆ ಈಗ ಇತಿಹಾಸ.

ವಿಜಯನಗರ ಸಾಮ್ರಾಜ್ಯದ ಕುರಿತು ಅಧ್ಯಯನ ಮಾಡುವಲ್ಲಿ ಹಲವು ಭಾಷಿಕ ಆಕರಗಳು ದೊರೆಯುತ್ತವೆ. ಇವು ಒಟ್ಟಾರೆಯಾಗಿ ಕರ್ನಾಟಕದ ಸಾಂಸ್ಕೃತಿಕ ಅನನ್ಯತೆಗೆ ತೋರಿದ ದಾರಿ ಮಾತ್ರ ವಿಭಿನ್ನ ಎನ್ನುವುದರಲ್ಲಿ ಎರಡು ಮಾತಿಲ್ಲ. ಕನ್ನಡ, ತೆಲುಗು, ತಮಿಳು, ಸಂಸ್ಕೃತ, ವಿದೇಶಿಯರ ಬರವಣಿಗೆಗಳು, ಶಾಸನ, ನಾಣ್ಯಗಳು, ಮೌಖಿಕ ವಿವರಗಳು ಹೀಗೆ ವೈವಿಧ್ಯಮಯ ಆಕರಗಳು ದೊರೆಯುತ್ತವೆ. ಭಾರತಕ್ಕೆ ಬ್ರಿಟಿಷರು ಬಂದ ಮೇಲೆ ವಿದೇಶಿ ಬರಹಗಾರರ ಕೃತಿಗಳನ್ನು ಚರಿತ್ರೆಯ ನಿರ್ಮಾಣಕ್ಕಾಗಿ ಬಳಸಿಕೊಂಡಿರುವುದನ್ನು ಕಾಣುತ್ತೇವೆ. ವಿಜಯನಗರಕ್ಕೆ ಬಂದ ಪ್ರಮುಖ ವಿದೇಶಿ ಪ್ರವಾಸಿಗಳಲ್ಲಿ ಮುಖ್ಯರಾದವರೆಂದರೆ ಪೋರ್ಚುಗಲ್ನಿಂದ ಬಂದ ಡೊಮಿಂಗೋ ಪಾಯಸ್, ಪೆರ್ನಾಂವ್ ನ್ಯೂನಿಸ್,ಬಾರ್ಬೊಸ, ವರ್ಥಿಮಾ, ಟಾಮ್ ಪಿರೇಸ್, ಇಟಲಿಯ ನಿಕೊಲೊ ಕೊಂಟಿ, ಸೀಸರ್, ಫ್ರೆಡ್ರಿಕ್, ಪೇತ್ರೋ ಡೆಲ್ಲ ವೆಲ್ಲೆ, ರಷ್ಯಾದ ನಿಕಿಟಿನ್, ಪರ್ಶಿಯನ್ ಲೇಖಕರಾದ ಅಬ್ದುಲ್ ರಜಾಕ್, ಬರನಿ, ಇಸಾಮಿ, ಫೆರಿಸ್ತಾ, ತಬಾತಬಾ,

ಬತೂತ ಮೊದಲಾದವರು. ಬ್ರಿಟೀಷರು ತಮ್ಮ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಅನುಷ್ಠಾನಕ್ಕೆ ಭಾರತೀಯ ಚರಿತ್ರೆಯನ್ನು ಬಳಸಿಕೊಂಡು ಕೋಮುವಿದ್ವೇಷದ ಕಥನ ರೂಪಿಸುವಲ್ಲಿ ತೊಡಗಿದರು. ಅವರ ವಿಭಜಿಸಿ ಆಳುವ ನೀತಿಯ ತತ್ತ್ವವನ್ನು ಈ ಹಿನ್ನೆಲೆಯಲ್ಲಿಯೂ ಬಳಸುವ ಹುನ್ನಾರವನ್ನು ಸೃಷ್ಟಿಸಿಕೊಂಡರು. ಭಾರತೀಯರ ಇತಿಹಾಸ ಪ್ರಜ್ಞೆಯನ್ನು ಟೀಕಿಸುತ್ತಲೇ ತಮ್ಮ ಇತಿಹಾಸದ ನೋಟ, ಕ್ರಮಗಳನ್ನು ಜಾರಿಗೆ ತಂದರು. ಇವರ ಈ ಕ್ರಮಕ್ಕೆ ವಿದೇಶಿ ಬರಹಗಾರರ ಕೃತಿಗಳು ನೆರವು ನೀಡಿದವು.

ವಿಜಯನಗರ ಚರಿತ್ರೆಗೆ ಸಂಬಂಧಿಸಿ ಕೆಲಸ ಮಾಡಿದ ಮೊದಲ ಮೂವರು ಬ್ರಿಟೀಷ್ ಅಧಿಕಾರಗಳೆಂದರೆ ಮಾರ್ಕ್ ವಿಲ್ಕ್, ಕರ್ನಲ್ ಕೋಲಿನ್ ಮೆಕೆಂಜಿ ಮತ್ತು ರಾಬರ್ಟ್ ಸಿವೆಲ್. ವಿಜಯನಗರದ ಚರಿತ್ರೆ ರೂಪಿಸುವಲ್ಲಿ ಇವರ ಕೊಡುಗೆ ಗಮನಾರ್ಹವಾದುದು. ಸಿವೆಲ್ ಬ್ಯಾರಡಸ್, ನ್ಯೂನಿಜ್, ಪಾಯಸ್‌ನ ಬರವಣಿಗೆಗಳನ್ನು ಆಧಾರವಾಗಿಟ್ಟು ವಿಜಯನಗರದ ಮೇಲೆ ಮರೆತು ಹೋದ ವಿಜಯನಗರ ಸಾಮ್ರಾಜ್ಯವೆಂಬ ಕೃತಿ ಬರೆದ. ಇದಕ್ಕೆ ಪ್ರತಿಯಾಗಿ ಬಿ.ಸೂರ್ಯನಾರಾಯಣ ರಾವ್ ಅವರು ೧೯೦೫ "ನೆವರ್ ಟು ಬಿ ಪರ್‌ಗಾಟನ್ ಎಂಪೈರ್" ಎಂಬ ಕೃತಿ ಬರೆದರು. ಸಿವೆಲ್ನ ಕೃತಿಯ ಮೂಲಕ ಮತೀಯ ರಾಜಕಾರಣವೊಂದು ವಿಜಯನಗರದ ಚರಿತ್ರೆಯನ್ನು ಪ್ರವೇಶಿಸಿರುವುದನ್ನು ಕಾಣುತ್ತೇವೆ.

## ೪.೧ : ವಿಜಯನಗರದ ರಾಜಕೀಯ ಹಿನ್ನೆಲೆ

ವಿಜಯನಗರವನ್ನು ಬಹು ಹಿಂದಿನಿಂದಲೂ ಹಿಂದೂ ಸಾಮ್ರಾಜ್ಯವೆಂದು ಕರೆದು ಹಿಂದೂ ಸಂಪ್ರದಾಯ ರಕ್ಷಣೆಯ ಗುರಿ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿದೆ ಎಂಬ ತಿಳುವಳಿಕೆಯನ್ನೇ ನಾವು ನಮ್ಮ ಪಠ್ಯ ಕ್ರಮಗಳ ಮೂಲಕ ವಿದ್ಯಾರ್ಥಿಗಳಿಗೆ ತಲುಪಿಸುತ್ತಿದ್ದೇವೆ. ಆದರೆ ಸಾಮ್ರಾಜ್ಯ ಸಂಘಟನೆಗೆ ಮಧ್ಯಕಾಲೀನ ರಾಜಕೀಯ ವ್ಯವಸ್ಥೆಯ ತುರ್ತನ್ನು ಗಮನಿಸಿ ಅನಿವಾರ್ಯವಾಗಿ ಹುಟ್ಟಿಕೊಂಡ ಒಂದು ಸಾಮ್ರಾಜ್ಯ ಎಂಬುದಾಗಿ ಗುರುತಿಸಿಕೊಂಡಾಗ ರಕ್ಷಣೆ, ಸಂಘಟನೆ, ಸಮಾನತೆಯ ಆಶಯಗಳೇ ಅಲ್ಲಿ ಪ್ರಧಾನವಾಗಿ ಕಾಣುತ್ತವೆ. ಉತ್ತರದಿಂದ ಬೆಂಬತ್ತಿ ಬರುತ್ತಿರುವ ದಾಳಿಕೋರರು ದಕ್ಷಿಣ ರಾಜಕೀಯ ಶಕ್ತಿಗಳನ್ನು ಬಗ್ಗುಬಡಿಯಲು ಸಜ್ಜಾಗಿ ಬರುತ್ತಿರುವ ಸಂದರ್ಭವನ್ನು ಇತಿಹಾಸಕಾರರು "ಈ ಸಂಧಿಕಾಲದಲ್ಲಿ, ಹಿಂದೂ ಧರ್ಮ ಮತ್ತು ಹಿಂದೂ ಸಮಾಜ, ಸಂಸ್ಕೃತಿಗಳಿಗೆ ದಕ್ಷಿಣದಲ್ಲಿ ಆಪತ್ತು ಒದಗಿದ್ದಾಗ ವಿಜಯನಗರ ಸಾಮ್ರಾಜ್ಯವು ತಲೆಯೆತ್ತಿತ್ತು, ಹಿಂದೂ ಧರ್ಮದ ರಕ್ಷಕ ತಡೆಗೋಡೆಯಾಗಿ ನಿಂತಿತು"[೧] ಎಂದು ಬರೆಯುತ್ತಾರೆ

ವಿದ್ಯಾರಣ್ಯರು, ಹಕ್ಕ ಬುಕ್ಕರೆಂಬ ಕೆಳವರ್ಗದ ನಾಯಕರ ಮುಖಾಂತರ

೧. ಚಟ್ನೀಸ್ ಕೆ. ಎನ್.: ಮಿಡಿವಲ್ ಇಂಡಿಯನ್ ಹಿಸ್ಟರಿ : ಪುಟ–೨೯, ನವದೆಹಲಿ

ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಾಡಿ ಹಿಂದುತ್ವ ರಕ್ಷಣೆಮಾಡಿದರು ಎಂಬ ಕೋಮು ವಿದ್ವೇಷದ ಕಥನಗಳು ಯುರೋಪಿಯನ್ ಹಾಗೂ ಮುಸ್ಲಿಂ ಗ್ರಂಥಗಳಲ್ಲಿದೆ.

ನಿಜ ಸಂಗತಿ ಇದಕ್ಕೆ ವಿರೋಧವಾಗಿದೆ. ಶಂಕರಾಚಾರ್ಯರ ನಂತರ ಅದ್ವೈತ ಪಂಥದ ಪ್ರತಿಭಾವಂತ ಪ್ರತಿಪಾದಕರೂ, ಬಹುಮುಖ ವಿದ್ವಾಂಸರೂ ಆದ ವಿದ್ಯಾರಣ್ಯರು ಶೃಂಗೇರಿ ಅದ್ವೈತಮಠಕ್ಕೆ ಪೀಠಾಧಿಪತಿಗಳಾಗಿದ್ದರು ಮತ್ತು ಅವರು ಪೀಠವನ್ನೇರುವಾಗಲೇ ವಿಜಯನಗರ ಸ್ಥಾಪನೆಯಾಗಿ ಎರಡು ದಶಕಗಳು ಸಂಧಿದ್ದವು ಎನ್ನುವ ವಿಚಾರಗಳು ಶಾಸನಗಳಿಂದ ತಿಳಿಯುತ್ತದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಬಳಿಕ ವಿದ್ಯಾತೀರ್ಥ ಶ್ರೀಪಾದರು, ಭಾರತೀ ತೀರ್ಥ ಶ್ರೀಪಾದರು, ಕಾಳಾಮುಖ ಸಂಪ್ರದಾಯದ ಕಾಶೀವಿಲಾಸ ಕ್ರಿಯಾಶಕ್ತಿ ಎಂಬ ಮುನಿಗಳು ವಿಜಯನಗರ ಅರಸರಿಗೆ ಗುರುಗಳಾಗಿದ್ದರು. ಇವರುಗಳನ್ನು ರಾಜಗುರುಗಳೆಂದು ಶಾಸನಗಳು ಉಲ್ಲೇಖಿಸುತ್ತವೆ. ಆದರೆ ವಿದ್ಯಾರಣ್ಯರೇ ವಿಜಯನಗರ ಸಾಮ್ರಾಜ್ಯ ಸ್ಥಾಪಕರೆಂಬುದಕ್ಕೆ ಶಾಸನಗಳ ಆಧಾರ ಸಾಲದು. ಆದರೂ ವಿದ್ಯಾರಣ್ಯರಿಂದ ವಿಜಯನಗರವೆಂದು ಭಾವಿಸಲಾಗಿದೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಹಿಂದಿನ ಉದ್ದೇಶ ಕುಸಿದು ಬಿದ್ದ ಒಟ್ಟು ರಾಜಕೀಯ ಶಕ್ತಿಗಳನ್ನು ಮರು ಕಟ್ಟುವಿಕೆಯೇ ಆಗಿದೆ. ವಿಜಯನಗರವು ಧರ್ಮಾಂಧ ರಾಜ್ಯವಾದ ಬಗ್ಗೆ ಎಲ್ಲಿಯೂ ಉಲ್ಲೇಖ ದೊರೆಯುವುದಿಲ್ಲ. ಅದು ಹಿಂದೂ ಧರ್ಮವನ್ನು ಮಾತ್ರ ಪೋಷಿಸಲಿಲ್ಲ. ವೈಷ್ಣವರು, ವೀರಶೈವರು, ಜೈನರು, ಕ್ರಿಶ್ಚಿಯನರು, ಮುಸ್ಲಿಮರು, ಮೊದಲಾದ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಹಿತವನ್ನು ರಕ್ಷಿಸಿತು ಮತ್ತು ಪೋಷಿಸಿತು. ಜೈನರು ವೈಷ್ಣವರಿಂದಲೇ ಹಿಂಸೆಗೊಳಗಾದ ೧ನೇ ಬುಕ್ಕನು ಜೈನರ ಹಿತವನ್ನು ರಕ್ಷಿಸಿದನು. ಪರಸ್ಪರ ಧಾರ್ಮಿಕ ಸಂಘರ್ಷಗಳು ಘಟಿಸಿದಾಗ ವಿಜಯನಗರದ ಪ್ರಭುಗಳು ಮೆರೆದ ಉದಾರತೆ, ಧಾರ್ಮಿಕ ಸಹಿಷ್ಣುತೆ ಹಲವು ಕಾರಣಗಳಿಗಾಗಿ ಮುಖ್ಯವಾಗುತ್ತವೆ. ವಿಜಯನಗರದ ಸರಕಾರದಲ್ಲಿ ಮುಸ್ಲಿಮರನ್ನು ನೇಮಿಸಲಾಗಿತ್ತು. ೨೦೦೦ ಮುಸ್ಲಿಂ ಬಿಲ್ಲುಗಾರರಿದ್ದರು. ಅವರಿಗೆ ಮಸೀದಿಗಳನ್ನು ನಿರ್ಮಿಸಿಕೊಳ್ಳಲು ಅವರಿಗೆ ಅವಕಾಶವನ್ನೂ ನೀಡಲಾಗಿತ್ತು. ೨ನೇ ದೇವರಾಯ ಮತ್ತು ಕೃಷ್ಣದೇವರಾಯ ಕುಳಿತುಕೊಳ್ಳುತ್ತಿದ್ದ ಸಿಂಹಾಸನದ ಬಳಿ ಇಸ್ಲಾಂ ಧರ್ಮಕ್ಕೆ ಗೌರವ ಸೂಚಿಸುವುದರ ಕುರುಹಾಗಿ ಕುರಾನ್ ಗ್ರಂಥವನ್ನು ಇರಿಸಲಾಗಿತ್ತು. ಗೋವೆಯ ಕೊಂಕಣಿ ಕ್ರಿಶ್ಚಿಯನ್ನರು ಪೋರ್ಚುಗೀಸರಿಂದ ಕಿರುಕುಳಕ್ಕೊಳಗಾದಾಗ ಕರಾವಳಿ ಭಾಗದಲ್ಲಿ ಅವರ ಹಿತವನ್ನು ಕಾಪಾಡಿದರು. ಹಾಗಾಗಿ ವಿಜಯನಗರವು ಸ್ಥಾಪನೆಯಾದದ್ದು ಕೇವಲ ಹಿಂದೂ ಧರ್ಮವನ್ನು ಮಾತ್ರ ರಕ್ಷಿಸುವುದಕ್ಕಲ್ಲ. [೨]

---

೨. ಪ್ರೊ. ಕೆ. ಎಸ್. ಶಿವಣ್ಣ(ಸಂ) ಕರ್ನಾಟಕ ಚರಿತ್ರೆ : ಸಂಪುಟ ೨: ಪುಟ ೧೩

ಉತ್ತರದ ಖಿಲ್ಜಿ ಮತ್ತು ತುಘಲಕ್ ಆಡಳಿತಗಳು ರಾಜಕೀಯ, ಆರ್ಥಿಕ ಶಕ್ತಿಯಾಗಿ ದಕ್ಷಿಣಕ್ಕೂ ವಿಸ್ತರಿಸುತ್ತಿರುವ ಸಂದರ್ಭದಲ್ಲಿ ಜನರ ಅಭದ್ರತೆಯ ಭಾವನೆಯನ್ನು ಹೋಗಲಾಡಿಸುವ ಕಾರಣದಿಂದಲೂ, ದಕ್ಷಿಣದ ರಾಜ್ಯಗಳು ಐಕ್ಯತೆ ಪಡೆಯುವಲ್ಲಿ ಸಂಘಟಿತರಾಗುವ ಅವಶ್ಯಕತೆಯ ಕಾರಣದಿಂದಲೂ ವಿಜಯನಗರ ಸಾಮ್ರಾಜ್ಯ ತನ್ನ ಅಸ್ತಿತ್ವವನ್ನು ಪಡೆದುಕೊಂಡಿತು. ಕನಕದಾಸರ ಕೃತಿಗಳಲ್ಲಿ ಏಕೆ ಹಿಂದೂ-ಮುಸ್ಲಿಂ ಸಂಘರ್ಷದ ನೆಲೆಗಳು ಕಾಣಿಸಿಕೊಳ್ಳುವುದಿಲ್ಲ? ಎಂಬ ಪ್ರಶ್ನೆಗೆ ಇದು ಉತ್ತರವೂ ಆದೀತು.

ರಾಜಕೀಯ ಸಂಘಟನೆಯ ಪ್ರಬಲ ಶಕ್ತಿಯಾಗಿ ಹೊರ ಹೊಮ್ಮಿದ ವಿಜಯನಗರದ ಸಾಮ್ರಾಜ್ಯ ಇಡೀ ದಕ್ಷಿಣ ಭಾರತವನ್ನು ಆವರಿಸಿಕೊಂಡು ಬೆಳೆಯಿತು. ವಿಜಯನಗರಕ್ಕೆ ಭೇಟಿ ನೀಡಿದ ಬಹಳಷ್ಟು ವಿದೇಶಿ ಪ್ರವಾಸಿಗರು ಕೊಟ್ಟ ಮಾಹಿತಿಯ ಪ್ರಕಾರ ವಿಜಯನಗರದ ಸಾಮ್ರಾಜ್ಯದಂತಹ ಸಾಮ್ರಾಜ್ಯ ಬೇರೆ ಎಲ್ಲಿಯೂ ಕಾಣಸಿಗುವುದಿಲ್ಲ. ಮಧ್ಯಕಾಲೀನ ಭಾರತದ ಬಹುದೊಡ್ಡ ಮಿಲಿಟರಿ ಶಕ್ತಿಯಾಗಿ ಕಾಣಿಸಿಕೊಂಡ ಈ ಸಾಮ್ರಾಜ್ಯ ಅತ್ಯಂತ ಸಂಪದ್ಭರಿತವಾಗಿತ್ತು ಮತ್ತು ಯುದ್ಧ-ಅಧಿಕಾರ-ಸೋಲು-ಗೆಲುವುಗಳ, ಪ್ರಭುತ್ವ-ಪಾಳೇಗಾರಿಕೆಯ ಮೇಲಾಟಗಳ ತಾಣವಾಗಿತ್ತು. ವಿಜಯನಗರ ಪ್ರಭುತ್ವಕ್ಕೆ ಪರ ವಿರೋಧಗಳು ಇದ್ದೆ ಇದ್ದವು. ಕೆಲವರು ಆಡಳಿತಕ್ಕೆ ವಿರುದ್ಧವಾಗಿ, ಅವಿಧೇಯವಾಗಿ ನಡೆದುಕೊಂಡು, ಪ್ರತಿಭಟನೆ ನಡೆಸಿದರೆ ಕೆಲವರು ಪ್ರಭುತ್ವವನ್ನೇ ಪ್ರಶ್ನಿಸತೊಡಗಿದರು.

ಬೃಹತ್ ಸಾವ್ರಾಜ್ಯವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಉದ್ದೇಶದಿಂದ ಸೃಷ್ಟಿಯಾದ ಅಮರನಾಯಕ ಪದ್ಧತಿ ಮಧ್ಯಕಾಲೀನ ಯುರೋಪಿನ ಊಳಿಗಮಾನ್ಯ (ಫ್ಯೂಡಲಿಸಂ) ವ್ಯವಸ್ಥೆಯನ್ನು ಹೋಲುತ್ತಿತ್ತು. ವಿಜಯನಗರದ ಉತ್ಕರ್ಷದ ಕಾಲದಲ್ಲಿ ಅಮರನಾಯಕರೆಂದು ಕಾಣಿಸಿಕೊಂಡ ಈ ಸೈನ್ಯಾಧಿಕಾರಿಗಳು ಪತನಾನಂತರ ಪಾಳೇಗಾರರೆಂಬ ಹೆಸರನ್ನು ಪಡೆದರು. ದೇವರಾಯ ಹಾಗೂ ಕೃಷ್ಣದೇವರಾಯನ ಕಾಲಘಟ್ಟದಲ್ಲಿ ಸುಭದ್ರವಾಗಿದ್ದ ಅಮರನಾಯಕ ವ್ಯವಸ್ಥೆ ನಂತರದ ಕಾಲ ಘಟ್ಟದಲ್ಲಿ ವಿವಿಧ ಪ್ರದೇಶಗಳಲ್ಲಿ ಹರಿದು ಹಂಚಿ ಹೋಯಿತು. ಅಧಿಕಾರ ಪ್ರಭುತ್ವದ ಬಗೆಗಿನ ಸ್ವಾರ್ಥ, ಅಧಿಕಾರದಾಹಗಳು ಒಟ್ಟು ಸಾಮಾಜಿಕ ಬದುಕಿನ ಮೇಲೆ ಉಂಟು ಮಾಡಿದ ತಲ್ಲಣಗಳು, ಸೃಷ್ಟಿಸಿದ ಬಿಕ್ಕಟ್ಟುಗಳು ಚಿಂತನಯೋಗ್ಯವಾಗಿವೆ.

ವಿಜಯನಗರದ ಇತಿಹಾಸವನ್ನು ಬರೆಯುವಲ್ಲಿ ವಸಾಹತುಶಾಹಿ ಹಾಗೂ ರಾಷ್ಟೀಯ ಪ್ರವೃತ್ತಿಯ ಎರಡು ಮಾದರಿಗಳನ್ನು ಅನುಸರಿಸಿರುವುದನ್ನು ಕಾಣಬಹುದು. ವಿಜಯನಗರದ ಇತಿಹಾಸದ ಮೇಲೆ ಮೊದಲ ಬಾರಿ ಬೆಳಕು ಚೆಲ್ಲಿದ ಕೃತಿ ರಾಬರ್ಟ್ ಸಿವೆಲ್‌ನ "A forgotten Empire Vijayanagara : A contribution to the History of India (೧೯೦೦). ರಾಬರ್ಟ್ ಸಿವೆಲ್ (೧೮೪೫-೧೯೨೫) ಬ್ರಿಟೀಷ್ ಸರಕಾರದ ಸಿವಿಲ್ ಸೇವೆಯಲ್ಲಿದ್ದ, ಮದ್ರಾಸ್ ರೆಕಾರ್ಡ್ ಆಫೀಸಿನಲ್ಲಿರುವಾಗ ವಿಜಯನಗರದ ಕುರಿತು ಮಹತ್ವದ ದಾಖಲೆಗಳನ್ನು ಕಲೆಹಾಕಿದ. ವಿಜಯನಗರದ ಕಾಲದಲ್ಲಿ ಭೇಟಿ ನೀಡಿದ ಪೋರ್ಚುಗೀಸ್ ವರ್ತಕ ಹಾಗೂ ಸಾಹಸಿಗಳ ವರದಿಯನ್ನು ಅವಲಂಭಿಸಿ ವಿಜಯನಗರದ ಇತಿಹಾಸವನ್ನು ರಚಿಸಿದ. ಆದರೆ ಅವನ ಬರಹವು ವಸಾಹತುಶಾಹಿ ಒಲವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂಬ ಸಂಗತಿ ದೇಶೀಯ ಹಾಗೂ ವಿದೇಶಿ ವಿದ್ವಾಂಸರು ಗುರುತಿಸಿದರು. ಅಮೇರಿಕನ್ ವಿದ್ವಾಂಸ ಬರ್ಟನ್ ಸ್ಟೀನ್ ಸಿವೆಲ್‌ನ ಕೃತಿಯ ಗುಣ, ನ್ಯೂನ್ಯತೆಯನ್ನು ವಿಮರ್ಶಿಸಿದ. ಅವನು ತನ್ನ ಕೃತಿ 'The new Cambridge history of India : Vijayanagara (೧೯೮೯) ದಲ್ಲಿ ಸಿವೆಲ್‌ನ ಬರಹದಗಳಲ್ಲಿ 'ಸಾರ್ವಭೌಮಿಕ ಒಲವು'ಗಳನ್ನು ಗುರುತಿಸುತ್ತಾ "ಶುದ್ಧ ಜ್ಞಾನದ ದೃಷ್ಟಿಯಿಂದಲ್ಲದೆ, ಅಧೀನರಾದ ಪ್ರಜೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ದೃಷ್ಟಿಯಿಂದ ರಚಿತವಾದ ಐತಿಹಾಸಿಕ ಸಾಧನ" ಎನ್ನುತ್ತಾನೆ.[೩] ಇದಾದ ನಂತರ ೧೯೩೬ ರಲ್ಲಿ ವಿಜಯನಗರ ಉದಯದ ೬೦೦ನೇ ವರ್ಷವನ್ನು ಗುರುತಿಸಿ (೧೩೩೬-೧೯೩೬) ವಿಚಾರ ಸಂಕಿರಣವನ್ನು ವ್ಯವಸ್ಥೆಗೊಳಿಸಲಾಯಿತು. ಇಲ್ಲಿ ಮಂಡಿಸಲಾದ ವಿದ್ವತ್‌ಪೂರ್ಣ ಪ್ರಬಂಧಗಳನ್ನು ಒಂದು ವಿಜಯನಗರ ಸೆಕ್ಸೆಂಟಿನರಿ ಕಮ್ಮೆಮೊರೇಷನ್ ವಾಲ್ಯೂಮ್ ಎಂಬ ಹೆಸರಿನಲ್ಲಿ ಪ್ರಕಟಿಸಲಾಯಿತು. ಪ್ರಸಿದ್ಧ ವಿದ್ವಾಂಸರಾದ ಬಿ.ಎ. ಸಾಲೆತೊರೆ, ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ವೆಂಕಟರಮಣಯ್ಯ ಮೊದಲಾದವರ ಲೇಖನಗಳಲ್ಲಿ "ವಿಜಯ ನಗರದ ವೈಭವೀಕರಣ" ವ್ಯಕ್ತವಾಗಿತ್ತು. ಅದನ್ನು ಮಹಾನ್ ಹಿಂದೂ ರಕ್ಷಕ ಸಾಮ್ರಾಜ್ಯವೆಂದು ಬಿಂಬಿಸಲಾಯಿತು. ಕರ್ನಾಟಕದಲ್ಲಿ ಇಸ್ಲಾಂಗೆ ಹಾಕಿದ ತಡೆಗೋಡೆ ಎಂಬಂತೆ ಚಿತ್ರಿಸಲಾಯಿತು. ಮತೀಯ ನೆಲೆಯ ಚರಿತ್ರೆಯೊಂದು ಆಳುವ ವರ್ಗದ ಪ್ರತಿನಿಧಿ ಎಂಬಂತೆ ಕೆಲಸ ಮಾಡಿತು.

---

೩."Only popular work ....... (in which) on outline of the genealogical and chronological evidence on the dynasties of vijayanagara was briefly presented followed by two long and historically configuring translation of the accounts of sixteenth century Portuguese visitors to the city" (Stein Burton: The New Cambridge History of India: Vijayanagara, Cambridge University Press Page-೩-೪,೧೯೮೯)]

ಅಮೇರಿಕದ ಬರ್ಟನ್ ಸ್ಟೀನ್, ಜಪಾನಿನ ನೊಬರು ಕರಾಶಿಮ ಮೊದಲಾದವರು ವಿಜಯನಗರದ ಶಾಸನ, ನ್ಯೂನಿಜ್, ಫೇಸ್ ಬಾರ್ಬೋಸಾ ಮತ್ತು ಇತರರ ಹೇಳಿಕೆಗಳನ್ನು ಪ್ರಮುಖ ಆಧಾರವೆಂದು ಭಾವಿಸಿ ವಿಜಯನಗರ ಸಾಮ್ರಾಜ್ಯದ ರಾಜಕೀಯ ಚರಿತ್ರೆಯನ್ನು ನಿರೂಪಿಸುತ್ತಾರೆ. ಆ ಕಾಲದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳಲು ಕರಾಶಿಮ ಕೃತಿಗಳು ಬಹುಮುಖ್ಯವಾಗುತ್ತವೆ. ಹದಿನಾಲ್ಕನೇ ಶತಮಾನದಿಂದ ಮುಂದಕ್ಕೆ ಕೈಗಾರಿಕೆ ಮತ್ತು ವಾಣಿಜ್ಯ ವಿಕಾಸಗೊಂಡುದನ್ನು ಅವು ಸೂಚಿಸುತ್ತವೆ. ಈ ಬಗೆಯ ವಿಕಾಸ ವಿಜಯನಗರದ ಅರಸರನ್ನು ಕರ್ನಾಟಕದಿಂದ ತಮಿಳುನಾಡಿಗೆ ಆಕರ್ಷಿಸಿರಬೇಕೆಂದು ಅವರು ಅಭಿಪ್ರಾಯ ಪಡುತ್ತಾರೆ.

ಹಲವು ಭಾರತೀಯ ವಿದ್ವಾಂಸರು ಕೂಡ ವಿಜಯನಗರದ ರಾಜಕೀಯ ಸಮಾಜಾರ್ಥಿಕ ವಿಚಾರಗಳ ಕುರಿತು ಐತಿಹಾಸಿಕ ಕೃತಿ ರಚನೆ ಮಾಡಿದ್ದಾರೆ. ಟಿ.ವಿ.ಮಹಾಲಿಂಗಂ, ಎ.ವಿ. ವೆಂಕಟರತ್ನ, ಜಿ.ಎಸ್. ದೀಕ್ಷಿತ್, ಬಿ. ಆರ್. ಗೊಪಾಲ್ ಮತ್ತು ಪಿ.ಬಿ. ದೇಸಾಯಿಯಂತಹ ವಿದ್ವಾಂಸರು ವಿಜಯನಗರದ ಸಾಮಂತ-ಒಕ್ಕೂಟ- ವಿಕೇಂದ್ರೀಕೃತ ರಾಜ್ಯಾಡಳಿತ ವ್ಯವಸ್ಥೆಯ ಕುರಿತು ವಿಮರ್ಶಿಸಿದ್ದಾರೆ. ೧೯೪೫ರಿಂದೀಚೆಗೆ ವಿಜಯನಗರವನ್ನು ಕುರಿತು ಬಂದ ಬರಹಗಳು ಒಟ್ಟು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ನೋಟಗಳನ್ನು ಕೊಡುವಲ್ಲಿ ಸಮರ್ಥವಾಗಿವೆ. ಇದಕ್ಕೆ ಪೂರಕವಾಗಿ ಸುತ್ತಮುತ್ತಲ ಪರಿಸರದಲ್ಲಿ ಕೈಗೊಂಡ ಉತ್ಖನನಗಳೂ ವಿಜಯನಗರಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಹೊರಗೆಡಹಲು ಸಮರ್ಥವಾದವು. ಕೃಷ್ಣದೇವರಾಯನ ಕಾಲದ ಮಹತ್ವದ ಶಾಸನಗಳ ಸಂಗ್ರಹಕಾರ್ಯ, ಪ್ರಕಟನೆಯೂ ಒಟ್ಟು ಆ ಕಾಲದ ಇತಿಹಾಸದ ಸಾಮಗ್ರಿಗಳನ್ನು ಇಮ್ಮಡಿಗೊಳಿಸಿತು.

ಶಾಸನಗಳು, ಸ್ತಂಭಲೇಖ, ನಾಣ್ಯಗಳು ಮೊದಲಾದ ಪ್ರಾಚೀನ ಐತಿಹಾಸಿಕ ಸಾಮಗ್ರಿಗಳನ್ನು ಬಳಸಿಕೊಂಡು ವಿಶ್ಲೇಷಿಸುವ ಪ್ರಯತ್ನಗಳು ಒಂದು ಕ್ರಮವಾದರೆ, ವಿಜಯನಗರದ ಸಮಕಾಲೀನ ಸಾಹಿತ್ಯವನ್ನು ಆ ಕಾಲದ ರಾಜಕೀಯ, ಸಾಮಾಜಿಕ ನಿಲುವುಗಳನ್ನು ರೂಪಿಸುವ ಆಕಾರವಾಗಿ ಬಳಸಿಕೊಳ್ಳುವುದು ಇನ್ನೊಂದು ಕ್ರಮ. ಶ್ರೀ ಕೃಷ್ಣದೇವರಾಯನ ಕಾಲವನ್ನೇ ಕೇಂದ್ರೀಕರಿಸಿಕೊಂಡು ನೋಡುವುದಾದರೆ ಆ ಕಾಲದ ತೆಲುಗು-ಕನ್ನಡ ಸಾಹಿತ್ಯ ಕೃತಿಗಳು, ಶಾಸನಗಳು ರಾಯನ ದಿಗ್ವಿಜಯ, ಔದಾರ್ಯ, ನಾಡಿನ ಸಾಂಸ್ಕೃತಿಕ ವಿಷಯಗಳನ್ನು ಬಳಸಿಕೊಂಡು ರಚಿತವಾಗಿದೆ. ಚಾರಿತ್ರಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುವುದಕ್ಕೆ ಇವು ಸಮರ್ಥವಾಗಿವೆ.

**ತೆಲುಗು ಸಾಹಿತ್ಯ :**

ತೆಲುಗು ಹಾಗೂ ತಮಿಳು ಸಾಹಿತ್ಯದಲ್ಲಿ ವಿಜಯನಗರದ ಅರಸರ ಯುದ್ಧ, ವ್ಯಕ್ತಿತ್ವ ರಾಜಕಾರಣಕ್ಕೆ ಸಂಬಂಧಿಸಿದ ಅನೇಕ ಕೃತಿಗಳು ದೊರೆಯುತ್ತವೆ. ಕೃಷ್ಣದೇವರಾಯನ ಅಮುಕ್ತ ಮೌಲ್ಯದ, ಅಲ್ಲಾಸಾನಿ ಪೆದ್ದನನ 'ಮನುಚರಿತಮು', ವೀರಭದ್ರನ 'ಶೃಂಗಾರ ಶಾಕುಂತಳ', ಶ್ರೀನಾಥನ 'ಶ್ರೀಹರಿವಿಲಾಸಮು', 'ಭೀಮೇಶ್ವರ ಪುರಾಣಮು',ಭಾಸ್ಕರನ 'ರಾಮಾಯಣ', ನಾಚನ ಸೋಮನ 'ಉತ್ತರ ಹರಿವಂಶಮು' ಮೊದಲಾದವು ಗಮನಾರ್ಹವಾದವು. ಕೃಷ್ಣದೇವರಾಯನ ದಿಗ್ವಿಜಯ ದಂಡಯಾತ್ರೆಯನ್ನು ನಿರೂಪಿಸುವಲ್ಲಿ ಆ ಕಾಲದ ತೆಲುಗು ಕೃತಿಗಳು ಹೆಚ್ಚು ಆಸಕ್ತಿ ತೋರಿವೆ. ಸ್ವತಃ ಕವಿಯಾದ ಶ್ರೀಕೃಷ್ಣ ದೇವರಾಯ ತನ್ನ 'ಅಮುಕ್ತಮೌಲ್ಯದ' ತೆಲುಗು ಕೃತಿಯಲ್ಲಿ ತನ್ನ ಸಾಹಸದ ಗಾಥೆಯನ್ನು ಬಿಂಬಿಸುತ್ತಾ ತಾನು ನಡೆಸಿದ ಯುದ್ಧಗಳ ಕ್ರಮಬದ್ಧ ವಿವರಣೆ ನೀಡುತ್ತಾನೆ. ಕೇವಲ ರಾಜಕೀಯ ವಿವರಗಳನ್ನು ಮಾತ್ರ ಹೊಂದಿಲ್ಲ ಇದರಲ್ಲಿ ರಾಜನೀತಿ, ಸಾಮಾಜಿಕ ಸ್ಥಿತಿಗತಿಗಳ ವಿವರಗಳೂ ಇವೆ. ಇವನ ಇನ್ನೊಂದು ಕೃತಿ 'ಜಾಂಬವತಿ ಪರಿಣಯಮ್'. ಇದು ಐದು ಅಂಕಗಳ ನಾಟಕ. ಕೃಷ್ಣದೇವರಾಯ ಗತಿಸಿದ ೧೦೦ ವರ್ಷಗಳ ನಂತರ ಜನರ ಬಾಯಿ ಮಾತಿನ ಮೂಲಕ ಕಟ್ಟಿದ ರಾಯವಾಚಕವೂ ಗಮನಾರ್ಹವಾದ ದಾಖಲೆ. ಇದು ಕೈಫಿಯತ್ತಿನ ಮಾದರಿಯನ್ನು ಹೋಲುತ್ತದೆ. ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕದಿಂದ ಹಿಡಿದು, ಒರಿಸ್ಸಾ ದಂಡಯಾತ್ರೆಯ ದಾಖಲೆಗಳಿವೆ. ರಾಯನ ಆಸ್ಥಾನದ ಅಷ್ಟದಿಗ್ಗಜರಲ್ಲಿ ಒಬ್ಬನಾದ ನಂದಿ ತಿಮ್ಮಣ ರಚಿಸಿದ 'ವಾಣಿವಿಲಾಸಂ' 'ಪಾರಿಜಾತಾಪಹರಣಂ' ಪ್ರಸಿದ್ಧ ಕೃತಿಗಳು. 'ಪಾರಿಜಾತಾಪಹರಣಂ' ನಲ್ಲಿ ರಾಯನ ವಂಶ, ಪ್ರಶಸ್ತಿ, ಪ್ರಶಂಸೆ, ದಿಗ್ವಿಜಯಗಳ ವಿವರಗಳಿವೆ. ಅಲ್ಲಸಾನಿ ಪೆದ್ದನ್ನ ರಚಿಸಿದ ಮನುಚರಿತ ಅಥವಾ **'ಸ್ವಾರೋಂಚಿಷ ಮನು ಸಂಭವಮು'** ಕೃಷ್ಣದೇವರಾಯನ ಅಂಕಿತವಾಗಿದ್ದು ಇದು ಕೂಡ ರಾಯನ ವಂಶ ಪ್ರಶಸ್ತಿ, ಕೀರ್ತಿ, ಪ್ರತಾಪ, ಪ್ರಶಂಸೆ, ದಿಗ್ವಿಜಯಗಳನ್ನು ಚಿತ್ರಿಸುವ ಕೃತಿಯಾಗಿದೆ. ಇವನು ರಾಯನ ನಿಕಟವರ್ತಿಯಾದುದರಿಂದ ಈ ಕೃತಿ ಚಾರಿತ್ರಿಕ ಆಕರವಾಗಿಯೂ ಪರಿಗಣಿಸಲ್ಪಟ್ಟಿದೆ. ಕುಮಾರ ಧೂರ್ಜಟಿಯ 'ಕೃಷ್ಣ ರಾಯ ವಿಜಯ', 'ಅಚ್ಯುತ ರಾಯಾಭ್ಯುದಯ', ರಾಮರಾಜಭೂಷಣ, ಮೂರ್ತಿ ಕವಿಗಳು ರಾಮರಾಯನ ಕಾಲದ ಕಥನವನ್ನು ನಿರೂಪಿಸಿದ್ದಾರೆ.

ಮಧ್ಯಕಾಲೀನ ವಿಜಯನಗರ ಸಾಮ್ರಾಜ್ಯದ ಉತ್ಕರ್ಷದ ಸಂದರ್ಭದಲ್ಲಿ ರಚಿತವಾದ ತೆಲುಗು ಸಾಹಿತ್ಯವು ಯುದ್ಧ, ದಂಡಯಾತ್ರೆ, ವಿಜಯ ಯಾತ್ರೆಯ ಚರಿತ್ರೆಯೇ ಆಗಿದೆ. ಸ್ವತ: ಕೃಷ್ಣ ದೇವರಾಯ ತನ್ನ ಅಮುಕ್ತ ಮೌಲ್ಯದಲ್ಲಿ ತನ್ನ ದಂಡಯಾತ್ರೆಯ ಬಗೆಗೆ ಬರೆದುಕೊಂಡಿದ್ದಾನೆ. ಕಲಬುರ್ಗಿ ದಂಡಯಾತ್ರೆಯ ಕುರಿತು

ಅಮುಕ್ತಮೌಲ್ಯದಲ್ಲಿ

ತಿರುಗು ಹರಿಪುರ ಸುರತರು ಸುರಲ ಮರಗಿ
ಬಹುಳ ಹಳಹಳಿಭೃತ ಕಲಬರಿಗ ನಗರ
ಸರಗ ಪುರವರ ಪರಿಭೃತ ಜವನ ಯವನ
ಪೃತನಭವ ದಸಿನನೀದೆಗಿ ಕೃಷ್ಣರಾಯ

ಈ ದಂಡಯಾತ್ರೆಗೆ ಸಂಬಂಧಿಸಿದ ಇನ್ನಷ್ಟು ವಿವರಗಳನ್ನು ರಾಯರ ಆಸ್ಥಾನದ ವಿದ್ವಾಂಸರಾಗಿದ್ದ ಬಂಡಾರು ಲಕ್ಷ್ಮೀನಾರಾಯಣರು ತಮ್ಮ 'ಸಂಗೀತ ಸುರ್ಯೋದಯ' ದಲ್ಲಿ ವಿವರಿಸಿದ್ದಾರೆ. ಕೃಷ್ಣದೇವರಾಯನ ರಾಯಚೂರು ದಂಡಯಾತ್ರೆಯನ್ನು ಪ್ರಶಂಸಿಸುತ್ತಾ ತನ್ನ 'ಸಂಗೀತ ಸುರ್ಯೋದಯ' ಸಂಸ್ಕೃತ ಗ್ರಂಥದ ಪೀಠಿಕೆಯಲ್ಲಿ

ಸೋಯಂ ಕೃಷ್ಣ ನೃಪೇಶ್ವರೋ
ಗಜಪತಿಂ ಜಿಲ್ವಾ ತದೀಯಾತ್ರಿಯಾ
ಸಾಕಂ ತಸ್ಯ ಸುತಾ ಮುದೂಹ್ಯ
ಯವನಕ್ಷ್ಮಾಪಂ ಸಪಾದಂ ತತಃ
ಗೊಬ್ಬೂರು ಸ್ಥಲವಾಸಿನಂ ಸರಭಿಸಂ
ಜಿತ್ವಾನಲ ವಿದ್ಯಾಪೃತಂ
ಹಸ್ತಶ್ವಾನ್ ಸತದೀಯ ದುರ್ಗಮತುಲಂ
ರಾಯಚೂರು ಮಾದತ್ತವಾನ್ [೪]

ಎಂದು ವರ್ಣಿಸಿದ್ದಾನೆ. ನ್ಯೂನಿಜ್, ಫೆರಿಸ್ತಾ ಹೇಳುವ ಅನೇಕ ಸಂಗತಿಗಳೊಂದಿಗೆ ಈ ಬರಹಗಳನ್ನು ಹೋಲಿಸಿ ನೋಡಿದರೆ ಅನೇಕ ವೈಷಮ್ಯಗಳು ಕಾಣಿಸಿಕೊಳ್ಳುತ್ತವೆ. ಅವರು ಹೇಳುವ ಸಂಗತಿಗಳು ಕೆಲವು ಸತ್ಯವಾದರೂ ಕೆಲವು ಕಟ್ಟುಕತೆ ಎಂದು ತೆಲುಗು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಸಮಕಾಲೀನ ತೆಲುಗು ಗ್ರಂಥಗಳು ಹೇಳುವ ಕಥೆಯೆ ಬೇರೆ. ಉದಾಹರಣೆಗೆ ಕೊಂಡವೀಡು ದುರ್ಗದ ಸಮೀಪದಲ್ಲಿ ನಡೆದ ಯದ್ಧದಲ್ಲಿ ಅಳಿಯ ರಾಮರಾಯನ ಸೈನ್ಯವು ಕುಲ್ಲೀ ಕುತುಬ್ ಷಾನ ಸೈನ್ಯದಿಂದ ಸೋಲಲ್ಪಟ್ಟಿತು ಎಂದು ಮುಸ್ಲಿಂ ಚರಿತ್ರಕಾರರು ಬರೆದರೆ 'ಕಳಾಪುರ್ಣೋದಯ' ಗ್ರಂಥದ ಪೀಠಿಕೆಯಲ್ಲಿ ನರಸಿಂಹನಾರನೃಪಾಲನ ಕವಿಯು ಕುಲ್ಲೀಯನ್ನು ಯುದ್ಧದಲ್ಲಿ ಸೋಲಿಸಿದಂತೆ ಬರೆದಿದ್ದಾನೆ. ಮುಸ್ಲಿಂ ಚರಿತ್ರೆಕಾರರು ತಮ್ಮ ಜಾತಿಯ ಪ್ರಭುಗಳಿಗಾದ ಪರಾಜಯವನ್ನು ಮುಚ್ಚಿಡಲು ಬರೆದಿದ್ದಾರೆ ಎಂಬ ಆರೋಪ ಮಾಡಲು ಅನೇಕ ಕಾರಣಗಳನ್ನು ಹುಡುಕಲಾಗುತ್ತದೆ. ಇದಕ್ಕೆ ಪೂರಕವಾಗಿ

---

೪. ಡಾ. ವೆಂಕಟರಮಣಯ್ಯ(ಅನು): ವಿಜಯನಗರ ಚರಿತ್ರೆ: ಪುಟ–೧೯೦೪. ಅದೇ : ಪುಟ–೧೭೭

'ಕೆಳದಿನೃಪವಿಜಯ' 'ಶಿವತತ್ವರತ್ನಾಕರ' ದಂತಹ ಕನ್ನಡ ಗ್ರಂಥಗಳನ್ನು ಉಲ್ಲೇಖಿಸಲಾಗುತ್ತದೆ. ಹೀಗೆ ಮಧ್ಯಕಾಲೀನ ವಿಜಯನಗರ ಚರಿತ್ರೆಯನ್ನು ಬರೆಯುವ ಒಲವುಗಳು ಮತೀಯ ನೆಲೆಯ ಸಾಮ್ರಾಜ್ಯ ಶಾಹಿ ಧೋರಣೆಯನ್ನು ಮೆರೆದಿವೆ.

ಅಹಮದ್ ನಗರದ ದಂಡಯಾತ್ರೆಯ ನಂತರ ರಾಮರಾಯರು ಬೀದರ್ ಮೇಲೆ ದಾಳಿ ಮಾಡಿ ಅಲ್ಲಿಯ ಸುಲ್ತಾನ್ ಬರೀದ್ ಷಾನನ್ನು ಸೋಲಿಸಿದಂತೆ ಕೆಳದಿ ನೃಪ ವಿಜಯದಲ್ಲಿ ಹೇಳಿದರೆ, ಮಹಮ್ಮದೀಯ ಚರಿತ್ರೆಗಳು ಈ ದಂಡಯಾತ್ರೆಯ ಪ್ರಸ್ತಾಪವನ್ನೇ ಮಾಡುವುದಿಲ್ಲ [೫]

**೪.೨: ವಿಜಯನಗರ ಕಾಲದ ಕನ್ನಡ ಸಾಹಿತ್ಯ :**

ಮಧ್ಯಕಾಲೀನ ಚಾರಿತ್ರಿಕ ಸಂಗತಿಗಳು ಹಲವು ಪ್ರಯೋಗಕ್ಕೆ, ವೈವಿಧ್ಯತೆಗೆ ಆಕರವಾದ ಸಾಧನಗಳು. ಕಲೆ, ಸಂಸ್ಕೃತಿ, ಸಾಹಿತ್ಯದ ದೃಷ್ಟಿಯಿಂದ ಇದು ಉತ್ತುಂಗದ ಕಾಲ. ಹಲವು ಪಲ್ಲಟಗಳಿಗೆ ಸಾಕ್ಷಿಯಾದ ಕಾಲವೂ ಹೌದು. ಈ ಅವಧಿಯ ಚರಿತ್ರೆ ಸಾಹಸ, ಸಾಧನೆ, ವೈಭವ, ಔನ್ನತ್ಯಗಳ ಮಹಾಗಾಥೆ.

ವಿಜಯನಗರ ಕಾಲದ ಕನ್ನಡ ಸಾಹಿತ್ಯವನ್ನು ವಿಜಯನಗರ ಸ್ಥಾಪನೆ ಹಾಗೂ ಅವನತಿಯ ಒಟ್ಟು ಕಾಲ ಘಟ್ಟದ ಸಾಹಿತ್ಯವಾಗಿ ನೋಡಬಹುದು. ಈ ಕಾಲದಲ್ಲಿ ಕನ್ನಡ ಕವಿಗಳ ಸಂಖ್ಯೆ ೨೦೦ಕ್ಕೂ ಹೆಚ್ಚು ದಾಟಿದೆ. ಸಾಹಿತ್ಯ– ಧರ್ಮ– ರಾಜಕೀಯ ಈ ಮೂರು ಒಟ್ಟಾಗಿ ಚಲಿಸಿದ ಸಾಹಿತ್ಯ ಚರಿತ್ರೆ ಸಿಗುವುದು ಈ ಕಾಲದಲ್ಲಿಯೇ. ವಿಜಯನಗರದ ಅರಸರಂತೂ ಧರ್ಮ ಮತ್ತು ಸಾಹಿತ್ಯವನ್ನು ಒಟ್ಟಾಗಿ ಪೋಷಿಸಿದರು. ಸಂಸ್ಕೃತ–ತೆಲುಗು– ಕನ್ನಡ ಸಾಹಿತ್ಯದ ಪ್ರತಿಭಾವಂತರು ಈ ಕಾಲದಲ್ಲಿ ಕಾಣಿಸಿಕೊಂಡರು. ಸ್ವತ: ಕೃಷ್ಣದೇವರಾಯನೇ ತೆಲುಗು– ಸಂಸ್ಕೃತ ಭಾಷೆಗಳಲ್ಲಿ ಸಾಹಿತ್ಯ ಕೃತಿ ರಚಿಸಿದ ಇಮ್ಮಡಿ ದೇವರಾಯನ ಆಸ್ಥಾನದಲ್ಲಿದ್ದ ೧ನೇ ಅರುಣಗಿರಿನಾಥನೆಂಬ ಕವಿಗೆ 'ಅಷ್ಟಭಾಷಾ ಪರಮೇಶ್ವರ'ನೆಂಬ ಬಿರುದಿತ್ತು. ಹಾಗಾಗಿ ವಿಜಯನಗರದ ಅರಸರು ಕಾಲದ ತುರ್ತು ಎಂಬಂತೆ ಧಾರ್ಮಿಕ ಸಾಮರಸ್ಯವನ್ನು, ಭಾಷಾ ಸಾಮರಸ್ಯವನ್ನು, ರಾಜಕೀಯ ಸಾಮರಸ್ಯವನ್ನು ಒಟ್ಟಾಗಿ ಸಾಧಿಸಿದ ಹೆಗ್ಗಳಿಕೆಗೆ ಪಾತ್ರರಾದರು. ಅವರು ಪ್ರಾದೇಶಿಕ ಭಾಷಾ ಸಾಮ್ರಾಜ್ಯ ಕಟ್ಟಲಿಲ್ಲ. ತೆಲುಗು–ಕನ್ನಡವೆಂಬ ಸಮನ್ವಯ ಸಾಮ್ರಾಜ್ಯ ಕಟ್ಟಿದರು. ಇದು ಇಂದು ವ್ಯಾಪಕ ಟೀಕೆಗೂ ಕಾರಣವಾಯಿತು. ಕೃಷ್ಣದೇವರಾಯ ಕನ್ನಡದ ಅರಸನೇ ಅಥವಾ ತೆಲುಗಿನ ಅರಸನೇ ಎಂಬ ಜಿಜ್ಞಾಸೆ. ನಿಜಾರ್ಥದಲ್ಲಿ ತೆಲುಗು ಸಾಹಿತ್ಯ ಸಂಸ್ಕೃತಿಗೆ ಅವನು ನೀಡಿದ ಕೊಡುಗೆಯೇ ಎದ್ದು ಕಾಣುತ್ತದೆ. ಅಪ್ಪಟ

---

೫. ಅನು : ಗುರುಮೂರ್ತಿ ಪೆಂಡಕೂರು ವಿಜಯನಗರ ಚರಿತ್ರೆ: ತೆಲುಗು ಮೂಲ : ಡಾ. ಎನ್. ವೆಂಕಟರಮಣಯ್ಯ ಪುಟ ೨೫೫

ವೈಷ್ಣವನಾದ ಅವನು ಧಾರ್ಮಿಕ ಸಹಿಷ್ಣುವಾದರೂ ಅವನ ಕಾಲದಲ್ಲಿ ಬ್ರಾಹ್ಮಣ ಸಮುದಾಯ ಪಡೆದಷ್ಟು ಮಾನ್ಯತೆ, ಭೂದಾನಗಳನ್ನು ಬೇರೆ ಯಾವ ಸಮುದಾಯವೂ ಪಡೆದಿಲ್ಲ. ಆದರೂ ಕನ್ನಡ ಸಾಹಿತ್ಯ ಕೃಷ್ಣದೇವರಾಯನ್ನು ಉದಾರವಾಗಿಯೇ ನೋಡಿದೆ. ವಿಜಯನಗರದ ಅರಸರನ್ನು ಅವರ ಕಾಲದ ವೈಭವವನ್ನು ಪ್ರಾಮಾಣಿಕತೆಯಿಂದ ದಾಖಲಿಸಿದೆ.

ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯ ತನ್ನ ಕಾಲದ ಉತ್ಕೃಷ್ಟತೆಯನ್ನು ಸಾಧಿಸಿದ್ದು ವಿಜಯನಗರದ ಈ ಸಂದರ್ಭದಲ್ಲಯೇ. ಸ್ತ್ರೀಯರೂ ಈ ಕಾಲದ ಸಾಹಿತ್ಯ ರಚನೆಯಲ್ಲಿ ಗಮಕ ವಾಙ್ಮಯದಲ್ಲಿ ಕಾಣಿಸಿಕೊಂಡದ್ದು ಇನ್ನೊಂದು ವಿಶೇಷ. ಗಂಗಾದೇವಿ 'ಮಧುರಾ ವಿಜಯ' ರಚಿಸಿದರೆ, ಅಚ್ಯುತರಾಯನ ಅರಸಿಯರಲ್ಲಿ ಒಬ್ಬಳಾದ 'ಓದುವ' ತಿರುಮಲಾಂಬ 'ವರದಾಂಬಿಕಾ ಪರಿಣಾಯ'ವನ್ನು ರಚಿಸಿದ್ದಾಳೆ. ಸಂಸ್ಕೃತ ಸಾಹಿತ್ಯದಲ್ಲಿ ಇದು ಗಮನಾರ್ಹಕೃತಿ. 'ಓದುವ' ಎಂದರೆ ಪಾಠಕರು, ಅಥವಾ ಗಮಕಿಗಳೆಂದು ಹೇಳಬಹುದು. ರಾಯರು ಪ್ರತಿ ರಾತ್ರಿ ನಿದ್ದೆ ಮಾಡುವವರೆಗೆ ಗ್ರಂಥಪಠಣ ಮಾಡುವುದು ತಿರುಮಲಾಂಬನ ಕೆಲಸವಾಗಿತ್ತು.

ಕನ್ನಡದಲ್ಲಿ ಸಾಹಿತ್ಯವು ರಾಜಕೀಯ ಚರಿತ್ರೆಗಾಗಿ ಮೀಸಲಾದದ್ದು ಅಷ್ಟಾಗಿ ಕಂಡು ಬರುವುದಿಲ್ಲ. ಇದು ಕನ್ನಡದ ವೈಶಿಷ್ಟ್ಯವೂ ಹೌದು. ಕನ್ನಡ ಕವಿಗಳು ರಾಜಕೀಯವನ್ನು, ಪ್ರಭು ಚರಿತ್ರೆಯನ್ನು ಉದಾತ್ತ ಪೌರಾಣಿಕ ಪಾತ್ರಗಳೊಡನೆ ಸಮೀಕರಿಸುವ ಪ್ರಯತ್ನ ಮಾಡಿದರೇ ಹೊರತು ರಾಜನ ಚರಿತ್ರೆಯನ್ನೇ ಪ್ರಮುಖ ವಿಷಯವಾಗಿ ಆಯ್ದುಕೊಂಡು ಬರೆಯುವ ಚಾರಿತ್ರಿಕ ಕಾವ್ಯ ರಚಿಸಲಿಲ್ಲ. ಸಂಸ್ಕೃತ ತೆಲುಗಿನ ಹಾಗೆ ಶುದ್ಧ ಚರಿತ್ರೆಯನ್ನೇ ಬರೆಯಲು ಹೊರಡಲಿಲ್ಲವೆಂಬುದು ಗಮನಾರ್ಹ. ಅರಸರೂ ಕೂಡ ತನ್ನ ಚರಿತ್ರೆಯನ್ನೇ ಬರೆಯಬೇಕೆಂಬ ಒತ್ತಡಕ್ಕೆ ಬದಲಾಗಿ ಧರ್ಮವನ್ನೇ ಪ್ರಬಲವಾಗಿ ಬೆಂಬಲಿಸಿದ್ದರಿಂದ ಚೆದುರಿ ಹೋದ ಧಾರ್ಮಿಕ ಗ್ರಂಥಗಳನ್ನು ಕಲೆ ಹಾಕುವುದೂ ವಿಜಯನಗರದ ಅರಸರ ಮೊದಲ ಗುರಿಯಾಗಿತ್ತು. ಪ್ರೌಢದೇವರಾಯನ ಕಾಲದಲ್ಲಿ ಕಲ್ಯಾಣ ಕ್ರಾಂತಿನಂತರ ವಚನ ಸಂಕಲನ, ಪರಿಷ್ಕರಣ, ವ್ಯಾಖ್ಯಾನ, ಹಸ್ತಪ್ರತಿಗಳ ಸಂಕಲನ, ಸಂಗೋಪನದಂತಹ ಕಾರ್ಯಗಳು ಜರುಗಿದವು. ಲಕ್ಕಣ ದಂಡೇಶ, ಜಕ್ಕಣಾಯನರಂಥ ಅಧಿಕಾರಿಗಳು ಇದಕ್ಕೆ ನೇತಾರರೂ ಪ್ರೋತ್ಸಾಹಕರೂ ಆದರು. ವಚನ ಸಂಬಂಧವಾದ ಸಂರಕ್ಷಣಾ ಕಾರ್ಯಕ್ಕೆ ಪಾಂಡಿತ್ಯ ಪೂರ್ಣ ಕೆಲಸಗಳಿಗೆ ವಿಜಯನಗರ ಕೇಂದ್ರವಾಯಿತು. ಜೈನ, ವೀರಶೈವ, ವೈಷ್ಣವ ಕವಿಗಳು ಒಟ್ಟಾಗಿ ಕಾಣಿಸಿಕೊಂಡ ಈ ಕಾಲದ ಸಾಹಿತ್ಯದ ವೈಶಿಷ್ಟವನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಕನ್ನಡ ಸಾಹಿತ್ಯ ಪರಂಪರೆಯು ರೂಢಿಸಿಕೊಂಡು ಬಂದ ರಾಜಾಶ್ರಯದಿಂದ

ಜನಾಶ್ರಯದ ಕಡೆಗೆ ನಡೆದ ಚಲನೆ

೨. ಸಂಸ್ಕೃತ ಕಾವ್ಯ ಪರಂಪರೆಯಿಂದ ದೇಸೀ ಕಾವ್ಯ ಸತ್ವಗಳಿಗೆ ಹೊರಳಿದ ಚಲನೆ

೩. ಪ್ರಭು ಚರಿತ್ರೆಯೇ ದೇವ ಚರಿತ್ರೆಯಾಗಿದ್ದ ಸಂದರ್ಭದಿಂದ ದೇವರನ್ನೇ ಪ್ರಭುವಾಗಿ ನೋಡುವ ಭಕ್ತಿ ಪರಂಪರೆಯ ಚಲನೆ.

೪. ಪ್ರಭುತ್ವದ ದೈವವಾದೀ ನೆಲೆಯನ್ನು ಧಿಕ್ಕರಿಸಿ ಬೆಳೆದ ಲೋಕದೃಷ್ಟಿ

೫. ಛಂದ-ಬಂಧದಲ್ಲಿ ಸಾಧಿಸಿದ ಸಾಧನೆ

೬. ವಿಧಿವಾದಿ, ದೈವ ಪಾರಮ್ಯ, ಧಾರ್ಮಿಕ ಪುರುಷರ ಕಥನ ಚರಿತ್ರೆಗೆ ಸಿಕ್ಕಮಾನ್ಯತೆ.

ಮಧ್ಯಕಾಲೀನ ಇತಿಹಾಸದಲ್ಲಿ ಕನ್ನಡ ಸಾಹಿತ್ಯವು ಭಕ್ತಿ, ವೀರ, ಶ್ರದ್ಧೆ, ವಿವೇಕ, ಧೈರ್ಯ, ಸಾಹಸ, ನೈತಿಕ ಪರಂಪರೆಯ ಸ್ವರೂಪದಲ್ಲಿ ಕಾಣಿಸಿಕೊಂಡಿದೆ. ವಿಜಯನಗರದ ಕಾಲದ ಕನ್ನಡ ಸಾಹಿತ್ಯದಲ್ಲಿ ಚಾರಿತ್ರಿಕ ಕಾವ್ಯಗಳು ಸಂಪೂರ್ಣವಾಗಿ ಗೈರು ಹಾಜರಾಗಿವೆ ಎನ್ನುವುದು ಇದರ ಅರ್ಥವಲ್ಲ. ಈ ಕಾಲದ ಕೆಲವು ಕವಿಗಳು ಅದರಲ್ಲೂ ಮುಖ್ಯವಾಗಿ ಅದ್ರೀಶನೆಂಬ ಕವಿ "ಪ್ರೌಢದೇವರಾಯ ಕಾವ್ಯ" (೧೫೮೦) ರಚಿಸಿದರೆ ತಿಮ್ಮಣ್ಣ ಕವಿ (೧೫೭೦) "ಕರ್ಣಾಟ ಕೃಷ್ಣ ರಾಜಭಾರತ" ವನ್ನು ರಚಿಸಿದ್ದಾನೆ. ಚಾಟೂ ವಿಠಲನಾಥನ ಭಾಗವತ, ಅಚ್ಯುತರಾಯನನ್ನು 'ಸದಮಳಾಚ್ಯುತ ಕೃಷ್ಣ ರಾಯನ' 'ನಿರುಸಮಾಚ್ಯುತ ಕೃಷ್ಣರಾಯನ' ಎಂದು ಉಲ್ಲೇಖಿಸಿದೆ. 'ವ್ಯಾಸಯೋಗಿ ಚರಿತ' ಗ್ರಂಥವು ಕೃಷ್ಣದೇವರಾಯನ ಪರಿಸಮಾಪ್ತಿ ಕಾಲವನ್ನು ವರ್ಣಿಸುವ ಭಾಗ ಹೊಂದಿದೆ ಎನ್ನಲಾಗುತ್ತದೆ. ಗದುಗಿನ ನಾರ್ಣಪ್ಪ, ಕನಕದಾಸ, ಕುಮಾರ ವಾಲ್ಮೀಕಿ, ರತ್ನಾಕರವರ್ಣಿ ಮೊದಲಾದ ಕವಿಗಳು ವಿಜಯನಗರ ಸಾಮ್ರಾಜ್ಯದ ಉನ್ನತಿ, ಅವನತಿ, ಸೋಲು-ಗೆಲುವುಗಳ ರಾಜಕೀಯ ಚಿತ್ರಣಗಳನ್ನು ಧ್ವನಿ ಪೂರ್ಣವಾಗಿ ತಮ್ಮ ಕಾವ್ಯಗಳಲ್ಲಿ ಸೆರೆ ಹಿಡಿದಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ.

ಕನ್ನಡದಲ್ಲಿ ವಿಜಯನಗರವನ್ನು ಕುರಿತು ಮೌಖಿಕ ಆಕರಗಳು ದೊರೆಯುತ್ತದೆ. ಜನಪದ ಲಾವಣಿಗಳು ಗಮನಾರ್ಹ. ಡಾ.ಎಸ್.ಕೆ. ಹಳ್ಳಕೇರಿಯವರು ಮತ್ತು ಡಾ. ಕೆ. ರವೀಂದ್ರನಾಥ ವಿಜಯನಗರದ ಕುರಿತ ಕೆಲವು ಕಾಲಜ್ಞಾನದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ೧೫೪೩ರಲ್ಲಿದ್ದ ಎಮ್ಮೆ ಬಸವನೆಂಬ ಕಾಲಜ್ಞಾನಿ ವಿಜಯನಗರದ ಪತನದ ಮುನ್ಸೂಚನೆಯಾಗಿ ಕಾಲಜ್ಞಾನ ಹೇಳಿದ್ದ. ಮುಸ್ಲಿಂ ದಾಳಿಕೋರರು ಅರಮನೆಯನ್ನು ಸುಡುವ ಬಗ್ಗೆ, ರಾಜಕೀಯ ಅಸ್ಥಿರತೆಯ ಬಗೆಗೆ, ರಕ್ಕಸತಂಗಡಿಯ ಯುದ್ಧದ ಕುರಿತು ಹೇಳಿದ್ದಾನೆ.

ಅಚ್ಯುತನ ವಂಶವು ಮೊದಲೆದ್ದು ಹೋಯಿತು
ಬೈಚಿಟ್ಟ ಭಾಗ್ಯವು ಬಯಲೆದ್ದು ಹೋಯಿತು
ಮುಸಲ್ಮಾನರು ಅಚ್ಯುತರಾಯ ಕೃಷ್ಣರಾಯರ

ಅರಮನೆಗಳನ್ನು ಸುಟ್ಟಾರು
ನರಸಿಂಹರಾಯನ ಹಿರಿಯ ಕುಮಾರನು ಹುಯ್ಯಲೋ ಡಂಗುರವ
ಅರಸುತನಕೆ ಇನ್ನು ಕಡೆಗಾಲವಾದೀತು
ನೆಚ್ಚಿನ ಮಂತ್ರಿಗಳು ಹುಚ್ಚೆದ್ದು ಹೋದಾರು
ಎಚ್ಚರ ತಪ್ಪ್ಯಾರು ಮುಂದಿನ್ನು ಬಂದೀತು [೬]

**೪.೩: ಕನ್ನಡ ಸಾಹಿತ್ಯದಲ್ಲಿ ಚಾರಿತ್ರಿಕ ಪ್ರಜ್ಞೆಯ ಸ್ವರೂಪ:**

ಪ್ರತಿಯೊಬ್ಬ ಕವಿಯಲ್ಲಿಯೂ ಸಮಕಾಲೀನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಪ್ರಜ್ಞೆಯೊಂದು ಇದ್ದೇ ಇರುತ್ತದೆ. ಅದು ಚರಿತ್ರೆಯನ್ನು ಹೇಳುವ ಕಾರಣಕ್ಕಾಗಿಯೇ ರಚಿತವಾದುದು ಎಂದು ಹೇಳಲಾಗದು. ಹಾಗೆ ಒಂದು ಸಾಹಿತ್ಯ ಕೃತಿಯನ್ನು ನಾವು ಕಾಲಬದ್ಧವಾಗಿ ನೋಡಿದಾಗ ಅದರ ಸಾರ್ವತ್ರಿಕ ಮೌಲ್ಯಗಳನ್ನು ಸಮಕಾಲೀನಗೊಳಿಸುವಲ್ಲಿ ತೊಡಕುಗಳುಂಟಾಗುವ ಅಪಾಯವಿದೆ. ನಮ್ಮ ಕನ್ನಡ ಕಾವ್ಯ ಪರಂಪರೆ ರೂಢಿಸಿಕೊಂಡ ಚಾರಿತ್ರಿಕ ಪ್ರಜ್ಞೆ ಅದು ಏಕ ಮುಖವಾಗಿಲ್ಲ. ವಿಸ್ತೃತವಾದ ಅರ್ಥದಲ್ಲಿ ಜನ ಸಂಸ್ಕೃತಿ ಪ್ರಜ್ಞೆ ಎನ್ನುವುದು ಹೆಚ್ಚು ಅರ್ಥವಿದೆ. ಪೌರಾಣಿಕ ಕಥಾ ಭಿತ್ತಿಯೊಳಗೆ ಸಮಕಾಲೀನ ಸಂಸ್ಕೃತಿ ಸಾಮಾಜಿಕ ಸಂಬಂಧಗಳನ್ನು ಗ್ರಹಿಸುವಲ್ಲಿ ಅವರು ತೋರಿದ ಕಾಳಜಿ ಒಟ್ಟು ಮನುಷ್ಯ ಜೀವನದ ಮೇಲೆ ಅದರ ವಿಕಾಸ ಕ್ರಮದ ಮೇಲೆ ಪರಿಣಾಮ ಬೀರಿವೆ. 'ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ' ಇಲ್ಲವೆಂದು ಆರೋಪಿಸುವ ಪಾಶ್ಚಿಮಾತ್ಯ ವಿದ್ವಾಂಸರು ಯಾವುದನ್ನು ಚರಿತ್ರೆ ಎಂದು ಕರೆಯುತ್ತಾರೆ ಎನ್ನುವುದು ಮುಖ್ಯವಾದ ಪ್ರಶ್ನೆ. ಚರಿತ್ರೆ ಎಂದರೆ ಹಿಂದೆ ನಡೆದ ಘಟನೆಗಳ ಯಥಾ ನಿರೂಪಣೆಯೆ? ಅಥವಾ ಇಸ್ವಿಗಳ ಕ್ರಮವತ್ತಾದ ಜೋಡಣೆಯೆ? ಇಲ್ಲವೆ ವ್ಯಕ್ತಿಯೊಬ್ಬನ ವೈಯಕ್ತಿಕ ಸಾಧನೆಯೆ? ಹಾಗೆ ನೋಡಿದರೆ ಹಿಂದೆ ಇದ್ದ ನಮ್ಮ ಪೂರ್ವಜರಿಗೆಲ್ಲರಿಗೂ ಒಂದೊಂದು ಪ್ರತ್ಯೇಕ ಚರಿತ್ರೆಯನ್ನೇ ರಚಿಸಬೇಕಾಗುತ್ತದೆ ಚರಿತ್ರೆ ಎನ್ನುವುದೇ ಸಮಷ್ಟಿ ಕಥನ. ಕವಿಯೊಬ್ಬ ತನ್ನ ವಿಶಿಷ್ಟ ಸಾಮರ್ಥ್ಯದ ಮೂಲಕ ಕಾವ್ಯ ಪರಿಕರಗಳ ಮೂಲಕ ಅಭಿವ್ಯಕ್ತಿಸುತ್ತಿರುತ್ತಾನೆ. ಮಾನವ ಜೀವನದ ಗತಿಯನ್ನು ಅದರೊಳಗಿನ ವಾಸ್ತವತೆಯನ್ನು ರೂಪಕಗಳಾಗಿ, ಸಂಕೇತಗಳಾಗಿ ನಿರೂಪಿಸ ತೊಡಗುತ್ತಾನೆ.

ಪಂಪನಾಗಲಿ, ರನ್ನನಾಗಲಿ, ನಾಗಚಂದ್ರನಾಗಲಿ ಹೇಳಹೊರಟಿದ್ದು ಕೇವಲ ಪುರಾಣದ ಕಥೆಗಳನ್ನಂತೂ ಖಂಡಿತ ಅಲ್ಲ. ರಾಮಾಯಣ, ಮಹಾಭಾರತದ ಕಥೆಗಳನ್ನು ತಿಳಿದುಕೊಳ್ಳಬೇಕಾದರೆ ಇವರ ಕಾವ್ಯಗಳನ್ನು ಓದಬೇಕಾಗಿಲ್ಲ. ಕವಿ ತಾನು

---

೬. ಶಿವಪ್ರಸಾದ ಟಿ.ರ್: ಶ್ರೀಕೃಷ್ಣದೇವರಾಯ : ಪುಟ-೨೦೯

ಆಯ್ದುಕೊಂಡ ವಸ್ತುವಿನ ಅರ್ಥ ಮತ್ತು ಮಹತ್ವವನ್ನು ತನ್ನ ಬದುಕು ಹಾಗೂ ಅನುಭವದ ಕ್ರಮದಲ್ಲೇ ರೂಪುಗೊಳಿಸಲು ಪ್ರಯತ್ನಿಸಿರುವ ಕಾರಣದಿಂದ ಅವರ ಕೃತಿಗಳ ಮೌಲ್ಯ ಹೆಚ್ಚಿದೆ. ಸಾಹಿತ್ಯ ಕೃತಿಯೊಂದು ಇತಿಹಾಸದ, ಘಟನೆಗಳಿಗೆ ನೀಡುವ ಪ್ರತಿಕ್ರಿಯಾತ್ಮಕ ಗುಣ ವಿಶೇಷಗಳಿಂದಲೂ ಕೂಡಿರಬಾರದು ಎಂದೇನೂ ಇಲ್ಲ. ಸಾಹಿತ್ಯದ ಇಂತಹ ಪ್ರತಿಕ್ರಿಯಾತ್ಮಕ ಗುಣವೇ ಹೆಚ್ಚು ಶಕ್ತಿ ಶಾಲಿಯಾದದ್ದು ಕೂಡ. ಕನ್ನಡದ ಮಹಾನ್ ಕವಿಗಳೆಲ್ಲರೂ ವಸ್ತುವಿನ ಅರ್ಥ ಗ್ರಹಿಕೆಗಳನ್ನು ತಮ್ಮ ಕಾಲದ ತುರ್ತಿನಲ್ಲಿ ಮುರಿದು ಕಟ್ಟುವ, ಮರು ಸಂಯೋಜಿಸುವ ಪ್ರಕ್ರಿಯೆಗಳಲ್ಲಿ ತೊಡಗಿಕೊಳ್ಳುತ್ತಲೇ ಬಂದಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯವು ಚರಿತ್ರೆ ಮತ್ತು ಪುರಾಣಗಳನ್ನು ಕಾವ್ಯದ ಚೌಕಟ್ಟಿಗೆ ಹೊಂದಿಸುವಲ್ಲಿ ವಿಶೇಷ ಪ್ರಯೋಗಗಳನ್ನೇ ಮಾಡಿದೆ. ಪುರಾಣಗಳ ಪಾತ್ರ, ಘಟನೆಗಳನ್ನು ತನ್ನ ಕಾಲದ ಚಾರಿತ್ರಿಕ ದರ್ಶನಗಳಾಗಿ ಪರಿವರ್ತಿಸುವಲ್ಲಿ ಕನ್ನಡ ಕವಿಗಳು ತೋರಿದ ಜಾಣ್ಮೆ, ಮೆರೆದ ಕೌಶಲ ಅಸಾಧಾರಣವಾದುದು. "ಪಂಪನ ಕಾವ್ಯಗಳಲ್ಲಿ ಚಾರಿತ್ರಿಕ ನೋಟಗಳು ಎರಡು ಹಂತಗಳಲ್ಲಿ ನಡೆಯುತ್ತವೆ. ಚರಿತ್ರೆಯ ಪಾತ್ರ ಹಾಗೂ ಘಟನಾವಳಿಗಳನ್ನು ಪುರಾಣದ ಪಾತ್ರ ಹಾಗೂ ಘಟನಾವಳಿಗಳಲ್ಲಿ ಸಮೀಕರಿಸುವುದು ಒಂದು ಹಂತ.....ಇನ್ನೊಂದು ಹಂತದಲ್ಲಿ ಪಂಪನು ತನ್ನ ಕಾವ್ಯ ವಸ್ತುವನ್ನು ನಡೆಸುವ ರೀತಿಯಲ್ಲಿ ಚರಿತ್ರೆಯ ಗತಿಯನ್ನು ರೂಪಿಸುವ ಬಗೆಯು ಎದ್ದು ಕಾಣುತ್ತದೆ. ರಾಜಸತ್ತೆಯ ವೈಭವ ಮತ್ತು ಹೋರಾಟಗಳನ್ನು ವಿಮರ್ಶಾತ್ಮಕವಾಗಿ ಕಂಡ ನೆಲೆ ಇದು. ಈ ಹಂತದಲ್ಲಿ ಚರಿತ್ರೆ ಮತ್ತು ಪುರಾಣಗಳು ಒಂದರಿಂದೊಂದು ಒಡೆದು ಭಿನ್ನವಾಗಿ ಕಾಣದೆ ಹಾಲು ನೀರಿನಂತೆ ಹದವಾಗಿ ಬೆರೆಯುತ್ತವೆ". [೭]

ಪಂಪ ರನ್ನನಂತಹ ಕವಿಗಳು ಮೇಲ್ನೋಟಕ್ಕೆ ಆಶ್ರಯದಾತರನ್ನು ಸಮೀಕರಿಸಿ ರಾಜಸತ್ತೆಯ ವೈಭವವನ್ನು ಹೇಳುವಂತೆ ಕಂಡರೂ ಅದರ ಆಂತರ್ಯದಲ್ಲಿ ಪ್ರಭುತ್ವದ ತೀವ್ರ ವಿಮರ್ಶಕರಾಗಿಯೂ ಕಾಣುತ್ತಾರೆ. ಜನ್ನ, ನಾಗಚಂದ್ರ, ನಾಗವರ್ಮ ಮೊದಲಾದವರ ಕಾವ್ಯಗಳು ಮನುಷ್ಯನ ಮನಸ್ಸಿನೊಳಗಿನ ಸೂಕ್ಷ್ಮ ಹುಡುಕಾಟಕ್ಕೆ ತೊಡಗುತ್ತವೆ. ಲೌಕಿಕ ಕಾವ್ಯವೊಂದನ್ನು ರಚಿಸುವುದು ಅದಕ್ಕೆ ಪರ್ಯಾಯವಾಗಿ ಅಲೌಕಿಕ ಕಾವ್ಯವನ್ನು ರಚಿಸುವ ಎರಡು ಮಾರ್ಗಗಳು ವಾಸ್ತವವಾಗಿ ಮನುಷ್ಯನ ಅಸ್ತಿತ್ವದ ಎರಡು ಪಾತಳಿಗಳನ್ನು ಸೂಚಿಸುವಂಥವುಗಳೇ ಆಗಿವೆ ಎನ್ನುವ ಡಾ. ಕಲ್ಬುಡಿಯವರ ಮಾತಿನಲ್ಲಿ ಸತ್ಯವಿದೆ. ಅವರು ಗುರುತಿಸುವ ಹಾಗೆ ಹತ್ತನೇ ಶತಮಾನದ ನಂತರ ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ದೊಡ್ಡ ಸಾಮ್ರಾಜ್ಯಗಳ ಪತನವಾಗಿ ಚಿಕ್ಕ ಪುಟ್ಟ ಪಾಳೆಗಾರಿಕೆಗಳು ತಲೆ ಎತ್ತುತ್ತಿದ್ದ ಸಂದರ್ಭದಲ್ಲಿ ಸಹಜವಾಗಿ ಭೂಮಿ

---

೭. ಡಾ.ಬಸವರಾಜ ಕಲ್ಗುಡಿ : ನಕ್ಷೆ–ನಕ್ಷತ್ರ, ಪುಟ: ೯೩

ಗಡಿಗಳ ಹೋರಾಟ, ಅರಸರ ಭೋಗ ವ್ಯಾಮೋಹದ ಅತಿರೇಕತೆಯನ್ನು ಹೇಳುವುದಕ್ಕಾಗಿಯೇ ಅಲ್ಲಿ ಅಲೌಕಿಕ ಕಾವ್ಯಗಳು ಹುಟ್ಟಿಕೊಂಡವು. ಮನುಷ್ಯನ ಪ್ರಜ್ಞೆಯೊಳಗೆ ಭೋಗಕ್ಕೆ ವಿರುದ್ಧವಾಗಿ ವೈರಾಗ್ಯವು ಹುಟ್ಟಬೇಕಾದ ಸಂದರ್ಭವನ್ನೂ, ಈ ಭೂಮಿ ಬದುಕಿನ ನಶ್ವರತೆಯನ್ನೂ ತಮ್ಮ ಕಾವ್ಯಗಳಲ್ಲಿ ತಂದರು. ಕನ್ನಡದಲ್ಲಿ ಇಂತಹ ಕಾವ್ಯ ಪರಂಪರೆಯ ಸತ್ವ ನಿಜದ ಅರಿವಿನಲ್ಲಿ ಮೈವೆತ್ತಿರುವುದನ್ನು ಕಾಣುತ್ತೇವೆ. ಭೋಗದ ತುತ್ತ ತುದಿಯಲ್ಲಿ ವೈರಾಗ್ಯ ಹುಟ್ಟುವುದನ್ನು ಚಿತ್ರಿಸುವ ಜೈನ ಕವಿಗಳು ಧಾರ್ಮಿಕ ಪ್ರಜ್ಞೆಯೊಂದು ಮಾನವ ವಿಕೃತ, ಆಕ್ರಮಣಕಾರಿ ಧೋರಣೆಗಳಿಗೆ ತಡೆಯೊಡ್ಡಬಲ್ಲದು ಎಂದು ಭಾವಿಸುತ್ತಾರೆ. ಭೋಗ ಸಾಧನಗಳ ಗರಿಷ್ಠ ಅನುಭೋಗಿ ಅರಸನೇ ಆಗಿರುವುದರಿಂದ ಅವನಲ್ಲೇ ವೈರಾಗ್ಯ ಹುಟ್ಟುವ ವಿಧಿವಾದವನ್ನು ಪ್ರತಿಪಾದಿಸುವ ಕಾವ್ಯದ ಗತಿ ಪಂಪ, ರನ್ನರಲ್ಲಿ ಒಂದು ಬಗೆಯಾದರೆ, ನಾಗಚಂದ್ರ-ನಾಗವರ್ಮನಲ್ಲಿ ಹಿಂಸೆ- ಕ್ರೌರ್ಯಕ್ಕೆ ಪ್ರತಿಯಾಗಿ ಅಹಿಂಸೆ-ಕರುಣೆ-ಪ್ರೇಮದ ಪರಿಕಲ್ಪನೆಗಳ ಜಾಗ ಪಡೆಯುತ್ತವೆ. ಮಧ್ಯಕಾಲೀನ ಕನ್ನಡ ಸಾಹಿತ್ಯಕ್ಕೆ ಬಂದರೆ ರತ್ನಾಕರವರ್ಣಿಯಲ್ಲಿ ಭೋಗ-ಯೋಗವು ಸಾಧಿಸಿದ ಸಮನ್ವಯತೆಯ ನಿರೂಪಣೆಗಳು ಬರುತ್ತವೆ. 'ಭೋಗ-ವಿಚಾರವೂ, ಬೇಕು ನೃಪತಿಗಾತ್ಮ ವಿಚಾರವು ಬೇಕು' ಎಂಬುದನ್ನು ಅದು ಪ್ರತಿಪಾದಿಸುತ್ತದೆ.

ಭಕ್ತಿ ಪಂಥದ ಸಂದರ್ಭದಲ್ಲಿ ಕಾವ್ಯವು ರಾಜಸತ್ತೆಯಿಂದ ಪೂರ್ತಿಯಾಗಿ ವಿಮುಖಿಗೊಳ್ಳುತ್ತಲೇ ಜನಮುಖಿಯಾಗುವತ್ತ ತೋರಿದ ಒಲವು ಪ್ರಭುತ್ವಕ್ಕಿಂತಲೂ ದೈವತ್ವಕ್ಕೆ ನೀಡಿದ ಮಾನ್ಯತೆಯನ್ನು ಸೂಚಿಸುತ್ತದೆ. ವಿಧಿವಾದದ ಸ್ಥಾನವನ್ನು ದೈವವಾದ ತುಂಬಿಕೊಳ್ಳುತ್ತದೆ. ವ್ಯಕ್ತಿಯ ಗುಣ ಸ್ವಭಾವಗಳು ದೈವ ಪ್ರೇರಿತವೆಂಬ ನಿಲುವಿಗೆ ಭಕ್ತಿಪಂಥವು ಬಂದು ನಿಲ್ಲುತ್ತದೆ. ಅಂತಿಮವಾಗಿ ವ್ಯಕ್ತಿಯೊಬ್ಬನ ಉನ್ನತಿ ಅವನತಿಗೆ ಅವನ 'ವಿಧಿ'ಯೇ ಕಾರಣ ಎಂತಹ ಸಂಕಷ್ಟಗಳಲ್ಲೂ ವಿಧಿಯನ್ನು ಮೀರುವ ಶಕ್ತಿ ದೇವರಿಗಿದೆ ಎಂಬ ತಾತ್ವಿಕತೆಯಲ್ಲಿ ರಾಜನಾಗಲಿ, ಜನಸಾಮಾನ್ಯರಾಗಲಿ ಯಾರೂ ಇದರಿಂದ ಅತೀತರಾಗಲು ಸಾಧ್ಯವಿಲ್ಲವೆನ್ನುವುದನ್ನು ಪ್ರತಿಪಾದಿಸುವುದನ್ನು ಕಾಣಬಹುದು. ಕುಮಾರವ್ಯಾಸ ಭಾರತವೂ ಇಂತಹ ಆಲೋಚನೆಗಳ ಪ್ರತಿನಿಧಿ. ಪುರಾಣಗಳನ್ನು ವ್ಯಕ್ತಿ ಬದುಕಿನ ಏಳು ಬೀಳುಗಳಿಗೆ, ಮನುಷ್ಯತ್ವದ ಹುಡುಕಾಟಗಳಿಗೆ ಆಧ್ಯಾತ್ಮಿಕ ದರ್ಶನಕ್ಕೆ ಚರಿತ್ರೆಯನ್ನು ಒಳಗೊಂಡು ಬೆಳಸುವ ಕ್ರಮ ಒಟ್ಟು ಮಧ್ಯಕಾಲೀನ ಕನ್ನಡ ಸಾಹಿತ್ಯವನ್ನು ಪ್ರಭಾವಿಸಿದೆ.

### ೫. ಕನಕ ಸಾಹಿತ್ಯದಲ್ಲಿ ಚಾರಿತ್ರಿಕ ಪ್ರಜ್ಞೆಯ ಸ್ವರೂಪ:

ಪ್ರತಿಯೊಬ್ಬ ಸೋಪಜ್ಞ ಕವಿಯೂ ತನ್ನ ಕಾಲವನ್ನು ಕಟ್ಟುವ ತುರ್ತು ಇರುತ್ತದೆಯೇ ಹೊರತು ಚರಿತ್ರೆಯನ್ನಲ್ಲ. ಕನ್ನಡದ ಪ್ರತಿಭಾವಂತ ಕವಿಗಳ್ಯಾರೂ ಚರಿತ್ರೆಗಾಗಿ ಕೃತಿ

ರಚಿಸಿಲ್ಲ. ಹಾಗೆ ಬರೆಯುವುದು ಕೂಡ ಅವರ ಉದ್ದೇಶವಾಗಿರಲಿಲ್ಲ. ತನ್ನ ಕಾಲದ ವೈಯಕ್ತಿಕ ಬದುಕಿನ ಅನುಭವಗಳು ಕಾವ್ಯದ ಚೌಕಟ್ಟಿನಲ್ಲಿ ತಳೆಯುವ ರೂಪಗಳು ಮಾತ್ರ ಚರಿತ್ರೆಗೆ ಆಕರಗಳಾಗಬಲ್ಲವು ಎನ್ನುವುದು ಮುಖ್ಯ. ಹಾಗೆ ನೋಡಿದರೆ ಕನಕದಾಸರ ಕೃತಿಗಳಲ್ಲಿ ಚರಿತ್ರೆ ಇದೆಯೆ? ಇದ್ದರೆ ಅದರ ಸ್ವರೂಪ ಯಾವುದು? ಎಂಬ ಮುಖ್ಯ ಪ್ರಶ್ನೆಯೊಂದನ್ನು ಕೇಳಿಕೊಳ್ಳಬೇಕಾಗುತ್ತದೆ. ಕನಕದಾಸರ ಮೂರು ಕೃತಿಗಳೂ– ಮೋಹನ ತರಂಗಿಣಿ, ನಳಚರಿತ್ರೆ, ರಾಮಧ್ಯಾನ ಚರಿತ್ರೆಯಲ್ಲಿ 'ಚರಿತ್ರೆ' ಎಂಬ ಪದ ಸೇರಿಕೊಂಡು ಬಿಟ್ಟಿದೆ. 'ಮೋಹನ ತರಂಗಿಣಿಗೂ 'ಶ್ರೀ ಕೃಷ್ಣ ಚರಿತ್ರೆ' ಎಂಬ ಹೆಸರಿದೆ. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸಂಶೋಧನ ಕೇಂದ್ರದಲ್ಲಿರುವ ಹಸ್ತ ಪ್ರತಿಗಳನ್ನು ಕುತೂಹಲಕ್ಕೆ ಗಮನಿಸಿದಾಗ ಅದರಲ್ಲಿ ಮೋಹನ ತರಂಗಿಣಿ ಅಥವಾ ಶ್ರೀಕೃಷ್ಣ ಚರಿತ್ರೆ ಎಂದಿದೆ. ಹಾಗಾಗಿ ಈ ಮೂರು ಕೃತಿಗಳು 'ಚರಿತ್ರೆ' ಎಂಬುದು ಮುಖ್ಯ. ಕನಕದಾಸರು 'ಚರಿತ್ರೆ' ಎಂದು ಬಳಸಿರುವುದರ ಹಿಂದೆ ವಿಶಾಲವಾದ ಅರ್ಥವಿದೆ. ಇದು ' HISTORY' ಎಂಬ ಪದದ ಪರ್ಯಾಯವಲ್ಲ. ಮನುಷ್ಯ ಬದುಕಿನ ಒಳಿತು ಕೆಡಕುಗಳ ಹುಡುಕಾಟವೇ ಇಲ್ಲಿಯ ಚರಿತ್ರೆಯ ಮೂಲ ದ್ರವ್ಯ. ಪುರಾಣಗಳು ಮಾನವನ ಏಳು ಬೀಳುಗಳ ಜೊತೆ ಮುಖಾಮುಖಿಯಾದಾಗ ಹುಟ್ಟಿದ ಕಥನಗಳವು.

ಆದರೆ ಕನಕದಾಸರ ಕೃತಿಗಳಲ್ಲಿ 'ಚರಿತ್ರೆ' (ರಾಜಕೀಯಾರ್ಥದಲ್ಲಿ) ಯನ್ನು ಹುಡುಕುವ ಪ್ರಯತ್ನಗಳು ಎಂದಿನಿಂದಲೂ ಇದೆ. ಈಗಾಗಲೇ ಇರುವ ಮಧ್ಯಕಾಲೀನ ಐತಿಹಾಸಿಕ ಆಕರಗಳನ್ನು ಕನಕದಾಸರ ಕೃತಿಗಳೊಂದಿಗೆ ತುಲನೆ ಮಾಡಿ ಚರಿತ್ರೆಯನ್ನು ಶೋಧಿಸುವ ಕ್ರಮವನ್ನು ಹಲವು ವಿದ್ವಾಂಸರು ಅನುಸರಿಸಿದ್ದಾರೆ. ಅಂತಹ ಪ್ರಯತ್ನಗಳಲ್ಲಿ ಬಹಳ ಮುಖ್ಯವಾದುದು. ಬೆಟಗೇರಿ ಕೃಷ್ಣ ಶರ್ಮರ 'ಕರ್ಣಾಟಕ ಜೀವನ' (೧೯೩೭). ಇದರಲ್ಲಿ 'ಕನಕದಾಸರು ಕಂಡ ವಿಜಯನಗರ' ಲೇಖನವೂ ಒಂದು. ಕಟ್ಟಿ ಶೇಷಾಚಾರ್ಯರೂ ಕವಿ ಕನಕದಾಸರು ಕೃತಿಯಲ್ಲಿ "ಕನಕದಾಸರು ಪುರಾಣಗಳಲ್ಲಿ ದೊರೆಯುವ ಕೃಷ್ಣ ಚರಿತ್ರೆಯನ್ನು ತಮ್ಮ ಕಾಲದ ಜನ ಜೀವನದೊಂದಿಗೆ ಹದಗೊಳಿಸಿ ಮೋಹನ ತರಂಗಿಣಿಯನ್ನು ರಚಿಸಿದರು. ಅದರಷ್ಟು ಸಾಮಾಜಿಕ ವಿಷಯವನ್ನು ವಿಸ್ತರಿಸುವ ಕಾವ್ಯವೇ ವಿರಳ. ಹದಿನಾರನೆಯ ಶತಮಾನದ ವಿಜಯನಗರದ ಐತಿಹ್ಯವನ್ನು ಅಭ್ಯಾಸಿಸಲು ಬಯಸುವವರು ಮೋಹನ ತರಂಗಿಣಿಯನ್ನು ಮರೆಯ ಕೂಡದು, ತರಂಗಿಣಿಯು ಆ ಕಾಲದ ಕನ್ನಡಿ"[೮] ಎಂದಿದ್ದಾರೆ. ಕನಕದಾಸರ ಮೋಹನ ತರಂಗಿಣಿ ಕಾವ್ಯದ ಮೇಲೆ ಬಂದ ಅನೇಕ ಲೇಖನಗಳು ಕನಕನಷ್ಟು ಸಮರ್ಥವಾಗಿ ವಿಜಯನಗರ ಕಾಲವನ್ನು ಅದರ ವಿಭವ–ವೈಭವವನ್ನು ಜನರ ಸ್ಥಿತಿಗತಿಯನ್ನು ವರ್ಣಿಸಿದವರು

೮. ಕಟ್ಟಿ ಶೇಷಾಚಾರ್ಯ : ಶ್ರೀ ಕನಕದಾಸರು. ಪುಟ: ೧೫೫

ಯಾರೂ ಇಲ್ಲ ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾ ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ನಳಚರಿತ್ರೆಯೂ ಇದಕ್ಕೆ ಹೊರತಾದುದಲ್ಲ. ಕನಕದಾಸರ ಕೃತಿಗಳಲ್ಲಿ ಮಧ್ಯಕಾಲೀನ ಚರಿತ್ರೆಗೆ ಆಕರವಾಗಬಲ್ಲ ಅನೇಕ ಅಂಶಗಳಿವೆ ಎನ್ನುವುದಲ್ಲಿ ಎರಡು ಮಾತಿಲ್ಲ. ಪುರಾಣದ ವಸ್ತು, ಪಾತ್ರಗಳಲ್ಲಿ ಸಮಕಾಲೀನ ಜನಜೀವನದ ವಿವರಗಳನ್ನು ಎರಕ ಹೊಯ್ಯುವುದರ ಮೂಲಕ ಕನಕದಾಸರು ಸಾಧಿಸಿದ ವಿಕ್ರಮಕ್ಕೆ ರಾಜಕೀಯಕ್ಕಿಂತಲೂ ಹೆಚ್ಚು ಸಾಮಾಜಿಕ ಅರ್ಥವಿದೆ.

ಕನಕದಾಸರ ಕಾವ್ಯಗಳು ಮೇಲ್ನೋಟಕ್ಕೆ ವಿಜಯನಗರದ ವಸ್ತು, ವೈಭವಗಳನ್ನು ವರ್ಣಿಸುವಂತೆ ತೋರುತ್ತದೆ. ನಾವು ಅಷ್ಟಕ್ಕೆ ನಿಂತರೆ ಕನಕ ಕೃತಿಗಳ ಮಹತ್ವದ ಹೊಳಹುಗಳನ್ನು ಹುಡುಕಿದಂತಾಗುವುದಿಲ್ಲ. ಪ್ರಭುತ್ವ, ರಾಜಸತ್ತೆಯನ್ನು ಅವರು ವಿವರಿಸುವ ಪರಿಯಲ್ಲಿ ಒಟ್ಟು ಕರ್ನಾಟಕದ ರಾಜಕೀಯ ಚಿತ್ರಣ ಮರುಹುಟ್ಟು ಪಡೆದಿದೆ. ಮನುಷ್ಯತ್ವದ ನಿರಂತರ ಹುಡುಕಾಟವಿದೆ. ಅರಸತ್ವದ ಗ್ರಹಿಕೆಗಳು ಜನಸಮುದಾಯದ ನೆಲೆಯಲ್ಲಿ ಹೇಗೆ ಬೇರು ಬಿಟ್ಟಿತ್ತು? ಆ ಗ್ರಹಿಕೆಗಳನ್ನು ಬದಲಿಸುವಲ್ಲಿ ಕನಕದಾಸರು ನಿರ್ವಹಿಸಿದ ಪಾತ್ರವೇನು? ಇತ್ಯಾದಿ ಪ್ರಶ್ನೆಗಳ ಮೂಲಕ ಕನಕ ಕೃತಿಗಳಿಗೆ ಮುಖಾಮುಖಿಯಾದಾಗ ಚರಿತ್ರೆಯ ಸಾಂಸ್ಥಿಕ ಸ್ವರೂಪದಲ್ಲಿ ಹಲವು ಪಲ್ಲಟಗಳನ್ನು ಕಾಣಲು ಸಾಧ್ಯವಿದೆ.

ಪ್ರಾಚೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ರಾಜಾಶ್ರಯಕ್ಕೂ ಸಾಹಿತ್ಯಕ್ಕೂ ಅವಿನಾಭಾವ ಸಂಬಂಧವಿದೆ. ಆಶ್ರಯದಾತನನ್ನು ಹೊಗಳುವ ಪರಂಪರೆಯೊಂದು ಗಟ್ಟಿಯಾಗಿ ನಿಂತದ್ದು ಸಾಹಿತ್ಯದ ಮೂಲಕವೇ. ಪಂಪ, ರನ್ನ, ಪೊನ್ನ ಮೊದಲಾದ ಕವಿಗಳು ರೂಢಿಸಿದ ಈ ಪರಂಪರೆಯಲ್ಲಿ ಅನೇಕ ಅರಸರು ಅಜರಾಮರರಾಗಿ ಉಳಿದರು. ಪಂಪನ 'ವಿಕ್ರಮಾರ್ಜುನ ವಿಜಯ' ರಚನೆಯಾಗದೆ ಇರುತ್ತಿದ್ದರೆ, ಇವತ್ತು ಅರಿಕೇಸರಿಯನ್ನು ನಾವು ಎಷ್ಟು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದೆವು? 'ಭುವನೈಕ ರಾಮಭ್ಯುದಯ' 'ಸಾಹಸ ಭೀಮ ವಿಜಯ', 'ವಿಕ್ರಮಾರ್ಜುನ ವಿಜಯ' ಈ ಮೊದಲಾದ ಕೃತಿಗಳಲ್ಲಿ ಆಶ್ರಯದಾತನ ಹೆಸರಿನೊಂದಿಗೆ ಕೃತಿನಾಮ ನಿರ್ದೇಶನ ಮಾಡುವ ಇನ್ನೊಂದು ಪರಂಪರೆಯೂ ಕನ್ನಡದಲ್ಲಿ ಬೆಳೆಯಿತು. ಈ ದಾರಿಯಲ್ಲಿ ವಿಜಯನಗರದ ಕೃಷ್ಣದೇವರಾಯನ ಆಸ್ಥಾನಕವಿ ತಿಮ್ಮಣ್ಣ ಕವಿ 'ಕರ್ಣಾಟ ಕೃಷ್ಣರಾಯ ಭಾರತ ಕಥಾಮಂಜರಿ' ಎನ್ನುವ ಕಾವ್ಯವೂ ಸೇರಿದೆ. ಪಂಪನದಾಗಲಿ, ರನ್ನ, ಪೊನ್ನ, ತಿಮ್ಮಣ್ಣನಾಗಲಿ ರಾಜಾಶ್ರಯವನ್ನು ಬಯಸಿಯೇ ಹೋದವರು.

ಅವರ ಕಾವ್ಯಗಳಲ್ಲಿ ಅಲ್ಲಲ್ಲಿ ಪ್ರಭುತ್ವವನ್ನು ವಿಡಂಬಿಸುವ, ವಿವೇಚಿಸುವ ದೃಷ್ಟಿಕೋನಗಳಿದ್ದರೂ ಅಲ್ಲಿ ಅದು ಮುಖ್ಯವಲ್ಲ. ಮಹಾ ಪರಾಕ್ರಮಿಯಾದ

ಮಹಾಭಾರತದ ಅರ್ಜುನನನ್ನು 'ಸಾಮಂತ ಚೂಡಾಮಣಿ' ಎಂದು ಕರೆದು ಅರಿಕೇಸರಿಯ ಮಟ್ಟಕ್ಕೆ ಇಳಿಸುವುದನ್ನೂ, 'ಉದಾತ್ತ ನಾರಾಯಣ'ನೆಂದು ಹೇಳಿ ಅರಿಕೇಸರಿಯನ್ನು ನಾರಾಯಣನ ಮಟ್ಟಕ್ಕೆ ಏರಿಸುವುದನ್ನು ಏಕಕಾಲದಲ್ಲಿ ಪಂಪ ಅನುಸರಿಸಿದ್ದಾನೆ. ಪುರಾಣವನ್ನು ಮುರಿದು ಕಟ್ಟುವುದರ ಮೂಲಕವೋ ಅಥವಾ ನಾಯಕ ಪ್ರತಿನಿಧೀಕರಣದ ಮೂಲಕವೋ ಪುರಾಣವನ್ನು ಇತಿಹಾಸ ನಿರೂಪಣೆಯ ಭಿತ್ತಿಯಾಗಿ ಮಾರ್ಪಡಿಸಿಕೊಂಡರು. ಇಂತಹ ಅವಾಂತರಗಳ ಬದಲಿಗೆ ಅವರು ನೇರವಾಗಿ ಚರಿತ್ರೆಯನ್ನೇ ಬರೆಯ ಬಹುದಿತ್ತಲ್ಲವೆ? ಎನ್ನುವ ಪ್ರಶ್ನೆ ಕಾಡಬಹುದು. ಪುರಾಣವನ್ನು ಇತಿಹಾಸವನ್ನು ಒಟ್ಟಾಗಿ ಪರಿಭಾವಿಸುವ ಅವರ ಉದ್ದೇಶದಲ್ಲಿ ಬದುಕಿನ ಪ್ರಶ್ನೆಯೂ, ಸ್ವಂತಿಕೆಯ ಪ್ರಶ್ನೆಯು ಒಟ್ಟಾಗಿ ಮಿಡಿತಗೊಂಡಿದೆ. ಒಂದು ಕಡೆ ಆಶ್ರಯದಾತನನ್ನು ಹೊಗಳಿ ಬದುಕುವುದು ಇನ್ನೊಂದು ಕಡೆ ಪ್ರಭುತ್ವದ ದಬ್ಬಾಳಿಕೆಯನ್ನು ಪುರಾಣ ಪಾತ್ರಗಳಿಗೆ ಮೆಲ್ಲನೆ ವರ್ಗಾಯಿಸಿ ಅವರ ದೌರ್ಬಲ್ಯಗಳನ್ನು ಟೀಕಿಸುವುದು. ಸ್ವಂತಿಕೆ, ಸೋಪಜ್ಞತೆಯನ್ನು ಮರೆಯುವ ಈ ಎರಡು ದಾರಿಯನ್ನು ಕನ್ನಡ ಕವಿಗಳ ಬಹಳ ಜಾಣ್ಮೆಯಿಂದಲೇ ನಿರ್ವಹಿಸಿದ್ದಾರೆ. ಹೇಳುವುದಾದರೆ ಸ್ವಹಿತ ರಕ್ಷಣೆಯ ಕತ್ತಿ, ಗುರಾಣಿಯಂತೆಯೂ ಕಾವ್ಯವನ್ನು (ಸೈನ್ಯದ ಪರಿಭಾಷೆಯಲ್ಲಿ) ನಿರ್ವಹಿಸಿದ್ದಾರೆ. ಪಂಪ, ಕುಮಾರವ್ಯಾಸ, ಕನಕದಾಸ ಇವರೆಲ್ಲರೂ ಇದಕ್ಕೆ ಉದಾಹರಣೆ.

ಮುಂದೆ ಬಂದ ವಚನಕಾರರದು ದಿಟ್ಟ ನಡೆ. ಪ್ರಭುತ್ವ ರಾಜಾಶ್ರಯದ ,ರಾಕರಣೆಯ ಮೂಲಕ ವೇದ ಸಂಸ್ಕೃತಿ ಮೂಲದ ಪುರಾಣಗಳನ್ನೂ ಅಪೇಕ್ಷಿಸಿ ಪುರಾಣ ಗೋತ್ರಕ್ಕೆ ಮಾರಿ' ಎಂಬ ನಿಲುವಿನೊಡನೆ ಸ್ವತಂತ್ರ ಮಾರ್ಗದ ಪ್ರತಿಪಾದನೆ ಮಾಡಿದರು. ದೇಸೀ ಕಾವ್ಯ ನಿರ್ಮಿತಿಯ ಹೊಸ ಹಾದಿ ತುಳಿದರು. ವಚನ ಸಾಹಿತ್ಯವು ನೀಡಿದ ಹೊಸ ಬೆಳಕು ಹರಿಹರ, ರಾಘವಾಂಕನಂತಹ ಕವಿಗಳನ್ನು ಪ್ರಭಾವಿಸಿದ ರೀತಿ ಪ್ರಾಚೀನ ಜೈನ ಕಾವ್ಯ ನಿರ್ಮಾಣದ ಧ್ಯೇಯಕ್ಕಿಂತ ಭಿನ್ನ ನೆಲೆಯನ್ನು ಕಂಡಿತು. ವೀರ ಮೌಲ್ಯಭಕ್ತಿ ಮೌಲ್ಯಕ್ಕೆ ಹೊಂದಿದ ಪಲ್ಲಟಗಳ ಹಿಂದಿನ ಸಾಮಾಜಿಕ ರಾಜಕಾರಣ ಹೆಚ್ಚು ಜನಪರವಾದದ್ದು. ಪ್ರಭುತ್ವವು ಜನಪರವಾಗಬೇಕೆಂಬ ಧೋರಣೆಯನ್ನು ಪ್ರಬಲವಾಗಿ ಪ್ರತಿಪಾದಿಸುವ ಕಾಲದಲ್ಲಿಯೇ ಕುಮಾರವ್ಯಾಸ, ತೊರವೆ ನರಹರಿ, ಕನಕದಾಸರು ಸಾಹಿತ್ಯ ರಚನೆ ಮಾಡಿದರೆಂಬುದು ಮುಖ್ಯ. ಪ್ರಧಾನವಾಗಿ ಈ ಮೂರು ಕವಿಗಳನ್ನು ತನ್ನ ಹಿಂದಿನ ಅಷ್ಟು ದೊಡ್ಡ ವಚನ ಪರಂಪರೆ ಆವರಿಸಿಕೊಳ್ಳದೆ ಭಕ್ತಿ ಪಂಥದ ಪರ್ಯಾಯ ಪರಂಪರೆ ವೈದಿಕ ದರ್ಶನದ ಚಹರೆಗಳ ಮೂಲಕ ಪುನ: ಪುರಾಣ ಕಥೆಗಳಿಗೆ ಮರಳಿಸಿತು. ಈ ಬಗೆಯ ಕರ್ನಾಟಕದ ಸಾಂಸ್ಕೃತಿ ಸಂದರ್ಭಕ್ಕೆ ವಿಜಯ ನಗರದ ಅರಸರ ಧೋರಣೆಯೇ ಮುಖ್ಯ ಕಾರಣವೆಂಬುದು ಸರ್ವವಿದಿತ. ವಿಜಯನಗರದ ಕಾಲಘಟ್ಟದಲ್ಲಿ ಸಾಮ್ರಾಜ್ಯವನ್ನು ಕಟ್ಟುವ ಭಿನ್ನ ಭಿನ್ನ ಆಯಾಮಗಳು

ಕಾಣಿಸಿಕೊಂಡವು. ಬೃಹತ್ ರಾಜಕೀಯ ಸಾಮ್ರಾಜ್ಯವನ್ನು ಕಟ್ಟಲು ವಿಜಯ ನಗರದ ಅರಸರು ಮುಂದಾದರೆ ಅದರ ಧಾರ್ಮಿಕ ಆಯಾಮದ ಮೂಲಕ ರಾಜ್ಯ ಕಟ್ಟಲು ಹೊರಟವರು ಹರಿದಾಸ ಪರಂಪರೆಯ ಗುರುಗಳು. ಅದರ ಸಾಹಿತ್ಯದ ಮಗ್ಗಲನ್ನು ಕಟ್ಟಲು ಮುಂದೆ ಬಂದವರಲ್ಲಿ ಕುಮಾರವ್ಯಾಸ, ಕನಕದಾಸ ಮೊದಲಾದವರು ಮುಖ್ಯರು.

ಕನಕದಾಸರ ಕೃತಿಗಳಲ್ಲಿ ವಿಜಯನಗರದ ಚರಿತ್ರೆ ಇದೆ ಎಂದ ಮಾತ್ರಕ್ಕೆ ಅದು ಕೇವಲ ಅದರ ವೈಭವದ ವರ್ಣನೆಗಾಗಿ ಮಾತ್ರ ಮೀಸಲಾಗಿಲ್ಲ. ಅದು ಅಖಂಡ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಸ್ವರೂಪದಲ್ಲಿ ಮಂಡಿತವಾಗಿದೆ. ಇಲ್ಲಿಯವರೆಗಿನ ಚರಿತ್ರೆ ನಿರೂಪಿಸದೆ ಇರುವ ತಳವರ್ಗ, ಶೂದ್ರವರ್ಗಗಳ ಆತ್ಮಗೌರವವನ್ನು ಎತ್ತಿ ಹಿಡಿಯುವ ಸಮಷ್ಟಿ ಪ್ರಜ್ಞೆಯಿಂದ ನಿರೂಪಿತವಾಗಿದೆ. ಧರ್ಮ ಮತ್ತು ಪ್ರಭುತ್ವಗಳು ಮಾತ್ರ ಈ ದೇಶದಲ್ಲಿ ಚರಿತ್ರೆಯನ್ನು ನಿರ್ಮಿಸಬಲ್ಲವು ಎಂಬ ಪೂರ್ವಾಗ್ರಹದಿಂದ ಹೊರಬರಲು ಕನಕ ಕೃತಿಗಳು ನೆರವು ನೀಡಿವೆ. ಒಂದು ನಾಡನ್ನು ಅರ್ಥೈಸುವ ಹೊಸ ಸಾಧ್ಯತೆಯನ್ನು ನಮ್ಮ ಮುಂದಿಡುವ ಕನಕ ಕೃತಿಗಳು ದೇಸೀಯತೆಗೆ ಮರಳುವ ದಾರಿಯನ್ನು ತೆರೆದು ತೋರಿಸುತ್ತವೆ. ಧರ್ಮ ಮತ್ತು ಪ್ರಭುತ್ವಗಳು ಜನಪರವಾಗದೆ ಈ ದೇಶದ ಭವಿಷ್ಯ ಸಾಧ್ಯವಿಲ್ಲವೆಂಬ ಸಂದೇಶ ಹೊತ್ತ ಅವರ ಕೃತಿಗಳು ಆಂತರ್ಯದಲ್ಲಿ ಮಾನವತ್ವದ ಹುಡುಕಾಟ ಮತ್ತು ಅದು ನಮ್ಮೊಳಗೆ ಪಡೆದುಕೊಳ್ಳಬೇಕಾದ ವಿಕಾಸದ ಕ್ರಮಗಳನ್ನು ನಮ್ಮ ಮುಂದಿಡುತ್ತವೆ. ಪುರಾಣಗಳನ್ನು ಕನಕದಾಸರು ಬಳಸುವುದೇ ಅದರ ಮೌಲ್ಯ ನಿರ್ಣಯಕ್ಕಾಗಿ. ಸಮಕಾಲೀನ ಮನುಷ್ಯ ಸ್ವಭಾವಗಳೊಂದಿಗೆ ಅವು ಬೆರೆತಾಗ ಹುಟ್ಟಬಹುದಾದ ಸಾಮಾಜಿಕ ಪ್ರಜ್ಞೆಗಳಲ್ಲಿ ಅವರಿಗೆ ಕುತೂಹಲವಿದೆ. ಪುರಾಣಗಳನ್ನು ಮುರಿದು ಕಟ್ಟುವುದರಲ್ಲಿ ಅವರಿಗೆ ಆಸಕ್ತಿ ಇದೆ. ಕನ್ನಡ ಸಾಹಿತ್ಯ ಯಾವಾಗಲೂ ಅದು ಜನಪರವಾಗಿಯೇ ಮಿಡಿದಿದೆ, ತುಡಿದಿದೆ. ಕೀರ್ತನ ಸಾಹಿತ್ಯವೆಂಬ ವಿಭಾಗ ಕ್ರಮದ ಮೂಲಕ ಕನಕ ಕೃತಿಗಳನ್ನು ನೋಡಿದರೆ ಅರ್ಥವಾಗುತ್ತದೆ.

ಕನಕದಾಸರು ಬರೆದ ಎಲ್ಲಾ ಕೃತಿಗಳು ಒಂದಿಲ್ಲೊಂದು ಬಗೆಯಲ್ಲಿ ವಿಶಿಷ್ಟ ಚಾರಿತ್ರಿಕ ದಾಖಲೆಗಳಾಗಿವೆ. ಅವರ ಕೃತಿಗಳನ್ನು ಅವಲೋಕಿಸದೆ ಕನ್ನಡದ ಸಾಂಸ್ಕೃತಿಕ ಚರಿತ್ರೆ ರೂಪಿಸಲು ಸಾಧ್ಯವಿಲ್ಲ. ಅವರು ಪ್ರಭು ಚರಿತ್ರೆ ಬರೆಯುವಾಗಲೂ ನಾಡಿನ ಜನಸಾಮಾನ್ಯರ ಕಥನವನ್ನು ಬರೆಯುತ್ತಾರೆ. ಮಧ್ಯಕಾಲೀನ ಕರ್ನಾಟಕದ ಸಾಂಸ್ಕೃತಿಕ ಸ್ಥಿತ್ಯಂತರವೊಂದು ರಾಜಕೀಯ, ಧಾರ್ಮಿಕ, ಸಾಮಾಜಿಕ ಮಗ್ಗುಲುಗಳಿಂದ ವಿಶ್ಲೇಷಿಸುವಲ್ಲಿ ಅವರ ಪ್ರಜ್ಞೆ ಹೆಚ್ಚು ವ್ಯಾಪಕವಾಗಿದೆ. ಬಹುತ್ವವನ್ನು ಒಳಗೊಳ್ಳುವ ಗುಣ ವಿಶೇಷವಾಗಿದೆ. ಚರಿತ್ರೆಯ ಜನಮುಖಿ ನೆಲೆಗೆ ಗತ ಹಾಗೂ ವರ್ತಮಾನದ ಗಡಿಗಳಿರುವುದಿಲ್ಲ ಎಂಬುದನ್ನು ಅವು ಸಾಬೀತುಪಡಿಸುತ್ತವೆ. ಯಾವುದೇ ರಾಜವೈಭವವವು ಸುವರ್ಣಯುಗವೆಂದು ಪ್ರತಿಪಾದಿಸುವುದು ಯಾವುದನ್ನು

ಎಂಬುದನ್ನು ಪ್ರಶ್ನಿಸಿಕೊಂಡರೆ ಅದು ಜನಮುಖಿ ಅಭಿವೃದ್ಧಿಯ ಪರಿಕಲ್ಪನೆಯನ್ನು ಮುಂದಿಟ್ಟರೆ ಮಾತ್ರ ಅದಕ್ಕೆ ಉತ್ತರ ದೊರೆಯುತ್ತದೆ. ಕನಕದಾಸರು ತಮ್ಮ ಕೃತಿಗಳಲ್ಲಿ ಪುರಾಣ ಕಥೆಗಳನ್ನು ಯಾಕೆ ಮುನ್ನಲೆಗೆ ತರುತ್ತಾರೆಂದರೆ ಅವು ಪ್ರತಿಪಾದಿಸುವ ವರ್ತಮಾನದ ಮೌಲ್ಯಗಳಿಗಾಗಿ. ಚಾರಿತ್ರಿಕ ಸನ್ನಿವೇಶಗಳು ಎದುರಿಸುತ್ತಿರುವ ತಲ್ಲಣಗಳಿಗಾಗಿ. ಅವಶ್ಯವೆನಿಸಿದಲ್ಲಿ ಅವುಗಳನ್ನು ಮುರಿದು ಕಟ್ಟುವುದು ಕಾಲದ ಅನಿವಾರ್ಯತೆಯಲ್ಲಿ. ಈ ಕಾರಣಕ್ಕಾಗಿಯೇ ಕನಕಕೃತಿಗಳು ಮತ್ತೆ ಮತ್ತೆ ನಮ್ಮ ಅಂತರಂಗವನ್ನು ಬಗೆಯುತ್ತವೆ.

---

೯. ಡಾ. ಕೆ. ಮೋಹನ್ ಕೃಷ್ಣ ರೈ: ಚರಿತ್ರೆ ಕಥನ: ಪುಟ ೪

## ಅಧ್ಯಾಯ: ೫

# ಕನಕದಾಸರ ಮೋಹನ ತರಂಗಿಣಿ – ಕರ್ನಾಟಕದ ರಾಜಕೀಯ ಚರಿತ್ರೆಯ ಮರು ನಿರೂಪಣೆ:

ಕನಕದಾಸರು ಮೊದಲು ಬರೆದ ಕೃತಿ ಎಂದು ನಂಬಲಾದ ಮೋಹನ ತರಂಗಿಣಿಗೆ ಮಹಾಕಾವ್ಯದ ಮನ್ನಣೆ ಇದೆ. ಇಲ್ಲಿಯ ಕಥೆ ಪುರಾಣೋಕ್ತವಾದುದು. ಹದಿನೆಂಟು ವರ್ಣನೆಗಳ ವರ್ಣಕ ಕಾವ್ಯ. ಈ ಕಾವ್ಯದ ಪ್ರಧಾನ ಗುಣವೇ ಧಾರ್ಮಿಕ ಸಹಿಷ್ಣುತೆ. ವಿಜಯನಗರದ ಅರಸರು ಪ್ರತಿಪಾದಿಸಿದ ಬಹಳ ಮುಖ್ಯವಾದ ಗುಣವಿದು. ಹಾಡುಗಬ್ಬದಲ್ಲಿ ರಚಿತವಾದ ಈ ಸಾಂಗತ್ಯ ಕೃತಿಯಲ್ಲಿ ಕನಕದಾಸರು ಬಹಳಷ್ಟು ಬದಲಾವಣೆಗಳನ್ನು ಮಾಡಿಕೊಂಡು ಭಾರತ, ಭಾಗವತ, ಹರಿವಂಶ, ವಿಷ್ಣು ಪುರಾಣಗಳಲ್ಲಿ ಉಕ್ತವಾದ ಕಥಾವಸ್ತುವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಮೋಹನ ತರಂಗಿಣಿ ರಾಜಕೀಯ ಮಹಾಕಾವ್ಯವೂ ಹೌದು; ಸಾಮಾಜಿಕ ಮಹಾಕಾವ್ಯವೂ ಹೌದು. ಹಿಂದಿನ ಸಾಹಿತ್ಯ ಪರಂಪರೆ ಅನುಸರಿಸುವ ಏಕನಾಯಕ ಪರಂಪರೆ ಇಲ್ಲಿಲ್ಲ. ಬದಲಿಗೆ ಬಹು ನಾಯಕ ಪರಂಪರೆ ಇದೆ. ಶೌರ್ಯ ಹಾಗೂ ಶೃಂಗಾರದ ನಿರೂಪಣೆಯ ಮೂಲಕ ಮನುಷ್ಯನ ಮೂಲಭೂತ ಸ್ವಭಾವಗಳ ಹುಡುಕಾಟಕ್ಕೆ ಅವರು ತೊಡಗುತ್ತಾರೆ. ವಿಜಯನಗರದ ಅರಸರ ಆಡಳಿತ ಮತ್ತು ಅಧಿಪತ್ಯ ಸಾಮಾಜಿಕ ಶ್ರೇಣೀಕರಣದಲ್ಲಿ ಉಂಟು ಮಾಡಿದ ಪಲ್ಲಟಗಳನ್ನು ಈ ಕೃತಿ ಸೂಕ್ಷ್ಮವಾಗಿ ತೆರೆದಿಡುವುದರ ಮೂಲಕ ಸಮಾಜದಲ್ಲಿ ಸ್ಥಾಪಿತವಾದ ಶ್ರೀಮಂತ ವರ್ಗಗಳು, ಶೂದ್ರರು ಎಂದು ಗುರುತಿಸಲ್ಪಡುವ ವರ್ಗಗಳ ನಡುವಿನ ವರ್ಗ ತಾರತಮ್ಯವನ್ನೂ, ಸರಕು ಉತ್ಪಾದನೆ, ವ್ಯಾಪಾರ ವಾಣಿಜ್ಯದ ಆರ್ಥಿಕ ಚರಿತ್ರೆಯಾಗಿಯೂ, ಆಗ ತಾನೇ ಹುಟ್ಟುತ್ತಿರುವ ರಾಷ್ಟ್ರೀಯ ಪ್ರಜ್ಞೆಯ ಹೊಳಹುಗಳಾಗಿಯೂ ಮೋಹನ ತರಂಗಿಣಿಯನ್ನು ಅರ್ಥೈಸಿಕೊಳ್ಳಲು ಸಾಧ್ಯವಿದೆ.

ಪೌರಾಣಿಕ ಕಥನದಾಚೆಗೆ, ಸಾಮಾಜಿಕ ಪರ್ಯಾವರಣವೊಂದು ಕಾವ್ಯದೊಳಗೆ ತೆರೆದುಕೊಳ್ಳುವ ಪರಿ ವಿಶಿಷ್ಟವಾದುದು ಮತ್ತು ವಿಭಿನ್ನವಾದುದು. ಕನಕದಾಸರ ಮೋಹನ ತರಂಗಿಣಿ ಸಮಕಾಲೀನ ವಿಜಯನಗರದ ಜನಜೀವನದ ಕಥನವಾಗಿ, ಪ್ರಭುತ್ವದ ವೈಭವ ವರ್ಣನೆಯಾಗಿ ಗುರುತಿಸುವಲ್ಲಿ ಮಹತ್ವ ಪೂರ್ಣವಾದ ಅಧ್ಯಯನಗಳಾಗಿವೆ. ವಿಜಯನಗರವನ್ನು ಸಂದರ್ಶಿಸಿದ ಅನೇಕ ವಿದೇಶಿ ಪ್ರವಾಸಿಗಳ ವಿವರಣೆಗಳೊಂದಿಗೆ ತಾಳೆ ಹಾಕಿ ಎಲ್ಲೆಲ್ಲಿ ಕನಕದಾಸರು ಈ ವಿವರಗಳನ್ನು ನೀಡಿದ್ದಾರೆ ಎಂಬುದನ್ನು ಕಂಡು ಕೊಳ್ಳುವ ಪ್ರಯತ್ನಗಳಾಗಿವೆ. ಈಗಾಗಲೇ ರಚಿಸಲ್ಪಟ್ಟ ಓರಿಯಂಟ್‌ಲಿಸ್ಟ್

ಮಾದರಿಯ ಚರಿತ್ರೆಯ ರಚನೆಗೆ ಇವು ಪೂರಕ ಆಕರಗಳಾಗಿವೆಯೇ ಹೊರತು ಪ್ರಧಾನ ಆಕರಗಳಾಗಿಲ್ಲ ಎಂಬುದು ಬಹು ಮುಖ್ಯವಾದ ಅಂಶ. ದ್ವಾರಕಾವತಿ, ಸೌರಾಷ್ಟ್ರವನ್ನು ವರ್ಣಿಸುವ ಕನಕನ ಕಣ್ಣಲ್ಲಿ ವಿಜಯ ನಗರವೇ ತುಂಬಿತ್ತು. ಬೆಟಗೇರಿ ಕೃಷ್ಣ ಶರ್ಮರು ಗುರುತಿಸಿದ ಹಾಗೆ : "ಕನಕದಾಸರು 'ಮೋಹನ ತರಂಗಿಣಿ'ಯನ್ನು ವಿಜಯನಗರದ ಜಾನಪದ ಉತ್ಸವವಾದ ಹೋಳಿಯ ಹಬ್ಬದ ಕಾಲಕ್ಕೆ ಓದಲಿಕ್ಕೊ ಹಾಡಲಿಕ್ಕೊ ಅನುಕೂಲವಾಗುವಂತೆ, 'ಹಾಡುಗಬ್ಬ'ವನ್ನಾಗಿ 'ಪರುಠವಿಸಿರ' ಬಹುದೆಂದು ಊಹಿಸಲು ಬರುವಂತಿದೆ," [೧] ಎಂಬ ಮಾತು 'ಮೋಹನ ತರಂಗಿಣಿ'ಯ ರಚನೆಯ ಉದ್ದೇಶವನ್ನು ಮರು ಶೋಧಿಸುವುದಕ್ಕೆ ಪೂರಕವಾಗಿದೆ. ಈ ಕೃತಿಯ ಕಾವ್ಯನಾಯಕರಲ್ಲಿ ಒಬ್ಬ ಶ್ರೀಕೃಷ್ಣ ಅವನೇ ಪ್ರಧಾನ. ಪ್ರದ್ಯುಮ್ನ, ಅನಿರುದ್ಧ ಮುಂದಿನ ತಲೆಮಾರುಗಳ ನಾಯಕರು. ಮೂರು ತಲೆಮಾರುಗಳ ಕೌಟುಂಬಿಕ ಚಿತ್ರಣವನ್ನು ಒದಗಿಸುವ ಮೋಹನ ತರಂಗಿಣಿ, ನಳಚರಿತ್ರೆಯ ಹಾಗೆ ಕೌಟುಂಬಿಕ ಕಾವ್ಯ, ದಾಂಪತ್ಯ ಕಾವ್ಯ. ವಿಜಯನಗರದ ಕೃಷ್ಣದೇವರಾಯ ೧೫೦೯ರಿಂದ ೧೫೨೯ರ ವರೆಗೆ ರಾಜ್ಯವಾಳಿದ. ಕನಕದಾಸರು ತಮ್ಮ ಕೃತಿಗೆ 'ಶ್ರೀಕೃಷ್ಣಚರಿತೆ' ಎಂಬ ಅಭಿಧಾನವನ್ನಿತ್ತ ಉದ್ದೇಶ ಕೃಷ್ಣದೇವರಾಯನನ್ನು ಪರೋಕ್ಷವಾಗಿ ಸಮೀಕರಿಸುವುದು. ಬಿಚ್ಚು ಮಾತಿಗಿಂತ ಮುಚ್ಚು ಮಾತಿನಲ್ಲಿ ಹೇಳುವುದು. ಭಾಗವತ ಕವಿಗಳ ಪರಂಪರೆಯನ್ನೇ ಕನಕ ಅನುಸರಿಸಿದ. ಭಕ್ತ ಕವಿಗಳಿಗೆ 'ನರಸ್ತುತಿ' ಮಾಡುವುದೊಂದು ಅಪರಾಧ. ಕುಮಾರವ್ಯಾಸ, ಲಕ್ಷ್ಮೀಶ, ಕುಮಾರವಾಲ್ಮೀಕಿ ಯಾರೂ ತಮ್ಮ ಆಶ್ರಯದಾತನನ್ನು ಹೊಗಳಿಲ್ಲ. ಕನಕದಾಸರಿಗೂ ಆಶ್ರಯದಾತನನ್ನು ಹೊಗಳಿ ಬದುಕಬೇಕಾದ ಅನಿವಾರ್ಯತೆ ಇರಲಿಲ್ಲ. ಪ್ರಭುತ್ವಕ್ಕೆ ಪರ್ಯಾಯವಾಗಿ ರೂಪಿಸಿಕೊಂಡ ದೈವತ್ವದ ಪರಿಕಲ್ಪನೆ ಭಕ್ತಿಯುಗದ ಪ್ರಧಾನ ಭೂಮಿಕೆಯಾಗಿರುವುದರಿಂದ ಕನಕದಾಸರಿಗೆ ರಾಜನಿಗಿಂತಲೂ ದೇವರು ಮುಖ್ಯ. 'ದೇಶಾಧಿಪ ಕೃಷ್ಣರಾಯ' ಎಂಬ ಉಲ್ಲೇಖಗಳು ಕೃಷ್ಣದೇವರಾಯನನ್ನೇ ಕುರಿತು ಹೇಳುವುದಾದರೂ ಕನಕದಾಸರು ಅವರ ನೇರ ಊಳಿಗದವರಲ್ಲ. ಕೃಷ್ಣದೇವರಾಯನೋ ಅಚ್ಚುತರಾಯನೋ ಕನಕದಾಸರಿಂದ ಈ ಕೃತಿ ಬರೆಸಿರಬಹುದೆ? ಎಂಬುದಕ್ಕೂ ಸೂಕ್ತ ಆಧಾರಗಳಿಲ್ಲ.

ಒಂದು ನಾಡಿನ ರಾಜಕೀಯ ಚರಿತ್ರೆಯನ್ನು ಕಟ್ಟುವುದೆಂದರೆ ರಾಜನೊಬ್ಬನ ಯುದ್ಧ ಹಿಂಸೆ- ಸಾವು-ನೋವು-ಸೋಲು-ಗೆಲುವುಗಳ ಕಥನವನ್ನು ಕ್ರಮವತ್ತಾಗಿ ನಿರೂಪಿಸುತ್ತಾ ಬರುವುದು ಎಂಬ ತಿಳಿವಳಿಕೆ ಸಾಮಾನ್ಯವಾಗಿ ನಮ್ಮಲ್ಲಿದೆ. ಅರಸನ ವಿಜಯವನ್ನೋ ಅವನು ಮಾಡಿದ ದಾನ ದತ್ತಿಗಳ ವಿಷಯವನ್ನೋ ಶಾಸನಗಳು ಸ್ಮಾರಕಗಳಾಗಿಸಿವೆ. ಇಡೀ ಭಾರತದ ಚರಿತ್ರೆ ಎಂದರೆ ಯುದ್ಧಗಳ ಕಥೆಯೇ ಆಗಿದೆ. ರಾಜವಂಶಗಳ ವೈಯಕ್ತಿಕ ಬದುಕು ಶೇ ೧೦ರಷ್ಟಿದ್ದರೆ ಶೇ.೮೦ ರಷ್ಟು ಭಾಗ ಯದ್ಧಗಳ

೧. ಬೆಟಗೇರಿ ಕೃಷ್ಣ ಶರ್ಮ; ಕರ್ಣಾಟಕ ಜನ ಜೀವನ : ಪುಟ-೮೦

ಕತೆಯೇ ತುಂಬಿ ಹೋಗಿದೆ. ಆಡಳಿತ, ಸಾಮಾಜಿಕ ವಿಷಯಗಳು ಶೇ ೧೦ ರಷ್ಟು ಮಾತ್ರ ಮಾನ್ಯತೆಯನ್ನು ಪಡೆದುಕೊಳ್ಳುತ್ತದೆ. ಸಾಮ್ರಾಜ್ಯ ವಿಸ್ತರಣೆ, ಧರ್ಮಕ್ಕಾಗಿ ನಡೆದ ಹೋರಾಟ–ಕದನಗಳು ನಮ್ಮ ಇತಿಹಾಸವನ್ನು ಆವರಿಸಿದ ಸಂಗತಿಗಳು ಮೊದಲಾದುವನ್ನೇ ಇತಿಹಾಸವೆಂದು ಓದುವ ನಮಗೆ ಕನಕದಾಸರು ಅದಕ್ಕಿಂತ ಭಿನ್ನವಾದ ಚರಿತ್ರೆಯನ್ನು ಓದುವ ಕ್ರಮವೊಂದನ್ನು ಕಟ್ಟಿಕೊಡುತ್ತಿದ್ದಾರೆ. ಅವರ 'ಮೋಹನ ತರಂಗಿಣಿ'ಯಲ್ಲಿ ಯುದ್ಧದ ಕತೆಗಳಿದ್ದರೂ ಅದರ ಮುಕ್ತಾಯದ ದಾರಿಗಳಾವುದು? ಅದರ ಪರಿಣಾಮಗಳೇನು? ಎನ್ನುವುದು ಮುಖ್ಯವಾಗುತ್ತದೆ. ಒಂದು ರಾಜ್ಯದ ರಾಜಕೀಯ ಇತಿಹಾಸ ಬರೆಯುವುದೆಂದರೆ ಅಲ್ಲಿಯ ಸಾಮಾಜಿಕ ಚರಿತ್ರೆ ಬರೆದಂತೆಯೇ ಎನ್ನುವುದನ್ನು ಕನಕ ಕೃತಿಗಳು ತೋರಿಸಿಕೊಡುತ್ತವೆ. ಪ್ರಭುತ್ವ ಹಾಗೂ ಜನ ಬದುಕು ಒಟ್ಟಾಗಿ ಸಾಗಬೇಕಾದ ದಾರಿಯನ್ನು ಕನಕ ಕೃತಿಗಳು ನಿರ್ದೇಶಿಸುತ್ತವೆ. ಇತಿಹಾಸದ ಕಥನ ಕ್ರಮಗಳೆಲ್ಲ ಗಂಡಿನ ಯುದ್ಧದಾಹದ ವರ್ಣನೆಗಳಿಗೆ ಮೀಸಲಾಗಿದೆ. ಗಂಡು ಅನುಭವಿಸುವ ಭೋಗದ ವಸ್ತುಗಳಲ್ಲಿ ಹೆಣ್ಣು ಒಂದೆಂಬ ಪರಿಗ್ರಹಿಕೆ ಶತಮಾನಗಳಿಂದಲೂ ಹಾಗೆಯೇ ಉಳಿದುಕೊಂಡು ಬಂದಿದೆ. ಪ್ರಭುತ್ವದ ಗಂಡುಚರಿತ್ರೆಯಲ್ಲಿ ಗೈರು ಹಾಜರಾದ ರಾಣಿಯರ ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಯೊಟ್ಟಿಗೆ ಕನಕ ಚಿಂತನೆಗಳನ್ನು ಅವಲೋಕಿಸುವ ಅಗತ್ಯವಿದೆ.

ವಿಜಯನಗರದ ಬಾಹ್ಯ ಚಹರೆಯ ಆಕರಗಳು ಕೃತಿಯಲ್ಲಿ ಬೇಕಾದಷ್ಟು ದೊರೆಯುತ್ತದೆ. ಇದರ ಜೊತೆಗೆ ಆಂತರಿಕ ಚಹರೆಯೂ ಇದೆ. ವಿಜಯನಗರದ ಬಾಹ್ಯ ಚಹರೆಯ ಆಕರಗಳು ಮೋಹನ ತರಂಗಿಣಿಯಲ್ಲಿ ವರ್ಣಿಸಲ್ಪಟ್ಟ ರೀತಿ ಡಾಮಿಂಗೋ ಪಾಯೆಸ್, ಅಬ್ದುಲ್ ರಝಾಕ್ ನೀಡಿದ ವಿವರಗಳಿಗಿಂತಲೂ ಹೆಚ್ಚು ವಿಸ್ತಾರ ಹಾಗೂ ಸೂಕ್ಷ್ಮವಾಗಿದೆ. ಕನಕದಾಸರಿಗೆ ಭೋಗ ಮತ್ತು ಸಮೃದ್ಧಿ ಪ್ರಜ್ಞೆಯ ನಡುವಿನ ವ್ಯತ್ಯಾಸದ ಅರಿವಿದೆ. ಕನಕದಾಸರು ನೀಡುವ ವರ್ಣನೆಗಳಲ್ಲಿ ಪ್ರಭುತ್ವ ಕೇಂದ್ರಿತವಾದ ಭೋಗದ ವರ್ಣನೆಗಿಂತಲೂ ಜನತ್ವವನ್ನು ಒಳಗೊಂಡ ಸಮೃದ್ಧಿಯ ವರ್ಣನೆ ಹೆಚ್ಚು ವಿಸ್ತೃತ ಆಯಾಮ ಪಡೆದುಕೊಳ್ಳುತ್ತದೆ. ಕನ್ನಡ ಜೈನ ಕವಿಗಳು ತಮ್ಮ ಕಾವ್ಯಗಳಲ್ಲಿ ಭೋಗ ಪರಂಪರೆಯ ನಶ್ವರತೆಯನ್ನು ಈಗಾಗಲೇ ಗುರುತಿಸಿ ಹೋಗಿದ್ದಾರೆ. ಭೋಗದ ಅತ್ಯಂತಿಕ ಸ್ಥಿತಿಯಲ್ಲಿ ತೀರ್ಥಂಕರತ್ವಕ್ಕೆ ಹೊರಳುವ ಈ ಕಥನಗಳು ಚರಿತ್ರೆಯಲ್ಲಿ ಸಾಕಷ್ಟು ಇವೆ. ಹಾಗಾಗಿ ಕನಕ ಪ್ರಜ್ಞೆ ವ್ಯಷ್ಟಿಯಿಂದ ಸಮಷ್ಟಿಯ ಕಡೆಗೆ ತುಡಿಯುತ್ತದೆ. ಒಂದು ನಾಡಿನ ಭೌತಿಕ ಸಂಪತ್ತನ್ನು ಎಲ್ಲಿಂದ ಗುರುತಿಸಬೇಕೆಂದರೆ ಆ ನಾಡಿನ ಜನ ಸಾಮಾನ್ಯರು ಹೊಂದಿದ ಏಳಿಗೆಯ ಮೂಲಕವೆನ್ನುವುದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ. ಭಾರತದಂತಹ ಬಹು ಸಂಪನ್ಮೂಲ ರಾಷ್ಟ್ರದಲ್ಲಿ ಆಗರ್ಭ ಶ್ರೀಮಂತರೆಷ್ಟಿದ್ದಾರೆ ಎಂದು ಲೆಕ್ಕ ಹಾಕಿ ಪಟ್ಟಿಕೊಟ್ಟರೆ 'ಭಾರತ ಪ್ರಕಾಶಿಸುತ್ತಿದೆ', 'ಭಾರತ ಶ್ರೀಮಂತ ರಾಷ್ಟ್ರ'

ವೆಂದು ಹೇಳುವ ಮಾತುಗಳಿಗೆ ಅರ್ಥವಿಲ್ಲ. ತಲಾ ಆದಾಯವನ್ನು ಗುಣಿಸಿ ರಾಷ್ಟ್ರದ ಸಮೃದ್ಧಿಯನ್ನು ಲೆಕ್ಕ ಹಾಕುವುದು ನಿಜವಾದ ಅಭಿವೃದ್ಧಿಯ ಕ್ರಮ. ಕನಕದಾಸರಲ್ಲಿ ಈ ಅಭಿವೃದ್ಧಿ ಪ್ರಜ್ಞೆ ಸ್ಪಷ್ಟವಾಗಿದೆ. ಅರಸು ಮನೆತನದ ವೈಭವ – ವಿಭವಗಳನ್ನು ಜನಸಾಮಾನ್ಯರ ವ್ಯವಹಾರ ಕೌಶಲಗಳ ಮೂಲಕ ಅಳೆಯುವ ಅಭಿವೃದ್ಧಿ ಮಾಪಕಗಳ ಚಿತ್ರಣವನ್ನು ಅವರು ಕೊಡುವುದು ವಿಶೇಷವೆನಿಸುತ್ತದೆ. ಮೊಹನತರಂಗಿಣಿಯ ಪುರವರ್ಣನೆ, ವನವಿಹಾರದ ವರ್ಣನೆಗಳಲ್ಲಿ ಈ ವಿಶೇಷತೆ ಕಾಣಬಹುದು.

ಮೋಹನ ತರಂಗಿಣಿ ವಿಜಯನಗರದ ಪ್ರಮುಖ ವಾಣಿಜ್ಯ ಕೇಂದ್ರವಾದ ಹಂಪಿಗೆ ಸೀಮಿತಗೊಂಡಂತೆ ಕಂಡರೂ ತನ್ಮೂಲಕ ಕರ್ನಾಟಕದ ರಾಜಕೀಯ ಆರ್ಥಿಕ ಸಾಂಸ್ಕೃತಿಕ ಸ್ವರೂಪವನ್ನು ಅರ್ಥೈಸಿಕೊಳ್ಳುವಲ್ಲಿ ಸಹಕರಿಸುತ್ತದೆ. ಇಲ್ಲಿಯ ಕಥನ ವಸ್ತು ಕೃಷ್ಣ ರುಕ್ಮಿಣಿಯರ ವಿವಾಹ ಮಹೋತ್ಸವದಿಂದ ಆರಂಭವಾಗಿ, ರುಕ್ಮಿಣಿಯ ಪುತ್ರಾಪೇಕ್ಷೆ, ಕಾಮದಹನ, ಪ್ರದ್ಯುಮ್ನ ಜನನ, ಉಷಾ ಅನಿರುದ್ಧರ ಪ್ರಣಯ ಲೀಲೆಗಳಲ್ಲಿ ನಡೆದಾಡಿ, ಉಷೆಯನ್ನು ದ್ವಾರಕೆಯಲ್ಲಿ ಮನೆತುಂಬಿಸಿಕೊಳ್ಳುವ ಸಂಭ್ರಮ ಸನ್ನಿವೇಶದೊಂದಿಗೆ ಮುಕ್ತಾಯವಾಗುತ್ತದೆ. ಕೃಷ್ಣ – ರುಕ್ಮಿಣಿ, ರತಿ ಪ್ರದ್ಯುಮ್ನ, ಉಷಾ – ಅನಿರುದ್ಧ ಈ ಮೂರು ಕುಟುಂಬಗಳ ಸಾಂಸಾರಿಕ ಕಥನ ಚಿತ್ರಿತವಾಗಿದೆ. ಕನ್ನಡ ಕವಿಗಳು ಅನುಸರಿಸಿದ ಕಥಾ ನಾಯಕನೊಂದಿಗೆ ಆಶ್ರಯದಾತನ ಸಮೀಕರಣ ಇಲ್ಲಿಯೂ ಮುಂದುವರಿದಂತೆ ಕಂಡರೂ ಸ್ವಹಿತಾಸಕ್ತಿಗೆ ಬದ್ಧವಾಗಿ ವ್ಯವಹರಿಸುವ ಉದ್ದೇಶವಿಲ್ಲ. ವಿಶೇಷತೆ ಏನೆಂದರೆ ಪಂಪ, ಪೊನ್ನ, ರನ್ನನ ಹಾಗೆ ಕನಕದಾಸರು ಕೃಷ್ಣದೇವರಾಯನ ನೇರ ಆಶ್ರಯವನ್ನು ಪಡೆದು ಆಸ್ಥಾನ ಕವಿಯಾಗಿಲ್ಲ. ಶ್ರೀಕೃಷ್ಣ ಚರಿತೆ ಬರೆಯುವ ಉತ್ಸಾಹದ ಹಿಂದೆ ಯಾವುದೇ ಪ್ರತಿಫಲಾಪೇಕ್ಷೆ ಕಂಡು ಬರುವುದಿಲ್ಲ. ಅಗ್ರಹಾರಗಳನ್ನಾಗಲಿ, ಸುವರ್ಣ ತುಲಾಭಾರವನ್ನಾಗಲೀ ಬಯಸಿ ಕನಕದಾಸರು ಕಾವ್ಯ ಬರೆದಿಲ್ಲ. ಶ್ರೀ ಕೃಷ್ಣ ಚರಿತ್ರೆ ಬರೆಯುವ ಕನಕನ ಕಣ್ಣಲ್ಲಿ ಶ್ರೀಕೃಷ್ಣದೇವರಾಯನ ವ್ಯಕ್ತಿತ್ವ, ಹಂಪಿಯ ವೈಭವ, ಜನಸಾಮಾನ್ಯರ ಚಿತ್ರಣಗಳಿದ್ದವು ಎನ್ನುವುದಷ್ಟೇ ಮುಖ್ಯ. ಕನಕದಾಸರು ರಾಮಾನುಜರ ಶಿಷ್ಯರಾದ ತಿರುಮಲೆ ತಾತಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಸೈನ್ಯದಿಂದ ಬಿಡುಗಡೆ ಹೊಂದಿ ದಾಸತ್ವ ಪಡೆದ ಸಂಧಿಕಾಲದಲ್ಲಿ ಅವರು 'ಮೋಹನ ತರಂಗಿಣಿ'ಯನ್ನು ಬರೆದಿದ್ದಾರೆ. ಅತ್ತ ಪ್ರಭುತ್ವದ ನಂಟನ್ನೂ ಬಿಡಿಸಿಕೊಳ್ಳಲಾಗದ, ಇತ್ತ ಸಂಪೂರ್ಣ ವೈರಾಗ್ಯವನ್ನು ಸಾಧಿಸಿಕೊಳ್ಳಲಾಗದ ಕನಕನ ಕವಿಮನೋಸ್ಥಿತಿಯಲ್ಲಿ 'ಮೋಹನ ತರಂಗಿಣಿ' ಹುಟ್ಟಿದೆ. ಹಾಗಾಗಿ ಕೃತಿಯ ಆರಂಭದಲ್ಲಿ.

ಈ ರೀತಿಯ ಪೆಂಪು ವಡೆದ ಸದ್ಗುರುಕರ
ವಾರಿಜೋದ್ಭವ ಶಿಷ್ಯ ಜನರ

ಪ್ರೇರಿಸಿ ಚತುರ್ವಿಧ ಫಲವೀವ ತಾತಾ
ಚಾರಿಯರಡಿಗೆ ವಂದಿಸುವೆ [೨]

ತಾತಾಚಾರ್ಯರ ಪ್ರೇರಣೆಯಂತೆ ಕನಕದಾಸರು 'ಮೋಹನ ತರಂಗಿಣಿ' ಬರೆದರು. ಇದನ್ನು ಮೆಚ್ಚಿಕೊಳ್ಳಬೇಕಾದವರು ಯಾರು?

ಹರಿಶರಣರ ಪೆಚ್ಚು ಬುಧಜನರಿಗೆ ಮೆಚ್ಚು
ದುರಿತವನಕೆ ಕಾಳ್ಕಿಚ್ಚು
ವಿರಹಿಗಳೆರ್ದೆಗಿಚ್ಚು ವೀರರ್ಗೆ ಪುಚ್ಚು ಕೇ
ಳ್ವರಿಗಿದು ತನಿಬೆಲ್ಲದಚ್ಚು. [೩]

ಹರಿದಾಸರು, ಪಂಡಿತರು, ಪ್ರೇಮಿಗಳು' ವೀರರು ಸಹೃದಯರು ಇದನ್ನು ಮೆಚ್ಚಬೇಕೆ ಹೊರತು ಶ್ರೀಕೃಷ್ಣದೇವನಾಗಲಿ, ದೇವರಾಯನಾಗಲಿ ಅಲ್ಲ, ಕೇಳುಗರಿಗಾಗಿ ರಚಿಸಿದ 'ಪಾಡುಗಬ್ಬ' ವಿದು ಎನ್ನುವುದು ಆರಂಭದಲ್ಲೇ ಸ್ಪಷ್ಟವಾಗಿದೆ.

**ಮೋಹನ ತರಂಗಿಣಿ – ಸ್ತ್ರೀವಾದಿ ಸಂವಾದ:**

ಕನಕದಾಸರ 'ಮೋಹನ ತರಂಗಿಣಿ', 'ಗೆಣ್ಣುಗೊಳ್ಳದ ಬೆಳ್ಗಬ್ಬಿನ ರಸದಂತೆ ಬಣ್ಣಿತವಾದ ಕಥಾಮೃತ'. ಇದೊಂದು ಹೆಂಗರುಳಿನ ಕಾವ್ಯ. ಅಲ್ಲದೆ ಸ್ತ್ರೀ ಪಾತ್ರಗಳೆ ಇಲ್ಲಿ ಪ್ರಧಾನವಾಗಿವೆ. ಮೇಲ್ನೋಟಕ್ಕೆ ಕೃಷ್ಣನೇ ಈ ಕಾವ್ಯದ ನಾಯಕನಾದರೂ ಇಲ್ಲಿ ಗಮನಸೆಳೆಯುವುದು ರುಕ್ಮಿಣಿ, ರತಿ, ಪಾರ್ವತಿ, ಉಷೆ, ಚಿತ್ರಲೇಖೆಯ ಪಾತ್ರಗಳು. ಮೋಹನ ತರಂಗಿಣಿಯನ್ನು ಬರೀ ಸಾಹಿತ್ಯದ ಮಿತಿಯಲ್ಲಿ ಕಾವ್ಯವಾಗಿ ಓದುವ ಸಂದರ್ಭದಲ್ಲಿ ಅದೊಂದು ಉತ್ಕೃಷ್ಟ ಸ್ತ್ರೀಸಂವೇದನೆಯ ಕಾವ್ಯವಾಗಿ ಗುರುತಿಸಬೇಕಾಗುತ್ತದೆ. ಹಾಗೆಯೇ ಸಾಮಾಜಿಕ ಸನ್ನಿವೇಶವೊಂದನ್ನು ಹೆಣ್ಣಿನ ದೃಷ್ಟಿಕೋನದಿಂದ ಹೇಳುವ ಮಹತ್ವದ ಕಥನ ಸಾಮಗ್ರಿಯಾಗಿಯೂ ನಾವಿದನ್ನು ನೋಡಬೇಕಾಗಿದೆ. ಕನಕದಾಸರು ಬರುವ ವರೆಗೆ ಹೆಣ್ಣಿನ ಭಾವ, ತಲ್ಲಣಗಳನ್ನು ಇಷ್ಟು ಶಕ್ತವಾಗಿ ಸ್ತ್ರೀ ಪ್ರಧಾನವಾಗಿ, ಸ್ತ್ರೀಯನ್ನೇ ಉದ್ದೇಶಿಸಿ ನಿರೂಪಿಸಿದ ಕವಿ ಇನ್ನೊಬ್ಬನಿಲ್ಲ. ಪಂಪ–ರನ್ನರಿಗೆ ಮಹಾಭಾರತದ ಪಾತ್ರಗಳನ್ನು ಬಳಕೆ ಮಾಡುವ ಉದ್ದೇಶದ ಹಿಂದೆ ನಿರ್ದಿಷ್ಟ ರಾಜಕೀಯ ಉದ್ದೇಶಗಳಿದ್ದವು. ಯಾವ ರಾಣಿಯರನ್ನೂ ಮೆಚ್ಚಿಸುವ ನಿಲುವುಗಳಿರಲಿಲ್ಲ. ಪ್ರಭುತ್ವವನ್ನು ಓಲೈಸುವ ಯುದ್ಧ ಪ್ರಧಾನ, ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಹೆಂಗರುಳಿನ ಭಾವ ವೈವಿಧ್ಯತೆಗೆ ಅವಕಾಶವೇ ಇಲ್ಲದಂತಾಯಿತು. ಕನಕದಾಸರು ಬರುವವರೆಗೆ ಇಂತಹ ಸಾಂಸ್ಕೃತಿಕ ಸನ್ನಿವೇಶಕ್ಕಾಗಿ

---

೨.. ಮೋಹನ ತರಂಗಿಣಿ ಪುಟ – ೧೧೯
೩. ಮೋಹನ ತರಂಗಿಣಿ ಪುಟ – ೧೧೪

ಕಾಯಬೇಕಾಯಿತು. ಅವರು ತಮ್ಮ ಎರಡು ಕಾವ್ಯಗಳಲ್ಲಿ ಹೆಣ್ಣಿಗೆ ನೀಡಿದ ಪ್ರಾಮುಖ್ಯತೆಯನ್ನು ಗಮನಿಸಿದರೆ ಇತಿಹಾಸವನ್ನು ಮಹಿಳೆಯರ ಪರವಾಗಿ ನೋಡುವ ಆಶಯಕ್ಕೆ ಇಂಬು ದೊರೆಯುತ್ತದೆ.

ಕನಕದಾಸರು ಮೋಹನತರಂಗಿಣಿಯನ್ನು ಹೇಳಿದ್ದು 'ಸುಜ್ಞಾನವಧೂಟಿ' ಎಂಬ ತನ್ನ ಸತಿಗೆ. ಅವಳನ್ನು ಮೆಚ್ಚಿಸುವ ದೃಷ್ಟಿ ಮುಖ್ಯವಾಗಿರುವುದರಿಂದ ಕಾವ್ಯ ಸ್ತ್ರೀ ವರ್ಣನೆಗಳಿಂದ ತುಂಬಿಹೋಗಿದೆ. ಈ 'ಸುಜ್ಞಾನವಧೂಟಿ' ಯಾರೆಂಬ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಇವಳು ಕನಕದಾಸರ ಪತ್ನಿಯೆಂದೂ, ಪ್ರೇಯಸಿಯೆಂದೂ, ಇವಳೊಬ್ಬಳು ತಳವಾರ ಕನ್ಯೆಯೆಂದೂ ಕನಕದಾಸರ ಯೌವನದ ಕಾಲದಲ್ಲಿ ಅವರನ್ನು ಬಯಸಿ ಬಂದವಳೆಂದೂ ಅಭಿಪ್ರಾಯವಿದೆ. ಸುಜ್ಞಾನವಧೂಟಿ ಕನಕದಾಸರ ಭಾವ ಪತ್ನಿಯಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಆದರೆ ಕೆಲವು ಐತಿಹ್ಯಗಳ ಪ್ರಕಾರ ತಿಮ್ಮಪ್ಪ ನಾಯಕನು(ಕನಕದಾಸರ ಪೂರ್ವದ ಹೆಸರು) ತಿರುಮಲೆ ತಾತಾಚಾರ್ಯರ ಶಿಷ್ಯತ್ವ ಸ್ವೀಕರಿಸಿದ ಮೇಲೆ ಬಂಕಾಪುರದ ಸೀಮೆಗೆ ಪಾಳೆಯಗಾರನಾಗಿ ಬಾಡ ಗ್ರಾಮದ ಅರಮನೆಯಲ್ಲಿ ವಾಸಿಸುತ್ತಿದ್ದನು. ತಿರುಪತಿ ಅವನ ಆರಾಧ್ಯ ಸ್ಥಾನವಾಗಿತ್ತು. ಒಮ್ಮೆ ಕನಕ ತಿರುಪತಿಯ ಗಂಗಮ್ಮನ ಜಾತ್ರೆಗೆ ಹೋಗಿದ್ದಾಗ ತಾತಾಚಾರ್ಯರು ಗಂಗಪ್ಪನೆಂಬವನಿಗೆ ತಿಮ್ಮಪ್ಪನನ್ನು ಪರಿಚಯ ಮಾಡಿದರು. ತಿಮ್ಮಪ್ಪನ ಪರಿಚಯ ಕೇಳುತ್ತಾ ಗಂಗಪ್ಪ ದಂಪತಿಗಳಿಗೆ ತಮ್ಮ ಕಿವಿಯನ್ನು ತಾವೇ ನಂಬದಾದರು. ತಿಮ್ಮಪ್ಪನ ತಾಯಿ ಬಚ್ಚಮ್ಮ ತನ್ನ ತಂಗಿಯೆಂದೂ, ತಿಮ್ಮಪ್ಪ ತನ್ನ ಸೋದರಳಿಯನೆಂದೂ ಅವನನ್ನೆ ತಾನು ಹುಡುಕುತ್ತಿರುವುದಾಗಿ ಹೇಳಿ ಸಂತೋಷಪಟ್ಟನು. ಗಂಗಪ್ಪ ತಿರುಪತಿ ಸಮೀಪದ ಪುತ್ತೂರಿನವನು. ಧರ್ಮಭೀರುವೂ, ಶ್ರೀಮಂತನೂ ಆದ ಗಂಗಪ್ಪನ ಮಗಳು ಶ್ರೀರಂಗನಾಯಕಿ. ಒಬ್ಬ ವೈಷ್ಣವ ಆಚಾರ್ಯರು ಮಗುವಿನ ನಾಮಕರಣೋತ್ಸವಕ್ಕೆ ಕಾಣಿಕೆ ಸ್ವೀಕರಿಸಲು ಬಂದವರು ಮಗುವನ್ನು ನೋಡಿ ಶ್ರೀ ವಧೂ ಎಂದು ಕರೆದರಂತೆ. ಅದೇ ಮುಂದೆ ವಧೂಟಿ ಎಂದಾಯಿತು. ತನ್ನ ತಂಗಿಯ ಮಗನಾದ ತಿಮ್ಮಪ್ಪನಿಗೆ ಮಗಳನ್ನು ಕೊಟ್ಟು ಅದ್ದೂರಿಯಿಂದ ಮದುವೆ ಮಾಡಿದ. ಮದುವೆಯಾದ ಹೊಸತರಲ್ಲಿ ಕೃಷ್ಣದೇವರಾಯನ 'ಅಮುಕ್ತಮೌಲ್ಯದ' ಕಾವ್ಯ ಕನಕನ ಮನ ಸೂರೆಗೊಂಡಿತು. ಗೋದಾದೇವಿಯನ್ನು ಶ್ರೀ ಕೃಷ್ಣದೇವರಾಯ ಭಕ್ತಿ ಶೃಂಗಾರದ ಪುತ್ಥಳಿಯನ್ನಾಗಿ ಹೇಗೆ ಚಿತ್ರಿಸಿದ್ದಾನೊ ಹಾಗೆಯೇ ತಾನೂ ವಿಷ್ಣು ಭಕ್ತೆ ವಧೂಟಿಯನ್ನು ಉದ್ದೇಶಿಸಿ ಕಾವ್ಯ ರಚಿಸಲು ಬಯಸಿದನು. ಕಳೆದು ಹೋದ ಮನ್ಮಥ ರತಿಗೆ ದೊರಕಿದ ಹಾಗೆ, ಉಷೆಗೆ ಅನಿರುದ್ಧ ದೊರಕಿದ ಹಾಗೆ ತನಗೆ ವಧೂಟಿ ದೊರೆತಳು. ರಸಿಕರಾದ

ಕನಕದಾಸರು ತನ್ನ ಜೀವನದ ಕಥೆಯನ್ನೆ ಕಾವ್ಯವಾಗಿಸ ಹೊರಟರು. ಮೋಹನತರಂಗಿಣಿಯನ್ನು ರಚಿಸಿದರು.[೪]

ಪತ್ನಿಯರನ್ನು ಸಂಭೋಧಿಸುವ ಪರಿಪಾಠವನ್ನು ನಾಗವರ್ಮ, ದೇಪರಾಜನಿಂದ ಅನುಸರಿಸಿದ ಕನಕದಾಸ ಸಂಧಿಗಳ ಆರಂಭದಲ್ಲಿ ವರ್ಣಿಸಿ ಅವಳ ರಸಿಕತೆಯನ್ನು ಕೊಂಡಾಡಿದ್ದಾನೆ. ಸುಜ್ಞಾನ ಪ್ರಮುದೆ, ಕಣ್ಣಮನವನಿರ್ಕುಳಿಗೊಳ್ವ ಕಡುಜಾಣ ವೆಣ್ಣುಗಳಧಿದೇವಿ, ಲೀಲೆಗಾತಿಯರ ಮಸ್ತಕದಿ ಮೆರೆವ ಪೂಮಾಲೆ, ಮತಿವಂತೆ, ಜಾಣೆವೆಣ್ಣುಗಳರಸಿ ಇತ್ಯಾದಿ ಮಾತುಗಳ ಮೂಲಕ 'ಸುಜ್ಞಾನವಧೂಟಿ' ವಿದ್ಯೆ, ಜ್ಞಾನಕ್ಕೆ ಪ್ರತೀಕವಾದವಳು ಎನ್ನುವುದು ಸ್ಪಷ್ಟವಾಗುತ್ತದೆ. ಒಂದೊಮ್ಮೆ ಅವಳು ಕನಕನ ಪತ್ನಿ ಹೌದಾದಲ್ಲಿ ಕೆಳವರ್ಗದ ಮಹಿಳೆಯೊಬ್ಬಳು ಪಡೆದ ಜ್ಞಾನದ ಹಿರಿಮೆ ಪರೋಕ್ಷವಾಗಿ ನಮ್ಮ ಗಮನ ಸೆಳೆಯುತ್ತದೆ.

ಸ್ವಾತಿಯ ಮಳೆಯ ಪರ್ವನಿ ಚಿಪ್ಪಿನೊಳು ಬಿದ್ದು।
ಜಾತಿ ಮುತ್ತಾದಂತೆಯೆನ್ನ॥
ಮಾತಿನ ಮಾಲೆ ನಿನ್ನಯ ಕರ್ಣದೊಳು ಬಿದ್ದು।
ಖ್ಯಾತಿವೆತ್ತುದು ಕೇಳು ಕೆಳದಿ॥

'ಸ್ತ್ರೀ ರೂಪಮೆ ರೂಪಂ ಶೃಂಗಾರ ರಸಮೆ ರಸಂ' ಎಂಬ ನಿರ್ಣಯದಲ್ಲಿ ಕೃತಿರಚನೆಗೆ ತೊಡಗುವ ಕನಕದಾಸರು ನಿತ್ಯ ಸೂರ್ತಿಯಾಗಿ ವಧೂಟಿಯಲ್ಲಿ ತನ್ನ ಪ್ರೇಮಭಾವದ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಾರೆ. ಪ್ರೇಮ-ಕಾಮದ ತರಂಗಗಳನ್ನೆಬ್ಬಿಸುವ ಮೋಹನ ಶ್ರೀ ಕೃಷ್ಣನ ಚರಿತೆ ಎಂಬರ್ಥದಲ್ಲಿ ಕಾವ್ಯವನ್ನು 'ಮೋಹನತರಂಗಿಣಿ' ಎಂದು ಕರೆಯುತ್ತಾರೆ. ತನ್ನ ಮನದನ್ನೆಯ ಮನಸೂರೆಗೊಳ್ಳಬೇಕಾದರೆ ಮಹಿಳೆಯರ ಜೀವನಕ್ಕೆ ಸಂಬಂಧಿಸಿದ ಬಸಿರು, ಬಾಣಂತನ, ಪ್ರೇಮ ಕಾಮಗಳನ್ನು ಆಧರಿಸಿದ ವಸ್ತು ಹೆಚ್ಚು ಸೂಕ್ತವೆಂಬ ಸತ್ಯವನ್ನು ಕವಿ ಮನಗಂಡಂತಿದೆ. ಹಾಗಾಗಿ 'ಮೋಹನ ತರಂಗಿಣಿ' ಸ್ತ್ರೀಯ ಕಾರಣದಿಂದ ರಚಿತವಾದ ಸ್ತ್ರೀನಿಷ್ಠ ಕೃತಿ.

'ಮೋಹನ ತರಂಗಿಣಿ' ಕೃಷ್ಣ-ರುಕ್ಮಿಣಿ, ಪ್ರದ್ಯುಮ್ನ-ರತಿ, ಅನಿರುದ್ಧ-ಉಷೆ ಈ ಮೂರು ತಲೆಮಾರುಗಳ ದಾಂಪತ್ಯ ಜೀವನದ ಕಥೆ. ಇದನ್ನು ಕಾಮದಹನ, ಶಂಬರಾಸುರ ಕಾಳಗ, ಬಾಣಾಸುರ ಕಾಳಗವೆಂದರೂ ಸರಿಯೆ. ಕಾಮ ಮತ್ತು ಕಾಳಗ ಇಲ್ಲಿಯ ಎರಡು ಪ್ರಧಾನ ಮನೋಭೂಮಿಕೆಗಳು. ಶೈವ - ವೈಷ್ಣವ ಎಂಬ ಎರಡು ಧರ್ಮದ ನಡುವಿನ ಸಂಘರ್ಷ, ಈ ನಡುವೆ ರೂಪುಗೊಳ್ಳುವ ಅಂತರ್ ಧರ್ಮೀಯ ಪ್ರೇಮ ಸಂವೇದನೆ ವಿವಾಹದಲ್ಲಿ ಪರ್ಯವಸಾನಗೊಳ್ಳುವ ಬಗೆ ವಿಶೇಷವೆನಿಸುತ್ತದೆ.

---

೪.ಕೊರಟಿ ಶ್ರೀನಿವಾಸರಾವ್ , ಶ್ರೀ ಕನಕದಾಸರು: ಪುಟ ೧೯೪-೨೦೨

ವಿಷ್ಣು ಸುತ ಮನ್ಮಥ, ತಾರಕಾಸುರನ ವಧೆಗಾಗಿ ತಪಸ್ಸಿನಲ್ಲಿ ನಿರತನಾದ ಪರಶಿವನನ್ನು ಪಾರ್ವತಿಯೊಂದಿಗೆ ಸೇರಿಸುವ ಲೋಕಕಲ್ಯಾಣದ ಉದಾತ್ತ ಉದ್ದೇಶದಿಂದ ಬಂದು ಶಿವನ ಕೆಂಗಣ್ಣಿಗೆ ಗುರಿಯಾಗಿ ದಹಿಸಲ್ಪಡುತ್ತಾನೆ. 'ಪಾಪಕ್ಷಯಕ್ಕೆಂದು ಗಂಗೆಯೊಳ್ಮಿಂದರೆ ಪಾಪಿಯ ಮೊಸಳೆ ತಿಂದಂತೆ' ನಿರ್ದೋಷಿ ಮನ್ಮಥನ ಪಾಡು. ವೈಧವ್ಯದ ಕಳಂಕಹೊತ್ತ ರತಿಯನ್ನು ಪಾರ್ವತಿ ಪರಶಿವರು ಸಂತೈಸಿ ಪತಿಯನ್ನು ಸೇರುವ ಭರವಸೆ ನೀಡುತ್ತಾರೆ. ಶಿವನಿಂದ ದಹಿಸಲ್ಪಟ್ಟ ಮನ್ಮಥ ದ್ವಾರಕೆಯ ಕೃಷ್ಣ ರುಕ್ಮಿಣಿಯರಿಗೆ ಪ್ರದ್ಯುಮ್ನನಾಗಿ ಹುಟ್ಟುತ್ತಾನೆ. ಪ್ರದ್ಯುಮ್ನನಿಂದಲೇ ತನಗೆ ಮರಣವೆಂಬ ಸಂಗತಿ ತಿಳಿದು ರುಕ್ಮಿಣಿಯ ಆ ಹತ್ತು ದಿನದ ಮಗುವನ್ನು ಶಂಬರಾಸುರ ಅಪಹರಿಸುತ್ತಾನೆ. ಮಗುವನ್ನು ಕೊಲ್ಲಲು ಮನಸ್ಸು ಬಾರದೆ ನದಿಯಲ್ಲಿ ಎಸೆದು ಹೋಗುತ್ತಾನೆ. ಮೀನೊಂದು ಮಗುವನ್ನು ನುಂಗುತ್ತದೆ. ಇತ್ತ ರತಿ ಪತಿಯನ್ನು ಹುಡುಕುತ್ತಾ ಶಂಬರನ ಪಟ್ಟಣ ತಲುಪುತ್ತಾಳೆ. ಶಂಬರ ಅವಳ ರೂಪಕ್ಕೆ ಮೋಹಿತನಾಗಿ ಅವಳನ್ನು ಒಲಿಸಿಕೊಳ್ಳಲು ಪತ್ನಿಯ ಮೂಲಕ ಪ್ರಯತ್ನಿಸಿ ವಿಫಲನಾಗುತ್ತಾನೆ. ಕೊನೆಗೆ ಅವಳನ್ನು ಅಡುಗೆ ಕೆಲಸಕ್ಕೆ ನಿಯೋಜಿಸುತ್ತಾಳೆ. ಪ್ರದ್ಯುಮ್ನನನ್ನು ನುಂಗಿದ ಮೀನು ಮೀಂಗುಲಿಗರ ಮೂಲಕ ಶಂಬರನ ಅಡುಗೆ ಮನೆಗೆ ತಲುಪುತ್ತದೆ. ಅಲ್ಲಿ ರತಿ ಮೀನನ್ನು ಕತ್ತರಿಸುವಾಗ ಅದರಲ್ಲಿರುವ ಮಗು ಮನ್ಮಥನೇ ಎಂದು ತಿಳಿದು ಅದನ್ನು ಸಾಕುತ್ತಾಳೆ. ನಂತರ ಪ್ರದ್ಯುಮ್ನ ಶಂಬರಾಸುರನ್ನು ಕೊಂದು ರತಿಯನ್ನು ವಿವಾಹವಾಗುತ್ತಾನೆ. ರತಿ ಪ್ರದ್ಯುಮ್ನರ ದಾಂಪತ್ಯದಲ್ಲಿ ಜನಿಸಿದವನೆ ಅನಿರುದ್ಧ. ಶಿವ ಭಕ್ತನಾದ ಬಾಣನ ಮಗಳು ಉಷೆ ಇವನೊಡನೆ ಸ್ವಪ್ನದಲ್ಲಿ ಸುಖಿಸಿ ಪ್ರೀತಿಸಲಾರಂಭಿಸುತ್ತಾಳೆ. ತನ್ನ ಗೆಳತಿ ಚಿತ್ರಲೇಖೆಯ ಮೂಲಕ ಅನಿರುದ್ಧನ ಭಾವಚಿತ್ರ ತರಿಸಿಕೊಂಡು ತಂದೆಗೆ ತಿಳಿಯದ ಹಾಗೆ ಅನಿರುದ್ಧನನ್ನು ತನ್ನ ಅಂತಪುರಕ್ಕೆ ಬರಮಾಡಿಕೊಂಡು ಪ್ರೇಮ ಸಲ್ಲಾಪದಲ್ಲಿ ತೊಡಗುತ್ತಾಳೆ. ಇದನ್ನರಿತ ಬಾಣನು ಅನಿರುದ್ಧನನ್ನು ಸೆರೆ ಹಿಡಿಯುತ್ತಾನೆ. ಮೊಮ್ಮೊಗನನ್ನು ಬಂಧಿಸಿದ ಬಾಣನೊಂದಿಗೆ ಕೃಷ್ಣ ಯುದ್ಧಕ್ಕೆ ಸಿದ್ಧನಾಗುತ್ತಾನೆ. ಕೊನೆಗೆ ಎಲ್ಲವೂ ಸುಖಾಂತ್ಯವಾಗಿ ಉಷೆ ಅನಿರುದ್ಧರ ವಿವಾಹದಲ್ಲಿ ಕತೆ ಪರ್ಯಾವಸಾನಗೊಳ್ಳುತ್ತದೆ.

> ಎಲೆ ನನ್ನ ಕಣ್ಗೆ ಮಂಗಳವಪ್ಪ ಬಟ್ಟ ಬ
> ಲ್ಮೊಲೆಯ ಮೋಹನ ರನ್ನೆ ಕೇಳೆ
> ಶಿಲೆವಕ್ಷದವರ ಚಿತ್ತವ ಕರಗಿಸುವ ನೈ
> ದಿಲೆಯಾಣ್ಮನಂತೆನ್ನ ಕವಿತೆ

ಎನ್ನುವ ಕನಕದಾಸರ ಉದ್ದೇಶ ಸ್ಪಷ್ಟ. ಎಂತವರ ಹೃದಯವನ್ನೂ ಕರಗಿಸಲು ಕರುಣೆ ಶೃಂಗಾರ ಇವೆರಡು ರಸಗಳು ಸಾಕು. ಇವರಡಕ್ಕೂ ಸ್ತ್ರೀ ಪಾತ್ರವೇ ಬೇಕು. ಶ್ರೀ ಕೃಷ್ಣವಂತೂ ಸ್ತ್ರೀಲೋಲ. ಆದ್ದರಿಂದಲೇ ಕನಕದಾಸರು ಕಾವ್ಯವನ್ನು ತನ್ನ ಮನದನ್ನೆಗೆ

ಮುದವಾಗುವಂತೆ ಬರೆದಿರಬೇಕು. ವಿವಿಧ ಬಗೆಯ ಸೇವೆ ಮಾಡುವ ಬಾ ಹತ್ತರ ನಿಯೋಗದವರಾದ ಕಟ್ಟಿಗೆಗಾತಿ, ಬೋನಗಾತಿ, ಪಾತಕಿ, ಸಂಬಳಿಗೆಗಾತಿ, ಮೊಗವಾಡದವಳು, ಗಿಂಡಿಯವಳು, ಕಾಲಾಂಜಿಯವಳು, ಬೀಸಣಿಗೆಯವಳು, ಚಾಮರದಾಕೆ, ಕಠಾರಿಯವಳು, ಕನ್ನಡಿಯವಳು, ಹಾವುಗೆಯಾಕೆ, ಸಂಗೀತದಾಕೆ ಹೀಗೆ ಹತ್ತಾರು ಬಗೆಯ ಸ್ತ್ರೀಯರು ಗಮನಸೆಳೆಯುತ್ತಾರೆ. ವಿಜಯನಗರದ ಕಾಲದ ಸ್ತ್ರೀಯರ ಹಬ್ಬ ಹರಿದಿನಗಳು, ಅಡುಗೆ ರುಚಿ , ಬಸಿರು ಬಾಣಂತನ, ಮಗುವಿನ ತೊಟ್ಟಿಲ ಶಾಸ್ತ್ರ, ಉಡುಗೆ ತೊಡಿಗೆ, ರೂಪ ಲಾವಣ್ಯ, ವೇಶ್ಯಾಲಯ, ವಿಟ ಪುರುಷರೊಂದಿಗಿನ ಅವರ ಶೃಂಗಾರ ಚೇಷ್ಟೆಯ ವರ್ಣನೆಗಳು ಕವಿಯ ರಸಿಕತೆಗೆ ಸಾಕ್ಷಿಯಾಗಿವೆ.

ದ್ವಾರಕಾಪುರದಲ್ಲಿ ಅಷ್ಟು ಜನ ಸ್ತ್ರೀಯರಲ್ಲಿ ಕೃಷ್ಣನ ಇಕ್ಕೆಲದಲ್ಲಿ ಭುಜಕೀರ್ತಿಯ ಮಣಿಗಳಂತೆ ಶೋಭಿಸುವವರು ರುಕ್ಮಿಣಿ, ಸತ್ಯಭಾಮೆಯರು. ಹಕ್ಕಿ ತನ್ನ ಮರಿಗಳಿಗೆ ಗುಟುಕಿಡುವುದನ್ನು ಕಂಡ ರುಕ್ಮಿಣಿಗೂ ಪುತ್ರ ವಾಂಛೆ ಹುಟ್ಟಿತು. ಈ ಬಯಕೆ ಸ್ತ್ರೀಯರಿಗೆ ಸಹಜ ವಾದುದೆಂದು ಕವಿ ಸಮರ್ಥಿಸಿಕೊಳ್ಳುತ್ತಾನೆ. 'ಮಗುವುಂಡು ಬಲ್ಮೊಲೆ ತೊರೆದರೆ ಮತ್ತಿಷ್ಟು ಬಿಗುಹುದೋರುವುದುರಸ್ಥಳದಿ' ಎನ್ನುವ ರುಕ್ಮಿಣಿಯ ಮಾತು ಮಗುವು ಹಾಲು ಕುಡಿದರೆ, ಹೆಣ್ಣಿನ ಸೌಂದರ್ಯ ಕೆಡುವುದಿಲ್ಲ; ಬದಲಿಗೆ ಇನ್ನಷ್ಟು ಸೌಂದರ್ಯ ಹೆಚ್ಚುತ್ತದೆ. ಹತ್ತು ದಿನದ ಹಸುಳೆಯನ್ನು ಶಂಬರಾಸುರ ಕದ್ದೊಯ್ದಾಗ ರುಕ್ಮಿಣಿಯ ಅಳುವಿನ ಕಟ್ಟೆ ಒಡೆದು ಬರುತ್ತದೆ. ಬಾಣ ತಾಗಿದ ಜಿಂಕೆಯಂತೆ ಮಗುವನ್ನು ಕಾಣದೆ ಹೊರಳಾಡುತ್ತಾಳೆ. ರಾಘವಾಂಕನ ಚಂದ್ರಮತಿಯ ಪ್ರಲಾಪದ ನೆನಪಾಗುತ್ತದೆ. ಸಾಮಾನ್ಯ ಜನಪದ ಮಹಿಳೆಯೊಬ್ಬಳು ರೋದಿಸುವಂತೆ ರುಕ್ಮಿಣಿಯನ್ನು ಕನಕದಾಸರು ಚಿತ್ರಿಸುತ್ತಾರೆ. ತಾನಿನ್ನೂ ಮಗುವಿನ ತಲೆಗೆ ಎಣ್ಣೆ ಹಾಕಿಲ್ಲ, ನೊರೆವಾಲು, ಬೆಣ್ಣೆಯ ಇನ್ನೂ ತಾನು ಶಿಶುವಿಗೆ ತಿನ್ನಿಸಿಲ್ಲ,'ಕಣ್ಣೆವೆ ಹಳಚಿ ನೋಡಿದುದಿಲ್ಲ ಮಗನ ಲಾವಣ್ಯವ' ಎಂದಳಲುವ ರುಕ್ಮಿಣಿಯ ರೋಧನ ಕರುಳು ಚುರ್ ಎನ್ನಿಸುತ್ತದೆ.

ಮೊಲೆವಾಲು ತೊರೆದುಗುತಿದೆಕೊ ಲೋಚನವಾರಿ
ಸೆಲೆಹಾಯ್ದೊಡೆ ಹೋಗುತಿದೆಕೊ
ನೆಲೆಗೊಳ್ಳದು ಚಿತ್ತ ಮಗನೆ ನೀನಿದಿರ್ವಂದು
ತಲೆದೋರಿಸೆಂದಳಲಿದಳು

ಹಾಲಿಗೆ ಹಂಬಲಿಸುವನಲ್ಲ ಬಿಡದಂಬೆ
ಗಾಲಿಕ್ಕಿ ತೊಳಲುವನಲ್ಲ
ಕಾಲು ಬಲಿದು ದಟ್ಟಡಿಯಿಡುವನಲ್ಲ
ಬಾಲನೆಲ್ಲಿಗೆ ಹೋದನವ್ವ

ಮುಂದೆ ಕಾಮ ದಹನದ ಪ್ರಸಂಗದಲ್ಲಿ ರತಿ, ಪಾರ್ವತಿಯರ ಪಾತ್ರಗಳಲ್ಲಿ ಕರುಣೆ ಮಡುಗಟ್ಟಿ ನಿಂತಿದೆ. ಪರಶಿವನೊಂದಿಗೆ ಸೆಣಸಾಟ ಸಾಧುವಲ್ಲ ಎಂಬ ಪಾರ್ವತಿಯ ಮಾತಿನಲ್ಲಿ ತಾಯಿತನದ ವಾತ್ಸಲ್ಯ ಅಡಗಿದೆ. "ತಲೆ ಬಲ್ಲಿತೆಂದು ಕಲ್ಲನೆ ಹಾಯಬೇಡ ಹೋಗೆಲೋ ಪಾಪಿ ಮನ್ಮಥ ಮನೆಗೆ" ಎಂದು ಪಾರ್ವತಿ ಎಚ್ಚರಿಸುತ್ತಾಳೆ. ಮಾರನ ಮರಣವಾರ್ತೆ ರತಿಗೆ ವಾಸನೆಯಿಂದಲೇ ತಿಳಿದುಕೊಳ್ಳುತ್ತಾಳೆ. ರತಿಯ ಪ್ರಲಾಪವನ್ನು ವರ್ಣಿಸುವುದಕ್ಕೆ ಕವಿಗೆ ಪದಗಳೆ ಸಾಲವು. ಅಳದವರೂ ಅಳಬೇಕಂತೆ ರತಿಯ ದುಃಖಕ್ಕೆ. ಪತಿಯನ್ನು ಕಳೆದುಕೊಂಡ ಹೆಣ್ಣಿನ ನೋವು ಅರಿವಾಗುವುದು ಹೆಣ್ಣಿಗೆ ಎನ್ನುವ ಹಾಗೆ ತಾಯಿಯಂತೆ ಪಾರ್ವತಿ ಬಂದು ಸಂತೈಸುತ್ತಾಳೆ. ಗಂಧೋದಕದಿಂದೆ ರತಿಯ ಮುಖವನ್ನು ತೊಳೆದು, ಜಾರಿದ ಮುತ್ತಿನ ಸೆರಗನ್ನು ಸರಿ ಮಾಡಿ, ಹಿನ್ನೆತ್ತಿಯಲಿ ತುರುಬನ್ನು ಎತ್ತಿ ಕಟ್ಟಿದಳಂತೆ. ಮೈಧೂಳನ್ನು ಕೊಡಹಿ ರಟ್ಟೆಯ ಹಿಡಿದು ಎತ್ತಿದಳಂತೆ. ರತಿದೇವಿಯ ಪಕ್ಷವಹಿಸಿ ಶಿವನೆಡೆಗೆ ಅವಳನ್ನು ಕರೆತಂದು ನ್ಯಾಯವನ್ನು ಕೇಳುವ ಹಾಗೆ "ಪಾಪಕ್ಷಯಕ್ಕೆಂದು ಗಂಗೆಯನ್ನು ಮೀಯಲು ಬಂದವನ್ನು ಮೊಸಳೆ ಹಿಡಿದಂತೆ ನಿರ್ದೋಷಿಯಾದ ಕಾಮನನ್ನೇಕೆ ಸುಟ್ಟೆ?" ಎಂದು ಕೇಳುತ್ತಾಳೆ. ತನ್ನ ಗಂಡನನ್ನು ಸುಟ್ಟಂತೆ ನನ್ನನ್ನು ಸುಟ್ಟು ಬಿಡು ಎಂಬ ರತಿಯ ಮಾತಿಗೆ ಪಾರ್ವತಿ ಮತ್ತಿಷ್ಟು ಕಳವಳಗೊಂಡು, "ಕಂದರ್ಪನರ್ಧಾಂಗಿಯ ಮೇಲೆ ವೈಧವ್ಯ ಪೊಂದದೊಲ್" ಮಾಡೆಂದು ಶಿವನನ್ನು ಬೇಡಿಕೊಳ್ಳುತ್ತಾಳೆ. ವೈಧವ್ಯ ಅಂದಿನ ಸಮಾಜದಲ್ಲಿ ಎಂತಹ ಕ್ರೂರ ಸಂಪ್ರದಾಯವೆಂಬ ಅರಿವನ್ನು ಈ ಸನ್ನಿವೇಶ ಮಾಡಿಸುತ್ತದೆ. ಗಂಡ ಸತ್ತ ಹೆಂಡತಿಯರನ್ನು ಸಂತೈಸುವ ಪರಿಯನ್ನು ಹಳ್ಳಿಯ ಹೆಣ್ಣುಗಳ ಮಾತಿನ ದಾಟಿಯಲ್ಲಿ ಕವಿ ದಾಖಲಿಸುತ್ತಾನೆ. "ಹಿಂತಿರುಗಿ ಬಾರದ ದಾರಿಯಲ್ಲಿ ಹೋದ ನಿನ್ನ ಗಂಡ ಬರುತ್ತಾನೆಯೆ? ಆದುದನ್ನು ಮರೆತು ಮನೆವಾರ್ತೆಯ ಬಗೆಗೆ ಗಮನಕೊಡು" ಎಂದು ಸಮಾಧಾನ ಮಾಡುತ್ತಾರೆ.

ಶಂಭರಾಸುರನ ಪಟ್ಟಣ ಸೇರಿದ ರತಿದೇವಿಯನ್ನು ಕಂಡು ವಿಷಯಾತುರನಾದ ಶಂಭರ ಅವಳನ್ನು ಒಲಿಸಿಕೊಂಡು ಬರಲು ತನ್ನ ಸತಿಯನ್ನು ಕಳುಹಿಸಿಕೊಡುತ್ತಾನೆ. ಶಂಭರನ ಸತಿ ಬಂದು ರತಿಯಲ್ಲಿ ತನ್ನ ಪತಿಯನ್ನು ವರಿಸೆಂದು ಪರಿ ಪರಿಯಾಗಿ ಕೇಳುತ್ತಾಳೆ. ಯಾವುದಕ್ಕೂ ಒಡಂಬಡದ ರತಿಯನ್ನು ಕಂಡು ಕರಗಿ ಅವಳ ನೋವಿಗೆ ಪ್ರತಿಸ್ಪಂದಿಸುತ್ತಾಳೆ. ಹೆಣ್ಣು ಜನ್ಮಕ್ಕೆ ರೋಸಿ ಹೋದ ಅವಳು, ಹೀಗೆನ್ನುತ್ತಾಳೆ:

ಲೋಕೇಶ್ವರನೆಂಬ ಪಾಪಿಷ್ಠ ಹೆಂಗಳ
ನೇಕೆ ನಿರ್ಮಿತವ ಮಾಡಿದನೊ
ಸಾಕಿದು ಪೆಣ್ಜನ್ಮವೇತಕೆ ಸುಡಲೆಂದು
ಆಕೆ ಪೇಳಿದಳು ದುಕ್ಕದಲಿ

ಪತಿಯೊಡನೆ ಬಂದು ಹದಿಬದೆಯ ಸಂಗ ಎಂದಿಗೂ ತರವಲ್ಲ, ಗಂಡನುಳ್ಳವನಾಸೆ ಬೇಡೆಂದು ಶಂಭರನಿಗೆ ತಿಳಿಸಿ ಹೇಳುತ್ತಾಳೆ. ಹೆಂಡತಿಯ ಮಾತನ್ನು ಕೇಳುವ ಸಹನೆ ಅವನಿಗೂ ಇದೆ. ಹೆಂಡತಿಯ ಹಿತವಚನಕ್ಕೆ ತಲೆದೂಗಿ, ಚೆಲುವಿನಲ್ಲಿ ನಿನಗಿಂತ ಉತ್ತಮ ಸ್ತ್ರೀಯರಿನ್ನುಂಟೆ? ಎಂದು ಕೇಳುತ್ತಾನೆ.

'ಹೆಣ್ಣಿಗೆ ಹೆಣ್ಣೆ ಶತ್ರು' ಎಂಬ ಭಾವ ಸಂಪೂರ್ಣ ಮರೆಯಾಗುವ ಕನಕದಾಸರ ಈ ಕಾವ್ಯದಲ್ಲಿ ಮಹಿಳಾ ಸಂವೇದನೆಗೊಂದು ಹೊಸ ವ್ಯಾಖ್ಯಾನ ದೊರೆತಂತಿದೆ. ಹೆಂಗಸರ ನಡುವಿನ ಜಗಳಗಳು, ದ್ವೇಷ ಅಸೂಯೆಗಳಿಗೆ ಇಲ್ಲಿ ಎಲ್ಲೂ ಜಾಗವಿಲ್ಲ. ಪರಸ್ಪರ ಸಹನುಭೂತಿ, ಸಹಾನುವರ್ತನೆಗಳೆ ಕಾವ್ಯದ ಕಸುವನ್ನು ಹೆಚ್ಚಿಸಿವೆ. ಇಲ್ಲಿಯ ಚಿತ್ರಲೇಖೆಯ ಪಾತ್ರ ಬಹು ವಿಶಿಷ್ಟವಾದುದು. ಚಿತ್ರಲೇಖೆ ಕುಂಭಾಂಡನ ಮಗಳು. ವಿದ್ಯಾವಂತೆ, ಚಿತ್ರ ಕಲಾವಿದೆ, ಗುಣವಂತೆ, ಬಹುಮುಖ ಪ್ರತಿಭಾವಂತೆ. ಕುಂಭಾಂಡ ಬಾಣನ ಮಂತ್ರಿ. ಅರಸನ ಮಗಳಾದರೂ ಉಷೆಗೆ ದೊರೆತನದ ಅಹಂಕಾರವಿಲ್ಲ. ಚಿತ್ರಲೇಖೆ ಎಂದರೆ ಅವಳಿಗೆ ಅಚ್ಚು ಮೆಚ್ಚು. ಒಡಹುಟ್ಟಿದ ಅಕ್ಕನಂತೆ. ಗೆಳತಿ ಉಷೆಗಾಗಿ ಎಂತಹ ಸಾಹಸವನ್ನೂ ಮಾಡ ಬಲ್ಲವಳು. ಉಷೆ ಕನಸಿನಲ್ಲಿ ನೋಡಿದ ರಾಜಕುಮಾರನ ಭಾವಚಿತ್ರ ತರಲು ಇಡೀ ಬ್ರಹ್ಮಾಂಡವನ್ನು ಒಂದು ರಾತ್ರಿಯಲ್ಲಿ ಸುತ್ತಿ ಹಲವು ಚಿತ್ರಗಳನ್ನು ತರುತ್ತಾಳೆ. ಉಷಾ ಅನಿರುದ್ಧರನ್ನು ಸೇರಿಸುವಲ್ಲಿ ಅವಳದ್ದೆ ಮುಖ್ಯ ಪಾತ್ರ. ಅನಿರುದ್ಧನ್ನು ಬೆನ್ನ ಮೇಲೆ ಹೊತ್ತು ಯಾರಿಗೂ ಕಾಣದಂತೆ ಆಕಾಶ ಮಾರ್ಗದಲ್ಲಿ 'ಉನ್ನತ ಗಗನವಟ್ಟೆಯಲಿ ಮಾತೃಕೆಕೊಂಡು ಬೆನ್ನೊಳು ಶಿಶುವ ತರ್ಪಂತೆ' ಉಷೆಯ ಅಂತಃಪುರಕ್ಕೆ ತಂದಳು. ಉಷಾ ಅನಿರುದ್ಧರಿಗೆ ಅವಳ ಉಪಕೃತಿಯನ್ನು ಎಷ್ಟು ನೆನೆದರೂ ಸಾಲದು.

ಅತ್ತಿಗೆಯಹುದಕ್ಕನಹುದು ತಾಯಹುದಕ್ಕ
ಗುತ್ತಿಗೆಗಾತಿ ನೀನಹುದು
ಪತ್ತಿಗೆ ಪರಮಾನುಕೂಲೆ ಕೇಳೆಂದು ಕೈ
ಯೆತ್ತಿ ಕೊಂಡಾಡಿದ ಕುವರ

ತಾವು ಹೆರುವ ಮಕ್ಕಳಿಗೆ 'ಚಿತ್ರಲೇಖೆ' ಎಂದೇ ಹೆಸರಿಡಬೇಕೆಂದು ಪ್ರೇಮಿಗಳಿಬ್ಬರೂ ತೀರ್ಮಾನಿಸುತ್ತಾರೆ. ಚಿತ್ರಲೇಖೆಯ ಧೈರ್ಯ, ಸಾಹಸ ಎಂತವರೂ ಮೆಚ್ಚುವಂತದ್ದು. ಅಡಿಗಡಿಗೂ ಅವಳು ಪ್ರೇಮಿಗಳಿಗೆ ಅನುಕೂಲೆಯಾಗಿ ಬರುತ್ತಾಳೆ.' ನಿನ್ನ ಋಣವನ್ನು ಎಷ್ಟು ಜನ್ಮದಲ್ಲಿ ತೀರಿಸುವೆನೊ' ಎಂಬ ಉಷೆಯ ಮಾತಿಗೆ ಚಿತ್ರಲೇಖೆ 'ಮೈಯನ್ನು ತುರಿಸಿದ ಕೈಗಳ ಋಣವನ್ನು ತೀರಿಸಬೇಕೆಂಬ ಶಾಸ್ತ್ರವಿದೆಯೇ' ಎಂದು ತಮ್ಮಿಬ್ಬರ ಬಾಂಧವ್ಯವನ್ನು ನೆನೆಯುತ್ತಾಳೆ.

ಈ ಕಾವ್ಯದಲ್ಲಿ ಎಲ್ಲಾ ಹೆಂಗಸರನ್ನು ಸೌಂದರ್ಯದ ಖನಿಯಾಗಿ ಕನಕದಾಸರು

ನೋಡಿದ್ದಾರೆ. ಚಿತ್ರಲೇಖೆಯ ಪಾತ್ರದ ಮೂಲಕ ಹೆಣ್ಣಿನಲ್ಲಿರುವ ಸಾಮರ್ಥ್ಯವನ್ನು ತೋರಿಸುವ ಪ್ರಯತ್ನ ಮಾಡಿದ್ದಾರೆ. ಹೆಣ್ಣೆಂದರೆ ಸೌಂದರ್ಯವೆನ್ನುವ ಪುರುಷ ಪ್ರಧಾನವಾದ ದೃಷ್ಟಿ ಹೆಚ್ಚು ಕೆಲಸ ಮಾಡಿದೆಯಾದರೂ ಅದೊಂದು ಕಾವ್ಯಕ್ಕಿರುವ ಮಿತಿ ಎನ್ನಿಸುವುದಿಲ್ಲ. ರಸಿಕತೆ ಶೃಂಗಾರದಲ್ಲಿ ಮುಳುಗಿದ ಕವಿಗೆ ಚೆಲುವೆಯ ತೋಳ ತೆಕ್ಕೆಯಲ್ಲಿ ಅರೆ ನಿಮಿಷ ಬಾಳಿದರೂ ಮುಕ್ತಿ ದೊರೆಯುತ್ತದೆ ಎನ್ನಿಸುತ್ತದೆ. ಅನಿರುದ್ಧನ ಮಾತು ಕನಕದಾಸರ ಅಂತರಂಗದ ಧ್ವನಿಯಾಗಿ ಬರುತ್ತದೆ. ಅದೇನೆ ಆದರೂ ವಿಜಯನಗರದ ಕಾಲದ ಜನ ಜೀವನ, ಸ್ತ್ರೀ ಜೀವನದ ವಿವರಗಳನ್ನು ಅರ್ಥೈಸುವ ಸಾಂಸ್ಕೃತಿಕ ಸ್ತ್ರೀವಾದಿ ಸಂವಾದಕ್ಕೆ ಕನಕದಾಸರ 'ಮೋಹನ ತರಂಗಿಣಿ' ಒಂದು ಪ್ರಮುಖ ಆಕರ ಗ್ರಂಥ ಎನ್ನುವುದರಲ್ಲಿ ಎರಡು ಮಾತಿಲ್ಲ.

**ಶ್ರೀ ಕೃಷ್ಣನ ಸಾಂಸಾರಿಕ ಜೀವನ ಮತ್ತು ತತ್ಕಾಲೀನ ರಾಜಕೀಯ ನಿಲುವುಗಳ ನಿರೂಪಣೆ:**

ನಮಗೆ ತಿಳಿದಿರುವಂತೆ ಇತಿಹಾಸವನ್ನು ಓದುವ ದಾರಿ ಯಾವುದೆಂದರೆ ಅರಸನೊಬ್ಬನ ರಾಜಕೀಯ ಬದುಕಿನ ಏರಿಳಿತಗಳನ್ನು ಸಾಧ್ಯವಾದಷ್ಟು ಐತಿಹಾಸಿಕ ಘಟನೆಗಳ (Historical) ಮೂಲಕ ಕಲೆ ಹಾಕುವುದು. ರಾಜನು ಮಾಡಿದ ಯುದ್ಧಗಳು, ಹೊರಡಿಸಿದ ಆಜ್ಞೆಗಳು, ನಿಲ್ಲಿಸಿದ ಶಾಸನಗಳು, ಚಲಾವಣೆಗೆ ತಂದ ನಾಣ್ಯಗಳು, ಆಡಳಿತದ ಸುಧಾರಣೆಗಳು ಇದಿಷ್ಟನ್ನೇ ಇತಿಹಾಸವೆಂದು ಓದುತ್ತಾ ಬಂದಿದ್ದೇವೆ. ಪ್ರಭುತ್ವವನ್ನೇ ಕೇಂದ್ರ ಸ್ಥಾನದಲ್ಲಿ ನಿಲ್ಲಿಸಿ ಅದರ ಸುತ್ತ ಚರಿತ್ರೆಯನ್ನು ಹೆಣೆಯುವ ಕ್ರಮವನ್ನು ಅನುಸರಿಸುತ್ತಿದ್ದೇವೆ. ಇದರ ಬದಲು ಮೇಲಿನ/ ಕೆಳಗಿನ, ಕೇಂದ್ರ/ ಅಂಚು, ನಗರ/ ಗ್ರಾಮ್ಯ, ಗಂಡು/ ಹೆಣ್ಣು, ರಾಜ/ ಜನ ಈ ಬಗೆಯ ಶ್ರೇಣೀಕೃತ ಸಿದ್ಧ ಸ್ಥಿತಿಯ ಚೌಕಟ್ಟಿನಲ್ಲಿಯೇ ರಾಜನ ಬದಲು ಜನರ ದೃಷ್ಟಿಯಲ್ಲಿ ರಾಜತ್ವವನ್ನು ನೋಡುವುದು, ಅಂಚಿನಿಂದ ಕೇಂದ್ರಕ್ಕೆ ಸಾಗುವುದು, ಹೆಣ್ಣಿನಿಂದ ಗಂಡನ್ನು ತಲುಪುವುದು ಈ ಬಗೆಯ ಭಿನ್ನ ಆಲೋಚನೆಗಳ ಮೂಲಕವೂ ಚರಿತ್ರೆ ಕಟ್ಟಿಕೊಳ್ಳಲು ಸಾಧ್ಯವಿದೆ. ಇದಕ್ಕೆ ಉತ್ತಮ ಉದಾಹರಣೆ ಕನಕದಾಸರ ಮೋಹನ ತರಂಗಿಣಿ. ನಳಚರಿತ್ರೆ ಮತ್ತು ರಾಮಧಾನ್ಯ ಚರಿತ್ರೆ. ಕನಕ ಕೃತಿಗಳಲ್ಲಿ ಪ್ರಭುತ್ವವು ಕೇಂದ್ರ ಸ್ಥಾನದಲ್ಲಿದ್ದರೂ ಜನ ಬದುಕಿನ ಅನುಭವ ವಿನ್ಯಾಸಗಳ ಮೂಲಕ ರಾಜನನ್ನು ಮುಟ್ಟುವ ಹೊಸ ವಿಧಾನಗಳನ್ನು ತಮ್ಮ ಕೃತಿಗಳಲ್ಲಿ ಅನುಸರಿಸುತ್ತಾರೆ.

ಕೃಷ್ಣಕಥೆಯ ಭಿತ್ತಿಯೊಳಗೆ ತೆರೆದುಕೊಳ್ಳುವ ವಿಜಯನಗರದ ರಾಜಕೀಯ, ಸಾಂಸ್ಕೃತಿಕ ಚಹರೆಯ ಆಕರಗಳನ್ನು ಮೋಹನ ತರಂಗಿಣಿಯ, ಹಿನ್ನೆಲೆಯಲ್ಲಿ ಗಮನಿಸಬಹುದು. ಪ್ರಜಾಪ್ರಭುತ್ವವು ಕೊಟ್ಟ ರಾಷ್ಟ್ರೀಯ ಪ್ರಜ್ಞೆಯ ಬೆಳಕಿನಲ್ಲಿ ನಾವಿಂದು

ಶೋಧಿಸಿಕೊಳ್ಳುತ್ತಿರುವ ಬಹಳ ಮುಖ್ಯವಾದ ಸಂಗತಿ ಎಂದರೆ ಪ್ರಭುತ್ವವು ಜನಸಾಮಾನ್ಯರ ಭಾವನೆಗಳನ್ನು ಎಷ್ಟು ಗೌರವಿಸುತ್ತದೆ ಎನ್ನುವುದು. ತನ್ನ ಆಕ್ರಮಣಕಾರಿ, ದಮನಕಾರಿ ನೀತಿಯ ಮೂಲಕ ತನ್ನ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ ಹೋರಾಡುವ ಪ್ರಭುತ್ವ ಪ್ರಧಾನ ಪ್ರಜ್ಞೆಯ ಪಲ್ಲಂಗದಿಂದ ಕೆಳಗಿಳಿಯುವುದೇ ಇಲ್ಲ. ಪ್ರಭುತ್ವವು ಜನಬದುಕಿನೊಂದಿಗೆ ಹೊಂದಬೇಕಾದ ತಾದಾತ್ಮ್ಯವನ್ನು ಕನಕದಾಸರು ವಿವೇಚಿಸುವ ಮೂಲಕ ಪ್ರಭುತ್ವ ಹಾಗೂ ಜನ ಬದುಕಿನ ಮುಖಾಮುಖಿಯ ಮೂಲಕ ಅರಸು ಚರಿತ್ರೆಯ ವಿಭಿನ್ನ ನೋಟಗಳನ್ನು ನೀಡುತ್ತಾರೆ. ಮೋಹನ ತರಂಗಿಣಿಯಲ್ಲಿ ಶ್ರೀ ಕೃಷ್ಣನನ್ನು ತೋಟದ ಫಲಪುಷ್ಪ ವೀಕ್ಷಣೆಗೆ ಕರೆಯುವ ತೋಂಟಿಗ, ಅರಮನೆಯ ಹಿರಿಯ ಸೇವಕಿ ಕೃಷ್ಣ–ರುಕ್ಮಿಣಿ– ಸತ್ಯಭಾಮೆಯರೊಂದಿಗೆ, ತೋರುವ ಸಲಿಗೆಯ ಚಿತ್ರಣಗಳು ಕೃಷ್ಣ ಚರಿತೆಗೆ ನೀಡಿದ ಸೃಜನಾತ್ಮಕ ಆಯಾಮಗಳು.

ಮೋಹನ ತರಂಗಿಣಿಯ ಆರಂಭದಲ್ಲಿ ಕಾಣಿಸಿಕೊಳ್ಳುವ ಶ್ರೀ ಕೃಷ್ಣನ ಸಾಂಸಾರಿಕ ಚಿತ್ರಣಗಳು ದೈವತ್ವ ಮೀರಿದ ಸಾಮಾಜಿಕ ನೆಲೆಯಲ್ಲಿ ಅನಾವರಣಗೊಳ್ಳುತ್ತದೆ. ರುಕ್ಮಿಣಿ–ಸತ್ಯಭಾಮೆ–ಶ್ರೀ ಕೃಷ್ಣನ ವೈಯಕ್ತಿಕ ಬದುಕು, ನೋವು–ದು:ಖದ ಕ್ಷಣಗಳು ಶ್ರೀಕೃಷ್ಣದೇವರಾಯನ ಸಾಂಸಾರಿಕ ಬದುಕನ್ನು ನೆನಪಿಸುವಂತಿದೆ. ನ್ಯೂನಿಜ್ ಕೊಡುವ ವಿವರಣೆಯಂತೆ ಶ್ರೀ ಕೃಷ್ಣದೇವರಾಯ ತನ್ನ ವಾರ್ಧಕ್ಯದಲ್ಲಿ ತನ್ನ ಆರು ವರ್ಷದ ಮಗನಿಗೆ ರಾಜ್ಯಾಭಿಷೇಕ ಮಾಡಿದನು. ಅದು ಹದಿನೆಂಟು ತಿಂಗಳ ತನಕ ನಡೆದ ಮಹಾ ಮಹೋತ್ಸವವದು. ಕುಮಾರ ತಿರುಮಲ ರಾಜನೆಂಬ ಅಭಿಧಾನವಿರುವ ಈ ಬಾಲಕ ವಿಷಪ್ರಾಶನದಿಂದ ಸತ್ತ ನೆಂಬ ಕಥೆಯನ್ನು ಹೇಳಲಾಗುತ್ತದೆ. ಕೃಷ್ಣದೇವರಾಯನ ಪ್ರಧಾನಿಯಾಗಿದ್ದ ತಿಮ್ಮರಸನ ಮಗನಾದ ತಿಮ್ಮ ದಂಡನಾಯಕನು ವಿಷ ಪ್ರಯೋಗ ಮಾಡಿದನೆಂದು ತಿಳಿದು ಅವನ ಪರಿವಾರವನ್ನು ಸೆರಮನೆಗೆ ದೂಡಿದ ವಿಚಾರವನ್ನು ನ್ಯೂನಿಜ್ ತಿಳಿಸುತ್ತಾನೆ. ಸದ್ಯಕ್ಕೆ ಇವನ ಅಭಿಪ್ರಾಯವನ್ನು ಸತ್ಯವೆನ್ನಲು ೧೫೨೪ರಲ್ಲಿ ಮಹಾರಾಜಾಧಿರಾಜ ಪರಮೇಶ್ವರ ವೀರಪ್ರತಾಪ ತಿರು ಮಲಯ್ಯದೇವ ಮಹಾರಾಯರು ವಿಜಯನಗರ ಪಾಲಿಸುತ್ತಿದ್ದರೆಂದು ಆಂಧ್ರ, ಕರ್ನಾಟಕ, ದ್ರಾವಿಡ ದೇಶಗಳ ಅನೇಕ ಕಡೆ ಇರುವ ಶಾಸನಗಳು ಸಾರುತ್ತವೆ. ೧೫೨೪ರ ನಂತರ ತಿರುಮಲಯ್ಯನ ಉಲ್ಲೇಖವಾಗಲಿ, ತಿಮ್ಮದಂಡನಾಯಕನ ಪ್ರಸ್ತಾಪವಾಗಲಿ ಶಾಸನಗಳಲ್ಲಿ ದೊರೆಯುವುದಿಲ್ಲ, ನ್ಯೂನಿಜ್ ನೀಡುವ ವರದಿಯ ಪ್ರಕಾರ ಶ್ರೀಕೃಷ್ಣ ದೇವರಾಯ ಮರಣ ಹೊಂದುವಾಗ ಅವನಿಗೆ ಹಂದಿನೆಂಟು ತಿಂಗಳ ಇನ್ನೊಬ್ಬ ಮಗನಿದ್ದ ವಿವರವೂ ದೊರೆಯುತ್ತದೆ. [೫] ಕನಕದಾಸರು ಮೋಹನ ತರಂಗಿಣಿಯನ್ನು ಬರೆದ ಕಾಲ ಸುಮಾರು

೫ ಡಾ.ಎನ್. ವೆಂಕಟರಮಣಯ್ಯ: ವಿಜಯನಗರ ಚರಿತ್ರೆ; ಪುಟ ೨೦೨

೧೫೫೩-೫೪ರಲ್ಲಿ [೬] ಎಂದು ಅನಿರುದ್ಧ ಹುಟ್ಟಿದ ದಿನಾಂಕವನ್ನು ಗುರುತಿಸಿ ಕಟ್ಟಿ ಶೇಷಾಚಾರ್ಯರು ಉಲ್ಲೇಖಿಸುತ್ತಾರೆ. ದಾಸರು ತಮ್ಮ ಕಾವ್ಯದ ಕಾಲವನ್ನು ಸೂಚಿಸಲು ಅದನ್ನು ಬರೆದರೆಂದು ಹೇಳುತ್ತಾರೆ. ರಾಜ ಕುಟುಂಬದ ನಿಕಟ ಸಂಬಂಧ ಹೊಂದಿದ ಕನಕದಾಸರು ಅಲ್ಲಿನ ನೋವು-ನಲಿವುಗಳನ್ನು ಚೆನ್ನಾಗಿ ಬಲ್ಲವರು. ಶ್ರೀಕೃಷ್ಣನಿಗೆ ಮಗುವಾದ ಮೊದಲ ಸಂಭ್ರಮ, ಮಗು ಮಾಯವಾಗುವ ಸಂದರ್ಭಗಳು ಶ್ರೀಕೃಷ್ಣ ದೇವರಾಯನ ವೈಯಕ್ತಿಕ ಬದುಕಿನ ನಿರೂಪಣೆಗಳಂತೆ ಭಾಸವಾಗುತ್ತವೆ. ಶಕುನ, ಜಾತಕರ್ಮ, ದೈವಭಕ್ತಿ, ಮೊದಲಾದವುಗಳಲ್ಲಿ ಆಸಕ್ತರಾದ ವಿಜಯನಗರದ ಅರಸರಂತೆ ಶ್ರೀ ಕೃಷ್ಣನ ಕುಟುಂಬವೂ ರೂಪುಪಡೆದಿದೆ.

ಜಗದೊಳು ಶ್ರೀಕೃಷ್ಣದೇವರಾಯನಿಗೆ ಗಂಡು
ಮಗನಾದ ಪರಮಸಂಭ್ರಮಮದಿ
ಅಗಣಿತ ವಿದ್ಯಾಧಿಕರು ಬಂದಲಸದೆ
ಹೊಗಳಿದರಂಬುಜಾಂಬುಕನ [೭]

ಶ್ರೀಕೃಷ್ಣನಿಗೆ ಗಂಡು ಮಗುವಾದ ಸಂಭ್ರಮ. ಪುತ್ರೋತ್ಸವದ ಈ ಸಂದರ್ಭದಲ್ಲಿ 'ಶ್ರೀಕೃಷ್ಣದೇವರಾಯ'ನ ಔದಾರ್ಯವೂ ಅಸದೃಶವಾದುದು. ಅಸಂಖ್ಯಾತ ಆಶ್ರಿತರಿಗೆ ಕಲ್ಪವೃಕ್ಷ, ಕಾಮಧೇನುವಾಗಿ ಬೇಡಿದ್ದನ್ನು ಕೊಟ್ಟು ಅಂತಃಕರಣದಿಂದ ಸನ್ಮಾನಿಸಿದನು. ರುಕ್ಮಿಣಿದೇವಿ ತನ್ನ ಮಗನಾದ ಪ್ರದ್ಯುಮ್ನನಿಗೆ ಮೈಗೆ ಎಣ್ಣೆಯನ್ನು ಉಣಿಸಿ, ನೀರೆರೆದು, ಕಣ್ಣಿಗೆ ಕಾಡಿಗೆಯನ್ನು ಲೇಪಿಸಿ, ಜ್ಯೋತಿ ರೂಪದ ಬೊಟ್ಟನಿಟ್ಟು, ತೂಪಿರಿದು ಹಾಲು ಕುಡಿಸಿ ಉಪಚರಿಸಿ ಮಣಿಮಂಚದ ಮೇಲೆ ಮಲಗಿಸಿದಳು:

ಶಿಶುವಿನ ಭಾಳಾಂತರದೊಳಿಟ್ಟುಳು ಮಂ
ತ್ರಿಸಿದ ವಿಭೂತಿಯ ಬೊಟ್ಟ
ಮಿಸುನಿ ಯಂತ್ರದ ಮಣಿಮಾಲೆಯ ತೋಳ್ಗೆ ಬಂ
ಧಿಸಿದಳತ್ಯಂತ ಭಕ್ತಿಯಲಿ [೮]

ರುಕ್ಮಿಣಿ ತನ್ನ ಮಗನಿಗೆ ಮಂತ್ರಿಸಿದ ವಿಭೂತಿ ಹಣೆಗೆ ಹಚ್ಚಿ ತೋಳಿಗೆ ಬಂಗಾರದ ಮಂತ್ರಿಸಿದ ತಾಯತವನ್ನು ಕಟ್ಟುವ ಚಿತ್ರಣ ಜನಪದರ ಜೀವನವನ್ನು ನೆನಪಿಸುತ್ತದೆ. ಈ ಚಿತ್ರಣವನ್ನು ನೋಡಿದರೆ ಶ್ರೀಕೃಷ್ಣ ದೇವರಾಯನಿಗೆ ತನ್ನ ಮಗನ ಸಾವಿನ ಮುನ್ಸೂಚನೆ ಮೊದಲೇ ಇತ್ತೇ? ಅಥವಾ ಕನಕದಾಸರಿಗೆ ಮುಂದೆ ಅಗಲುವ ಮಗುವಿನ ಭವಿಷ್ಯವನ್ನು ನಿರ್ಧರಿಸುವ ಸೂಚನೆಯನ್ನು ಈಗಲೇ ನೀಡಿರುವರೆ?

---

೬. ಕಟ್ಟಿ ಶೇಷಾಚಾರ್ಯರು: ಕವಿ ಕನಕದಾಸರು ಪುಟ-೫

೭. ಮೋಹನ ತರಂಗಿಣಿ: ಪುಟ-೭೨

೮. ಮೋಹನ ತರಂಗಿಣಿ: ಪುಟ ೭೩

ಮಗ ತಿರುಮಲ ರಾಯನನ್ನು ಕಳೆದುಕೊಂಡ ಕೃಷ್ಣದೇವರಾಯ ಹಾಗೂ ಅವನ ರಾಣಿಯ ದು:ಖವನ್ನು ರುಕ್ಮಿಣಿಯ ಮೂಲಕ ವರ್ಣಿಸುವಲ್ಲಿ ಅಂದಿನ ರಾಜಪರಿವಾರದ ಕುಟುಂಬದ ನೈಜ ಚಿತ್ರಣ ಕಣ್ಣಿಗೆ ಕಟ್ಟುತ್ತದೆ. ಮಗು ಪ್ರದ್ಯುಮ್ನನನ್ನು ಶಂಬರಾಸುರ ಅಪಹರಿಸಿದಾಗ ಬಾಣತಾಗಿದ ಜಿಂಕೆಯಂತೆ ರೋಧಿಸುವ ರುಕ್ಮಿಣಿಯ ಚಿತ್ರಣ ರಾಘವಾಂಕನ ಚಂದ್ರಮತಿಯನ್ನು ನೆನಪಿಸುತ್ತದೆ.

ಎಣ್ಣೆಯ ತಲೆಗೂಡಿದುದಿಲ್ಲ ನೊರೆವಾಲು
ಬೆಣ್ಣೆಯ ಮೆಲಿಸಿದುದಿಲ್ಲ
ಕಣ್ಣೆವೆ ಹಳಚಿ ನೋಡಿದುದಿಲ್ಲ ಮಗನ ಲಾ
ವಣ್ಯವನೆಂದಟಲಿದಳು॥
ಕರೆದೊಡೋಯೆನ್ನ ಬಾರದೆ ಕಂದ ನಿನ್ನಯ
ಸಿರಿಮೊಗಗಾಣದೆಂತಿರಲೊ
ಪರಿತಾಪವ ಪುಟ್ಟಿಸಿ ಪೋಗ ಬಂದೆಯ
ಹರಿಕೊಟ್ಟ ವರ ಬಯಲಾಯ್ತೆ॥
ಹಾಲಿಗೆ ಹಂಬಲಿಸುವನಲ್ಲ ಬಿಡದಂಬೆ
ಗಾಲಿಕ್ಕಿ ತೆರಳುವನಲ್ಲ
ಕಾಲು ಬಲಿದು ದಟ್ಟಡಿಯಿಡುವವನಲ್ಲ
ಬಾಲನೆಲ್ಲಿಗೆ ಹೋದನವ್ವ॥

ಶ್ರೀಕೃಷ್ಣ–ಸತ್ಯಭಾಮೆಯರ ಸಾಂತ್ವನ;

ನಿಲ್ಲದಾಕ್ಷಣ ಕೃಷ್ಣ ಬಿಗಿಯಪ್ಪಿ ನೀ ಪೆತ್ತು
ದಿಲ್ಲವೆಂದೆದೆಯ ಬಿಲ್ವಿಡಿದು
ತಲ್ಲಣಿಸದೆ ನನ್ನ ನೋಡಿ ನೀಮಱಿಯೆಂದು
ಗಲ್ಲವ ಪಿಡಿದು ಮುದ್ದಿಸಿದ॥

ಇದರಲ್ಲಿ ಮಗ ತಿರುಮಲನನ್ನು ಕಳೆದುಕೊಂಡ ರಾಣಿಯ ಪುತ್ರಶೋಕ ಅದಕ್ಕೆ ಕೃಷ್ಣದೇವರಾಯನ ಸಮಾಧಾನ ಮಾನವ ಸಹಜ ನಿರೂಪಣೆಗಳಾಗಿ ಕಾಣಿಸುತ್ತವೆ. ಕೃಷ್ಣರಾಯನ ಒಳಮನೆ ಹೊರಮನೆಯ ರಾಜತಾಂತ್ರಿಕ ವಿಷಯಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವ ಕನಕದಾಸರು ಸಾಮಾನ್ಯ ಜನಪದ ಜೀವನ ಮೌಲ್ಯಗಳನ್ನು ರಾಜಕುಟುಂಬಕ್ಕೂ ಅನ್ವಯಿಸಿ ನೋಡುತ್ತಾರೆ. ರಾಣಿಯರ ಮೂಲಕ ಸ್ತ್ರೀ ಸಾಂಸ್ಕೃತಿಕ ಚರಿತ್ರೆಗೆ ಭಿನ್ನ ಆಯಾಮ ನೀಡುತ್ತಾರೆ. ಕನಕದಾಸರು ಹೊರಮನೆಯ ರಾಜ ತಾಂತ್ರಿಕ ವಿಷಯಗಳಿಗಿಂತಲೂ ಒಳಮನೆಯ ವಿಷಯಗಳಿಗೆ ಹೆಚ್ಚು ಮನ್ನಣೆ ನೀಡುತ್ತಾರೆ.

ಇತಿಹಾಸವನ್ನು ನಿರ್ವಚಿಸುವ ಭಿನ್ನ ದಾರಿಗಳಿವು. ಅರಮನೆಯ ಹೊರಗೆ ಕಾಣಿಸುವ ಕೋಟೆ, ಕೊತ್ತಳ, ಹುಲಿಮೊಗ, ಕೋಟೆಯಕದ, ಮುಗಿಲಟ್ಟಣೆ, ಕಳಸ, ಅಗಳು, ಡೆಂಕಣ, ಮರುಳ್‍ಗೈ, ಲಾಳಿ, ಬಿಲ್ಲು, ಪೆಟಲು, ದಿಡ್ಡಿ, ಬಿಲದ್ವಾರ, ಆಳ್ವೇರಿ, ವ್ಯವಹಾರಿಕ ಬದುಕಿನ ಸಂಗತಿಗಳನ್ನು ಗಮನಿಸುವಷ್ಟೇ ಮಹತ್ವವನ್ನು ಒಳಮನೆಯ ಸ್ತ್ರೀಪ್ರಪಂಚಕ್ಕೂ ನೀಡುತ್ತಾರೆ.

<u>ರಾಣಿವಾಸದ ಚಿತ್ರಣಗಳು:</u>

ಕಂಪಣನ ಅರಸನ ಮಡದಿ ಕವಯತ್ರಿ ಗಂಗಾದೇವಿಯ 'ಮಧುರಾ ವಿಜಯಂ' ಅಹೋಬಲನ 'ವಸಂತೋತ್ಸವ' ಚಂಪೂ ಕಾವ್ಯಗಳು ಸಂಸ್ಕೃತ ಭಾಷೆಯಲ್ಲಿದ್ದು ವಿಜಯನಗರ ಕಾಲದ ರಾಣಿಯರ ಜಲ ಕೇಳಿಯೇ ಮೊದಲಾದ ರಾಣಿ ವಾಸದ ಚಿತ್ರಣ ನೀಡುವ ಪ್ರಮುಖ ಕೃತಿಗಳು. ಇವೆರಡನ್ನು ಬಿಟ್ಟರೆ ಕನ್ನಡದಲ್ಲಿ ದೊರೆಯುವ ಕನಕದಾಸರ 'ಮೋಹನ ತರಂಗಿಣಿ' ಹೆಸರಿಸಲೇ ಬೇಕಾದ ಬಹುಮುಖ್ಯ ಕಾವ್ಯ. ಮಧ್ಯಕಾಲೀನ ರಾಣಿಯರ ಬದುಕಿನ ನೋಟ ನೀಡುವ 'ಮೋಹನ ತರಂಗಿಣಿ' ಅರಸು ಚರಿತ್ರೆಯ ಪ್ರಮುಖ ಭಾಗವಾಗಿ ಮೂಡಿಬಂದಿದೆ. ಇದು ಕೃಷ್ಣ ಪರಿವಾರದ ಸ್ತ್ರೀ ಚರಿತ್ರೆ. ಇಲ್ಲಿ ಇತಿಹಾಸಕಾರನ ನೋಟವಿಲ್ಲ. ಸಂಸ್ಕೃತಿ ಚರಿತ್ರಕಾರನ ದೃಷ್ಟಿಯಿದೆ.

ಶ್ರೀಕೃಷ್ಣನ ರಾಣಿವಾಸದ ಚಿತ್ರಣ ನೀಡುವಲ್ಲಿ ಸಮಕಾಲೀನ, ರಾಜಕೀಯ, ಸಾಮಾಜಿಕ ವಿಷಯಗಳನ್ನು ಕನಕದಾಸರು ಒಟ್ಟಾಗಿ ಬೆರಸಿದ್ದಾರೆ. ರುಕ್ಮಿಣಿ–ಸತ್ಯಭಾಮೆ, ರತಿ, ಉಷೆಯ ಮೂಲಕ ತಲೆಮಾರುಗಳ ಚಿತ್ರಣ ನೀಡುವ ಕವಿ ಅವರಷ್ಟೇ ಮುಖ್ಯವಾಗಿ ಬಾಹತ್ತರ ನಿಯೋಗದ ಹಲವು ಅರಮನೆಯ ಹೆಣ್ಣು ಮಕ್ಕಳ ವಿವರಗಳನ್ನು ದಾಖಲಿಸುತ್ತಾರೆ. ಸ್ತ್ರೀ ಬದುಕಿನ ವಿವರಗಳನ್ನು ದಾಖಲಿಸಿದ ಮೊದಲ ಅಪೂರ್ವ ಕೃತಿ ಎಂಬುದು ಇದರ ಹೆಮ್ಮೆ. ಯಾವ ವಿದೇಶಿ ಪ್ರವಾಸಿಗರೂ ದಾಖಲಿಸದೇ ಇರುವ ಬಹಳಷ್ಟು ಸಂಗತಿಗಳು ಇಲ್ಲಿ ಪ್ರಾಮುಖ್ಯತೆ ಪಡೆಯುತ್ತವೆ. ಶ್ರೀಕೃಷ್ಣನ ರಾಜ್ಯದಲ್ಲಿ ಕೇವಲ ಊಳಿಗದ ಹೆಣ್ಣು ಮಕ್ಕಳಲ್ಲದೆ,

ಕರ್ಮಕಾಂಡವ ತಿರಸ್ಕರಿಸಿ ತತ್ವಾರ್ಥದ
ಮರ್ಮವನರಿದ ಪ್ರಾಜ್ಞೆಯರು [೯] ಯರೂ ಕೂಡ ಅಲ್ಲಿದ್ದರು.

ಗಂಗಾದೇವಿ ಸ್ವತಃ ಕಂಡು ಅನುಭವಿಸಿದ ರಾಣಿಯರ ಜಲಕೇಳಿಯ ವರ್ಣನೆಗಳು ಕನಕದಾಸರಲ್ಲಿಯೂ ಅನುರಣಿಸಿದೆ. 'ಮಧುರಾವಿಜಯಂ' ಸಂಸ್ಕೃತ ಕಾವ್ಯ. ಗಂಗಾದೇವಿ ತನ್ನ ಸುತ್ತಮುತ್ತಲಿನ ಅರಮನೆಯ ರಾಣಿಯರ, ಹೆಂಗಸರ ಚಿತ್ರಣಗಳನ್ನು ವಿಶಿಷ್ಟವಾಗಿ ದಾಖಲಿಸಿದ್ದಾರೆ.

---

೦೯. ಮೋಹನ ತರಂಗಿಣಿ: ಪುಟ–೫೧

ಕನಕದಾಸರಲ್ಲಿ ಇದು ಶ್ರೀಕೃಷ್ಣದೇವಾರಾಯನ ವೈಯಕ್ತಿಕ ಬದುಕಿನೊಂದಿಗೆ ಸಂಬಂಧಿಸಿ ನಿರೂಪಿಲ್ಪಟ್ಟಿದೆ. 'ಮಧುರಾವಿಜಯಂ' ಕನಕದಾಸರಿಗೆ ಪ್ರೇರಣೆ ನೀಡಿರಲೂ ಬಹುದು. ರಾಯನಿಗೆ ಪ್ರಿಯರಾದ ರಾಣಿಯರಲ್ಲಿ ತಿರುಮಲಾದೇವಿ ಹಾಗೂ ಚಿನ್ನಾದೇವಿ ಮುಖ್ಯರು. ಮೂರನೆಯವಳು ಪ್ರತಾಪರುದ್ರ ಗಜಪತಿರಾಜನ ಮಗಳು ಜಗನ್ಮೋಹಿನಿ. ಕನಕದಾಸರಿಗೆ ಜಗನ್ಮೋಹಿನಿ ದೇವಿಗಿಂತಲೂ ತಿರುಮಲಾದೇವಿ, ಚಿನ್ನಾದೇವಿಯರ ಕಡೆಗೆ ಹೆಚ್ಚು ಒಲವು ಎಂದು ಕಾಣುತ್ತದೆ. ಹಾಗಾಗಿ ಅವರಿಬ್ಬರನ್ನೂ ರುಕ್ಮಿಣಿ-ಸತ್ಯಭಾಮೆಯರಂತೆ ಪರಿಭಾವಿಸಿದ್ದಾರೆ.

ಗಣಿಸಲೀರೆಂಟು ಸಾವಿರ ಹೆಂಗಳೊಳು ರು
ಕ್ಮಿಣಿ ಸತ್ಯಭಾಮೆಯರುಗಳು
ಫಣಿತಲ್ಪ ಕೃಷ್ಣರಾಯನ ಭುಜಕೀರ್ತಿಯ
ಮಣಿಗಳಂತಿರ್ದರಿಕ್ಕೆಲದೆ [೧೦]

ಡೋಮಿಂಗೋ ಪಾಯಸ್ ನ ಕಥನ ಹೇಳುವಂತೆ ಕೃಷ್ಣದೇವ ರಾಯನಿಗೆ ಒಟ್ಟು ೧೨ ಜನ ಹೆಂಡತಿಯರು. ಅವರಲ್ಲಿ ಮೂವರು ಪಟ್ಟದ ರಾಣಿಯರು. ತಿರುಮಲದೇವಿ, ಚಿನ್ನಾದೇವಿ, ಹಾಗೂ ಕಳಿಂಗರಾಜಕುಮಾರಿ ಜಗನ್ಮೋಹಿನಿ. ನ್ಯೂನಿಜ್ ಚಿನ್ನಾದೇವಿಯನ್ನು ರಾಜನರ್ತಕಿ, ದೇವದಾಸಿ ಎಂದು ಉಲ್ಲೇಖಿಸುತ್ತಾನೆ. ಆದರೆ ಇದು ತಪ್ಪು ಮಾಹಿತಿ ಎನ್ನುವುದು ಈಗ ಸಿದ್ಧವಾಗಿದೆ. ೨೦೦೯ ರಲ್ಲಿ ಪ್ರೊ. ಪರಶಿವಮೂರ್ತಿಯವರು ಮಂಡ್ಯ ಜಿಲ್ಲೆಯ ಕಮಿಡಿ ಹಳ್ಳಿಯಲ್ಲಿ ದೊರೆತ ಶಿಲಾಶಾಸನವನ್ನು ಉಲ್ಲೇಖಿಸಿ ಅದು ಚಿನ್ನಾದೇವಿ ಸಾಧು ಒಬ್ಬರಿಗೆ ದಾನ ನೀಡಿದ ವಿಷಯವಿರುವ ಶಾಸನ: ಇದರ ಕಾಲ ೧೫೨೧. ಇದರಲ್ಲಿ ಚಿನ್ನಾದೇವಿ ವೀರಪ್ಪ ಒಡೆಯರ ಪುತ್ರಿ ಎಂದು ಸ್ಪಷ್ಟವಾಗಿ ಹೇಳಿದೆ ಎಂದಿದ್ದಾರೆ.

ಕೃಷ್ಣದೇವರಾಯನ ಶಾಸನಗಳು ಕೇವಲ ಇಬ್ಬರು ರಾಣಿಯರನ್ನು ಮಾತ್ರ ಉಲ್ಲೇಖಿಸುತ್ತದೆ. ತಿರುಪತಿಯಲ್ಲಿರುವ ತಾಮ್ರದ ವಿಗ್ರಹವೂ ಕೂಡ ರಾಯನ ಜೊತೆ ಕೇವಲ ಇಬ್ಬರು ರಾಣಿಯರ ಪ್ರತಿಮೆ ಮಾತ್ರ ಹೊಂದಿದೆ. ಇನ್ನು ಮೂರನೇ ರಾಣಿಯ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೃಷ್ಣದೇವರಾಯ ಕಳಿಂಗ ರಾಜಕುಮಾರಿಯನ್ನು ವಿವಾಹವಾದ ವಿಷಯ ಕರ್ನಾಟಕ, ಒರಿಯಾ ಆಂಧ್ರದ ಶಾಸನಗಳಲ್ಲಿ ಉಲ್ಲೇಖವಾಗಿಲ್ಲ. ಪ್ರತಾಪರುದ್ರನ ಕೃತಿ, ಸರಸ್ವತಿ ವಿಲಾಸಂ ಮತ್ತು ಪುರಿ ದೇವಸ್ಥಾನದ ದಾಖಲೆಗಳಲ್ಲಿ ಈ ವಿಷಯಗಳ ಪ್ರಸ್ತಾಪವಿಲ್ಲ. ಪಾರಿಜಾತ ಅಪಹರಣಲಮು, ಕೃಷ್ಣದೇವರಾಯನ ದಿನಚರಿ, ರಾಯವಾಚಕಮು, ನವಲರು ಚರಿತ್ರ, ಪಯಾಸ್, ನ್ಯೂನಿಜ್ ರ ವರದಿಗಳು ಈ ಕುರಿತು ಹೇಳುತ್ತವೆ ಎಂದು ಡಾ. ಆರ್. ಗೋಪಾಲಕೃಷ್ಣರಾವ್ ಅಭಿಪ್ರಾಯ

೧೦. ಮೋಹನ ತರಂಗಿಣಿ ಪುಟ-೫೯

ಪಡುತ್ತಾರೆ. [೧೧] ಕೃಷ್ಣದೇವರಾಯನ ವೈಯಕ್ತಿಕ ಬದುಕಿನ ಬಗೆಗೆ ಸ್ಪಷ್ಟವಾದ ಚಾರಿತ್ರಿಕ ಮಾಹಿತಿಗಳ ಕೊರತೆ ಇದೆ. ಸಮಕಾಲೀನ ಚರಿತ್ರಕಾರರು ಈ ಸಂಗತಿಗಳನ್ನು ಉಪೇಕ್ಷಿಸಿದ್ದಾರೆ. ಕನಕದಾಸರು ತಮ್ಮ ಮೋಹನ ತರಂಗಿಣಿ ಕೃತಿಯಲ್ಲಿ ಕೃಷ್ಣರಾಯನ ಇಬ್ಬರು ಹೆಂಡತಿಯರನ್ನು ಮಾತ್ರ ವಿಶೇಷವಾಗಿ ಉಲ್ಲೇಖಿಸುವ ಮೂಲಕ ಸಮಕಾಲೀನ ಚಾರಿತ್ರಿಕ ವಿಷಯಗಳಿಗೆ ಒಂದು ಬಗೆಯ ಸ್ಪಷ್ಟತೆ ನೀಡಿದ್ದಾರೆ.

ಕನಕದಾಸರು 'ಮೋಹನ ತರಂಗಿಣಿ' ರಚಿಸುವ ಹಿನ್ನಲೆಯಲ್ಲಿ ಕೃಷ್ಣಚರಿತ್ರೆಯ ಕಥಾ ಹಂದರವಿರುವುದನ್ನು ಈಗಾಗಲೇ ಗುರುತಿಸಲಾಗಿದೆ. ಪುರಾಣದ ಶ್ರೀಕೃಷ್ಣನನ್ನು ಇತಿಹಾಸದ ಶ್ರೀಕೃಷ್ಣದೇವರಾಯನೊಂದಿಗೆ ಸಮೀಕರಿಸಿ ಹೇಳುವ ಕನಕದಾಸರ ಉದ್ದೇಶದ ಹಿಂದೆ ತೆಲುಗು ಸಾಹಿತ್ಯ ಚರಿತ್ರೆಯ ಪ್ರಭಾವವಿದೆ. ಕೃಷ್ಣದೇವರಾಯನ ಕಾಲದ ತೆಲುಗು ಕವಿಗಳು ತಮ್ಮ ಕಾವ್ಯಗಳಲ್ಲಿ ಶ್ರೀಕೃಷ್ಣನೇ ಕೃಷ್ಣದೇವರಾಯನಾಗಿ ಅವತರಿಸಿದನೆಂದು ವರ್ಣಿಸಿದ್ದಾರೆ. ನರಸಿಂಹನ ಮಗನಾದ ಕೃಷ್ಣರಾಯನ ಚರಿತ್ರೆಯನ್ನು ಪೌರಾಣಿಕ ಕಥಾಬಿಂಬಗಳ ಮೂಲಕ ಅಲಂಕಾರಿವಾಗಿಯೂ ನಿರೂಪಿಸಿದ್ದಾರೆ. ಕೃಷ್ಣದೇವರಾಯ ಯುದ್ಧಕ್ಕೆ ಹೋಗುವಾಗ ಕವಿಗಳನ್ನು ಕರೆದುಕೊಂಡು ಹೋಗುತ್ತಿದ್ದನೆಂಬದು ಪ್ರತೀತಿ.

ಒಮ್ಮೆ ಶ್ರೀಕೃಷ್ಣದೇವರಾಯ ಕೃಷ್ಣಾನದಿಯ ಸಮೀಪದಲ್ಲಿ ಬಹಮನಿ ಸೈನ್ಯದೊಡನೆ ಯುದ್ಧ ಮಾಡಬೇಕಾಯಿತು. ನದಿಯ ದಕ್ಷಿಣಕ್ಕೆ ರಾಯರು, ಉತ್ತರಕ್ಕೆ ಬಹಮನಿ ಸೈನ್ಯವೂ ಬೀಡುಬಿಟ್ಟಿತು. ಇಬ್ಬರೂ ಸಮಯ ನಿರೀಕ್ಷಣೆ ಮಾಡುತ್ತಿರುವಾಗ ಮುಸ್ಲಿಂ ಸೈನ್ಯ ತನ್ನ ಗಜಪಡೆಯನ್ನು ಯೋಧರ ಸಮೇತ ನೀರಿಗಿಳಿಸಿತು. ಆದರೆ ಆ ಸಮಯದಲ್ಲಿ ಕೃಷ್ಣಾನದಿಯಲ್ಲಿ ಪ್ರವಾಹವು ಬಂದ ಕಾರಣ ನೀರು ರಭಸವಾಗಿ ಹರಿಯಲಾರಂಭಿಸಿತು. ಇದರಿಂದ ಆನೆಗಳ ಮೇಲಿದ್ದ ಯೋಧರು 'ಕೃಷ್ಣಾ' ನದಿಯ ನೀರಿನ ಪ್ರವಾಹಕ್ಕೆ ಕೊಚ್ಚಿ ಹೋದರು. ಆನೆಗಳು ಮಾತ್ರ ಈಜಿಕೊಂಡು ರಾಯನ ಸೈನ್ಯಕ್ಕೆ ಬಂದು ಸೇರಿಕೊಂಡವು. ಈ ಸನ್ನಿವೇಶವನ್ನು ತೆಲುಗು ಕವಿ ತಿಮ್ಮಣ ಕವಿತಾಚಾತುರ್ಯದ ಮೂಲಕ ಶ್ಲೇಷೆಯನ್ನು ಬಳಸಿ ಅಲಂಕಾರಿವಾಗಿ ಹೀಗೆ ಹೇಳಿದ್ದಾನೆ.

ನರಸಿಂಹ ಕೃಷ್ಣರಾಯ  
ದುರಮುನ ನೀಪೇರಿಟೇರು ತುರಕಲ ಜಂಪೆನ್  
ಕರಿರಾಜ ವರದುಡಂಚನು  
ಕರಿಘಟುಲಟ ಮಿಮ್ಮು ಜೂ ಚೆಗ್ರಕ್ಕುನ ವೆಚ್ಚೆನ್.

೧೧. ಡಾ. ಆರ್. ಗೋಪಾಲಕೃಷ್ಣರಾವ್: ಶ್ರೀಕೃಷ್ಣದೇವರಾಯನ ರಾಣಿಯರ ಕುರಿತು ಹೊಸಬೆಳಕು- ಇತಿಹಾಸ ಅಕಾಡೆಮಿ ಬ್ಲಾಗ್

ಇಲ್ಲಿ ಕೃಷ್ಣರಾಯನು ಶ್ರೀವಿಷ್ಣುವಿನ ಪ್ರತಿರೂಪನ; ಅವನೇ ನರಸಿಂಹ, ಕೃಷ್ಣರಾಯ. 'ಯುದ್ಧದಲ್ಲಿ ನಿನ್ನ ಹೆಸರಿನ (ಕೃಷ್ಣಾನದಿ) ಒಂದು ಹೊಳೆ. ತುರುಕರನ್ನು ಕೊಂದಿತು. ಆದರೆ ಕರಿಘಟೆಗಳು ಮಾತ್ರ ಕರಿರಾಜ ವರದನಾದ ನಿನ್ನನ್ನು ನೋಡಿ ಸರ್‍ರನೆ ನಿಮ್ಮಲ್ಲಿಗೆ ಬಂದು ಸೇರಿಕೊಂಡವು. ಕೃಷ್ಣರಾಯನು ಗಜಪತಿಯ ಸೈನ್ಯ ಸೋಲಿಸಿದಾಗಲೂ ಇದೇ ಬಗೆಯ ಅಭಿಪ್ರಾಯ ಕವಿಗಳಲ್ಲಿ ವ್ಯಕ್ತವಾಗಿದೆ. ನರಸಿಂಹನ ಮಗನಾದ ಕೃಷ್ಣದೇವರಾಯ ಮರಿಸಿಂಹ : ಸಿಂಹವು ಆನೆಯನ್ನು ಗೆಲ್ಲುವುದರಲ್ಲಿ ಆಶ್ಚರ್ಯವಿಲ್ಲ

(ಕೃಷ್ಣರಾಯ ! ಸ್ತುವಂತುತ್ವಾಂ ಕವಯೋ ನವಯಂ- ಸ್ತುಮ; ನರಸಿಂಹ ಕಿಶೋರಸ್ಯ ಕಿಯಾನ್ ಗಜಪತೇರ್ಜಯ) ಗಜೇಂದ್ರ ಮೋಕ್ಷದ ಕಥಾ ಸಂವಿಧಾನಕ್ಕೆ ಶ್ರೀಕೃಷ್ಣದೇವರಾಯನನ್ನು ಸಮೀಕರಿಸಿ ಅವನೇ ಶ್ರೀಕೃಷ್ಣನೆಂದು ಹೇಳುವ ಕಾವ್ಯವರ್ಣನ ಶೈಲಿ ಆಂಧ್ರದಲ್ಲಿದೆ. [೧೨]

ರಾಣೀವಾಸದ ಚಿತ್ರಣಗಳೇ ಹೆಚ್ಚು ಮೈದುಂಬಿಕೊಂಡಿರುವ 'ಮೋಹನ ತರಂಗಿಣಿ' ಸ್ತ್ರೀ ಪ್ರಧಾನ ಕಾವ್ಯ. ಇಲ್ಲಿ ಶ್ರೀ ಕೃಷ್ಣನೇ ನಾಯಕನಾದರೂ ಪುರುಷ ಕೇಂದ್ರಿತ ವಿಷಯಗಳು ಕಡಿಮೇ ಎಂದೇ ಹೇಳಬೇಕು. ಯುದ್ಧ, ಹಿಂಸೆ, ಕೊಲೆ ಸುಲಿಗೆ ಇದೆಲ್ಲವೂ ಇತಿಹಾಸದಲ್ಲಿ ಪ್ರಭುತ್ವದ ಧೋರಣೆಗಳು. ಅವು ಯಾವಾಗಲೂ ಪುರುಷ ನಿಷ್ಠವಾಗಿಯೆ ಇರುತ್ತವೆ. ಕನಕದಾಸರಲ್ಲಿ ಅವುಗಳ ಬಗ್ಗೆ ಹೆಚ್ಚು ಆಸಕ್ತಿ ಇದ್ದಂತಿಲ್ಲ. ಶೃಂಗಾರದ ಚಿತ್ರಣಗಳು, ಪುತ್ರೋತ್ಸವ, ಮಾಸೋತ್ಸವ, ತೊಟ್ಟಿಲ ಶಾಸ್ತ್ರ ಮಗುವಿನ ಬಾಲಲೀಲೆಗಳಂತಹ ಸ್ತ್ರೀ ಪ್ರಧಾನ ಚಿತ್ರಣಗಳೇ ಹೆಚ್ಚು. ಅನಿರುದ್ಧನ ಬಾಲಲೀಲೆಯ ವರ್ಣನೆಗಳು, ತಾಯ್ತನದ ಆನಂದ ಕನಕದಾಸರಿಗೆ ವರ್ಣಿಸಿದಷ್ಟು ಹಿಗ್ಗು. ಆ ಕಾಲದ ಕರ್ನಾಟಕದ ಗ್ರಾಮೀಣ ಮಹಿಳೆಯರ ದಟ್ಟ ಜೀವನಾನುಭವದಿಂದಲೇ ಪ್ರತಿ ಸನ್ನಿವೇಶವನ್ನು ವರ್ಣಿಸುವ ಕನಕದಾಸರಿಗೆ ದೇವರೂ ಮನುಷ್ಯರೂ ಸಮ ದುಃಖಿ-ದು:ಖಿಗಳಾಗಿ ಕಾಣುತ್ತಾರೆ. ಇಲ್ಲಿಯ ರುಕ್ಮಿಣಿ, ರತಿದೇವಿಯರು ಸಾಮಾನ್ಯ ಹೆಣ್ಣುಮಕ್ಕಳ ಪ್ರತಿನಿಧಿಗಳು, ಮಗುವಿಗೆ ಒಂದು ತಿಂಗಳು ತುಂಬಿದಾಗ ಆಚರಿಸುವ 'ಮಾಸೋತ್ಸವ' ರತಿಯ ಪಾಲಿಗೆ ಇನ್ನಿಲ್ಲದ ಸಂಭ್ರಮವನ್ನುಂಟು ಮಾಡಿದೆ.

ಚೆಣ್ಣನ ಮೊಗಗಂಡಪಳ್ ತರಳಂಗೆ  
ಅಣ್ಣನಾರೆಂದು ತೂಪಿರಿದು  
ಬಣ್ಣದಾವರೆ ಮೊಗ್ಗೆ ಮಾಲೆಯ ಬಾಯಳೂಡಿ  
ಯುಣ್ಣೆಂದು ಶಿಶುವನಪ್ಪುವಳು॥  
    ಕೊರಲ ಮೂರೇಖೆಯ ಮಣ್ಣೊಡೆವಳು ಸಣ್ಣ

---

೧೨. ಕೆ. ವೆಂಕಟರಾಮಪ್ಪ : ಶ್ರೀ ಕೃಷ್ಣ ದೇವರಾಯನ ಕಾಲದ ಕರ್ನಾಟಾಂಧ್ರ ಸಾಹಿತ್ಯ ಸಮೀಕ್ಷೆ ; ಪುಟ-೧೨

ಬೆರಳ ಕೈರೇಖೆಯುಜ್ಜುವಳು
ತರಳನ ಪುಟ್ಟ ಪಾದದೊಳಿರ್ದ ತಾವರೆ
ವರಲನು ನೊಸಲಿಗೊತ್ತುವಳು॥
ರಾಜಾಧಿಪನೆಂಬೆನೆ ನಷ್ಟ ಪುಷ್ಟ ಸ
ರೋಜಾಪ್ತನೆಂಬೆನೆ ಬಿಸಿಲ
ತೇಜೋಮಯ ಕಂದ ಬಾರೆಂದು ರತಿ ಬೃಹ
ದ್ವೀಜಕ್ಕೆ ಮುತ್ತನಿಕ್ಕುವಳು॥
ತೊರೆದ ನುಣ್ಮಾಲೆಯನೀಂಟುತ ಪೆಸರ್ಗಾಯದ
ಬೆರಲೊಳು ಮಾಲೆದೊಟ್ಟು ಪಿಡಿದು
ಮರಳ್ದುಣೆ ನೆತ್ತಿಗೇಜಲಿಕುಸಿರೂದಂತೆ
ತರಳಾಕ್ಷಿ ಬೆಚ್ಚುವಳ್ಭಯದಿ॥

ಕನಕದಾಸರ ದೇಸಿ ಪ್ರತಿಭೆ ಇಂತಹ ಸಂದರ್ಭದಲ್ಲಿ ಮೈದೋರುವ ಬಗೆ ಅಪೂರ್ವವಾದುದು. ಮಗುವಿಗೆ ಪೂ ಪೂ ಎಂದು ಉಗುಳಿ ದೃಷ್ಟಿ ದೋಷ ತೆಗೆಯುವುದು, ಮಗುವಿನ ಕೊರಳ ರೇಖೆಯಲ್ಲಿ ಅಡಗಿದ ಮಣ್ಣನ್ನು ಉಜ್ಜಿ ತೆಗೆಯುವುದು, ಮಗುವಿನ ಬೆರಳುಗಳ ಗೆರೆಯನ್ನು ಉಜ್ಜುವುದು, ಅದರ ಜನನಾಂಗಕ್ಕೆ ಮುತ್ತನಿಕ್ಕುವುದು, ಮಗು ಹಾಲು ಕುಡಿಯುವಾಗ ಹಾಲು ನೆತ್ತಿಗೇರಲು ಭಯದಿಂದ ಮೆಲ್ಲನೆ ನೆತ್ತಿಯನ್ನು ಊದುವುದು, ದೇವ ಸಹಜವೆನ್ನುವುದಕ್ಕಿಂತಲೂ ಮಾನವ ಸಹಜ ಬದುಕಿನ ನೋಟಗಳು.

### ಅರಮನೆಯ ಊಳಿಗ ಹೆಂಗಸರು, ಕೊಜ್ಜೆಯರು, ಬೇಡತಿಯರ ಚಿತ್ರಣಗಳು

ಕನಕದಾಸರ ಮೋಹನ ತರಂಗಿಣಿಯಲ್ಲಿ ಅನೇಕ ಬಗೆಯ ಹೆಂಗಸರ ವಿವರಗಳು ದೊರೆಯುತ್ತವೆ. ಪಾಠಕಿಯವರು, ಸಂಚಿಯವರು, ಗಿಂಡಿಯವರು, ಬೀಸಣಿಕೆ, ಚಾಮರ, ಕಠಾರಿ, ಕನ್ನಡಿ, ಹಾವುಗೆಯವರು ಮೊದಲಾದ (೭೨- ಬಾಹತ್ತರ) ನಿಯೋಗದವರು, ಸಭೆಯ ಶಿಸ್ತನ್ನು ನಿರ್ವಹಿಸುವ ಕಣ್ಣಗೆಗಾರ್ತಿಯರು (೧೭-೫) ವೇಶ್ಯೆಯರು, ಗಾನರಾಣಿಯರು, ಗಮಕಿ, ವಾಗ್ಮಿಗಳು, ಬೇಡತಿಯರು - ಹೀಗೆ ಸಮೃದ್ಧ ಸ್ತ್ರೀ ಪರಂಪರೆ ಚಿತ್ರಣವನ್ನು ಅವರು ನೀಡುತ್ತಾರೆ. ಕೃಷ್ಣರಾಯನ ಅಂತಃಪುರದೊಳಗೆ ವಿಲಾಸಿನಿಯರನ್ನು ಸಾಲಾಗಿ ನಿಲ್ಲಿಸಿ ಅವರನ್ನು ನಿಯಂತ್ರಿಸಲು ನಿಯೋಜಿತರಾದ ಕೋವಿ ಹಿಡಿದ 'ಕಟ್ಟಿಗಾರ್ತಿಯರು'. 'ಸಮರ ವಿಜೀಯ ಮೋಹನ ಗಾತ್ರ ಕೃಷ್ಣರಾಯ ರಕ್ಷಿಸು' ಎಂದು ಹೊಗಳಲು ನಿಯುಕ್ತರಾದ ಸ್ತುತಿ ಪಾಠಕಿಯರು; ಸಂಬಳಗಾತಿಯರೂ ಗಿಂಡಿ ಹಿಡಿದವಳೂ, ಕಾಳಾಂಜಿಯವಳು, ಬೀಸಣಿಗೆಯವಳೂ, ಚಾಮರದವಳೂ

ಕಕಾರಿಯವರೂ, ಕನ್ನಡಿಯವಳು, ಹಾವುಗೆಯವಳು, ಸಂಗೀತಗಾರ್ತಿಯರೂ ಆ ಅರಮನೆಯಲ್ಲಿದ್ದರು ಎನ್ನುತ್ತಾರೆ. ಡುಹಾರ್ಟ್ ಬಾರ್ಬೋಸ್ ಹೇಳುವ ಹಾಗೆ, ರಾಜರ ಎಲ್ಲಾ ಸೇವೆ ಸ್ತ್ರೀಯರಿಂದಲೇ ಜರುಗುತ್ತದೆ. ಇತಿಹಾಸವು ಮರೆತ ಇಂತಹ ಸ್ತ್ರೀ ಪಾತ್ರಗಳನ್ನು ಕನಕ ಕೃತಿಗಳು ನೀಡಿರುವುದರಿಂದಾಗಿಯೇ ಮಧ್ಯಕಾಲೀನ ಚಾರಿತ್ರಿಕ ಸಂಗತಿಗಳಲ್ಲಿ ಸ್ತ್ರೀಯರನ್ನೂ ಗುರುತಿಸಲು ಸಾಧ್ಯವಾಯಿತು. ಕನಕದಾಸರು ಕಂಡ ಹಾಗೆ ವಿಜಯನಗರದಲ್ಲಿ ಮಹಿಳೆಯರಿಗೂ ಯುದ್ಧ ಹಾಗೂ ಸೈನ್ಯದಲ್ಲಿ ತರಬೇತಿ ಇತ್ತು. ನಾರದನೂ ಬಂದು ಬಾಣಾಸುರನಿಗೆ ಉಷೆ ಹಾಗೂ ಅನಿರುದ್ಧನ ವಿವಾಹ ವೃತ್ತಾಂತ ಹೇಳಿದಾಗ ಅನಿರುದ್ಧನನ್ನು ಸೆರೆಹಿಡಿಯಲು ಬಾಣಾಸುರ ತನ್ನ ದೈತ್ಯಪಡೆಯನ್ನು ಕಳುಹಿಸುತ್ತಾನೆ. ಆಗ ಚಿತ್ರಲೇಖೆ ಅನಿರುದ್ಧನ ರಕ್ಷಣೆಗಾಗಿ ಸ್ತ್ರೀ ಸೈನಿಕರನ್ನು ಸಂಘಟಿಸಿದ ಸಂದರ್ಭ ಬರುತ್ತದೆ.

ಬಗೆವೆತ್ತ ಬಾಗಿಲ ಕದ ವಜ್ರಲಾಳವಿಂ
ಡಿಗೆಗಳ ಬಂಧನಗೊಳಿಸಿ
ಮಿಗೆ ವಿಶ್ವಾಸಿ ಕಠೋರ ರಾಕ್ಷಸಿಯರ
ತೆಗೆಯದೆ ಕಾಪನಿಕ್ಕಿದಳು॥
ತೋಟಿಯರ್ ತರಿದಿಕ್ಕಿದಿರಾಂಪ ದೈತ್ಯವ
ಧೂಟಿಯ ಕರೆದು ತನ್ನೊಡನೆ
ಸೂಟಿಯೊಳ್ ಸಾವಂತೆ ಕಯ್ಯ ಖಡ್ಗವನಿಕ್ಕಿ
ದಾಟಿಸಿ ಕೊಂಡಳೆಲ್ಲರನು॥
ಬಲ್ಲವರ್ ಹರಿಗೆ ಪಟ್ಟಿಯ ಶೂಲ ಶಲ್ಲೆಹ
ಭಲ್ಲೆಯ ಬಲವಂತೆಯರ
ಎಲ್ಲರ ತಜುಬಿ ಹರ್ಮ್ಯವ ಹತ್ತಿ ಹೇಟ್ಟಿಳು
ಘುಲ್ಲ ಶರಾತ್ಮ ಸಂಭವಗೆ॥

ಡೋಮಿಂಗೋ ಪಾಯಸ್‌ನ ಕಥನವೂ ಇದನ್ನು ಸಮರ್ಥಿಸುತ್ತದೆ. ಇಪ್ಪತ್ತೈದು ಮುವತ್ತು ದ್ವಾರಪಾಲಕಿಯರು ಕೈಯಲ್ಲಿ ಚಡಿ, ಹೆಗಲ ಮೇಲೆ ಚಾವಟಿ ಹಿಡಿದು ಒಳಗಿನಿಂದ ಬರುವುದರ ಕುರಿತು ಅವನು ಉಲ್ಲೇಖಿಸುತ್ತಾನೆ. ಮಹಿಳಾ ಹೊರೆಯಾಳುಗಳು ಕೈಯಲ್ಲಿ ಪೂರ್ತಿ ಬೆಳ್ಳಿಯಿಂದ ಹೊದಿಸಿದ ಬೆತ್ತಗಳನ್ನು ಹಿಡಿದು ಬರುತ್ತಾರೆ. ಬೆಲೆ ಬಾಳುವ ವಸ್ತ್ರ ಹಾಗೂ ಆಭರಣಗಳನ್ನು ಅವರು ಧರಿಸಿರುತ್ತಾರೆ. ಎಂದು ಅಲ್ಲಿಯ ಉತ್ಸವಗಳ ಬಗ್ಗೆ ಬರಿಯುತ್ತ ಪಾಯಸ್ ಹೇಳುತ್ತಾನೆ. ಈ ರಾಜ್ಯ ಪರಿವಾರದಲ್ಲಿ ನಪುಂಸಕರಿದ್ದ ಬಗ್ಗೆಯೂ ಉಲ್ಲೇಖಿಸುತ್ತಾನೆ. [೧೩] ಹನ್ನೆರಡು ಸಾವಿರ

೧೩. ರಾಬರ್ಟ್ ಸಿವೆಲ್: ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರದ ಪುಟ ೨೮೯

ಪರಿಚಾರಿಕೆಯರು ಅಲ್ಲಿದ್ದರೂ ಅಲ್ಲಿ ಕತ್ತಿ, ಗುರಾಣಿ ಹಿಡಿಯುವ ಸ್ತ್ರೀಯರಿದ್ದಾರೆ, ಕುಸ್ತಿಯಾಡುವ ಸ್ತ್ರೀಯರಿದ್ದಾರೆ, ಕಹಳೆಯೂದುವ ಸ್ತ್ರೀಯರಿದ್ದಾರೆ, ಹಾಗೆಯೇ ಬೋಯಿಗಳಾಗಿ, ಅಗಸರಾಗಿ, ಕಛೇರಿಗಳಲ್ಲೂ ಸ್ತ್ರೀಯರಿದ್ದ ಉಲ್ಲೇಖಗಳು ದೊರೆಯುತ್ತವೆ. ರಾಣಿವಾಸದಲ್ಲಿ ನಪುಂಸಕರಿಗೆ (ಖೋಜಾಗಳಿಗೆ) ಅತ್ಯಂತ ಪ್ರೀತಿಯ ಸ್ಥಾನವಿತ್ತು. ರಾಜ ತನ್ನ ಅರಮನೆಯಲ್ಲಿ ತಾನೊಬ್ಬನೆ ಇರುತ್ತಿದ್ದು ತನ್ನ ಪತ್ನಿಯರ ಸಂಗ ಬೇಕೆನಿಸಿದಾಗ ಒಬ್ಬ ನಪುಂಸಕನಿಗೆ ಅವಳನ್ನು ಕರೆತರಲು ಆಜ್ಞಾಪಿಸುತ್ತಿದ್ದ. ಅವಳಿದ್ದಲ್ಲಿ ನಪುಂಸಕ ಪ್ರವೇಶಿಸದೆ ಕಾವಲುಗಾರ್ತಿಗೆ ಸಂದೇಶ ರವಾನಿಸುತ್ತಿದ್ದ. ಆ ಮೇಲೆ ರಾಣಿ ರಾಜನಿದ್ದಲ್ಲಿಗಾಗಲಿ ಇಲ್ಲವೆ ರಾಜನೇ ರಾಣಿ ಇದ್ದಲ್ಲಿಗಾಗಲಿ ಬರುತ್ತಿದ್ದ. ಎಷ್ಟೋ ಬಾರಿ ನಪುಂಸಕರು, ರಾಜರ ಏಕಾಂತಕ್ಕೆ ಜೊತೆಯಾಗುತ್ತಾರೆ. ರಾಜರು ಮಲಗಿದ್ದಲ್ಲಿಯೇ ಕೆಲವರು ಮಲಗುತ್ತಾರೆ ; ಅವರು ದೊಡ್ಡ ಸಂಬಳ ಪಡೆಯುತ್ತಾರೆ [೧೪] ಎಂದು ಪಾಯಸ್ ಬರೆಯುತ್ತಾನೆ.

ನ್ಯೂನಿಜ್ ಸಹ ಖೋಜಾಗಳ ಬಗೆಗೆ ಸಾಕಷ್ಟು ವಿವರ ನೀಡುತ್ತಾನೆ. "ಕೃಷ್ಣದೇವರಾಯ ರಾಯಚೂರು ಯುದ್ಧಕ್ಕೆ ಹೊರಟಾಗ ರಾಜರಿಗೆ ಅಚ್ಚುಮೆಚ್ಚಿನವರಾದ ಮೂವರು ಖೋಜಾಗಳಿದ್ದರು ಎಂದಿದ್ದಾನೆ. ಈ ಬಗೆಯ ಖೋಜಾಗಳು ಪ್ರಜೆಗಳ ಅಹವಾಲು ಸ್ವೀಕರಿಸಿ ತೀರ್ಪುಕೊಡುವ ಗೌರವದ ಸ್ಥಾನಗಳನ್ನು ಹೊಂದಿದ್ದಾರೆಂದು ರಜಾಕ್ ಹೇಳಿದ್ದಾನೆ. ಇವರನ್ನು ರಜಾಕ್ 'ದಯ್ಯಾಂಗ್' ಎಂದು ಕರೆದಿದ್ದಾನೆ. ಕನಕದಾಸರ ಮೋಹನ ತರಂಗಿಣಿಯಲ್ಲೂ ಕೊಜ್ಜೆಯರ ಉಲ್ಲೇಖ ಬರುತ್ತದೆ. ಬಾಣಾಸುನ ಆಸ್ಥಾನದಲ್ಲಿ ಸ್ಥೂಲ ಕಾಯದ ಕೊಜ್ಜಯರಿದ್ದರೆಂದು ಹೇಳುತ್ತಾರೆ. ಅನಿರುದ್ಧ ನಗರ ಶೋಧಕ್ಕೆ ಹೊರಡುವಾಗ ಕೊಜ್ಜೆಯರಿಗೆ ಕಜ್ಜಾಯ ಮೆಲ್ಲಿಸಿದನೆಂದು ಬರೆದಿದ್ದಾರೆ.

ನಿರ್ಜರಹಿತ ಕಂತು ಸುತಕೊಂಡು ಬಂದನು
ಕಜ್ಜಾಯ ತುಪ್ಪ ಸಕ್ಕರೆಯ
ಕೊಜ್ಜೆಯರಿಗೆ ಮೆಲ್ಲಿಸುತೆ [೧೫]

ಬೇಡತಿಯರ ಚಿತ್ರಣಗಳು ಕನಕ ಕಾವ್ಯದಲ್ಲಿ ಅಪೂರ್ವವಾಗಿ ಚಿತ್ರಿಸಲ್ಪಟ್ಟಿದೆ. ಅನಿರುದ್ಧನ ಬೇಟೆಯ ವರ್ಣನೆಯಲ್ಲಿ ಬೇಡತಿಯರ ಆಟಗಳನ್ನು ನೋಡಿದ ಬಗೆಯನ್ನು ಕನಕದಾಸರು ಚಿತ್ರಿಸುತ್ತಾರೆ. ಅವರ ವರ್ಣನೆಯಲ್ಲಿ ಶೃಂಗಾರವನ್ನೇ ಪ್ರಧಾನವಾಗಿ ಚಿತ್ರಿಸಿದರೂ ಬೇಡತಿಯರ ವಿಶಿಷ್ಟ ಸಾಂಸ್ಕೃತಿಕ ಆಸಕ್ತಿಯನ್ನೂ ಗುರುತಿಸುತ್ತಾರೆ. ಕಲ್ಲುಬಂಡೆಗಳ ಮೇಲೆ ಧುಮುಕಿ ನೃತ್ಯ ಗೈಯುವಂತೆ ಮದ್ದಾನೆಯ ದಂತದ ಒನಕೆಯಿಂದ ಅವರು ಬಿದಿರಕ್ಕಿ ಕುಟ್ಟುತ್ತಿದ್ದರಂತೆ. ಅವರಲ್ಲಿ ಕೆಲವರು ಹಾಡುತ್ತಿದ್ದರೆ ಕೆಲವರು

೧೪. ಅದೇ: ಪುಟ ೨೬೯
೧೫. ಮೋಹನ ತರಂಗಿಣಿ: ಪುಟ ೨೫೬

ದೊಡ್ಡ ಮೊರದಲ್ಲಿ ಅಕ್ಕಿಯನ್ನು ಕೇರುತ್ತಿದ್ದರು.

ಪಾಡುವರ್ ಕೆಲರು ಪೆರ್ಮೊರದೊಳಕ್ಕಿಯನ್ನಿಕ್ಕಿ
ಮಾಡುವರ್ ಕೆಲರು ಬೇಟೆಗಳ
ನೋಡುವರ್ ಕೆಲರು ಬಿಲ್ಲೋಲಾಂತು ನಿಂದುದು
ಬೇಡವೆಣ್ಣಳು ಕಣ್ಗೆ ರಮಿಸಿ [೧೬]

ಬೇಡತಿಯರು ಸಹಜವಾಗಿ ಬಿಲ್ಲುವಿದ್ಯೆಯಲ್ಲಿ ಪರಿಣಿತೆಯರು. ಬಿಲ್ಲು ಹಿಡಿದು ನಿಂತ ಕಿರಾತೆಯರು, ಕನಕದಾಸರಿಗೆ ಕಾಣುವುದು ಹೀಗೆ :

ಯತಿಗಳು ಜಡೆಮುಡಿದಾಳ್ದಿರೆ ತಂದರು
ಪತಿಶತ್ರು ಶಿವನೆಂದರಿದು
ರತಿ ವಿಶ್ವರೂಪಾಂತು ಜಯಿಸ ಬಂದಂತೆ ಚಿಂ
ಚಿತಿಯರೊಪ್ಪಿದರು ಬಿಲ್ವಿಡಿದು [೧೭]

ಶಿವನನ್ನು ಜಯಿಸಲು ರತಿಯೇ ಬಂದ ಹಾಗೆ ಕನಕದಾಸರಿಗೆ ಬೇಡತಿಯರು ಕಾಣುತ್ತಾರೆ. ಸಮಕಾಲೀನ ಚರಿತ್ರೆಗಳು ನೀಡದ ಈ ಬಗೆಯ ಚಿತ್ರಣಗಳಿಗಾಗಿ ಕನಕ ಕೃತಿಗಳು ವಿಶಿಷ್ಟವೆನಿಸುತ್ತವೆ. ವಿಜಯನಗರದಲ್ಲಿ ಸ್ತ್ರೀಯರಿಗೆ ಯುದ್ಧದಲ್ಲಿಯೂ ಭಾಗವಹಿಸುವ ಅವಕಾಶವಿತ್ತು. ಉದಾಹರಣೆಗೆ ಹಜಾರ ರಾಮ ಸ್ವಾಮಿ ದೇವಾಲಯದ ಪ್ರಾಕಾರದ ಮೇಲಿನ ಒಂದು ಶಿಲ್ಪದಲ್ಲಿ ಕುದುರೆ ಮೇಲೆ ಮಹಿಳೆಯೊಬ್ಬಳು ಕುಳಿತಿರುವಂತೆ ಕೆತ್ತಲಾಗಿದೆ. ಕುದುರೆಯ ಮುಂದಿರುವ ಮತ್ತೊಬ್ಬ ಮಹಿಳೆ ಉದ್ದನೆ ಭರ್ಜಿ ಹಿಡಿದ್ದಿದ್ದಾಳೆ. ಅಲ್ಲಿರುವ ಆನೆಗಳ ಸಾಲಿನಲ್ಲಿ ಪ್ರತಿ ಆನೆಯ ಮೇಲೆ ಒಬ್ಬ ಪುರುಷ ಹಾಗೂ ಒಬ್ಬ ಮಹಿಳೆ ಕುಳಿತಿರುವಂತೆ ಕೆತ್ತಲಾಗಿದೆ. ಇದರಿಂದ ಮಹಿಳೆಯರು ಪುರುಷರಿಗೆ ಸಮಾನವಾಗಿ ಸಾರ್ವಜನಿಕ ಕ್ಷೇತ್ರದಲ್ಲಿದ್ದರು. ಅಲ್ಲದೆ ರಾಣಿಯರ ಅಂಗರಕ್ಷಕರನ್ನಾಗಿ ಮಹಿಳೆಯರನ್ನೇ ನೇಮಕ ಮಾಡುಲಾಗುತ್ತಿತ್ತು. ಕಸರತ್ತು ಮಾಡಿ, ವಿವಿಧ ರಕ್ಷಣಾ ಕಲೆಗಳು ಗೊತ್ತಿರುವ ಚುರುಕಿನ ಸ್ತ್ರೀಯರನ್ನೇ ಅರಮನೆಯಲ್ಲಿ ರಾಣಿಯರ ರಕ್ಷಣೆಗೆ ನೇಮಕ ಮಾಡುತ್ತಿದ್ದರು ಎಂಬುದಕ್ಕೆ ದಾಖಲೆಗಳಿವೆ.[೧೮] ಇದನ್ನೇ ಕನಕದಾಸರು ಸೂಚ್ಯವಾಗಿ ಹೇಳುತ್ತಿದ್ದಾರೆ.

...ಕೃಷ್ಣನಂಕಿತಗೈವ ತೆರಿದಿ ಕ
ಠಾರಿಯ ಪಿಡಿದೊರ್ವಳಿಹಳು [೧೯]

---

೧೬. ಮೊಹನ ತರಂಗಿಣಿ: ಪುಟ ೨೮೯
೧೭ ಮೋಹನ ತರಂಗಿಣಿ ಪುಟ ೨೯೦
೧೮. ಶಿವಪ್ರಸಾದ ಟಿ.ರ್. ಶ್ರೀ ಕೃಷ್ಣದೇವರಾಯ: ಪುಟ-೮
೧೯. ಮೋಹನ ತರಂಗಿಣಿ: ಪುಟ-೬೦

## ವಸಂತೋತ್ಸವ- ನೀರಾಟದ ವರ್ಣನೆಗಳು

ಅಂತಃಪುರದ ಹೆಣ್ಣು ಮಕ್ಕಳ ವನವಿಹಾರ, ಜಲಕೇಳಿಯ ವಿವರಗಳು ಕಾವ್ಯದಲ್ಲಿ ಸಾಕಷ್ಟಿವೆ. ಶೃಂಗಾರ ರಸ ಪ್ರಧಾನವಾದ ಮೋಹನ ತರಂಗಿಣಿಯ ಒಂದು ಅಧ್ಯಾಯ ವಸಂತೋತ್ಸವಕ್ಕೆ ಮೀಸಲಾಗಿದೆ. ಗಂಗಾದೇವಿ ತನ್ನ **ಮಧುರಾ ವಿಜಯ** ಕೃತಿಯಲ್ಲಿ ಅರಸಿಯರೊಂದಿಗೆ ಜಲಕೇಳಿಯಾಡಲು ರಾಜನು ಹೇಗೆ ಉತ್ಸಕನಾಗಿದ್ದ ಎನ್ನುವುದನ್ನು ವಿವರಿಸುತ್ತಾಳೆ. ನೀರಾಟದಲ್ಲಿ ತೊಡಗಿದ್ದ ಅರಸ-ಅರಸಿಯರು ತುಂಡು ಬಟ್ಟೆ ತೊಟ್ಟು ಕೊಳಕ್ಕಿಳಿಯುವ ರಾಣಿಯರ ಪಾದ, ತೊಡೆಗಳು, ನಡುವನ್ನು ತಡವರಿಸುತ್ತಾ ಮೇಲೇರಿ, ಮೊಲೆಯ ಮೇಲಾಯ್ದ ನೀರಿನಲೆಗಳ ಸುಂದರ ಚಿತ್ರಣವಿದೆ. ಒಂದಿಲ್ಲೊಂದು ನೆಪವೊಡ್ಡಿ ಅರಸರನ್ನು ಆಲಂಗಿಸುವ ಬಯಕೆ ಅರಸಿಯರಿಗಿತ್ತು. ಅರಸಿಯರಿಗೆ ನೀರು ಚಿಮ್ಮುವ, ಮೇಲ್ತೊಡೆಯನ್ನು ಚೂಟುವ, ಮತ್ಸ್ಯಾಘಾತಕ್ಕೊಳಗಾದವಳಂತೆ ನಟಿಸುವ, ರಕ್ಷಣೆಗಾಗಿ ಅರಸ ನೆಡೆಗೆ ಧಾವಿಸುವ, ತನ್ನ ಬಾಹುಗಳಲ್ಲಿ ಅರಸನನ್ನು ಬಿಗಿದಪ್ಪುವ ಅನೇಕ ಶೃಂಗಾರ ಭರಿತ ಚಿತ್ರಣಗಳನ್ನು ಗಂಗಾದೇವಿ ನೀಡಿದ್ದಾಳೆ. "ಕದಡಿದ ತುಟಿಗೆಂಪು, ಕರಗಿದ ಕಜ್ಜಳ, ಕೆದರಿದ ಕೇಶಗುಚ್ಚವನ್ನು ಪ್ರದರ್ಶಿಸುತ್ತಾ ಜಲನಿಷ್ಕ್ರಮಣಗೊಳ್ಳುತ್ತಿದ್ದ ಅರಸಿಯರು, ಮನ್ಮಥ ಕಣದಲ್ಲಿ ಅರಸನೊಡನೆ ಕಾದಾಡಿ, ಶಯನವೇದಿಕೆಯಿಂದ ಹೊರಹೊಮ್ಮುವವರಂತೆ ಉಲ್ಲಸಿತರಾಗಿದ್ದರು. ಅವರ ಉನ್ಮಾದದ ಅವ್ಯವಸ್ಥೆಯನ್ನು ಕಂಡು ಅರಸನ ಆನಂದವು ನೂರ್ಮಡಿಗೊಳ್ಳುತ್ತಿತ್ತು. ಒದ್ದೆ ವಸ್ತ್ರವು ಅರೆತೆರೆದು ಪ್ರದರ್ಶಿಸುವ ತೊಡೆಗಳನ್ನು, ತಪ್ಪಡಿಯಾದ ತಲೆಯಿಂದ ತೊಟ್ಟಿಕ್ಕುತ್ತಿದ್ದ ಜಲಕಣಗಳನ್ನು, ಅವರ ಮೈಮೇಲೆ ತಾನು ಅಚ್ಚೊತ್ತಿದ್ದ ನಖಗಳನ್ನು ಕಂಡು ಅವನು ಇನ್ನಷ್ಟು ಮುದಗೊಳ್ಳುತ್ತಿದ್ದನು" [೨೦]

ಈ ಬಗೆಗಿನ ವಿಶೇಷ ಲೇಖದಲ್ಲಿ ಷಣ್ಮುಖ ಶೆಟ್ಟರ್ ನೀಡುವ ವಿವರ ಮೌಲಿಕವಾದುದು. ಅವರು ವಿದೇಶಿ ಬರಹಗಾರರ ಮಾಹಿತಿಯನ್ನು ಗಂಗಾದೇವಿ-ಕನಕದಾಸರು ನೀಡಿದ ವಿವರಗಳನ್ನು ವಿಮರ್ಶಿಸಿ ವಿಜಯನಗರ ಸಾಮ್ರಾಜ್ಯದ ಚಾರಿತ್ರಿಕ ದೃಷ್ಟಿಯನ್ನು ವಿಸ್ತರಿಸುತ್ತಾರೆ. ಅವರು ಹೇಳುವ ಹಾಗೆ, "ಅಂತಃಪುರದಲ್ಲಿದ್ದ ಅರಸಿಯರ, ಸಾಮಂತ ಪುತ್ರಿಯರ, ವಾರಾಂಗನೆಯರ ಬಗ್ಗೆ ವಿದೇಶಿ ಯಾತ್ರಿಕರಿಗೆ ಒಂದು ಸ್ಥೂಲ ಕಲ್ಪನೆ ಇತ್ತೇ ಹೊರತು ನಿಖರ ಮಾಹಿತಿ ಇರಲಿಲ್ಲ. ಏಕೆಂದರೆ ಅವರನ್ನು ಪ್ರತ್ಯಕ್ಷವಾಗಿ ಕಾಣುವ ಅವಕಾಶ ಅವರ್‍ಯಾರಿಗೂ ದೊರೆತಿರಲಿಲ್ಲ" ವಿಜಯನಗರದರಸನಿಗೆ ಏಳು ನೂರು ಅರಸಿಯರಿದ್ದರೆಂದ ಅಬ್ದುಲ್ ರಜಾಕ್, ಐದುನೂರು ವಿಲಾಸಿನಿಯರಿದ್ದರೆಂದು ನ್ಯೂನಿಜ್, ಕೃಷ್ಣದೇವರಾಯನ ಹನ್ನೆರಡು (ಮೂವರು

---

೨೦. ಷ.ಶೆಟ್ಟರ್: ವಿಜಯನಗರ-ಜಲ ಕುಂಡಗಳು-ಜಲಕ್ರೀಡೆಗಳು: ಕನ್ನಡದೊಳ್ ಭಾವಿಸಿದ ಜನಪದಂ ಪುಟ-೩೪

ಪ್ರಧಾನ) ಪತ್ನಿಯರಲ್ಲದೆ ವಾರಾಂಗನೆಯೊಬ್ಬಳು ಪ್ರಿಯವಲ್ಲಭೆಯಾಗಿ ಅವನ ವಿಶೇಷ ಪ್ರೀತಿಗೆ ಪಾತ್ರಳಾಗಿರುವುದನ್ನು ಪ್ಯಾಸ್ ವಿವರಿಸುತ್ತಾನೆ. ವಿಜಯನಗರ ಕಾಲದಲ್ಲಿ ದೇವತಾಚರಣೆಯ ಭಾಗವಾಗಿ ರಂಗಮಂಟಪ, ಸಭಾ ಮಂಟಪ, ಡೋಲೋತ್ಸವ ಮಂಟಪ, ಕಲ್ಯಾಣ ಮಂಟಪ, ಉತ್ಸವ ಮಂಟಪಗಳ ಜೊತೆ ದೊಡ್ಡ ದೊಡ್ಡ ದೇವ ಕೊಳಗಳು, ಕಲ್ಯಾಣಿಗಳು, ಪುಷ್ಕರಣಿಗಳು ನಿರ್ಮಾಣಗೊಂಡವು.

ತೆಪ್ಪೋತ್ಸವ, ದೀಪೋತ್ಸವ, ವಸಂತೋತ್ಸವಗಳಿಗೆ ಈ ಜಲಕುಂಡಗಳು ಬಳಕೆಯಾಗುತ್ತಿದ್ದವು. 'ಅರಮನೆ' 'ಜಲಮನೆ' 'ಆರಾಮಮನೆ'ಯ ಕಲ್ಪನೆಗಳು ಅಂತಃಪುರ ನಿವಾಸಿಗಳ ಪ್ರಧಾನ ಮನರಂಜನಾ ಕೇಂದ್ರವಾಗಿತ್ತು. ಅರಸ -ಅರಸಿಯರನ್ನು ಆಕರ್ಷಿಸುವ ಕ್ರೀಡಾ ಕೇಂದ್ರಗಳಾಗಿದ್ದವು. ಅರಮನೆಯ ಅಂಗಳದಲ್ಲಿ ಕಟ್ಟಿಸಲಾದ ಜಲಕುಂಡಗಳಲ್ಲಿ ನಡೆಯುವ ರಾಜ ಪರಿವಾರದ ಜಲಕ್ರೀಡೆಗಳ ವಿವರಗಳನ್ನು ಆ ಕಾಲದ ಅನೇಕ ಕವಿಗಳು ಉಲ್ಲೇಖಿಸಿದ್ದಾರೆ. ಕಲ್ಯಾಣಿಗಳು, ಮನ್ಮಥ ಕುಂಡ, ಕೊಳ, ಕಟ್ಟೆ ಕೂಪಗಳು, ಕ್ರೀಡಾ ಕೊಳಗಳು, ಪುಷ್ಕರಣಿಗಳು, ಅರಮನೆ ಆವರಣದ ಜಲಸಂಚಯಗಳು, ಅಷ್ಟಮುಖಿ ಕಾರಂಜಿ ಮಂಟಪ ರಾಣಿಯರ ಸ್ನಾನ ಗೃಹ, ಬಯಲು ಕಾರಂಜಿ ಮಂಟಪ, ಜಲಮನೆ ಮೊದಲಾದವು ದೈವಿಕ ಹಾಗೂ ಲೌಕಿಕ ಎಂಬ ಎರಡು ವಿಭಾಗಗಳಲ್ಲಿ ಕಾಣಿಸಿಕೊಳ್ಳುವ ಜಲಸ್ಥಾನಗಳೆಂದು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ.

೧೪ನೇ ಶತಮಾನದಲ್ಲಿ ದೊಡ್ಡ ಕೂಪಗಳಾಗಿದ್ದ ಮನ್ಮಥ ಕುಂಡದಂತಹ ರಚನೆಗಳು ೧೫-೧೬ ಶತಮಾನಕ್ಕೆ ಬೃಹತ್ ಹೊಂಡಗಳಾದ ಬಗ್ಗೆ ಪ್ರಾಕ್ತನ ಶಾಸ್ತ್ರಜ್ಞರು ಉಲ್ಲೇಖಿಸುತ್ತಾರೆ, ಆ ಕಾಲದ ಕಲ್ಯಾಣಿಗಳು ಆಕರ್ಷಕವಾಗಿದ್ದು ಅದರ ಮಧ್ಯದ ವೇದಿಕ (ವಿಮಾನ) ಹಾಗೂ ಅದನ್ನು ಸುತ್ತುವರಿದ ಪ್ರಕಾರ ಮಂಟಪಗಳು ಪ್ರಾಮುಖ್ಯತೆ ಪಡೆದಿದ್ದವು. ದೇವಕೊಳಗಳೆಂದೇ ಗುರುತಿಸಲ್ಪಟ್ಟಿರುವ ಈ ಕಲ್ಯಾಣೀಗಳಲ್ಲಿ ತೆಪ್ಪೋತ್ಸವ, ದೀಪೋತ್ಸವ, ವಸಂತೋತ್ಸವಗಳು ಮುಖ್ಯವಾಗಿದ್ದವು.

ವಿಜಯನಗರದ ಗತವೈಭವದ ಕುರುಹಾಗಿ ಈಗ ನಮಗೆ ಆರು ಕ್ರೀಡಾ ಕೊಳಗಳ ಗುರುತುಗಳು ಕಾಣಸಿಗುತ್ತವೆ. ನಾಲ್ಕು ದಿಕ್ಕಿನಲ್ಲಿ ಕಲ್ಲು ಹಾಸಿನ ಏರುಮೆಟ್ಟಿಲುಗಳಿರುವ ಈ ಕೊಳಗಳು ಸಮೂಹ ಸ್ನಾನದಲ್ಲಿ ತೊಡಗಿರುವವರು ಆಗಾಗ ವಿಶ್ರಾಂತಿ ಪಡೆದುಕೊಳ್ಳುವುದಕ್ಕೆ ಅನುಕೂಲಕರವಾಗಿವೆ. ಜಲಮನೆಯ ಸಂರಚನೆಯು ವಿಶಿಷ್ಟವಾಗಿದೆ. ಅರಮನೆ ಹಾಗೂ ಕಮಲ ಮಹಲಿನ ಪರಿಸರದಲ್ಲಿರುವ ಕುರುಹುಗಳು ಇದೊಂದು ಪ್ರಧಾನ ಮನರಂಜನೆಯ ಕೇಂದ್ರವಾಗಿರುವುದನ್ನು ಸೂಚಿಸುತ್ತವೆ. ರಾಣಿಯರ ಸ್ನಾನಗೃಹಗಳು, ಮಹಾ ಜಲ ಸಂಚಯಗಳು, ಕಾರಂಜಿ ಮಂಟಪಗಳೆಲ್ಲವೂ

ಪ್ರಭುತ್ವದ ವೈಭವದ ಸಂಕೇತವೆಂಬಂತೆ ಜಲ ಸಂಸ್ಕೃತಿಯ ಕುರುಹುಗಳನ್ನು ಸೂಚಿಸುತ್ತವೆ. ಕನಕದಾಸರು ಬರುವ ಕಾಲಕ್ಕಾಗಲೇ ಕೆಲವು ಜಲಾವಾಸಗಳು, ಕಲ್ಯಾಣಿಗಳು ಬೃಹತ್ ಹೊಂಡಗಳಾಗಿ ಮಾರ್ಪಾಡು ಹೊಂದಿದ್ದವು. ವಿಜಯನಗರದ ಅಸ್ತಿತ್ವದ ಕುರುಹು ಆಗಿರುವ ಅರಮನೆ – ಜಲಮನೆಯ ಸಂಬಂಧವನ್ನು ಕನಕದಾಸರು ಅಪೂರ್ವವಾಗಿ ದಾಖಲಿಸಿದ್ದಾರೆ. ಮೋಹನ ತರಂಗಿಣಿಯ ಒಂದು ಅಧ್ಯಾಯವೇ ಇದಕ್ಕೆ ಮೀಸಲಾಗಿದೆ. ಈ ಕೃತಿಯನ್ನು ಉಲ್ಲೇಖಿಸಿ ಷ. ಶೆಟ್ಟರ್, " (ಈ ಕೃತಿಯಲ್ಲಿ) ನೀರಿಗಿಂತ ಶೃಂಗಾರದ ರಸದಾಳ ಹೆಚ್ಚಾಗಿದ್ದುದು ಸ್ಪಷ್ಟ. ಅಪರೂಪವಾಗಿ ಮಾತ್ರ ತಮಗೆ ದೊರಕುತ್ತಿದ್ದ ಇಂತಹ ಜಲಕ್ರೀಡಾ ಸಂದರ್ಭಗಳನ್ನು ವಿಜಯನಗರದರಸಿಯರು ಹೇಗೆ ವಿನಿಯೋಗಿಸುತ್ತಿದ್ದರೆಂಬುದಕ್ಕೆ ಇದೊಂದು ಮಾದರಿ" ಎಂದು ಕೃತಿಯ ಐತಿಹಾಸಿಕ ಮಹತ್ವ ಎತ್ತಿ ಹಿಡಿದಿದ್ದಾರೆ.[೨೧]

### ವಿಜಯನಗರದ ಓಕುಳಿ ಹಬ್ಬ

ವಿಜಯನಗರ ಕಾಲದ ಸಾಂಸ್ಕೃತಿಕ ವೈಭವವನ್ನು ಕನಕದಾಸರು ನಿರೂಪಿಸುವ ರೀತಿ ಸಮಕಾಲೀನ ಇತಿಹಾಸದ ನಿರೂಪಣೆಗಳಿಗಿಂತಲೂ ಹೆಚ್ಚು ಸುಂದರ ಹಾಗೂ ಸ್ಪಷ್ಟವಾಗಿದೆ. ವಿಜಯನಗರದ ಅವಶೇಷಗಳಲ್ಲಿ ದೊರೆಯುವ ಸುಂದರವಾದ ಕ್ರೀಡಾಕೊಳಗಳು, ವಸಂತೋತ್ಸವ, ಕನಕದಾಸರಿಗಿಂತ ಪೂರ್ವದಲ್ಲಿಯೇ ಜಗತ್ಪ್ರಸಿದ್ಧಿ ಪಡೆದಿದ್ದವು. ಸಂಗಮವಂಶದ ಮೊದಲನೆಯ ದೇವರಾಯನ ಆಳ್ವಿಕೆಯ ಕಾಲದಲ್ಲಿ (ಕ್ರಿ. ಶ. ೧೪೨೦-೨೧) ಬಂದ ಇಟಲಿಯ ಪ್ರವಾಸಿ ಪಾವೋಲೋ ನಿಕೋಲೋ ಕೊಂಟಿ ಎನ್ನುವವನು ವಿಜಯನಗರದ ಓಕುಳಿಹಬ್ಬ- ವಸಂತೋತ್ಸವವನ್ನು ವರ್ಣಿಸಿದ್ದಾನೆ, ಜಗತ್ತಿನ ಸುತ್ತೆಲ್ಲಾ ಈ ಸಂಗತಿ ಹರಡಿ ವಿಜಯನಗರದ ಕೀರ್ತಿ ಉತ್ತುಂಗಕ್ಕೇರಿತ್ತು. ಕ್ರೀಡಾಕೊಳಗಳು, ಅವುಗಳ ಸುತ್ತ ಇರುವ ಸುವರ್ಣ ಮಂಟಪದ ರಚನೆಯನ್ನು ಗುರುತಿಸುವ ಕನಕದಾಸರಿಗೆ ಇವುಗಳ ಹಿರಿಮೆಯ ಅರಿವಿದೆ. ಹಾಗಾಗಿ ಅವರು, 'ಕ್ಷಿತಿಯೊಳಚ್ಚರಿವೆತ್ತ ತಣ್ಗೊಳಗಳು' ಎಂದು ಉಲ್ಲೇಖಿಸುತ್ತಾರೆ.[೨೨] ಜಗತ್ತಿನಲ್ಲೇ ಆಶ್ಚರ್ಯಕರವಾದ ಕೊಳಗಳೆಂದು ಗುರುತಿಸುವಲ್ಲಿ ಕನಕದಾಸರ ಐತಿಹಾಸಿಕ ಪ್ರಜ್ಞೆ ಕೆಲಸ ಮಾಡಿದೆ.

ನೋಡಲು ಕಣ್ಗೆಸೆದವು ಚಂದ್ರಕಾಂತದ
ಕ್ರೀಡಾಕೊಳಗಳಲ್ಲಲ್ಲಿ

---

೨೧. ಷ.ಶೆಟ್ಟರ್: ವಿಜಯನಗರದ ಜಲಕುಂಡಗಳು –ಜಲಕ್ರೀಡೆಗಳು, ಕನ್ನಡದೊಳ್ ಭಾವಿಸಿದ ಜನಪದಂ ಪುಟ:೪

೨೨. ಮೋಹನ ತರಂಗಿಣಿ ಪುಟ-೨೧೯

ಜೊಡಣೆಯ್ದು ಸುವರ್ಣ ಮಂಟಪದ
ಕೈವಾಡವೇನ �ಣ್ಣಿಪೆನು [೨೩]

ಹಿಮರುಚಿಕಾಂತ ಕ್ರೀಡಾ ಕೊಳ, ಶಶಿಕಾಂತ ಕ್ರೀಡಾಕೊಳ, ಚಂದ್ರಕಾಂತ ಕ್ರೀಡಾಕೊಳ ಸುತ್ತ ಇರುವ ಸುವರ್ಣ ಮಂಟಪಗಳ ರತ್ನ ಖಚಿತವಾದ ಸುವರ್ಣ ಕಂಬದ ಚಾವಡಿಯಲ್ಲಿ ಸುವರ್ಣ ಪುತ್ಥಳಿಗಳಿದ್ದವು.

ನರ್ತನ ಕೋಲಾಟ ಹೊನ್ನಂಡೆಗಳನಾಂತು
ಪುತ್ತಳಿ ಮದನ ಕೈಯೆಡೆಯ
ಚಿತ್ತರಗೈದಿರ್ಪ ಬಿನ್ನಾಣಗಳ ನೋಡಿ
ಚಿತ್ತೈಸಿದನು ಕೃಷ್ಣ ನಗುತ- [೨೪]

ಚಿನ್ನದ ಪಾತ್ರೆಗಳನ್ನು ಹಿಡಿದು ನರ್ತಿಸುವ, ಕೋಲಾಟವಾಡುವ ಶೃಂಗಾರ ಪೂರ್ಣವಾದ ಪುತ್ಥಳಿಗಳವು.

ಶಾಲೆಗಳಿಂದ ಕುಚ್ಚುಗಳಿಂದೆ ಕಮ್ಮಲ
ರ್ಮಾಲೆ ಝುಲ್ಲರಿ ಝುಲ್ಲಿಯಿಂದೆ
ಬಾಲೆಯರುಗಳ ಕಣ್ಮನಕೆ ರಾಟಣದು
ಯ್ಯಾಲೆ ನಾಲ್ದೆಸೆಯೊಳೊಪ್ಪಿದುವು

'ರಾಟಣದುಲ್ಯಾಲೆ' ಅಥವಾ 'ತೊಟ್ಟಿಲ ಜೀಕು' ಗಳ ವರ್ಣನೆಯನ್ನು ಕವಿ ನೀಡಿದ್ದಾನೆ. ಬಣ್ಣದ ಬಟ್ಟೆಗಳಿಂದ ಗೊಂಡೆಗಳಿಂದ, ಪರಿಮಳ ಯುಕ್ತ ಹೂಮಾಲೆಗಳಿಂದ, ಜಾಲರಿ ಗೊಂಡೆಗಳಿಂದ, ಕೂಡಿದ ತೊಟ್ಟಿಲದು. ಇದರ ಜೊತೆಗೆ 'ಪೊನ್ನಂಡೆ-ಜೀರ್ಕೊಳವೆ' ಯನ್ನೂ ಕವಿ ವರ್ಣಿಸಿದ್ದಾನೆ. ವಿದೇಶಿ ಪ್ರವಾಸಿಗರು ಉಲ್ಲೇಖಿಸಿದ ಈ ವಸ್ತುಗಳನ್ನು ಕನಕದಾಸರು ಇನ್ನಷ್ಟು ರಸಾತ್ಮಕವಾಗಿ ಬಣ್ಣಿಸಿದ್ದಾರೆ. ವಸಂತ ಪೂಜೆಗಾಗಿ ದೊಡ್ಡ ದೊಡ್ಡ ತೆಂಗಿನಕಾಯಿ ಹಿಡಿದು ಕೃಷ್ಣರಾಯನ ರಾಣಿಯರು ಸಿದ್ಧರಾದರು. ಗಂಧಾಕ್ಷತೆ, ಪುಷ್ಪ ಮೊದಲಾದ ಪೂಜಾ ಸಾಮಗ್ರಿಗಳನ್ನು ಅಚ್ಚುಕಟ್ಟಾಗಿ ಅನುಗೊಳಿಸಿದರು. ಗಾನಕೋವಿದೆಯರು ವೀಣೆ, ತಾಳಗಳನ್ನು ಹಿಡಿದು, ಹಿಂದೋಳ ಹಾಗೂ ವಸಂತ ರಾಗಗಳನ್ನು ಹಾಡಿ ಸಂಭ್ರಮಿಸಿದರು.

ಉಚ್ಚವದೊಲವೊಂದು ಮನದೊಳು ಮೊಳೆದೊರ್ವ
ಮಚ್ಚರವೊಂದು ಕಾಂತನಿಗೆ

---

೨೩. ಮೋಹನ ತರಂಗಿಣಿ ಪುಟ- ೧೯೯
೨೪. ಮೋಹನ ತರಂಗಿಣಿ: ಪುಟ-೨೦೦

ಹೆಚ್ಚಳವಡಿಸಲ್ಕೆ ಕೊಂಬು ಜೀರ್ಕೋಳವೆಯಿಂ
ದೆಚ್ಚಾಡುತಿರ್ದರೋಕುಳಿಯ [೨೫]

ಎಲ್ಲೆಲ್ಲೂ ಉತ್ಸವದ ವಾತಾವರಣವೇ ತುಂಬಿತ್ತು. ಭದ್ರಗಜವು ನೀರನ್ನು ಸೇದಿ ಸೊಂಡಿಯಿಂದ ಉಗಿಯುವಂತೆ ಆ ತರುಣಿಯರು ಜೀರ್ಕೋಳವೆಯಿಂದ ಓಕುಳಿಯನ್ನು ಉಗ್ಗಿ ಒಬ್ಬರನ್ನೊಬ್ಬರು ಕಾಡಿಸಿದರು.

ತಮ್ಮೊಳು ನಾವೆ ಪೊಯ್ದಾಡುವುದೇಕೆಂದು
ಕಮ್ಮಲರ್ಗಂಧಗಂಧಿಯರು
ತಮ್ಮನಾಳುವ ಕೃಷ್ಣರಾಯನ ತುಡುಕಿದ
ಪೆರ್ಮೆಯನೇನ ಬಣ್ಣಿಪೆನು [೨೬]

ಲಕ್ಷ್ಮೀ, ಭೂದೇವಿ ಮೊದಲಾದ ಹೆಣ್ಣುಗಳನ್ನು ಮೀರಿದ ರಮಣಿಯರು ಅನೇಕ ಲೀಲೆಗಳನ್ನು ಗೈದರೂ ಶ್ರೀಕೃಷ್ಣರಾಯ'ನಿಗೆ ವಿಸ್ಮಯ ಉಂಟಾಗಿಲ್ಲ. ಏಕೆಂದರೆ ಅವನು ಜಗತ್ತನ್ನೇ ಮೋಹಿನಿ ರೂಪದಲ್ಲಿ ಮೋಹಿಸಿದ ಮೋಹನ ರೂಪವಲ್ಲವೆ? ಮಂಗಳ ಪುರುಷಾಕೃತಿ ಮೋಹನರೂಪನಾದ ಶ್ರೀಕೃಷ್ಣ ದೇವರಾಯನವನು ಎಂದು ಹೇಳುವಲ್ಲಿ ಕನಕದಾಸರು ಶ್ರೀಕೃಷ್ಣದೇವರಾಯನನ್ನು ಭಗವಂತ ಶ್ರೀ ಕೃಷ್ಣನೊಂದಿಗೆ ಸಮೀಕರಿಸಿದ್ದಾನೆ.

ನೀರನು ಬಿಟ್ಟಿರಲಪ್ಪುದೆ ಮತ್ಸ್ಯಾವ
ತಾರ ನೀನೆಂದು ನೀರೆಯರು
ರಾರಾಜಿಸುತಿಪ್ಪ ಕುಂಕುಮ ಜಲದೊಳು
ನಾರಾಯಣನನದ್ದಿದರು
    ಎಡಬಲದೊಳು ಪಿಂತೆ ಮುಂತೆ ಶೋಭಿಸುವ ಪೊಂ
    ಗೊಡಮಾಲೆಯ ವರೋಕುಳಿಯ
    ಎಡವಿಡದೊಬ್ಬರೊಬ್ಬರ ಮೇಲೆ ಚೆಲ್ಲುವ
    ಸಡಗರಮೇನ ಬಣ್ಣಿಪೆನು [೨೭]

ಕುಂಕುಮ ಜಲವನ್ನು ಒಬ್ಬರೊಬ್ಬರು ಎರಚಿಕೊಳ್ಳುವ ಸಂಭ್ರಮ ತೊಟ್ಟಿಲ ಜೀಕುಗಳನ್ನಾಡುವ ಆನಂದವನ್ನು ಕನಕದಾಸರು ಕಣ್ಣಾರೆ ಕಂಡಂತೆ ಅನುಭವಿಸಿದ್ದಾರೆ. ಇದು ಕಾಮನ ಹಬ್ಬದ ವರ್ಣನೆಯಾದ್ದರಿಂದ, ಕಾಮನ ಕಥೆಯೂ ಇದಾದ್ದರಿಂದ

---

೨೫. ಮೋಹನ ತರಂಗಿಣಿ: ಪುಟ-೨೦೬
೨೬. ಮೋಹನ ತರಂಗಿಣಿ ಪುಟ-೨೦೭
೨೭. ಮೋಹನ ತರಂಗಿಣಿ: ಪುಟ-೨೦೪

ಶೃಂಗಾರರಸ, ರತಿರಹಸ್ಯದ ನೋಟಗಳನ್ನಿಡದೆ ಬರೆದ ಔಚಿತ್ಯವಿರಲಾರದು ಎನ್ನುವ ಕಾರಣಕ್ಕಾಗಿ ಸಾಕಷ್ಟು ಕೆಲವೊಮ್ಮೆ ಅತಿ ಎನಿಸುವಷ್ಟು ವಾರನಾರಿಯರ ದೇಹ ಸೌಷ್ಟವದ ವರ್ಣನೆಯಿದೆ. ಕೃಷ್ಣದೇವರಾಯನಿಗೆ ವಾರನಾರಿಯರ ಬಗೆಗೆ ವಿಶೇಷ ಪ್ರೀತಿ ಇರುವುದು ಐತಿಹಾಸಿಕ ವಿಚಾರ. 'ಅವನು ತರುಣನಾಗಿದ್ದಾಗ ಒಬ್ಬ ವಾರಾಂಗನೆಯೊಂದಿಗೆ ಗುಪ್ತ ಪ್ರಣಯ ಹೊಂದಿದ್ದ ಅವಳನ್ನು ಮದುವೆಯಾಗುವುದಾಗಿ ವಚನವನ್ನು ಕೊಟ್ಟಿದ್ದ. ಈ ವಿಷಯ ತಿಳಿದ ಅವನ ಮಂತ್ರಿಯೂ, ರಾಜಕೀಯ ಗುರುವೂ ಆದ ತಿಮ್ಮರಸರು ದೊಡ್ಡ ರಾಜಮನೆತನದ ಕನ್ಯೆಯೊಂದಿಗೆ ಕೃಷ್ಣರಾಯನ ವಿವಾಹ ಮಾಡಿದರು. ತರುವಾಯ ರಾಜ ಅನೇಕ ಹೆಣ್ಣುಗಳನ್ನು ಮದುವೆಯಾದ. ಏಕೆಂದರೆ ಈ ರಾಜರು ಅನೇಕ ಹೆಂಡಿರನ್ನು ಹೊಂದಿರುವುದು ಬಹಳ ಘನವಾದುದೆಂದು ಬಗೆಯುತ್ತಾರೆ. ಕೃಷ್ಣರಾಯ ಮದುವೆಯಾದರೂ ಈ ವಾರಾಂಗನೆಯನ್ನು ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ, ಅವಳಲ್ಲಿ ತಾನಿಟ್ಟಿದ್ದ ಪ್ರೀತ್ಯರ್ಥವಾಗಿ ಒಂದು ನಗರವನ್ನು ಕಟ್ಟಿ ಅದಕ್ಕೆ ನಾಗಲಾಪುರವೆಂದು ಹೆಸರಿಟ್ಟು ತನ್ನ ರಾಜ್ಯದಲ್ಲಿಯೇ ಅತ್ಯುತ್ತಮವಾದ ಒಂದು ಹೊಸ ಗೋಡೆಯನ್ನು ಕಟ್ಟಿಸಿದ' ಎಂದು ನ್ಯೂನಿಜ್ ಬರೆಯುತ್ತಾನೆ.[೨೮] ಕ್ರಿ. ಶ. ೧೫೨೦-೨೧ ರಲ್ಲಿ ಸಂದರ್ಶಿಸಿದ ಡೋಮಿಂಗೋ ಪಾಯಸ್ ಬರೆದ ಬರಹಗಳಿಗೂ ಕನಕದಾಸರು ಬರೆದ ಬರಹಕ್ಕೂ ಸಾಕಷ್ಟು ಸಾಮ್ಯತೆಗಳಿವೆ. ಕೃಷ್ಣರಾಯನ ಅರಮನೆಯಲ್ಲಿ ಹೆಣ್ಣುಗಳ ಸಂಖ್ಯೆಯೇ ಅಧಿಕವೆಂಬುದನ್ನು ಇಬ್ಬರೂ ಗುರುತಿಸಿದ್ದಾರೆ.

**ಕನಕದಾಸರು ಮತ್ತು ಅವರ ಯುದ್ಧ ವಿರೋಧಿ ನಿಲುವುಗಳು:**

ಕನಕದಾಸರು ಒಬ್ಬ ಸೈನಿಕರಾದರೂ ಅವರಲ್ಲಿ ಯುದ್ಧ ವಿರೋಧಿ ಧೋರಣೆಗಳಿವೆ. ಯುದ್ಧವನ್ನೇ ವೈಭವೀಕರಿಸುವ ಐತಿಹಾಸಿಕ, ಚಾರಿತ್ರಿಕ ಕೃತಿಗಳಿಗಿಂತ ಕನಕದಾಸರ ಮೋಹನ ತರಂಗಿಣಿ ಭಿನ್ನವಾಗಿ ನಿಲ್ಲುತ್ತದೆ. ಯುದ್ಧದಿಂದ ಮಾನವ ಕುಲದ ನಾಶವಾಗುತ್ತದೆ ಎನ್ನುವುದಕ್ಕೆ ಕನಕದಾಸರಲ್ಲಿ ಸಹಮತವಿದೆ. ಪ್ರಭುತ್ವದ ಅಸ್ತಿತ್ವಕ್ಕೆ ಯುದ್ಧ ಅನಿವಾರ್ಯವೆಂಬುವುದೂ ಕನಕದಾಸರಿಗೆ ಗೊತ್ತಿದೆ. ಮಧ್ಯಕಾಲೀನ ಕರ್ನಾಟಕವೂ ಸಂಘರ್ಷವನ್ನು ಮುಖಾಮುಖಿಯಾಗಿಸಿಕೊಂಡದ್ದು ಸಾಮ್ರಾಜ್ಯ ವಿಸ್ತರಣೆಯ ದಾಹದಿಂದ ಎನ್ನುವುದು ಈಗಾಗಲೇ ಸಾಬೀತಾದ ಸಂಗತಿ. ಯುದ್ಧವನ್ನು ತಡೆಯುವ ಒಂದು ಬಹು ಮುಖ್ಯ ಸಂಧಾನ ಮಾರ್ಗ ವೈವಾಹಿಕ ಸಂಬಂಧಗಳನ್ನು ಬೆಸೆಯುವುದು ಎನ್ನುವುದನ್ನು ಅಂದಿನ ರಾಜಕೀಯ ಪರಿಸ್ಥಿತಿ ಮನದಟ್ಟು ಮಾಡಿಕೊಂಡಿತ್ತು. ಸಂಗ್ರಾಮ ಹಾಗೂ ಸಂಧಾನದ ಈ ಎರಡು ದಾರಿಗಳಲ್ಲಿ ಕನಕದಾಸರ ಒಲವು ಸಂಧಾನದ ಕಡೆಗೆ ಇತ್ತು ಹಾಗೂ ವೈವಾಹಿಕ ಸಂಬಂಧಗಳ ಮೂಲಕ ಪ್ರಭುತ್ವದ ಹಿಂಸಾ ಪ್ರವೃತ್ತಿಗಳು ಕಡಿಮೆಯಾಗಬೇಕು ಎನ್ನುವುದು ಅವರ ಒತ್ತಾಸೆಯಾಗಿತ್ತು.

---

೨೮ ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ, ಪುಟ- ೩೮೬

ಅದಕ್ಕಾಗಿಯೇ ಕನಕದಾಸರು ಮೋಹನ ತರಂಗಿಣಿಯಲ್ಲಿ ಉಷಾ – ಅನಿರುದ್ಧನ ಪ್ರಸಂಗವನ್ನು ತಂದಿದ್ದಾರೆ.

ವಿಜಯನಗರ ಕಾಲದ ತೆಲುಗು – ಕನ್ನಡ ಕೃತಿಗಳು ಯುದ್ಧದ ವರ್ಣನೆಯನ್ನು ಸಾಕಷ್ಟು ಮಾಡಿವೆ. ಪೌರಾಣಿಕ ಕಥಾ ಚೌಕಟ್ಟಿನಲ್ಲಿ ಸಮಕಾಲೀನ ಇತಿಹಾಸ ನಿರೂಪಿಸುವ ಕಾರಣಕ್ಕಾಗಿ ಇವು ಮುಖ್ಯವಾಗಿವೆ. ಸ್ವತಃ ಕವಿಯಾದ ಕೃಷ್ಣದೇವರಾಯನ 'ಅಮುಕ್ತ ಮೌಲ್ಯದ' ಅವನ ಕಾಲದ ರಾಜಕೀಯ ಚರಿತ್ರೆ ಹೇಳುವ ಕೃತಿ. 'ರಾಯವಾಚಕಮು', ಅಲ್ಲಸಾನಿ ಪೆದ್ದನ 'ಮನು ಚರಿತೆ', ನಂದಿ ತಿಮ್ಮನ 'ಪಾರಿಜಾತಾಪ ಹರಣಮು', ಕುಮಾರ ಧೂರ್ಜಟಿಯ 'ಕೃಷ್ಣರಾಯ ವಿಜಯ', ಬಂಡಾರು ಲಕ್ಷ್ಮೀ ನಾರಾಯಣನ 'ಸಂಗೀತ ಸುರ್ಯೋದಯ', ಸಂಸ್ಕೃತ ಕವಿಯಾದ ರುದ್ರಭಟ್ಟನ 'ಜಗನ್ನಾಥ ವಿಜಯ', ಕನಕದಾಸರ 'ಮೋಹನ ತರಂಗಿಣಿ' ಮೊದಲಾದವು ಮುಖ್ಯವಾಗಿವೆ. ಕೃಷ್ಣದೇವರಾಯನ ಕಾಲದಲ್ಲಿ ಬಂದ ಬಹುತೇಕ ತೆಲುಗು ಕೃತಿಗಳಲ್ಲಿ ಶಾಸನ, ವಿದೇಶಿ ಯಾತ್ರಿಕರ ಬರವಣಿಗೆಗಳಲ್ಲಿ ರಾಯನ ದಂಡಯಾತ್ರೆ, ದಿಗ್ವಿಜಯಗಳ ಉಲ್ಲೇಖಗಳಿವೆ.

ಕೃಷ್ಣದೇವರಾಯನ ದಂಡಯಾತ್ರೆಗಳಲ್ಲಿ ಉಮ್ಮತ್ತೂರು ದಂಡಯಾತ್ರೆ ಕಳಿಂಗ ದಂಡಯಾತ್ರೆ, ಕಾಟೂರಿನ ದಂಡಯಾತ್ರೆ, ರಾಯಚೂರು ದಂಡಯಾತ್ರೆ ಇತ್ಯಾದಿ. ಇವುಗಳಲ್ಲಿ ಕಳಿಂಗ ಯುದ್ಧಕ್ಕೆ ಇತಿಹಾಸದಲ್ಲಿ ಮಹತ್ವವಾದ ಸ್ಥಾನವಿದೆ. ಬಹುಮನಿ ಸುಲ್ತಾನರನ್ನು ಮಣಿಸಿದ ಮೇಲೆ, ಉಮ್ಮತ್ತೂರು ಪಾಳೆಗಾರರನ್ನೂ ನಿರ್ಮೂಲನ ಮಾಡಿದ ಮೇಲೆ ವಿಜಯ ನಗರದ ಸೈನ್ಯ ಎದುರಿಸಬೇಕಾದ ಶತ್ರುವೆಂದರೆ ಕಳಿಂಗದ ಪ್ರತಾಪ ರುದ್ರ ಗಜಪತಿ. ಪ್ರತಾಪ ರುದ್ರ ಗಜಪತಿ ಎಂದರೆ ಬಲಾಢ್ಯನಾದ ಅರಸು. ಗಂಗಾ – ಪಿನಾಕಿನಿ ನಡುವಿನ ಪೂರ್ವ ಸಮುದ್ರದ ಅಧಿಪತಿಯಾದ ಇವನು ಕೀರ್ತಿವಂತನೂ, ಶೂರಾಗ್ರಣಿಯೂ ಆಗಿದ್ದವನು. ಅಶ್ವದಳ, ಪದಾತಿದಳ, ಗಜಬಲಗಳ ಮೂಲಕ ಆ ಕಾಲದ ಸುಪ್ರಸಿದ್ಧ ಅರಸು ಅವನಾಗಿದ್ದ. ಕಳಿಂಗ ಅರಸರ ಬಗ್ಗೆ ಮೊದಲಿನಿಂದಲೂ ವಿಜಯನಗರದ ಅರಸರಿಗೆ ವಿರೋದಭಾವವಿತ್ತು. ಸಂಗಮ ವಂಶದಿಂದಲೂ ಈ ವೈರ ಬೆಳೆದು ಬಂದಿತ್ತು. ವಿಜಯನಗರದ ಭಾಗವಾಗಿದ್ದ ಜಯಗಿರಿ, ಕೊಂಡವೀಡುಗಳನ್ನು ಗಜಪತಿ ಗೆದ್ದು ತನ್ನ ರಾಜ್ಯದಲ್ಲಿ ವಿಲೀನ ಮಾಡಿಕೊಂಡಿದ್ದ ಎನ್ನುವುದು ಈ ವಿರೋಧಕ್ಕೆ ಕಾರಣ. ಕೃಷ್ಣದೇವರಾಯನಿಗಿಂತ ಮೊದಲು ಯಾರಿಗೂ ಅದನ್ನು ವಾಪಾಸು ಪಡೆಯಲು ಸಾಧ್ಯವಾಗಿರಲಿಲ್ಲ. ವಿಜಯ ನಗರದ ಎರಡು ಕೋಟೆಗಳೂ ಗಜಪತಿಯ ವಶದಲ್ಲಿದ್ದವು. ಈ ಎಲ್ಲಾ ಕಾರಣಗಳಿಂದ ಕೃಷ್ಣರಾಯನಿಗೆ ಗಜಪತಿಯೊಂದಿಗೆ ಯುದ್ಧ ಅನಿವಾರ್ಯವಾಗಿತ್ತು.

ಜನವರಿ ೧೫೧೩ರಿಂದ ಆರಂಭವಾದ ಕೃಷ್ಣದೇವರಾಯನ ಕಳಿಂಗ ಚೈತ್ರ ಯಾತ್ರೆ ಐದು ಮುಖ್ಯ ಘಟ್ಟಗಳಲ್ಲಿ ನಡೆಯಿತು. ಮೊದಲ ಘಟ್ಟದಲ್ಲಿ ಉದಯಗಿರಿ

ವಿಜಯವು ನಡೆಯಿತು, ಅದು ಹದಿನೆಂಟು ತಿಂಗಳ ಯುದ್ಧ. ಕೃಷ್ಣದೇವರಾಯನ ಉದಯಗಿರಿ ಯುದ್ಧವು 'ಅಮುಕ್ತ ಮೌಲ್ಯದಲ್ಲಿ' ವರ್ಣಿಸಲ್ಪಟ್ಟಿದೆ. ಉದಯಗಿರಿ ವಿಜಯ, ಕೊಂಡವೀಡು ವಿಜಯ, ವಿಜಯವಾಡ ವಿಜಯ, ತೆಲಂಗಾಣ ವಿಜಯ ಕೊನೆಯದಾಗಿ ಕಟಕನಗರದ ವಿಜಯ ಹೀಗೆ ಒಟ್ಟು ಐದು ಘಟ್ಟಗಳಲ್ಲಿ ಕೃಷ್ಣದೇವರಾಯ ಗಜಪತಿಯನ್ನು ಸೋಲಿಸಿದ ವಿವರಗಳು ದೊರೆಯುತ್ತವೆ. ಅದರಲ್ಲಿ ಗಜಪತಿಯ ರಾಜಧಾನಿಯಾದ ಕಟಕ ದಂಡಯಾತ್ರೆಯ ವಿವರಗಳು ಶಾಸನದಲ್ಲಾಗಲಿ, ನ್ಯೂನಿಜ್ ಚರಿತ್ರೆಯಲ್ಲಾಗಲಿ, ರಾಯವಾಚಕ, ಕೃಷ್ಣರಾಯ ವಾಚಕದಲ್ಲಾಗಲಿ ದೊರೆಯುವುದಿಲ್ಲ. ಆದರೆ 'ಅಮುಕ್ತ ಮೌಲ್ಯದ' ಹಾಗೂ ಮನು ಚರಿತ್ರೆಯಲ್ಲಿ "ಕಟಕಪುರಿ ಗಾಲ್ಚೆ" ಎಂದು ಹೇಳಿದೆ. ಈ ಎರಡೂ ಗ್ರಂಥಗಳು ಹಾಗೂ ೧೫೧೭ರ ಒಂದು ಶಿಲಾ ಶಾಸನದಲ್ಲಿ ಈ ಉಲ್ಲೇಖವಿದೆ.

ಈ ಯುದ್ಧದ ಪರಿಣಾಮವೇನೆಂದರೆ ತಿಮ್ಮರಸರ ಸಲಹೆಯಂತೆ ಪ್ರತಾಪರುದ್ರ ಗಜಪತಿಯು ಸಂಧಿ ಮಾಡಿಕೊಳ್ಳಲು ಬಯಸಿ ಕೃಷ್ಣದೇವರಾಯನಿಗೆ ಕಾಗದ ಕಳುಹಿಸಿದ. ಈ ಪತ್ರದಂತೆ ವೈವಾಹಿಕ ಸಂಬಂಧದ ಮೂಲಕ ರಾಯನಿಗೆ ಮಗಳನ್ನು ಕೊಟ್ಟು ಗಜಪತಿ ಕೃಷ್ಣದೇವರಾಯನೊಂದಿಗೆ ಸಂಧಿ ಮಾಡಿಕೊಂಡನು. ಇದರಿಂದ ವೈರತ್ವವು ಕಳೆದು ಸ್ನೇಹ ಉಂಟಾಯಿತು. ಕೃಷ್ಣೆಗೆ ಉತ್ತರದಲ್ಲಿ ತಾನು ಜಯಿಸಿದ ನಾಡನ್ನು ಗಜಪತಿಗೆ ಮರಳಿಕೊಟ್ಟನೆಂದು ನ್ಯೂನಿಜ್‌ನ ಕಥನ ಹೇಳುತ್ತದೆ.[೨೯] ಮೋಹನ ತರಂಗಿಣಿಯಲ್ಲಿ ಯುದ್ಧವು ವೈವಾಹಿಕ ಸಂಬಂಧದ ಮೂಲಕ ಕೊನೆಯಾಗಬೇಕೆನ್ನುವ ಆಶಯಕ್ಕೆ ಈಘಟನೆ ಪ್ರೇರಣೆ ನೀಡಿರಬಹುದು. ಹಾಗಾಗಿ ಅವರು ತಮ್ಮ ಮೋಹನ ತರಂಗಿಣಿ ಕೃತಿಯಲ್ಲಿ ಉಷಾ – ಅನಿರುದ್ಧನ ವೈವಾಹಿಕ ಸಂಬಂಧದ ಮೂಲಕ ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸಬೇಕೆಂಬ ಉದ್ದೇಶವನ್ನು ಹೊಂದಿದ್ದರು. ಜೊತೆಗೆ ಶೈವ ವೈಷ್ಣವ ಧಾರ್ಮಿಕ ಕಲಹಕ್ಕೆ ಸಂಧಾನ ಮಾರ್ಗಗಳ ಮೂಲಕ ಉತ್ತರಿಸಿರುವುದನ್ನು ಕಾಣುತ್ತೇವೆ. ಹರಿಹರ ತಾತ್ವಿಕ ಸಾಮರಸ್ಯವನ್ನೂ, ಯುದ್ಧದ ಭೀಕರತೆಯನ್ನು ಕಡಿಮೆ ಮಾಡುವಲ್ಲಿಯೂ ಈ ಕೃತಿಯಲ್ಲಿ ಗಮನ ಹರಿಸುತ್ತಾರೆ.

ಮೋಹನ ತರಂಗಿಣಿಯಲ್ಲಿ ಒಟ್ಟು ಎರಡು ಯುದ್ಧಗಳು ನಡೆಯುತ್ತದೆ. ಒಂದು ಶಂಬರಾಸುರ ಹಾಗೂ ಪ್ರದ್ಯುಮ್ನನಿಗೆ ನಡೆದ ಯುದ್ಧವಾದರೆ ಇನ್ನೊಂದು ಕೃಷ್ಣ– ಅನಿರುದ್ಧ –ಬಾಣಾಸುರನೊಂದಿಗೆ ಹೋರಾಡಿದ ಕಥನ. ಶಂಬರಾಸುರ ವಧೆಯ ಸನ್ನಿವೇಶದಲ್ಲಿ ಕನಕದಾಸರ ಯುದ್ಧ ಪ್ರಾವೀಣ್ಯತೆ ವ್ಯಕ್ತವಾಗುತ್ತದೆ. ಶಂಬರಾಸುರನು ಮನ್ಮಥನೊಂದಿಗೆ ೩೨ಬಗೆಯ ಖಡ್ಗಯುದ್ಧಗಳಲ್ಲಿ ಹೋರಾಡಿ ('ಬತ್ತೀಸ ಖಡ್ಗ ಪ್ರವೀಣತೆಯಲಿ ಕಾದಿ') ಪರಿಣತಿಯನ್ನು ಮೆರೆಯುತ್ತಾನೆ. ಹಿಂಸಾತ್ಮಕ ಯುದ್ಧದಲ್ಲೂ

೨೯. ವಿಜಯನಗರದ ಚರಿತ್ರೆ ; ಪುಟ : ೧೬೩

ಕನಕದಾಸರು ಸಂಸ್ಕೃತಿಯನ್ನು ಮರೆಯುವುದಿಲ್ಲ. ದಾನವರೂ ಸಂಸ್ಕೃತಿ ಹೀನರಲ್ಲ ಎನ್ನುವುದನ್ನು ಕನಕದಾಸರು ಪ್ರತಿಪಾದಿಸುತ್ತಾರೆ. (ಮುಂದೆ ಕುವೆಂಪು ಇದನ್ನೇ ತಮ್ಮ ರಾಮಾಯಣ ದರ್ಶನದಲ್ಲಿ ವಿವರಿಸುತ್ತಾರೆ) ರಣರಂಗಕ್ಕೆ ಬರುವ ಜಟ್ಟಿಗಳು ಹೇಗಿದ್ದರು ಎನ್ನುವುದನ್ನು ವಿವರಿಸುವ ಸಂದರ್ಭದಲ್ಲಿ ಶಂಬರಾಸುರ ಚಿತ್ರಣ ಕಣ್ಣಮುಂದೆ ಬರುತ್ತದೆ.

ಬಟ್ಟ ಮುತ್ತುಗಳು ಕೇವಣಿಸಿಸಿರ್ದ ಪಾರಿಯ
ಪಟ್ಟಾವಳಿ ಚಲ್ಲಣವ
ತೊಟ್ಟು ಪೆರ್ದೊಡೆಗೆ ಕೇಸರಿ ಮಧ್ಯಕೆ ಬಿಗಿ
ದುಟ್ಟ ಕಾಸೆಯ ರಣೋತ್ಸವದಿ ॥೪೫॥

ನೀರ ಚಿಮ್ಮರಿಯ ಸುತ್ತಿದ ಸಿರಿಮುಡಿಗೆ ಮಂ
ದಾರ ಮಾಲೆಯ ಸುತ್ತಿ ಹಣೆಗೆ
ರಾರಾಜಿಪ ತಿಲಕವನಿಟ್ಟು ಗಂಧವ
ಪೂರಯಿಸಿದರು ನುಣ್ಮೆಯ್ಗೆ ॥೪೬॥

ಬೆಡದೊದರುವ ಗಂಟೆ ಸರಪಣಿ ಸುರಹಾಹೆ
ದೊಡರು ಮಾಣಿಕ್ಯದಿನೆಸೆವ
ಕಡೆಯ ಪೆಂಡೆಯವಿಟ್ಟು ಕಾದುವ ರಣಧರೆ
ಯೆಡೆಗ್ಯತಂದು ನಿದಿರ್ದ ॥೪೭॥ ೩೦

ಚೆಲುವಾದ ಮುತ್ತುಗಳನ್ನು ಹೆಣೆದ ರೇಶಿಮೆಯ ಚಲ್ಲಣ ತೊಟ್ಟು ತನ್ನ ತೊಡೆಯ ಮಧ್ಯ ಕಾಸೆಯನ್ನು ಬಿಗಿದು, ಸುತ್ತಿಕಟ್ಟಿದ ರತ್ನಕಾಂತಿಯ ಸೊಗಸಾದ ಮುಡಿಗೆ ಮಂದಾರ ಮಾಲೆಯನ್ನು ಮುಡಿದು, ಶೋಭಿಸುವ ತಿಲಕವಿಟ್ಟು, ಒಂದೇ ಸಮನೆ ಸಪ್ಪಳ ಮಾಡುವ ಗಂಟೆಗಳಿಂದ ಕೂಡಿದ ಪೈಜಣ, ಚಿತ್ರಪಟಗಳನ್ನುಟ್ಟು, ಮಾಣಿಕ್ಯದಿಂದ ಶೋಭಿಸುವ ಪೆಂಡೆ, ಕಡಗಳನ್ನಿಟ್ಟು, ರಣರಂಗಕ್ಕೆ ಬಂದ ಶಂಬರಾಸುರನು ತನ್ನಂತೆಯೇ ಎದುರಾಳಿಯಾದವನಿಗೂ ಅದೇ ಬಗೆಯ ಸಾಮಗ್ರಿಗಳನ್ನು ಕೊಟ್ಟು ಕಳುಹಿಸಿದ.

ಪರಿಮಳ ತಾಂಬೂಲ ಕಾಸೆ ಚೆಲ್ಲಣ ಪೊಂ
ಬರಿಯಣದೊಳು ಕುವರನಿಗೆ
ಸರಿಮೈಭಾಗವ ಕಳುಹಲು ಕೈಗೊಂಡು
ಪಿರಿದು ಸಿಂಗಾರ ವಾಂತು ಬಂದ॥೪೮॥

ತನ್ನ ವೈರಿಯಾದ ಮನ್ಮಥನಿಗೂ ಪರಿಮಳ ತಾಂಬೂಲಗಳನ್ನು ಕಾಸೆ

---

೩೮. ಮೋಹನ ತರಂಗಿಣಿ ಪುಟ ೧೬೬

ಚಲ್ಲಣಗಳನ್ನು ಪೆಂಡೆ, ಕಡಗಗಳನ್ನು ಬಂಗಾರದ ಹರಿವಾಣದಲ್ಲಿ ಕೊಟ್ಟು ಕಳುಹಿಸುವುದನ್ನು ಚಿತ್ರಿಸುವುದನ್ನು ನೋಡಿದರೆ ಕನಕದಾಸರಿಗೆ ಯುದ್ಧವೂ ಒಂದು ಸಂಸ್ಕೃತಿಯಾಗಿ ಕಾಣುತ್ತದೆ. ಆದರೂ ಯುದ್ಧ ಪ್ರಭುತ್ವದ ಪರವಾಗಿರುವಂತದ್ದು. ಯುದ್ಧವಿಲ್ಲದೆ ಪ್ರಭುತ್ವವಿಲ್ಲ. ಈ ಸತ್ಯ ಕನಕದಾಸರಿಗೆ ತಿಳಿದಿದೆ. ಹಾಗಾಗಿ ರಾಜಪ್ರಭುತ್ವ ಧಿಕ್ಕರಿಸಿ ದೇವ ಪ್ರಭುತ್ವವನ್ನು ಒಪ್ಪಿಕೊಂಡವರು. ಮನ್ಮಥನಿಗೆ ಶಂಬರಾಸುರನನ್ನು ವಿರೋಧಿಸಲು ಇದ್ದ ಕಾರಣ ಪತಿ ಇಲ್ಲದ ತನ್ನ ಹೆಂಡತಿಯನ್ನು ಸೆರೆಹಿಡಿದುದು.

ಪತಿಯಿಲ್ಲದವಳೆಂದು ತನ್ನಯ ಮಿಂಡಿವೆಂ
ಡತಿಯ ಕೋಳ್ಗೊಂಡಿಹ ಕುನ್ನಿ

ಎಂದು ಶಂಬರಾಸುರನನ್ನು ಮನ್ಮಥನು ಮೂದಲಿಸುತ್ತಾನೆ. ಹೆಣ್ಣಿನ ಮಾನ ರಕ್ಷಣೆಯ ಆಯಾಮದಲ್ಲಿ ಈ ಯುದ್ಧ ಕವಿಗೆ ಸಾಮಾಜಿಕ ಕ್ರಿಯೆಯಾಗುತ್ತದೆ.

ಎರಡನೆಯ ಯುದ್ಧ ದೃಶ್ಯ ಏರ್ಪಡುವುದು ಅನಿರುದ್ಧ ಬಾಣಾಸುರ, ಕೃಷ್ಣ ಬಾಣಾಸುರರ ನಡುವೆ. ಇದು ಮೋಹನ ತರಂಗಿಣಿಯ ಮಹತ್ವದ ಭಾಗವೂ ಹೌದು. ಕೃಷ್ಣದೇವರಾಯನ ದಿಗ್ವಿಜಯದೊಂದಿಗಿನ ಸಮೀಕರಿಸಿದಂತೆ ಕಂಡು ಬರುತ್ತದೆ. ಕೃಷ್ಣದೇವರಾಯ ಕೈಗೊಂಡ ದಿಗ್ವಿಜಯಗಳ ಗಾಂಭೀರ್ಯತೆ ಇಲ್ಲದಿದ್ದರೂ ತತ್ಕಾಲೀನ ರಾಜಕೀಯ ಚರಿತ್ರೆಯ ಆಶಯಗಳು ಇಲ್ಲಿ ಧ್ವನಿಸಿದೆ.

ಕೃಷ್ಣದೇವರಾಯನ ಅಪ್ರತಿಮ ಯುದ್ಧ ವಿಜಯಕ್ಕೆ ತಲೆಬಾಗಿ ತಿಮ್ಮರಸರ ಮಧ್ಯಸ್ಥಿಕೆಯಲ್ಲಿ ಕಳಿಂಗದ ಪ್ರತಾಪರುದ್ರ ಗಜಪತಿ ಹೇಗೆ ತನ್ನ ಮಗಳನ್ನು ಕೃಷ್ಣದೇವರಾಯನಿಗೆ ನೀಡಿ ವೈವಾಹಿಕ ಸಂಬಂಧದ ಮೂಲಕ ಸ್ನೇಹವನ್ನು ಬೆಸೆದುಕೊಂಡನೋ ಹಾಗೆಯೇ ಅನಿರುದ್ಧ ಹಾಗೂ ಉಷೆಯ ವಿವಾಹದ ಮೂಲಕ ಕೃಷ್ಣ ಬಾಣಾಸುರರು ಸಂಬಂಧವನ್ನು ಕಟ್ಟಿಕೊಂಡಿರುವುದನ್ನು ಕಾಣುತ್ತೇವೆ. ಕನಕದಾಸರ ದೃಷ್ಟಿಯಲ್ಲಿ ಯುದ್ಧ ಮಾನವ ವಿರೋಧಿ ಹಿಂಸೆ–ಕ್ರೌರ್ಯಗಳ ನೆಲೆಯಾಗುವುದಕ್ಕಿಂತ ಅದು ಮಾನವ ಸಂಬಂಧಗಳನ್ನು ಬೆಸೆಯುವುದಕ್ಕೆ ಪೂರಕವಾಗಬೇಕು. ಈ ದಿಸೆಯಲ್ಲಿ ಇತಿಹಾಸವನ್ನು, ಪುರಾಣವನ್ನೂ, ತಾತ್ವಿಕತೆಯನ್ನೂ ಒಟ್ಟಾಗಿ ಬೆರೆಸುವ ಕನಕ ಪ್ರತಿಭೆ ಅಪೂರ್ವವೆನಿಸುತ್ತದೆ.

ಮೋಹನ ತರಂಗಿಣಿ ಕಾವ್ಯದ ಅರ್ಧಭಾಗದ ಕಥೆಯು ಉಷಾ–ಅನಿರುದ್ಧರಿಗೆ ಸಂಬಂಧಿಸಿದೆ. ಬಹಳಷ್ಟು ಆಕರ್ಷಕವಾಗಿಯೂ ಸಾರವತ್ತಾಗಿಯೂ ಕನಕದಾಸರು ಈ ಭಾಗವನ್ನು ವಿರಚಿಸಿದ್ದಾರೆ. ಶೈವ–ವೈಷ್ಣವ ಧರ್ಮಗಳ ಹೊಂದಾಣಿಕೆಯೂ ಆ ಕಾಲದ ಅಗತ್ಯಗಳಲ್ಲಿ ಒಂದಾಗಿತ್ತು ಶಿವಭಕ್ತನಾದ ಬಾಣಾಸುರನು ಅಪ್ರತಿಮ ವೀರ. ಶೋಣಿತಪುರದ ಅರಸನಾದ ಬಾಣನ ಸೈನ್ಯದ ಬಗ್ಗೆ ಹೇಳುತ್ತಾ ಕನಕದಾಸರು

ವರಮದಧಾರೆಸೋರುವ ಭದ್ರಗಜರಥ
ತುರುಗತಿಯನಿನಿತೆಂದು
ಬರೆದುಲೆಕ್ಕಿಪೊಡೆ ಬೊಮ್ಮಾಂಡವಾ ಬಾಣನ
ಪುರವನೆ ಕಾಯ್ದುಕೊಂಡಿಹವು.

ಕೃಷ್ಣದೇವರಾಯ ಎದುರಿಸಿದ ಪ್ರತಾಪರುದ್ರ ಗಜಪತಿಯೂ ಗಜಸೈನ್ಯಕ್ಕಾಗಿ ಪ್ರಸಿದ್ಧನಾಗಿದ್ದ ಎನ್ನುವುದು ಗಮನಾರ್ಹ. ಬಾಣಾಸುರನು ಜೈನ ಸೂರ್ಯಾರಾಧಕ ಹಾಗೂ ಗಣಪತಿಯ ಆರಂಭಕನಾಗಿದ್ದ. ಬಾಣಾಸುರನ ಪ್ರೀತಿಯ ಮಗಳು ಉಷಾದೇವಿ ಕೃಷ್ಣನ ಮೊಮ್ಮಗ ಅನಿರುದ್ಧನ ಸೌಂದರ್ಯಕ್ಕೆ ಮರುಳಾಗಿ ಗೆಳತಿ ಚಿತ್ರಲೇಖೆಯ ಸಹಾಯದಿಂದ ತನ್ನರಮನೆಗೆ ಅನಿರುದ್ಧನನ್ನು ಬರಮಾಡಿಕೊಂಡು ವಿವಾಹವಾಗುತ್ತಾಳೆ. ಈ ಎಲ್ಲಾ ವಿಷಯಗಳನ್ನು ನಾರದನಿಂದ ತಿಳಿದ ಬಾಣಾಸುರ ಅನಿರುದ್ಧನೊಂದಿಗೆ ಯುದ್ಧಕ್ಕಿಳಿಯುತ್ತಾನೆ, ಶಿವಶಕ್ತಿಯ ಬಲದಿಂದ ಅನಿರುದ್ಧನನ್ನು ಸೆರೆಯಾಳಾಗಿ ಮಾಡಿಕೊಂಡು ಬರುತ್ತಾನೆ.

'ಕೊಂದಡೆ ಮಗಳಿಂಗೆ ವೈಧವ್ಯವಹುದೆಂದು ಕೊಲ್ಲದೆ ವೈರಿಯನ್ನು ತರುವ' ಯುದ್ಧಧರ್ಮ ಬಾಣಾಸುರನದ್ದು. ಅನಿರುದ್ಧನನ್ನು ಕೊಲ್ಲುವುದಿಲ್ಲವೆಂದು ತನ್ನ ಮಗಳಿಗೆ ಮಾತುಕೊಂಡುವ ಬಾಣಾಸುರ ಒಳ್ಳೆಯ ತಂದೆಯಾಗಿಯೂ ಕಾಣುತ್ತಾನೆ.

ಲೀಲೆಗಾರನ ಕೋಲ್ಲುವುದಿಲ್ಲೆಂದು ದುಃಖದ
ಶೀಲೆಗೆ ಮಾತನಟ್ಟಿದನು.

ಅನಿರುದ್ಧ ಸೆರೆಯಾದ ಸಂಗತಿ ತಿಳಿದ ಶ್ರೀಕೃಷ್ಣ ಬಾಣಾಸುರನೊಂದಿಗೆ ಕಾಳಗಕ್ಕೆ ಬರುವುದು, ಹರಿಹರರಿಗೆ ಕದನವೇರ್ಪಡುವುದು, ಕೊನೆಗೆ ಬಾಣಾಸುರನನ್ನು ಕ್ಷಮಿಸುವುದು ಇಲ್ಲಿಯ ಪ್ರಮುಖ ಸನ್ನಿವೇಶಗಳು. ಕೃಷ್ಣನು ಬಾಣಾಸುರನ ಒಂಬೈನೂರಾ ತೊಂಬತ್ತೆಂಟು ತೋಳುಗಳನ್ನು ಕತ್ತರಿಸಿ ರಕ್ಕಸನ ಉಳಿದೆರಡು ತೋಳುಗಳನ್ನು ಕತ್ತರಿಸುವೆನೆಂದಾಗ ಅವರಿಬ್ಬರ ನಡುವೆ ಪರಶಿವನ ಆಗಮನವಾಗುತ್ತದೆ.

ರಕ್ಕಸನೆರಡು ತೋಳ್ಗಳ ಕಡಿದಪೆನೆಂದು
ಚಕ್ರವ ಪುನರಪಿ ತುಡುಕೆ
ಮಕ್ಕಣನ ನೈ ತರುತುಭಯವೀರರಿಗಡ್ಡ
ಹೊಕ್ಕನು ಮಧ್ಯಸ್ಥನಾಗಿ [೩೧]

ಸಮಸ್ತ ರಾಜ್ಯವನ್ನೂ ಕೃಷ್ಣನಿಗೆ ನೀಡಿ, ಅವನ ಮೊಮ್ಮಗನಾದ ಅನಿರುದ್ಧನಿಗೆ ಮಗಳಾದ ಉಷೆಯನ್ನು ಕೊಟ್ಟು ಮದುವೆ ಮಾಡುತ್ತಾನೆ. ಈ ಕಥಾಭಾಗವು ಕೃಷ್ಣ

---

೩೧. ಮೋಹನ ತರಂಗಿಣಿ ಪುಟ–೫೫೧.

ದೇವರಾಯನ ಬದುಕಿನ ಘಟನೆಗೆ ಸಂಬಂಧಿಸಿ ಕನಕದಾಸರು ರಚಿಸಿದಂತಿದೆ. ಯುದ್ಧದಾಹವು ಸುಖಾಂತವಾದ ಮಾರ್ಗವನ್ನು ಅನುಸರಿಸಬೇಕಾದರೆ ವೈವಾಹಿಕ ಸಂಬಂಧಗಳು ಮುಖ್ಯವೆಂದು ಕನಕದಾಸರು ಭಾವಿಸಲು ಈ ಕಥನವು ಅವರಿಗೆ ಪ್ರೇರಣೆ ನೀಡಿದೆ.

ಮೋಹನ ತರಂಗಿಣಿಯನ್ನು ವಿಜಯನಗರ ಚರಿತ್ರೆ ಜೊತೆ ಮುಖಾಮುಖಿಯಾಗಿಸುವುದು ಒಂದು ಕ್ರಮವಾದರೆ ಸಮಕಾಲೀನ ಸಂಗತಿಗಳನ್ನು ಬಿತ್ತರಿಸುವ ಸಾಮಾಜಿಕ ಕಥನವಾಗಿ ನೋಡುವುದು ಅಷ್ಟೇ ಮುಖ್ಯ ಚರಿತ್ರೆಯ ಸಾಂಪ್ರದಾಯಿಕ ನೋಟಕ್ಕಿಂತ ಭಿನ್ನವಾಗಿ ಕನಕ ಕೃತಿಗಳನ್ನು ಲೋಕ ಚರಿತ್ರೆಯ ಆಕರಗಳಾಗಿ ಗ್ರಹಿಸಬಹುದಾದ ಸಾಧ್ಯತೆಗಳು ಹೆಚ್ಚಿವೆ. ಇತಿಹಾಸವು ರಾಜಕೀಯ ಚರಿತ್ರೆಯಾಗಿ ನಿರೂಪಿಸಲ್ಪಡುವ ಕ್ರಮದಲ್ಲಿ ಇರುವ ದೋಷಗಳನ್ನು ಮುಚ್ಚಿ ಅರಸು ಚರಿತ್ರೆಯಾಗಿ ಕಾಣಿಸುವ ಕನಕದಾಸರ ಕಾವ್ಯದೃಷ್ಟಿ ನಳಚರಿತ್ರೆ, ರಾಮಧಾನ್ಯಚರಿತ್ರೆ ಯಲ್ಲಿಯೂ ಹಾಗೆಯೇ ಮುಂದುವರಿದಿದೆ. ಭೋಗಮೂಲವಾದ ಅರಸು ಚರಿತ್ರೆ ನಳಚರಿತ್ರೆಯಲ್ಲಿ ಕಾಣಿಸಿಕೊಂಡರೆ ತ್ಯಾಗ ಮೂಲವಾದ ಅರಸು ಚರಿತ್ರೆ ಮೋಹನ ತರಂಗಿಣಿಯಲ್ಲಿ ಕಾಣಿಸಿಕೊಳ್ಳುತ್ತವೆ. ಕನಕದಾಸರ ಸಮಕಾಲೀನನಾದ ರತ್ನಾಕರವರ್ಣಿಯ ಯೋಗ-ಭೋಗಗಳ ಸಮನ್ವಯ ಸಾರುವ "ಭರತೇಶ ವೈಭವ "ಬರೆದ ಎರಡೂ ಸಾಂಗತ್ಯದಲ್ಲಿರುವ ಸುಖ-ಕಷ್ಟಗಳಲ್ಲಿ ತಪ್ತವಾದ ಮನಸ್ಸು ಸಮಾಜವನ್ನು ಸಮಾನತೆಯ ತತ್ವದಲ್ಲಿ ಹೇಗೆ ನೋಡಬಲ್ಲದು ಎನ್ನುವುದನ್ನು ರಾಮಧಾನ್ಯ ಚರಿತ್ರೆ ನಿರೂಪಿಸುತ್ತದೆ. ಪ್ರಭುತ್ವ ಪ್ರಜ್ಞೆಯು ಸಮಾಜಮುಖಿಯಾಗುವ ಸೂಕ್ಷ್ಮ ಹಂತಗಳನ್ನು ಕನಕಕೃತಿಗಳು ವಿಕಾಸಶೀಲವಾಗಿ ನಿರೂಪಿಸುವಂತೆ ತೋರುತ್ತವೆ. ಮಾನವ ಚರಿತ್ರೆಯ ವಿಶಾಲ ವ್ಯಾಪ್ತಿಯೊಂದರ ಅರಿವು ನಮಗಾಗುತ್ತದೆ. ನಳಚರಿತ್ರೆಯನ್ನು ಬಹುಚರಿತ್ರೆಯ ಮಾದರಿಯಾಗಿ ರೂಪಿಸಿಕೊಂಡಾಗ ಅರಸು ಚರಿತ್ರೆಯ ವಿಶಾಲ ಅರ್ಥದಲ್ಲಿ ಮಾನವ ಚರಿತ್ರೆಯ ಇನ್ನೊಂದು ಮುಖದ ಪರಿಚಯ ನಮಗಾಗುತ್ತದೆ. ಕಾವ್ಯಗಳು. ಭರತೇಶ ವೈಭವದಲ್ಲಿ ಭರತೇಶ, ಅವನ ಕೆಲವು ರಾಣಿಯರು, ಅವರ ಸರಸ, ರಾಜಾಸ್ಥಾನದ ಚಿತ್ರಣಗಳು ತುಂಬಿಕೊಟ್ಟಿದ್ದ 'ಮೋಹನ ತರಂಗಿಣಿ'ಯಲ್ಲಿ ಕನ್ನಡನಾಡಿನ ಹಲವು ವೈವಿಧ್ಯತೆಗಳನ್ನು ಸೆರೆಹಿಡಿದಿದ್ದಾರೆ, ರಾಜರು, ರಾಣಿಯರು, ರಾಣಿವಾಸ, ಸೇವಕರು, ಪಟ್ಟಣಗಳು, ಕೋಟೆಗಳು, ಕೊತ್ತಳಗಳು, ಆಳ್ವೇರಿಗಳು, ಉದ್ಯಾನಗಳು, ಬೇಟೆ, ಪರ್ವತ, ವಿನೋದ, ಕದನ, ಕನಕದಾಸರು ನೀಡುವ ಕನ್ನಡ ನಾಡಿನ ಸಾಂಸ್ಕೃತಿಕ ಆಕರಗಳು ವಿಸ್ತಾರವಾಗಿವೆ. ರತ್ನಾಕರವರ್ಣಿ ಕನಕದಾಸರಷ್ಟು ವೈವಿಧ್ಯಪೂರ್ಣವಾಗಿ ಪುರಾಣ-ಇತಿಹಾಸ-ಸಮಕಾಲೀನತೆಯನ್ನು ಒಟ್ಟಾಗಿ ಬೆರೆಸಿ ಕೃತಿ ರಚನೆ ಮಾಡಿಲ್ಲ. ಈ ದೃಷ್ಟಿಯಿಂದ ಕನಕದಾಸರ 'ಮೋಹನ ತರಂಗಿಣಿ' ಒಂದು ಹೆಜ್ಜೆ ಮುಂದೆಯೇ ಇದೆ.

**ಪುರವರ್ಣನೆ – ಕೋಟೆ–ಕೊತ್ತಳಗಳು:** ಮಧ್ಯಕಾಲೀನ ಸಂದರ್ಭದ ಹಲವು ಚಾರಿತ್ರಿಕ ಅಂಶಗಳನ್ನು ಆನುಷಂಗಿಕ ಪರಿಕರಗಳಾಗಿ ಹೊಂದಿರುವ ಕನಕದಾಸರ ಮೋಹನ ತರಂಗಿಣಿಯಲ್ಲಿ ಪುರವರ್ಣನೆಗೆ ಮಹತ್ವದ ಸ್ಥಾನವಿದೆ. ಕನಕದಾಸರು ಕಟ್ಟಿಕೊಡುವ ಪ್ರಭುತ್ವದ ಕಲ್ಪನೆ ಅಖಂಡವಾದದ್ದು. ಒಂದು ಸಾಮ್ರಾಜ್ಯ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಬೇಕಾದಲ್ಲಿ ಅದು ಹೊಂದಿರಬೇಕಾದ ಸಾಂಸ್ಥಿಕ ಚಹರೆಗಳನ್ನು ಗುರುತಿಸುವುದು ಕೂಡ ಅವರಿಗೆ ಮುಖ್ಯವಾದ ಸಂಗತಿ. ಪ್ರಭುತ್ವವು ನಿರ್ವಹಿಸಲ್ಪಡುವ ಕೇಂದ್ರ ಸ್ಥಾನದಿಂದ ಆಡಳಿತ ಯಂತ್ರವು ವಿಸ್ತರಿಸಿಕೊಂಡ ಬಗೆಯನ್ನು ಅವರು ವಿವರಿಸುತ್ತಾರೆ. ವಿಜಯನಗರದ ವಿಕೇಂದ್ರೀಕರಣ ವ್ಯವಸ್ಥೆಯ ಆಡಳಿತದ ಮಾದರಿಯನ್ನು ಹೊಂದಿದೆ ಎನ್ನುವುದು ಈಗಾಗಲೇ ನಮಗೆ ತಿಳಿದಿರುವ ವಿಚಾರ. ಸಂಪತ್ತು–ಸಮೃದ್ಧಿಯ ಉಚ್ಛ್ರಾಯ ಕಾಲಘಟ್ಟದಲ್ಲಿ ವಿಜಯನಗರದ ವಿಸ್ತೃತ ನೋಟ ನೀಡುವ ಕನಕದಾಸರು ಒಬ್ಬ ನಾಯಕನನ್ನು ಕೇಂದ್ರೀಕರಿಸಿಕೊಂಡು ಬರೆದಿಲ್ಲ. 'ಕೃಷ್ಣರಾಯ' 'ದೇಶಾಧಿಪ ಕೃಷ್ಣರಾಯ' 'ದೊರೆರಾಯ ಶ್ರೀಕೃಷ್ಣ' ಎಂಬ ಹೆಸರಿನ ಜೊತೆಗೆ 'ಅಚ್ಯುತ'ನ ಹೆಸರಿನ ಉಲ್ಲೇಖವೂ ಇದೆ. ಹಾಗಾಗಿ 'ಮೋಹನ ತರಂಗಿಣಿಯಲ್ಲಿ ಶ್ರೀಕೃಷ್ಣನ ಚರಿತೆಯೇ ಪ್ರಮುಖ ಕಥನ ಭಾಗವಾದರೂ ಅದು ಪ್ರಭುತ್ವ ಪರಂಪರೆಯ ಕಥನವೆಂಬುದು ಗಮನಾರ್ಹ.

ದ್ವಾರಕಾಪುರದ ವರ್ಣನೆಯಲ್ಲಿ ಹಂಪಿ ಪರಿಸರದ ಕೋಟೆ–ಕೊತ್ತಳಗಳನ್ನು ಸುಂದರವಾಗಿ ಬಣ್ಣಿಸಿದ್ದಾರೆ.

ಮೋನೆಗಾಜಿ ಖಳರ ಖಂಡಿಸಲೆಂದು ವಸುದೇವ
ತನಯ ಚಕ್ರಕೆ ವಿಶ್ವರೂಪ
ವಿನಯದಿ ಕೊಟ್ಟನೆಂಬಂದದಿ ಕೋಟೆಯ
ತೆನೆಗಳಿದ್ದುವು ಸುತ್ತಬಳಸಿ॥

    ದೇಶಾಧಿಪ ಕೃಷ್ಣರಾಯಂಗೆ ಖಳರಿಂದ
    ಮೋಸವ ಬರಗುಡೆನೆಂದು
    ಶೇಷ ಮಂಡಳಿಸಿದಂದದಿ ವಜ್ರದಾಳ್ವೇರಿ
    ಲೇಸಾದುದೇವಣ್ಣಿಸುವೆನು॥

ಬಲಿನಂದನ ಮುಖ್ಯ ಖಳರೆಂಬ ಮೃಗಕುಲ
ಚಲಿಸಿ ತನ್ನದಿರ್ವರೆ ಪಿಡಿದು
ಉಲಿದು ಹೋಯ್ಯುವೆನೆಂಬ ರೌದ್ರದಿಂ ಕೋಟೆಯ
ಹುಲಿಮೊಗ ಕಣ್ಗೆ ರಂಜಿಸಿತು॥

ವಿಸ್ತಾರವಾದ ಅಗಸೆಯ ಹೊನ್ನಬಾಗಿಲು ದಿವ್ಯರತ್ನ ರಚನೆಯ ಸೊಬಗಿನಿಂದ ಕಂಗೊಳಿಸುತ್ತಿತ್ತು ಎನ್ನುವ ವಿವರದಲ್ಲಿ ಪ್ರಭುತ್ವವು ಭದ್ರತೆಗಾಗಿ ಸಿದ್ಧಪಡಿಸಿಕೊಂಡ ತಯಾರಿಗಳನ್ನು ವಿವರಿಸುತ್ತಾರೆ. ಬಾಣನ ಶೋಣಿತಪುರ ಹಾಗೂ ದ್ವಾರಕೆಯ ಈ ಎರಡೂ ವರ್ಣನೆಗಳಲ್ಲಿ ಸಾಮ್ರಾಜ್ಯ ರಕ್ಷಣೆಗೆ ಬಳಸಲಾದ ತಂತ್ರಗಳ ಮಾಹಿತಿಯಿದೆ. ಕೋಟೆಯ ಕೊತ್ತಳಗಳು, ಕೊತ್ತಳದ ಮೇಲಿನ ಹೊಂಗಳಸಗಳು ಡೆಂಕಣಿ, ಮರುಳ್ ಗೈ, ಲಾಳಿ, ಬಿಲ್ಲು, ಪಟಲಗಳ ಆಗರವೇ ಅಲ್ಲಿತ್ತು. ಬಾಣಾಸುರನ ಶೋಣಿತಪುರದ ಕಂದಕದಲ್ಲಿ ಮೊಸಳೆ, ನೀರಾನೆ, ಮೀನು, ಆಮೆ, ಏಡಿಗಳಿದ್ದುವಂತೆ.

ನೆಗಳು ನೀರಾನೆ ಪಾಠೀನ, ಕಚ್ಛಪಕರ
ಯುಗಳ ಕರ್ಕಾಟಕ ನಿಚಯ
ಜಗಳಕ್ಕೆ ಬರ್ಪ ಶತ್ರುಗಳ ಖಂಡಿಪವೆಂ
ದಗಟೊಳು ಘುಳು ಘುಳಿಸಿದುವು
    ಮದಹಸ್ತಿಗಳ ಕೈಯ ನೂಕಿ ಬಂಧಿಸುವ ಪೆ
    ರ್ಗದ ವಜ್ರ ಲಾಳವಿಂಡಿಗೆಯ
    ಅದಟಿನ ದ್ವಾರಾಷ್ಟಕವ ವರ್ಣಿಸುವೊಡೆ ಪದಕವಿ
    ಗಳಿಗೋಚರವು॥

ಮದ್ದಾನೆಯ ಸೊಂಡಿಯ ಸಹಾಯದಿಂದ ನೂಕಿ ಬಂಧಿಸುವಷ್ಟು ಹಿರಿದಾದ ವಜ್ರದ ಅಗುಳಿಯ ಬಾಗಿಲುಗಳುಳ್ಳ ಭದ್ರವಾದ ಕೋಟೆ ಹದಿನಾರು ಗುಪ್ತ ಕಿಡಕಿಗಳನ್ನೂ, ಮೂವತ್ತೆರಡು ಗುಪ್ತದ್ವಾರಗಳನ್ನೂ ಹೊಂದಿತ್ತು. ಈ ರೀತಿ ಪುರವನ್ನು ವರ್ಣಿಸುವ ಕನಕದಾಸರ ಚಿತ್ರಣಗಳು ವಿಜಯನಗರ ಸಾಮ್ರಾಜ್ಯದ ಆಂತರಿಕ ಭದ್ರತೆಯ ಸ್ವರೂಪವನ್ನು ಊಹಿಸಿಕೊಳ್ಳಲು ನೆರವಾಗುತ್ತವೆ.

ಹುಲಿಮೊಗ: ಕೋಟೆಯ ಹೆಬ್ಬಾಗಿಲಿಗೆ ಹುಲಿಮೊಗವೆಂಬ ಹೆಸರಿದೆ. ಕೋಟೆಯ ಭವ್ಯತೆ ಭೀಕರತೆಗಳ ಮೂಲಕ ಅದನ್ನು ದೊಡ್ಡದಾದ ಹುಲಿಯೆಂದು ಕಲ್ಪಿಸಿ, ಅದರ ಹೆಬ್ಬಾಗಿಲನ್ನೂ 'ಹುಲಿಮೊಗ' ವೆಂದು ಕರೆದಿದ್ದಾರೆ. ಈ ಹೆಬ್ಬಾಗಿಲನ್ನು ಪ್ರವೇಶಿಸುವ ಶತ್ರುಸೈನಿಕರು ಹುಲಿಯ ಬಾಯಿಗೆ ಬಿದ್ದಂತೆಯೆ ಎಂದು ಭಾವನೆ ಉಂಟಾಗುವಷ್ಟು ಅಲ್ಲಿ ಜಾಗೃತವಾದ ಕಾವಲೂ ತೀಕ್ಷ್ಣವಾದ ಶಸ್ತ್ರಾಸ್ತ್ರಗಳು ಇರುತ್ತಿದ್ದವು. ಕನಕದಾಸರು ಎರಡು ಹುಲಿಗಳು ನಾಲ್ಕುಕಾಲನ್ನು ಹೊಂದಿ ತಿಕವನ್ನು ಊರಿ ಹೊಂಚುಹಾಕಿ ಕುಳಿತಂತೆ ಹುಲಿಮೊಗ ಶೋಭಿಸುತ್ತಿತ್ತು ಎಂದು ಬಣ್ಣಿಸುತ್ತಾರೆ.

ಡೆಂಕಣಿ: ಕೋಟೆಯ ಮೇಲೆ ಎಚ್ಚರಿಕೆಯ ಸಂಕೇತವಾಗಿ ಕಟ್ಟಲಾದ ಧ್ವಜಸ್ತಂಭವೆಂದು ಅರ್ಥೈಸಬಹುದು (ಆಯುಧ) ಮರುಳ್ ಗೈ– ಭೂತ ಪಿಶಾಚಿಗಳ

ಕೈಯಂತಹ ಭೀಕರ ಆಯುಧ. ಪೆಟಲು/ ಪೆಟಲ್-ಇದು ಅನುಕರಣವಾಚಿಯಾದ ಶಬ್ದ. ಪಟಾಕಿಯಂತೆ ಸದ್ದು ಮಾಡುವ ಮದ್ದನ್ನು ಉಪಯೋಗಿಸುವ ಆಯುಧ [೨೨]

ಕನ್ನಡಿಗರು ಕೋಟೆಯನ್ನು ಸಂರಚಿಸಿಕೊಂಡ ವಿವರಗಳು ಪ್ರಾಚೀನ ಕನ್ನಡ ಕಾವ್ಯಗಳಲ್ಲೂ ದೊರೆಯುತ್ತದೆ. ಅಗ್ಗಳ, ನಾಗಚಂದ್ರ, ಜನ್ನ ಎರಡನೆಯ ಗುಣವರ್ಮ, ವಿರೂಪಾಕ್ಷ ಪಂಡಿತ, ಕುಮಾರವ್ಯಾಸ. ಕನಕದಾಸ, ಗೋವಿಂದ ವೈದ್ಯನಂತಹ ಕವಿಗಳು ಸಾಮ್ರಾಜ್ಯ ಸಂರಕ್ಷಣೆಗೆ ಕೋಟೆ-ಆಯುಧಗಳು ಹೇಗೆ ಸಹಕಾರಿಯಾಗಿದ್ದವು ಎನ್ನುವ ವಿವರಣೆ ನೀಡುತ್ತಾರೆ. ಕನಕದಾಸರು ಬದುಕಿದ್ದ ಆ ಕಾಲಘಟ್ಟದಲ್ಲಿ ಸಾಮ್ರಾಜ್ಯ ರಕ್ಷಣೆಗೆ ಯುದ್ಧ ಅನಿವಾರ್ಯವಾಗಿತ್ತು. ಶತ್ರು ಸೈನ್ಯವನ್ನು ಎದುರುಗೊಳ್ಳಬೇಕಾದ ಎಚ್ಚರವೂ ಅರಸನಿಗಿತ್ತು. ಕಾಲದ ಗುಣಧರ್ಮವನ್ನು ಇಂತಹ ಚಾರಿತ್ರಿಕ ಆಕರಗಳ ಮೂಲಕ ಗುರುತಿಸಬೇಕಾಗುತ್ತದೆ. ಅರಸೊತ್ತಿಗೆಯ ಪ್ರದರ್ಶನ ಗುಣದ ಸಂಕೇತವಾಗಿ ಕಾಣಿಸುವ ಈ ವಿವರಗಳು ಸಾಮ್ರಾಜ್ಯ ರಕ್ಷಣೆಯ ಹೆಸರಿನಲ್ಲಿ ವ್ಯಕ್ತಿ ನಿಷ್ಠ ಮೌಲ್ಯಗಳಾಗಿ ವಿಜೃಂಭಿಸಿವೆ. ಪ್ರಭುತ್ವದ ಹೆಚ್ಚುಗಾರಿಕೆಯನ್ನು ಅದರ ಬಲಾಢ್ಯತೆಯ ಸ್ವರೂಪವನ್ನು ಇಂತಹ ಭೌತಿಕವಸ್ತು ಸಂಗತಿಗಳ ಮೂಲಕ ಕಂಡುಕೊಳ್ಳುವುದರ ಹಿಂದೆ ಸ್ವ ವೈಭವೀಕರಣಕ್ಕೆ ಪ್ರಭುತ್ವ ಹೆಚ್ಚು ಗಮನ ನೀಡುತ್ತಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಇತಿಹಾಸ ಹಾಗೂ ಪುರಾಣವನ್ನು ಮುಖಾಮುಖಿಯಾಗಿಸುವಲ್ಲಿಯೂ ಇಂತಹ ಆಸಕ್ತಿಗಳು ಕೆಲಸ ಮಾಡಿವೆ. ಅರಮನೆಯ ಹೊರ ಆವರಣಗಳು ಹಾಗೂ ಒಳ ಆವರಣಗಳನ್ನು ಕಾವ್ಯದ ಮೂಲಕ ಕಟ್ಟುವ ಕದಾಸರಿಗೆ ಏಕ ಕಾಲದಲ್ಲಿ ಪ್ರಭುತ್ವದ ಗುಣಗಳು ಇತ್ಯಾತ್ಮಕವಾಗಿಯೂ ತ್ಯಾತ್ಮಕವಾಗಿಯೂ ಕಾಣುತ್ತವೆ. ಒಟ್ಟಿನಲ್ಲಿ ಇಡೀ ಹಂಪಿಯನ್ನು ಕೇಂದ್ರೀಕರಿಸಿದ ಸಾಂಸ್ಕೃತಿಕ ಕರ್ನಾಟಕವನ್ನು ಶ್ರೀಕೃಷ್ಣನ ದ್ವಾರಕೆಗೆ ಹೋಲಿಸುತ್ತಾರೆ.

೨೨. ಬೆಟಗೇರಿ ಕೃಷ್ಣಶರ್ಮ: ಕರ್ನಾಟಕ ಜನಜೀವನ , ಪುಟ-೫೩

## ಅಧ್ಯಾಯ ೬

# ನಳಚರಿತ್ರೆ – ಆದಿಮ ಚರಿತ್ರೆಯ ಶೋಧದ ನೆಲೆಗಳು

'ನಳೋಪಖ್ಯಾನ' ಅಥವಾ 'ನಳಚರಿತ್ರೆ' ಮಹಾಭಾರತಕ್ಕಿಂತ ಪ್ರಾಚೀನವಾದ ಜಾನಪದ ಕಥೆಯೆಂದೂ, ಇದು ಸೋಮದೇವನ ಕಥಾಸರಿತ್ಸಾಗರ, ಗುಣಾಢ್ಯನ ಬೃಹತ್ಕಥೆ, ಶಾತಪಥ ಬ್ರಾಹ್ಮಣ, ಋಗ್ವೇದಗಳಿಂದ ಪ್ರಭಾವಿತವಾದ ಆರ್ಯೇತರ ಬುಡಕಟ್ಟಿನ ರಾಜರಾಣಿಯರ ಪ್ರೇಮಕಥೆಯ ಒಂದು ಪ್ರಕಟಿತ ರೂಪವೆಂದೂ ಡಾ.ದೇ.ಜ.ಗೌ. ತಮ್ಮ 'ನಳಚರಿತ್ರೆ'ಯ ಪ್ರಸ್ತಾವನೆಯಲ್ಲಿ ಪ್ರತಿಪಾದಿಸಿದ್ದಾರೆ. ಜನಪದ ನೆಲೆಯ ಲೋಕಪ್ರಜ್ಞೆಯನ್ನು ತನ್ನ ಕಾವ್ಯಗಳಲ್ಲಿ ವಿಸ್ತರಿಸುವ ಸಂಶೋಧಕರಾಗಿ, ಭಾರತೀಯ ವೇದ ಕಾಲೀನ ಸಂಸ್ಕೃತಿಯ ಆದಿಮ ಚರಿತ್ರೆಯ ವಿಶ್ಲೇಷಕರಾಗಿಯೂ ನಮಗೆ ಕಾಣುತ್ತಾರೆ.

ಕನಕದಾಸರಿಗೆ ತಮ್ಮ ಕಾವ್ಯಗಳು ರಾಜಕೀಯ ಚರಿತ್ರೆಯ ಆಕರಗಳಾಗಬೇಕೆಂಬ ಉದ್ದೇಶವಿಲ್ಲ. ಏಕೆಂದರೆ ಅವರು ಇತಿಹಾಸಕಾರರಲ್ಲ. ಆದರೆ ಪುರಾಣ ಮಾಧ್ಯಮಗಳನ್ನು ಜನಪದರ ಜೀವನ ಅನುಭವಗಳಿಗೆ ವಿಸ್ತರಿಸುವುದರ ಮೂಲಕ ಅದು ನೀಡುವ ಪ್ರೇರಣೆಗಳು ಅವರಿಗೆ ಮುಖ್ಯವಾಗುತ್ತವೆ. ಕೆಲವು ವಿದ್ವಾಂಸರು ನಳಚರಿತ್ರೆಯು ಕೃಷ್ಣದೇವರಾಯನ ಕಾಲದ ನಂತರದ ವಿಜಯನಗರದ ರಾಜಕೀಯ, ಸಾಮಾಜಿಕ ಸ್ಥಿತಿಯ ನಿರೂಪಣೆಯನ್ನು ಹೊಂದಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸ್ವಲ್ಪಮಟ್ಟಿಗೆ ನಿಜವಾದರು ಇದು ರಾಜಕೀಯ ಚರಿತ್ರೆ ಅಲ್ಲ. ಅರಸು ಚರಿತ್ರೆಯನ್ನು ನಿರೂಪಿಸುವ ಕನಕದಾಸರಿಗೆ ಇತಿಹಾಸವನ್ನು ಸ್ಥಾಪಿತ ಹಿತಾಸಕ್ತಿ, ಹಿನ್ನಲೆಯಲ್ಲಿ ನೋಡುವ ಕುತೂಹಲವಿಲ್ಲ. ವ್ಯಕ್ತಿ ಬದುಕಿನ ಸೋಲು-ಗೆಲುವುಗಳು ಪ್ರಭುತ್ವವೂ ಒಳಗೊಂಡತೆ ಜನ ಸಾಮಾನ್ಯರಿಗೂ ಸಮಾನವಾಗಿ ಅನ್ವಯಿಸುತ್ತದೆ ಎನ್ನುವ ಕಾರಣಕ್ಕಾಗಿ ಅವರಿಗೆ ರಾಜಕೀಯ ಒಂದು ಮಾದರಿ. ಜನಸಾಮಾನ್ಯರ ಮನಸ್ಸುಗಳನ್ನು ಪರಿಪಕ್ವಗೊಳಿಸುವ ಒಂದು ವಿಭಿನ್ನ ದಾರಿ. ಶ್ರೀಕೃಷ್ಣನ ಮಡದಿಗೇ ಬಂಜೆತನದ ಬೇಗೆ ಇದೆ ಎಂತಾದರೆ ಸಾಮಾನ್ಯ ಹೆಣ್ಣು ಮಕ್ಕಳ ಪಾಡೇನು? ಸೀತೆ-ದ್ರೌಪದಿ-ದಮಯಂತಿಯಂತಹ ಪುರಾಣ ಪಾತ್ರಗಳು ಕೊಡುವ ಕಷ್ಟ ಸಹಿಷ್ಣುತೆಯ ಪಾಠಗಳು ಮನೋವೈಜ್ಞಾನಿಕ ನೆಲೆಯಲ್ಲಿ ಮಹತ್ವವೆನಿಸುತ್ತವೆ. ಕನಕದಾಸರಿಗೆ ಇಂತಹ ಪರಿಣಾಮಗಳು ಮುಖ್ಯ.

'ಮೋಹನ ತರಂಗಿಣಿ'ಗಿಂತ ಕನಕದಾಸರ 'ನಳಚರಿತ್ರೆ' ಹಲವು ನೆಲೆಗಳಲ್ಲಿ ಭಿನ್ನವೆನಿಸುತ್ತದೆ. 'ಮೋಹನ ತರಂಗಿಣಿ' ಬರೆದ ಕನಕದಾಸರೇ 'ನಳಚರಿತ್ರೆ'ಯನ್ನೂ ಬರೆದರೆ ಎಂಬ ಸಂದೇಹ ನಮ್ಮನ್ನು ಕಾಡುತ್ತದೆ. ಇವೆರಡರ ನಡುವಿನ ಸೂಕ್ಷ್ಮ ಹೊಂದಾಣಿಕೆ ಗಮನಿಸಬೇಕು. ಎರಡೂ ಕನಕದಾಸರ ಪ್ರಧಾನ ಕಾವ್ಯಗಳೆ. ಸುಖ-ಕಷ್ಟ ಬದುಕಿನ ಈ ಎರಡು ಧ್ರುವಗಳಲ್ಲಿ ಮನುಷ್ಯನ ಮನಸ್ಸು ಪಕ್ವಗೊಳ್ಳಬೇಕಾದ ದಾರಿಯ ಹುಡುಕಾಟವಿದೆ. ಸುಖದ ತುತ್ತತುದಿಯಿಂದ ಕಷ್ಟದ ಕಟ್ಟಕಡೆಯ ನೋವಿನ ಚಿತ್ರಣ ನೀಡುವ ಕನ್ನಡ ಕಾವ್ಯಗಳಲ್ಲಿ ಮಾನವನ ಆತ್ಮಶೋಧನೆಯ ಮಾರ್ಗಗಳಿಗೆ ಪ್ರೇರಣೆಗಳಿವೆ. ಕನಕದಾಸರು ರಾಜತ್ವದ ಆಪ್ತತೆಯಲ್ಲಿ ಪಡೆದ ಅನುಭವಗಳ ನೈಜತೆ ಮೋಹನ ತರಂಗಿಣಿಯಲ್ಲಿದ್ದರೆ, ಆಧ್ಯಾತ್ಮದ ಆತ್ಮಜಾಗೃತಿಯ ಮಾರ್ಗದಲ್ಲಿ ವಿಕಾಸಶೀಲ ಮನಸ್ಸಿನ, ನಿರಸನಭಾವದ ಅಭಿವ್ಯಕ್ತಿ ಕ್ರಮ 'ನಳಚರಿತ್ರೆ'ಯಲ್ಲಿದೆ. ಭೋಗದಿಂದ ವೈರಾಗ್ಯ ಮಾರ್ಗದ ಸುದೀರ್ಘ ಪಯಣವೆಂಬಂತೆ ಈ ಎರಡು ಕೃತಿಗಳಿವೆ. ಭೋಗ-ವೈಭೋಗದ ಶೃಂಗಾರದ ಭಾವಲೋಲುಪತೆಯಲ್ಲಿ ಮುಳುಗಿದ ಮನಸ್ಸು ಅದರಿಂದ ಬಿಡುಗಡೆ ಪಡೆದು ಬದುಕಿನ ಸತ್ಯದ ಹುಡುಕಾಟಕ್ಕಾಗಿ ಹೊರಟ 'ಮಹಾಮಾರ್ಗಿ' ಯಾಗಿಯೂ ಕನಕದಾಸರು ಕಾಣುತ್ತಾರೆ. ಲೋಕದ ಅನುಭವಗಳನ್ನು ನಿರ್ಲಿಪ್ತವಾಗಿ ಕಾಣುವ ಗುಣ ಅವರಿಗೆ ಈಗ ಸಿದ್ಧಿಸಿದೆ. ಪ್ರಭುತ್ವವು ತನ್ನ ಅಹಂಕಾರ, ದರ್ಪ, ವೈಭವಗಳಲ್ಲಿ ಕಾಣಿಸಿಕೊಳ್ಳುವ ಹೊತ್ತಿಗೆ 'ವಿಧಿವಾದ'ಕ್ಕೆ ಒಳಗಾಗಿ ಕಷ್ಟ ಪರಂಪರೆಗಳನ್ನೆದುರಿಸಲು ಕಾಡು ಪಾಲಾಗುವ ರಾಮ, ಹರಿಶ್ಚಂದ್ರ, ನಳ, ಧರ್ಮರಾಯರ ಮಾದರಿಗಳ ಮೂಲಕ ಪಡೆಯುವ ವಿವೇಕ ಬಹಳ ದೊಡ್ಡದು. ಪ್ರಭುತ್ವ ಯಾವಾಗಲೂ ಈ ವಿವೇಕವನ್ನು ಉಳಿಸಿಕೊಳ್ಳಬೇಕೆಂಬ ಹಂಬಲ ಕನಕದಾಸರಿಗಿದೆ.

ಮಧ್ಯಕಾಲೀನ ರಾಜಕೀಯ, ಸಾಮಾಜಿಕ ತಲ್ಲಣಗಳಿಗೆ ಧಾರ್ಮಿಕತೆ ನೀಡುವ ಉತ್ತರ, ಸಾಂತ್ವನ ಬಹಳ ಮುಖ್ಯವಾದುದು ಎಂಬ ತಿಳುವಳಿಕೆಯ ನೆಲೆಯಿಂದ 'ನಳಚರಿತ್ರೆ'ಯನ್ನು ನೋಡುವ ಅಗತ್ಯವಿದೆ. ಇಲ್ಲಿ ಧರ್ಮ- ಪ್ರಭುತ್ವದ ಅವಲಂಬನೆಯಲ್ಲಿ ಧರ್ಮವು ಯಾವಾಗಲೂ ದಾರಿ ತೋರುವ ಕೇಂದ್ರ ಸ್ಥಾನದಲ್ಲಿರುತ್ತದೆ ಎನ್ನುವುದನ್ನು ನಳಚರಿತ್ರೆಯ 'ಮುನಿಚರಿತ್ರೆ/ ದ್ವಿಜಚರಿತ್ರೆ' ಪ್ರತಿಪಾದಿಸಿದರೆ, ಪರಂಪರೆಯ ಮೌಲ್ಯಗಳನ್ನು 'ಕಥಾಚರಿತ್ರೆ'ಯಾಗಿಯೂ, ಸಾಂಪ್ರದಾಯಿಕ ಸ್ತ್ರೀಮೌಲ್ಯ ಪ್ರತಿಪಾದನೆಯ 'ಸತಿ ಚರಿತೆ'ಯಾಗಿಯೂ ಬಿತ್ತರಗೊಳ್ಳುತ್ತದೆ. ಹೀಗೆ "ಮುನಿ, ಪ್ರಭು, ಜನ, ಮಹಿಳಾ ಸಾಂಸ್ಥಿಕ ನೆಲೆಗಳ ಮೂಲಕ ಬಹುಸ್ತರದಲ್ಲಿ ನಾಡಿನ ನಿರಂತರ ಚರಿತ್ರೆಯ ಎಳೆಗಳನ್ನು ಜೋಡಿಸುವ ಯತ್ನ" [೧] ವಾಗಿ ನಳ ಚರಿತ್ರೆ ನೋಡುವುದರ ಮೂಲಕ ಕನಕದಾಸರ

---

೧. ಜಯಪ್ರಕಾಶ್ ಶೆಟ್ಟಿ ಎಚ್: ನಳಚರಿತೆಯೊಳಗಣ ಬಹುಚರಿತೆಯ ಎಳೆಗಳು, ಕನಕನ ಚಿಂತನ-ಪುಟ-೪೩

ಲೋಕಚರಿತೆಯ ಮಾದರಿಯನ್ನು ವಿಶ್ಲೇಷಿಸಬಹುದು. ಈ ಲೋಕ ಚರಿತೆಯ ಮಾದರಿಯಲ್ಲಿ ಅಡಗಿರುವ ಬಹು ಚರಿತೆಯ ನೆಲೆಗಳು ಚರಿತ್ರೆಯ ಸ್ಥಾಪಿತ ಶಕ್ತಿ ಕೇಂದ್ರಗಳನ್ನು ಒಡೆಯುತ್ತದೆ ಮತ್ತು ಈವರೆಗೆ ಅಲಕ್ಷ್ಯಕ್ಕೆ ಒಳಗಾದ ಜೀವ ಸಂವೇದನೆಯೊಂದನ್ನು ಎತ್ತಿಹಿಡಿಯುತ್ತದೆ. ಹಾಗಾಗಿ ಕನಕದಾಸರ ನಳ ಚರಿತ್ರೆ ಕಾಡು–ನಾಡಿನ ಸಂಬಂಧದಲ್ಲಿ ನಿರೂಪಿಸಲ್ಪಡುವ ಪ್ರಕೃತಿ ಚರಿತ್ರೆಯೂ ಹೌದು.

ಧರ್ಮಜಾಗೃತಿಯ ಸಾಂಸ್ಕೃತಿಕ ಪ್ರಜ್ಞೆ ಉದಯಿಸಿದ ೧೩–೧೪ನೇ ಶತಮಾನ ಭಾರತೀಯ ಜನ ಬದುಕಿನ ಮೇಲೆ ಉಂಟು ಮಾಡಿದ ಪ್ರಭಾವ ಪರಿಣಾಮ ದೂರಗಾಮಿಯಾದುದು. ಮುಂದೆ ಇದೇ ರಾಷ್ಟ್ರೀಯ ಪ್ರಜ್ಞೆಯ ಉದಯಕ್ಕೂ ಕಾರಣವಾಗಿರುವುದನ್ನು ಮರೆಯಬಾರದು. ದಕ್ಷಿಣ ಹಾಗೂ ಉತ್ತರ ಭಾರತಗಳಲ್ಲಿ ಬೆಳೆದು ಬಂದ ಸಂತ ಪರಂಪರೆ ಜಾತಿ, ವರ್ಗ, ವರ್ಣರಹಿತವಾದ ಸಾಮಾಜಿಕ ಆಶಯವನ್ನು ಹೊಂದಿ ಭಕ್ತಿ ಚಳುವಳಿಯನ್ನು ಪ್ರಾರಂಭಿಸಿತು. ಭಕ್ತಿ ತೀವ್ರತೆಯ ಈ ಉತ್ತುಂಗ ಸ್ಥಿತಿಯಲ್ಲಿ ಅಸ್ಥಿರವಾದ ಸಂಪತ್ತು, ಅಧಿಕಾರ ವೈಭೋಗಗಳಿಂದ ಜನರ ಮನಸ್ಸನ್ನು ಸತ್ಯ, ಬದ್ಧತೆ, ಅಹಿಂಸೆಯತ್ತ ತಿರುಗಿಸುವ ಜವಾಬ್ದಾರಿಯನ್ನು ಹೊತ್ತ ಸಂತರು ಪ್ರಭುತ್ವದ ಅಹಂ ನಿರಸನಕ್ಕೆ ದಾರಿ ಮಾಡಿಕೊಟ್ಟರು. ದುರಾಸೆ, ಸ್ವಾರ್ಥಪರತೆ, ಹಿಂಸೆಗಳನ್ನು ನಿರಾಕರಿಸುತ್ತಾ ಸ್ವಸ್ಥ ಸಮಾಜದ ಕಲ್ಪನೆಗಳನ್ನು ಕಟ್ಟಿ ಕೊಡುವಲ್ಲಿ ದಾಸಪಂಥಗಳು ಕ್ರಮಿಸಿದ ದಾರಿ ಶರಣ ಚಳವಳಿಗಿಂತಲೂ ಭಿನ್ನವಾದುದು. ಶರಣರು ಪಂಡಿತ ಪರಂಪರೆಯ ಪ್ರತಿನಿಧಿಗಳಲ್ಲ. ಬಸವಣ್ಣ ಪ್ರಭುತ್ವದ ಜೊತೆಗಿದ್ದರೂ ಅದನ್ನು ಅವಕಾಶವಾದಿತನಕ್ಕೆ ಬಳಸಿಕೊಳ್ಳಲಿಲ್ಲ. ಬಸವಣ್ಣನ ವಚನ ಇದನ್ನು ಸ್ಪಷ್ಟಪಡಿಸುತ್ತದೆ.

ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದ
ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು
ಕೊಡುವೆನುತ್ತರವನವರಿಗೆ, ಕೊಡಲಮ್ಮವೆ
ಹೊಲೆಯ ಹೊಲೆಯರ ಮನೆಯ ಹೊಕ್ಕು
ಸಲೆ ಕೈಗೂಲಿಯ ಮಾಡಿಯಾದರೆಯೂ
ನಿಮ್ಮ ನಿಲುವಿಂಗೆ ಕುದಿವನಲ್ಲದೆ
ಎನೊಡಲವಸರಕ್ಕೆ ಕುದಿದೆನಾದರೆ ತಲೆದಂಡ

ಎನ್ನುತ್ತಾನೆ ಬಸವಣ್ಣ. ಶರಣರು ಪ್ರಭುತ್ವ ದಿಂದ ಹೊರಗೆ ಹೋಗುವ ಮಾರ್ಗಗಳನ್ನು ಚಳವಳಿಯ ಮೂಲಕ ಅನ್ವೇಷಿಸಿಕೊಂಡರು. ಪ್ರಭುತ್ವವನ್ನು ತಿದ್ದಬೇಕಾದುದು ಒಳಗೆ ನಿಂತಲ್ಲ; ಹೊರಗೆ ನಿಂತು ಎನ್ನುವ ಧೋರಣೆ ಅವರದ್ದು. 'ನೆಲನಾಳ್ದನ ಹೆಣವ ಒಂದಡಿಕೆಗೆ ಕೊಂಬರಿಲ್ಲ' ಎಂಬ ವಚನಗಳ ಮೂಲಕ ಬಸವಣ್ಣ ಪ್ರಭುತ್ವದೊಳಗಿದ್ದೂ ಅದರಾಚೆ ಬದುಕಿದ. ಆದರೆ ದಾಸಪಂಥದ ವ್ಯಾಸಕೂಟವು ಹಾಗಲ್ಲ. ದಾಸರು

ಪ್ರಭುತ್ವವನ್ನು ತಿದ್ದುವ ಶಕ್ತಿ ಯಾವಾಗಲೂ ಈ ಗುರು ಪರಂಪರೆ ಉಳಿಸಿಕೊಳ್ಳಬೇಕೆನ್ನುವುದನ್ನು ಪ್ರತಿಪಾದಿಸಿದರು. ವ್ಯಾಸರಾಯರಂತವರು ಕೃಷ್ಣದೇವರಾಯನಿಗೆ ಗುರುಪರಂಪರೆಯ ಪ್ರತಿನಿಧಿಯಂತಿದ್ದರು. ರಾಜತ್ವವು ಧರ್ಮತ್ವಕ್ಕೆ ಬದ್ಧವಾಗಿರಬೇಕೆನ್ನುವುದನ್ನು ಪ್ರತಿಪಾದಿಸುತ್ತಾ ದಾನ ಗುಣಶೀಲತೆಯನ್ನು ಬೆಳೆಸಿದರು. ಧರ್ಮ–ಪ್ರಭುತ್ವವನ್ನು ಸಮೀಕರಿಸಿದರು.

ಇದಕ್ಕೆ ಪ್ರತಿಯಾಗಿ ರಾಜರಿಂದ ಅಪಾರವಾದ ಸಂಪತ್ತುಗಳನ್ನು ಪಡೆದು ಮಠ, ಪೀಠಗಳನ್ನು ಬೆಳೆಸಿದರು. ದಾನ ದತ್ತಿಗಳನ್ನು ಪಡೆದರು. ಇವರಲ್ಲಿ ಕನಕದಾಸರು ವಿಭಿನ್ನವಾಗಿ ನಿಲ್ಲುತ್ತಾರೆ. ಅವರು ಈ ಆಚಾರ್ಯ ಪರಂಪರೆಯ ಪ್ರತಿನಿಧಿ ಅಲ್ಲ. ಜಾತಿಯ ಕಾರಣದಿಂದಾಗಿ ಮಠ–ಪೀಠಗಳು ಅವರನ್ನು ದೂರವಿರಿಸಿದವು. ಪ್ರಭುತ್ವದ ಆಶ್ರಯವನ್ನು ಸ್ವತಃ ತಾವೇ ಧಿಕ್ಕರಿಸಿ ನಿಂತರು. ಈ ಕಾರಣಕ್ಕಾಗಿಯೇ ಕನಕದಾಸರಿಗೆ ಪ್ರಭುತ್ವವನ್ನು ವಿಡಂಬಿಸುವುದಕ್ಕೂ. ಜಾತಿ, ವರ್ಗಾಧಾರಿತ ಡಂಭಾಚಾರವನ್ನು ಟೀಕಿಸುವುದಕ್ಕೆ ಸಾಧ್ಯವಾಯಿತು. ಕನಕದಾಸರಿಗೆ ಯಾವಾಗಲೂ ಈ ಮುನಿ ಪರಂಪರೆಯ ಬಗೆಗೆ ಗೌರವ, ಆದರ, ಅಭಿಮಾನ. ಹಾಗಾಗಿ ನಳಚರಿತ್ರೆಯಲ್ಲಿ ಪ್ರಭುತ್ವಕ್ಕೆ ನೀಡುವ ವಿವೇಕದ ಪ್ರತಿನಿಧಿಗಳಾಗಿ ಮುನಿಚರಿತ್ರೆಯನ್ನು ನಿರೂಪಿಸುತ್ತಾರೆ. ರಾಜಕೀಯವಾಗಿ ವಿಜಯನಗರದಂತಹ ಅರಸು ಪರಂಪರೆ ಕೃಷ್ಣದೇವರಾಯನ ಕಾಲಾನಂತರ ಅನುಭವಿಸಿದ ಶಿಥಿಲತೆಯನ್ನು, ಅರಾಜಕತೆಯನ್ನು, ಪಾಳೇಗಾರಿಕೆಯ ತಿಕ್ಕಾಟವನ್ನೂ, ಇದರಿಂದ ಜರ್ಜರಿತಗೊಂಡ ಪ್ರಭುತ್ವದ ಮನಸ್ಸುಗಳನ್ನು ವಿವರಿಸುವ ಪ್ರಯತ್ನವಾಗಿ ನಳಚರಿತ್ರೆ ರೂಪುಗೊಂಡಂತೆ ಕಾಣುತ್ತದೆ. ತಿರುಮಲೆ ತಾತಾಚಾರ್ಯ, ವ್ಯಾಸರಾಯರಂತವರು 'ಮುನಿಚರಿತೆ'ಯ ಪ್ರತಿನಿಧಿಗಳಾಗಿಯೂ, ನಳನನ್ನು, ವಿಜಯನಗರದ ಅರಸರೊಂದಿಗೆ ಸಮೀಕರಿಸಿ ಹೇಳುವಂತೆಯೂ ತೋರುತ್ತದೆ. ಇದು ರಾಜಕೀಯ ಚರಿತ್ರೆಯಲ್ಲ; ಶುದ್ಧ ಸಂಸ್ಕೃತಿ ಚರಿತ್ರೆ. ಪುರಾಣವನ್ನು ಸಮಕಾಲೀನತೆಯೊಂದಿಗೆ ಬೆರೆಸಿನೋಡಿ ಮಾನವ ತತ್ವದ ಹುಡುಕಾಟವನ್ನು ಪ್ರಾರಂಭಿಸಿದ ಚರಿತ್ರೆ.

ಮೋಹನ ತರಂಗಿಣಿಯಂತೆ ನಳಚರಿತ್ರೆಯ ಕಥೆಯೂ ಪೌರಾಣಿಕವಾದುದು. ಆರ್ಯೇತರ ಅರಸನಾದ ನಳ ಮತ್ತು ಅವನ ಪತ್ನಿ ದಮಯಂತಿಯ ತ್ಯಾಗ ಮೂಲ ದಾಂಪತ್ಯ ಪ್ರೇಮ ಕಥನವನ್ನು ಹೇಳಿದರೆ ಮೋಹನ ತರಂಗಿಣಿ ಭೋಗ ಮೂಲದ ಕಥನ. ಇದು ನಳನ 'ವಿಮಲ ಚರಿತೆ'. ಭೋಗಮೂಲವಾದ ನಾಡು ವೈರಾಗ್ಯ ಮೂಲವಾದ ಕಾಡು ಈ ಎರಡರ ನಡುವೆ ಚರಿತ್ರೆ ಹುಟ್ಟಿಕೊಳ್ಳುತ್ತದೆ. ಮನುಷ್ಯನ ಅಹಂ ನಿರಸನಕ್ಕೆ ಮೂಲ ಹೇತುವಾದ ವಿಧಿವಾದವೊಂದು ಸದ್ದಿಲ್ಲದೆ ವ್ಯಕ್ತಿ ಬದುಕಿನಲ್ಲಿ ಸ್ಥಾನ ಪಡೆಯುತ್ತದೆ. ಕೃಷ್ಣಭಕ್ತಿಯ ಕಂಬಕ್ಕೆ ತನ್ನನ್ನು ಕಟ್ಟಿಕೊಳ್ಳುವ ಕನಕದಾಸರು

ಪ್ರಭುತ್ವದ ಶಕ್ತಿ ಕೇಂದ್ರವನ್ನು ದೈವತ್ವದ ಭಕ್ತಿ ಕೇಂದ್ರಕ್ಕೆ ಪಲ್ಲಟಿಸುವ ಕಾರ್ಯವನ್ನು ಮಾಡುತ್ತಾರೆ. ಜೂಜಿನಲ್ಲಿ ಸರ್ವಸ್ವವನ್ನು ಕಳೆದುಕೊಂಡು ಸತಿ ಅನುಜ ಸಹಿತ ವನವಾಸದಲ್ಲಿರುವ ಧರ್ಮರಾಯನಿಗೆ ಅವನ ಹಾಗೆ ಜೂಜಿನಲ್ಲಿ ಸೋತು ಪತ್ನೀ ಸಹಿತ ಅರಣ್ಯಕ್ಕೆ ತೆರಳಿದ ನಳನ ಚರಿತ್ರೆಯನ್ನು ಹೇಳುವ ರೋಮಶ ಮುನಿ ಮೌಖಿಕ ಸಂಪ್ರದಾಯದ ಪ್ರತಿನಿಧಿ. ನಡುಗನ್ನಡ ಕಾಲಘಟ್ಟದಲ್ಲಿ ಕುಮಾರವ್ಯಾಸನೇ ಮೊದಲಾದ ಕಾವ್ಯಗಳನ್ನು ವಾಚಿಸುವ ಗಮಕ ಸಂಪ್ರದಾಯದ ಒಂದು ಭಾಗವಾದ ಹೇಳು-ಕೇಳುವ ಘಟಕವಾಗಿ ರೋಮಶಮುನಿ ಹಾಗೂ ಧರ್ಮರಾಯ ಕಾಣಿಸಿಕೊಳ್ಳುತ್ತಾರೆ. ಈ ಕಥಾ ಪರಿಕರ ವಿಸ್ತಾರವಾದುದು ಸೂತಮುನಿಯಿಂದ ಮುನಿ ಗಡಣಕ್ಕೂ ಮುನಿಗಳಿಂದ ಅಗಸ್ತ್ಯನಿಗೂ, ಅಗಸ್ತ್ಯನಿಂದ ಶ್ರೀರಾಮನಿಗೂ ಉಪದೇಶಿಸಲ್ಪಟ್ಟ ಕಥೆ ಈಗ ರೋಮಶನಿಂದ ಧರ್ಮರಾಯನಿಗೆ ಹೇಳಲ್ಪಟ್ಟಿದೆ. ಈ ಕತೆಯನ್ನು ಈ ಕಾಲದ ಜನರಿಗೆ ಹೇಳುವ ಕನಕದಾಸರು ಒಬ್ಬ ಕಥೆಗಾರ: ಹೇಳುಗ. ಸಾಮಾಜಿಕರು ನಂಬುವ ಮತ್ತು ಅವರ ಜೀವನ ಕ್ರಮಕ್ಕೆ ಅನುಸಾರವಾಗಿ ಕಥಾಸಂವಿಧಾನವನ್ನು ಮೂಲ ಕಥೆಗಿಂತ ಭಿನ್ನವಾಗಿ ನಿರೂಪಿಸುವಲ್ಲಿ ಕನಕದಾಸರ ಸೋಪಜ್ಞತೆ ಕೆಲಸ ಮಾಡಿದೆ.

ಕನ್ನಡದಲ್ಲಿ ನಳಚರಿತ್ರೆಯನ್ನು ಬರೆದ ಮೊದಲಿಗರು ಕನಕದಾಸರಲ್ಲಿ ಹದಿಮೂರನೆ ಶತಮಾನದ ಚೌಂಡರಸನೆಂಬ ಬ್ರಾಹ್ಮಣಕವಿ. 'ನಲಚಂಪು' ಎಂಬ ಕಾವ್ಯವನ್ನು ಬರೆದಿದ್ದಾನೆ. ಅನಂತರ ಬರೆದವರು ಕನಕದಾಸರು ಆ ಮೇಲೆ ಬಸವಪ್ಪ ಶಾಸ್ತ್ರಿಗಳು 'ದಮಯಂತಿ ಸ್ವಯಂವರ' ಎಂಬ ಚಂಪೂ ಕಾವ್ಯ ಬರೆದಿದ್ದಾರೆ. ಈ ಮೂರರಲ್ಲಿ ಕನಕದಾಸರ 'ನಳಚರಿತ್ರೆ' ಅತ್ಯಂತ ಪ್ರಸಿದ್ಧ. ಯಕ್ಷಗಾನದಲ್ಲೂ ನಳಚರಿತ್ರೆಯ ಪ್ರಸಂಗಗಳಿವೆ. ಕನಕದಾಸರಿಗೆ ನಳಚರಿತ್ರೆ ಬರೆಯುವುದು ಸಾಮಾಜಿಕ ತುರ್ತು ಎನ್ನುವಂತೆ ಕಾಣುತ್ತದೆ. ಉದಾಹರಣೆಗೆ ಅವರ 'ಎನ್ನಕಂದ ಹಳ್ಳಿಯ ಹನುಮಾ' ಕೀರ್ತನೆಯನ್ನು ನೋಡಬಹುದು. ಸೀತೆ-ಹನುಮಂತನ ಸಂವಾದರೂಪದಲ್ಲಿರುವ ಈ ಕೀರ್ತನೆ ಹಲವು ವೈರುಧ್ಯಗಳನ್ನು ನಮ್ಮ ಮುಂದಿಡುತ್ತದೆ.

ಎನ್ನ ಕಂದ ಹಳ್ಳಿಯ ಹನುಮಾ
ಚೆನ್ನಾಗಿ ಇಹರೆ ಲಕ್ಷ್ಮಣ ದೇವರು
    ತುಪ್ಪ ಪಂಚಾಮೃತವಂದು ಅಡವಿಗಡ್ಡೆಗಳಿಂದು
    ಕರ್ಪೂರವೀಳ್ಯವಂದು ಕುರುಕು ಇಂದು
    ಸುಪ್ಪತ್ತಿಗೆ ಮಂಚವಂದು ಹುಲ್ಲುಹಾಸಿಗೆಯಿಂದು
    ಶ್ರೀಪತಿ ರಾಘವ ಕ್ಷೇಮದಲ್ಲೈದಾರು
ನವವಸ್ತ್ರಗಳು ಅಂದು ನಾರಸೀರೆಗಳಿಂದು

ಹೂವಿನ ಗಂಟು ಅಂದು ಜಡೆಗಳಿಂದು
ಜವ್ವಾಜಿ ಕಸ್ತೂರಿಯಂದು ಭೂಸಿತಧೂಳಿಯಿಂದು
ಶ್ರೀವರ ರಾಘವ ಕ್ಷೇಮದಲ್ಯೆದಾರು
　　ಕನಕರಥಗಳಂದು ಕಾಲನಡಿಗೆಯಿಂದು
　　ಘುನ[illegible]ತ್ರ ಚಾಮರನಂದು ಬಿಸಿಲು ಇಂದು
　　ಸನಕಾದಿಗಳೋಲ್ಯೆಪ ಆದಿ ಕೇಶವ ನಮ್ಮ
　　ಹನುಮೇಶ ರಾಘುವ ಕ್ಷೇಮದಲ್ಯೆದಾರು

ಪ್ರಭುತ್ವವನ್ನು ಅರ್ಥೈಸುವ ಈ ವೈರುಧ್ಯದ ಚಿತ್ರಣಗಳು ಕನಕಪ್ರಜ್ಞೆಯಲ್ಲಿ ಹೆಚ್ಚು ಆಳವಾಗಿ ಕೂತಿದೆ. ದೇವೇಂದ್ರನ ವೈಭವವನ್ನು ನಾಚಿಸುವಂತೆ ಮೆರೆದ ನಳನಿಗೆ ಒದಗಿದ ದುಸ್ಥಿತಿಯನ್ನು ಹೇಳುವಲ್ಲಿ ಮನುಷ್ಯತ್ವ ರೂಪುಗೊಳ್ಳಬೇಕಾದ ಈ ಹಂತಗಳ ಬಗ್ಗೆ ಎಚ್ಚರಿಕೆ ಇದೆ. ಯುದ್ಧ, ಹಿಂಸೆ, ವೈಭವ, ದರ್ಪ ಅಹಂಕಾರಗಳಷ್ಟೇ ಪ್ರಭುತ್ವವಲ್ಲ. ಕರುಣೆ, ಮಾನವೀಯತೆ, ಕಷ್ಟಸಹಿಷ್ಣುತೆಯ ಗುಣಗಳೂ ಅದಕ್ಕಿರಬೇಕೆಂಬ ತಿಳಿವು ಪಡೆಯುವುದು ಮುಖ್ಯ. ನಳನ ವ್ಯಕ್ತಿತ್ವಕ್ಕೆ ಇದೆಲ್ಲವನ್ನು ಎರಕ ಹೊಯ್ಯುತ್ತಾರೆ.

ಶರಧಿ ಮೇರು ದಿಗಂತದವನೀ
ಶ್ವರರು ಕಪ್ಪವ ತೆರುವರ ಗಣಿತ
ಧುರವಿಜಯ ದೋರ್ಬಲರು ಮಣಿಮಯ ಮುಕುಟವರ್ಧನರು
ಚರಣಕಾನತರಾಗಿ ನಳ ಭೂ
ವರನ ಭಜಿಸುತಲಿರ್ದುರಮರೇ
ಶ್ವರನ ಸಭೆಯಂದದಲಿ ಮೆರೆದುದು ನೃಪತಿಯಾಸ್ಥಾನ

ಮೂಲಕಥಾ ಚರಿತ್ರೆಯನ್ನು ಭಿನ್ನವಾಗಿ ನಿರ್ವಚಿಸುವ ಕನಕದಾಸರಲ್ಲಿ ಸ್ವಂತಿಕೆ, ಸೃಜನಶೀಲತೆಯ ಆಯಾಮಗಳಿವೆ. ಅವರಿಗೆ ಕಾವ್ಯ ರಚನೆ ಎನುವುದು ಉದ್ದೇಶಿತ ಗುರಿಯನ್ನು ತಲುಪುವುದಕ್ಕಾಗಿರುವ ಸಾಧನ. ಹಾಗಾಗಿ ಅವರು ಮಹಾಭಾರತದ ನಳೋಪಾಖ್ಯಾನದಲ್ಲಿ ಬರುವ ಕೆಲವು ಪ್ರಸಂಗಗಳನ್ನು ಸೇರಿಸುವ ಹಾಗೂ ಕೈಬಿಡುವ ಎರಡೂ ಕೆಲಸ ಮಾಡಿದ್ದಾರೆ. ಮಹಾಕಾವ್ಯವೆಂಬುದು ಒಂದು ಸಮುದ್ರ, ಅದಕ್ಕೆ ಬಂದು ಸೇರುವ ತೊರೆಗಳು ಅನೇಕ. ಹಾಗೇಯೆ. ಮಹಾಭಾರತದ ಕಾವ್ಯಕ್ಕೆ ಸ್ವಂತಿಕೆಯ ಹಲವು ಅಂಶಗಳನ್ನು ಸೇರಿಸಿದ್ದಾರೆ. ದಮಯಂತಿಗೆ ಸಹೋದರರಿದ್ದ ವಿಷಯ, ದಮಯಂತಿ ಸ್ವಯಂವರ ಕಾಲದಲ್ಲಿ ದಿಕ್ಪಾಲಕರು ನಳನಿಗೆ ಕೊಟ್ಟ ವರಗಳ ವಿಷಯ ಮೊದಲಾದವುಗಳನ್ನು ಅವರು ಕೈ ಬಿಟ್ಟಿದ್ದಾರೆ. ಬದಲಿಗೆ ನಳನು ಬೇಟೆಗೆ ಹೋಗುವುದು ಅಲ್ಲಿ ಹಂಸವನ್ನು ಕಾಣುವುದು ಹಂಸನೊಂದಿಗಿನ ಅವನ ಸಂಭಾಷಣೆ, ಇಂದ್ರನ ಸಂದೇಶವನ್ನು ದಮಯಂತಿಯ ಬಳಿಗೆ ಕೊಂಡೊಯ್ಯುವುದು. ದಮಯಂತಿಯ

ಪ್ರೇಮವನ್ನು ಪರೀಕ್ಷಿಸುವುದು, ದೇವತಾ ಸ್ತ್ರೀಯರಲ್ಲಿ ಇಂದ್ರನಲ್ಲಿ ದಮಯಂತಿಗೆ ಪ್ರೇಮ ಉಂಟಾಗಲು ದೌತ್ಯವಹಿಸುವುದು, ನಳ ದಮಯಂತಿಯರ ಸಮಾಗಮವಾದ ಮೇಲೆ ಪುಷ್ಕರನೊಡನೆ ಯುದ್ಧಕ್ಕೆ ಹೋಗುವುದು ಇವು ಮೂಲದಲ್ಲಿಲ್ಲದ ಸನ್ನಿವೇಶಗಳು, ಹೊಸದಾಗಿ ಸೇರಿಸಲ್ಪಟ್ಟ ಸಂಗತಿಗಳು.

ಧರ್ಮ ಮತ್ತು ಪ್ರಭುತ್ವವನ್ನು ಏಕತ್ರಗೊಳಿಸ ಬಯಸುವ ಕನಕದಾಸರು ಮಧ್ಯಕಾಲೀನ ಕರ್ನಾಟಕದ ರಾಜಕೀಯ ಪರಿಸ್ಥಿತಿಯನ್ನು ಪ್ರತಿಬಿಂಬಿಸುವ ಕೆಲಸವನ್ನು ಮಾಡುತ್ತಾರೆ. ವೈದಿಕ ಜೈನ–ವೀರಶೈವ ಧರ್ಮಗಳ ಒಳಜಗಳಗಳನ್ನು ಬಿಡಿಸುವುದು ಧಾರ್ಮಿಕ ಸಹಿಷ್ಣುತೆಯನ್ನು ಸ್ಥಾಪಿಸುವುದು ಅಂದಿನ ಅರಸರ ಧಾರ್ಮಿಕ ನೇತಾರರ ಮುಖ್ಯವಾದ ಕರ್ತವ್ಯವೂ ಆಗಿತ್ತು. ಬುಕ್ಕರಾಯನ ಶ್ರವಣಬೆಳಗೊಳದ ಶಾಸನವನ್ನು ಈ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳಬಹುದು. ಡಾ.ಬಿ.ಎಸ್.ಸಣ್ಣಯ್ಯ 'ಕನಕದಾಸರ ಕೃತಿಗಳಲ್ಲಿ ಕಂಡು ಬರುವ ಚಾರಿತ್ರಿಕ ಅಂಶಗಳು' ಎಂಬ ಲೇಖನದಲ್ಲಿ "ಕನಕದಾಸರ ಮೋಹನ ತರಂಗಿಣಿಯಲ್ಲಿ ವಿಜಯನಗರ ಸಾಮ್ರಾಜ್ಯದ ವೈಭವವನ್ನು ಅಲ್ಲಿಯ ಜನ ಜೀವನವನ್ನು, ಕೃಷ್ಣರಾಯನು ಅನೇಕ ಯುದ್ಧಗಳಲ್ಲಿ ಜಯಶೀಲನಾಗಿ ಸುಖ ಸಂತೋಷಗಳಿಂದ ಮೆರೆಯುತ್ತಿದ್ದುದನ್ನು ಚಿತ್ರಿಸಿದರೆ ನಳ ಚರಿತ್ರೆಯಲ್ಲಿ ವಿಜಯ ನಗರದ ಅರಸರು ರಕ್ಕಸ ತಂಗಡಿಯಲ್ಲಿ ಸೋತು ಕೆಲಕಾಲ ತೊಂದರೆಗೊಳಗಾಗಿ ಮತ್ತೆ ಅಧಿಕಾರಕ್ಕೆ ಬಂದುದನ್ನು ವರ್ಣಿಸಬಹುದು. ವಿಜಯನಗರದ ಔನ್ನತ್ಯವನ್ನು, ಕೃಷ್ಣದೇವರಾಯನ ಧರ್ಮನಿಷ್ಠೆಯನ್ನು, ಸುಖ ಸಂತೋಷಗಳನ್ನು ಹಾಡಿ ಹೊಗಳಲು ಪುರಾಣ ಕಥೆ ಶ್ರೀ ಕೃಷ್ಣನ ಚರಿತ್ರೆಯನ್ನು ಆರಿಸಿಕೊಂಡಂತೆ, ವಿಜಯ ನಗರದ ಅರಸು ಯುದ್ಧದಲ್ಲಿ ಸೋತು ಕಷ್ಟಗಳಿಗೆ ಗುರಿಯಾಗಿ ಮತ್ತೆ ಅಧಿಕಾರಕ್ಕೆ ಬಂದುದನ್ನು ವಿವರಿಸಲು ಪುರಾಣ ಕಥೆ ನಳ ಚರಿತ್ರೆಯನ್ನು ಆರಿಸಿಕೊಂಡಿದ್ದಾರೆ" [೨] ಎಂದು ಉಲ್ಲೇಖಿಸಿದ್ದಾರೆ.

'ಧರ್ಮರಾಯ' ಎನ್ನುವ ಶಬ್ದದಲ್ಲಿಯೇ ಧರ್ಮ ಮತ್ತು ಪ್ರಭುತ್ವದ ಎರಡೂ ನೆಲೆಗಳಿವೆ. ಮೊದಲಿನಿಂದಲೂ ಧರ್ಮವು ಪ್ರಭುತ್ವದ ವಿವೇಕವಾಗಿ ಕೆಲಸ ಮಾಡುತ್ತಾ ಬಂದಿದೆ. ಈ ಧರ್ಮ ಸೂಕ್ಷ್ಮತೆಯನ್ನು ಅರಸನಿಗೆ ಮನದಟ್ಟು ಮಾಡುವವರು ಋಷಿ ಪರಂಪರೆಯ ಮುನಿಗಳು ಕಾಡು ಇವರ ಮೂಲ ನೆಲೆ ಅತ್ಯಂತ ಸರಳ ನಡೆ–ನುಡಿಯ ಮುನಿಗಳಿಗೆ ಪ್ರಭುತ್ವದಲ್ಲಿ ಗೌರವವಿದೆ. ಪುರಾಣ ಮಹಾ ಯಥಾವತ್ತಾಗಿ ಮುಂದುವರೆಸಿಕೊಂಡು ಬಂದ ಈ ಮೌಲ್ಯಗಳು ವೈದಿಕ ಸಂಸ್ಕೃತಿಯ ಒಂದು ಭಾಗವೇ ಆಗಿದೆ. ರಾಮಾಯಣ, ಮಹಾಭಾರತ ಕಾವ್ಯಗಳಲ್ಲಿ ಇದಕ್ಕೆ ಬೇಕಾದಷ್ಟು ನಿದರ್ಶನಗಳು ದೊರೆಯುತ್ತವೆ. ಪೂರ್ವಕಾಲೀನ, ಮಧ್ಯಕಾಲೀನ ಇತಿಹಾಸ

---

೨. ಡಾ.ಬಿ.ಎಸ್. ಸಣ್ಣಯ್ಯ: ಕನಕದಾಸರು: ಒಂದು ಅಧ್ಯಯನ–ಪುಟ ೨೦೭

ಪರಂಪರೆಗಳು ಪುರಾಣಗಳ ಈ ಪಥ್ಯವನ್ನು ಸಂಸ್ಕೃತಿಯ ಅವಶೇಷಗಳಾಗಿ ಗುರುತಿಸುತ್ತಾ ಅನುಕರಿಸುತ್ತಾ ಬಂದಿವೆ. ಮೌರ್ಯವಂಶದ ಸ್ಥಾಪನೆಗೆ, ಹೊಯ್ಸಳ, ವಿಜಯನಗರ ಹೀಗೆ ಎಲ್ಲಾ ರಾಜವಂಶಗಳ ಚರಿತ್ರೆಯ ಜೊತೆಯಲ್ಲಿ 'ಮುನಿಚರಿತೆ' ಹಾಸುಹೊಕ್ಕಾಗಿದೆ.

ವಿಜಯನಗರದ ಸ್ಥಾಪನೆಯಲ್ಲಿ ವಿದ್ಯಾರಣ್ಯ, ಪೋಷಣೆಯಲ್ಲಿ ತಿರುಮಲ ತಾತಾಚಾರ್ಯ, ವ್ಯಾಸರಾಯರ ಮಾರ್ಗದರ್ಶನ ಹೀಗೆ ಆಚಾರ್ಯ ಪರಂಪರೆಯ ಮುಂದುವರಿಕೆಯನ್ನು ಅಲ್ಲಿ ಕಾಣಬಹುದು. ಹಾಗಾಗಿ ಕನಕದಾಸರಿಗೆ, ಪುರಾಣ ಮತ್ತು ಚಾರಿತ್ರಿಕ ಪ್ರಜ್ಞೆ ಇದ್ದುದರಿಂದಲೇ ನಳನ ಸೋಲು-ಗೆಲುವಿನ ಚರಿತ್ರೆಯನ್ನು ಹೇಳಲು-ಕೇಳಲು ಮುನಿ ಪರಂಪರೆಯನ್ನು ಬಳಸಿಕೊಳ್ಳುತ್ತಾರೆ.

ಚ್ಯವನ, ಗೌತಮ, ಕಪಿಲ, ಭೃಗು ಭಾ
ರ್ಗವ ಭರದ್ವಾಜಾತ್ರಿ ಕೌಶಿಕ
ಪವನಭಕ್ಷಣ ವಾಮದೇವ ಮರೀಚಿ ಮೈತ್ರೇಯ॥
ಶ್ರವತಿ ಕಣ್ವಾಂಗಿರಸ ಶುಕ ಗಾ
ಲವ ಪರಾಶರದಾಲ್ಭ್ಯ ವರಮುನಿ
ನಿವಹದೊಡನೆಯ್ತಂದನಾ ರೋಮಶ ಮಹಾಮುನಿಪ॥

ಇಂದ್ರನ ಆಣತಿಯ ಮೇರೆಗೆ ರೋಮಶ ಮುನಿ ಸಮೂಹದ ಜೊತೆಯಲ್ಲಿ ಕಾಮ್ಯಕವನದಲ್ಲಿರುವ ಧರ್ಮರಾಯನನ್ನು ನೋಡಲು ಬಂದ ಸನ್ನಿವೇಶದಲ್ಲಿ ಧರ್ಮರಾಯ ಅವರನ್ನು ಸತ್ಕರಿಸುತ್ತಾ ಅವರ ವಿಶೇಷತೆಯನ್ನು ಹೇಳುತ್ತಾನೆ.

ನೀವಘಾಡದ ದೇವಋಷಿಗಳು
ಪಾವನರು ಮೂಲೋಕಕತಿ ಸಂ
ಭಾವನೀಯರು ಸತ್ಯಸಂಧರು ನಿರ್ಮಲಾತ್ಮಕರು
ಆವನರಿವನು ನಿಮ್ಮ ಮಹಿಮೆಯ
ಭಾವಿಸುವಡೆನಗಳವೆ ನಿಮ್ಮ ಪ
ದಾವಲಂಬನ ಸೇವೆ ದೊರಕಿತು ಧನ್ಯರಾವೆಂದ

ಧರ್ಮರಾಯನಿಗೆ ರೋಮಶ ಮುನಿಗಳಿಂದ ನಳನ ಕಥೆಯು ಹೇಳಲ್ಪಟ್ಟಿತು. ಬಹಳ ಹಿಂದಿನಿಂದಲೂ ಅನೇಕರ ಮೂಲಕ ಹೇಳುವ-ಕೇಳುವ ಪರಂಪರೆಯಲ್ಲಿ ಮುಂದುವರೆದುಕೊಂಡು ಬಂದ ಕಥೆಯಾದ್ದರಿಂದ ಕಷ್ಟವನ್ನು ಸಹಿಸುವ ಮಾನಸಿಕ ದಾರ್ಢ್ಯತೆಯನ್ನು ತುಂಬುತ್ತಾ ಬಂದಿದೆ. ಹೆಂಡತಿಯನ್ನು ಅಗಲಿ ಕಾಡಿನಲ್ಲಿ ಅಲೆದ ರಾಜರ ಚರಿತ್ರೆಯನ್ನು ಹೇಳುವ ಮೂಲಕ ನಳ, ಹರಿಶ್ಚಂದ್ರ, ರಾಮಚಂದ್ರ ಮೊದಲಾದ ಅರಸರು 'ಲಲನೆಯರ ತಾವಗಲಿ ಕಷ್ಟವ ಬಳಸಿದರು', ದ್ರೌಪದಿಯೊಂದಿಗೆ

ಬಾಹುಬಲರಾದ ತಮ್ಮಂದಿರು ಜೊತೆಗಿರುವ ಧರ್ಮರಾಯನಿಗೆ ಈ ರೀತಿ ಕಷ್ಟವಿಲ್ಲ ಎನ್ನುವುದನ್ನು ಪ್ರತಿಪಾದಿಸುವ ಕಾರಣಕ್ಕಾಗಿ ಈ ಕಥೆಯನ್ನು ಹೇಳುವ ಉದ್ದೇಶ ಕಾವ್ಯದಲ್ಲಿ ಸ್ಪಷ್ಟವಾಗಿದೆ.

೧) ಕಾಡು ಮತ್ತು ನಾಡಿನ ಮುಖಾಮುಖಿಯಲ್ಲಿ ಕಾಡು ಕಷ್ಟ ಸಹಿಷ್ಣುತೆಗೆ ರೂಪಕವಾಗುವುದು. ನಗರಮುಖೀ ವೈಭೋಗದ ಚಿತ್ರಣಗಳಿಗೆ ಪರ್ಯಾಯವಾಗಿ ಕಾಡು ಬಳಕೆಯಾಗುತ್ತಾ ವ್ಯಕ್ತಿಯ ಬದುಕಿನ ತಿರುವುಗಳಿಗೆ ಕಾರಣವಾಗುವ ಸನ್ನಿವೇಶಗಳನ್ನು ಕುರಿತು ಧ್ಯಾನಿಸುತ್ತಾ ವಿವೇಕದ ಸ್ಥಾನವಾಗುವುದು.

೨) ಮನುಷ್ಯನ ಆದಿಮಸ್ಥಿತಿಯ ಅರಿವಿನಿಂದ ಗತಕಾಲದ ಅನುಭವಗಳ ಶೋಧಕ್ಕೆ ತೊಡಗುವುದು. ಮನುಷ್ಯತ್ವದ ಅಂದು–ಇಂದು–ಮುಂದುಗಳ ಚಹರೆಯ ಹುಡುಕಾಟಕ್ಕೆ ತೆರೆದುಕೊಳ್ಳಲು ಮನಸ್ಸನ್ನು ಪರಿಪಕ್ವಗೊಳಿಸಲು ನೆಲೆಯಾಗಿಯೂ ಕಾವ್ಯ ಹಂದರವನ್ನು ಮರುಕಟ್ಟುವುದು

೩) ಚರಿತ್ರೆಯನ್ನು ಸ್ತ್ರೀಪರವಾಗಿಸುವುದು. ಅರಸು ಪ್ರಜ್ಞೆಯಲ್ಲಿ ಹೆಣ್ಣು ಉಪಭೋಗದ ಸಾಧನ ಮಾತ್ರ. ಹೆಣ್ಣು ಮತ್ತು ಅವಳ ದೇಹ ಪರಿಭಾಷೆಗಳು ಮಾತ್ರ ಅರಸತ್ವದಲ್ಲಿ ಮಹತ್ವ ಪಡೆಯುತ್ತಾ ಹೋಗುತ್ತದೆ. ಭೋಗದ ತುದಿಯಲ್ಲಿ ಹೆಣ್ಣು ಬಳಕೆಯ ವಸ್ತುವಾಗಿರುವ ಪುರುಷ ತಂತ್ರವನ್ನು ಒಡೆಯುವುದು. ಕಾಮ ಮತ್ತು ಪ್ರೇಮಗಳ ನಡುವಿನ ಅಂತರವನ್ನು ಅರಸು ಪ್ರಜ್ಞೆಯಲ್ಲಿ ಅಂತಸ್ಥಗೊಳಿಸುವ ದೃಷ್ಟಿಯಿಂದಲೂ ಕಾವ್ಯದ ಮೌಲ್ಯ ಪುನಾರಚನೆಯ ಆಶಯ ಹೊಂದಿರುವುದು.

೪) ಜೂಜಿನ ವ್ಯಸನದಿಂದಲೇ ರಾಜ್ಯ ಕಳೆದುಕೊಳ್ಳುವ ನಳನ ಕಥೆಯನ್ನು ಧರ್ಮರಾಯನ ಕಥೆಯನ್ನು ಹೇಳುವ ಮೂಲಕ ರಾಜಕೀಯದ ಚರ್ಯೆಯೂ ಒಂದು 'ಗೇಮ್' 'ಆಟ' ವೆಂಬ ಸತ್ಯವನ್ನು ಸಾರುವುದು. ಬದಲಾಗದ ಪ್ರಭುತ್ವದ ಮನೋಸ್ಥಿತಿಯನ್ನು ವಿಧಿವಾದದ ನೆಪವೊಡ್ಡಿ ಬದಲಿಸಿ ನೋಡುವುದು.

೫) ಕೊಲ್ಲುವ–ಕಾಯುವ, ರೂಪ–ಕುರೂಪ, ವೈಭವ– ಕಾಯಕ, ಸುಖ–ದುಃಖ, ಪ್ರಭು–ಸೇವಕ ಈ ದ್ವಂದ್ವಗಳ ಅರಿವಿನ ನೆಲೆಯಲ್ಲಿ ಮನುಷ್ಯನ ಮನಸ್ಸನ್ನು ಸಂಗತಿ ಪರಿಪಕ್ವಗೊಳಿಸುವುದು ಒಂದು ಕಾವ್ಯ ಸಾಧನೆ. ಈ ಮೊದಲಾದವುಗಳು ಕನಕದಾಸರ 'ನಳಚರಿತ್ರೆ'ಯ ಅರ್ಥೈಸುವ ವಿಭನ್ನ ದಾರಿಗಳಾಗಿವೆ.

ಜ್ಞಾನ–ವಿವೇಕ–ಧರ್ಮ–ಕರ್ಮಗಳ ವಾರಸುದಾರರಂತಿರುವ ಮುನಿವರ್ಗ, ಅರಸರ ಪಾಲಿಗೆ ಕೇಳಿದ್ದನ್ನು ಕೊಡುವ ಕಾಮಧೇನುವಿದ್ದಂತೆ. ಭೂತ–ವರ್ತಮಾನ ಭವಿಷ್ಯತ್ ಹೀಗೆ ತ್ರಿಕಾಲ ಜ್ಞಾನಿಗಳಾದ ಇವರಿಗೆ ಅಸಾಧ್ಯವಾದುದನ್ನು ಸಾಧಿಸುವ ಶಕ್ತಿ ಇದೆ ಎನ್ನುವುನ್ನು ಪ್ರಭುತ್ವವು ನಂಬುತ್ತಾ ಬಂದಿದೆ. ಹಾಗಾಗಿ ಭಿಮನೃಪಾಲ ತನಗೆ ಮಕ್ಕಳಿಲ್ಲವೆಂದು ದಮನಾಖ್ಯ ಮುನಿಗೆ ನಮಿಸಿದಾಗ ಪುತ್ರಯಾಗ ಮಾಡುವಂತೆ

ಭೀಮನೃಪನಿಗೆ ಮುನಿ ಸೂಚಿಸುತ್ತಾನೆ. ದಿವ್ಯ ಜ್ಞಾನ, ಯೋಗದೃಷ್ಟಿ ಸಿದ್ಧಿಪಡೆದ ಈ ಮುನಿವರ್ಗ ತನ್ನ ಕುಶಲತೆಯಿಂದಲೇ ಪ್ರಭುತ್ವದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ರಾಜನ ಕಷ್ಟಕ್ಕೆಲ್ಲಾ ಇವರು ಒದಗಿಬರುತ್ತಾರೆ. ಮುನಿಜನರ ಸೇವೆ ಒಂದು ಬಗೆಯಾದರೆ ಭೂಸುರ ಸೇವೆ ಇನ್ನೊಂದು ಬಗೆಯದ್ದು ನಳನಿಗೆ ದಮಯಂತಿಯ ಪರಿಚಯದ ದೌತ್ಯವಹಿಸುವ ಭೂಸುರರೂ ಕೂಡ ಪ್ರಭುತ್ವದ ಹಿತೈಷಿಗಳೆ. 'ನಳಚರಿತ್ರೆಯ' ಆಕರ್ಷಕವಾದ ಒಂದು ಭಾಗ ನಳನು ಬೇಟೆಯಾಡಲು ಹೋದ ಸಂದರ್ಭದಲ್ಲಾದ 'ಹಂಸದರ್ಶನ'. ಮೃಗ ಬೇಟೆಗಾಗಿ ಬಂದ ನಳ ಮತ್ತು ಅವನ ಸೈನಿಕರು

ಆನೆಗಳ ಕೆಡಹಿದರು ಬಲಸಂ
ಧಾನದಲಿ ಹುಲಿ ಕರಡಿ ಮುಸ ಮೊಲ
ವಾನರಾದಿ ಸಮಸ್ತ ಮೃಗಗಳ ತರುಬಿ ಕೆಡಹಿದರು
　　ಹತ್ತಿ ತದ್ಗಿರಿ ಶಿಖರವನು ಮರ
　　ಮೊತ್ತದಲಿ ಬಲೆಗಳನು ಹಾಯ್ಕಿಂದ
　　ರೊತ್ತಿ ಸೋಹಿದರೊಂದು ಘನತರ ಸಿಂಹವಬ್ಬರಿಸಿ
ಹೊತ್ತ ಕೋಪದಿ ಸೈನ್ಯವನು ಮುರಿ
ದೊತ್ತಿ ಬರುತಿರೆ ಕಂಡು ನೃಪ ಬೆಂ
ಬತ್ತಿ ಕಡಿದನು ಮೃಗಪತಿಯ ವನವೆಲ್ಲ ನುಗ್ಗಾಗೆ॥

ನಳ ಮತ್ತು ಅವನ ಸೈನ್ಯ ಮಾಡಿದ ಕಾರ್ಯವಿದು. ಅನೇಕ ಸಾಧು ಪ್ರಾಣಿಗಳನ್ನು, ಕ್ರೂರಪ್ರಾಣಿಗಳನ್ನು, ಕೊಂದ ನಳ ತನ್ನ ಕಾರ್ಯಕ್ಕಾಗಿ ನಾಚುವ ಸಂದರ್ಭ ಒದಗಿ ಬರುತ್ತದೆ. 'ನಾಚುವ' ಮನಸ್ಸನ್ನೊಂದನ್ನು ಅರಸನಾದವನು ಯಾವಾಗಲೂ ಕಾಪಿಟ್ಟುಕೊಳ್ಳಬೇಕು ಎನ್ನುವುದನ್ನು ಈ ಪ್ರಸಂಗ ಸೂಚಿಸುತ್ತದೆ. ಬೇಟೆಯಾಡಿ ಆಯಾಸ ಪರಿಹರಿಸಲು ಕೊಳದ ಸಮೀಪಕ್ಕೆ ಬಂದ ನಳ ಶುಭತೇಜದ ರಾಜಹಂಸವನ್ನು ಕಾಣುತ್ತಾನೆ. ಅದರ ಸೌಂದರ್ಯಕ್ಕೆ ಅಚ್ಚರಿಪಟ್ಟು ಹಿಡಿಯಲು ಮನ್ನುಗುತ್ತಾನೆ.

ಒದರಿ ಕುಣಿಯಲು ಹಸ್ತದೊಳಗದ
ಕದಲದಂತಿರೆ ಪಿಡಿಯಲರಸನ
ವದನ ಕಮಲವ ನೋಡಿ ಹೆದರಿತು ಬಹಳ ಭೀತಿಯಲಿ
ಹೃದಯ ಕರಗುವ ಮಾತನೆಂದುದು
ಮದಕರಿಗೆ ನೊರ ಜಂತರವೆ ಕೈ
ಸದರದವರನು ಕೊಲ್ಲುವುದೇನರಿದೆಂದುದಾ ಪಕ್ಷಿ

'ಕೈಸದರದವರನು ಕೊಲುವುದು' ಉಚಿತವೇ ಎಂದು ನಳನನ್ನು ಹಂಸ ಪ್ರಶ್ನಿಸುತ್ತದೆ. ರಾಜನಾದವನು ಯಾರನ್ನು ಕೊಲ್ಲಬೇಕು? ಯಾವುದು ಹಿಂಸೆ? ಯಾವುದು ಪರಹಿಂಸೆ? ಈ ತತ್ವ ಸೂಕ್ಷ್ಮತೆಯನ್ನು ಇಲ್ಲಿ ಗಮನಿಸಬೇಕು.

ಕರಿಗಳನು ಮುಂದಿಡುವ ಸಿಂಹಕೆ
ನರಿಗಳದಿರೇ ತಾನು ನಿನಗಂ
ತರವೆ ಸಾಕಂತಿರಲಿ ಕಂಡವರೆಲ್ಲ ಕಡುನಗರೆ
ಅರಿಭಯಂಕರ ಶತ್ರುಗಳ ಸಂ
ಹರಿಸುವುದು ನೃಪನೀತಿ ನಿನಗಿದು
ತರವೆ ಬಿಡು ಪರಹಿಂಸೆ ದೋಷವಿದೆಂದುದಾ ಪಕ್ಷಿ॥

ಪ್ರಾಣಿ, ಪಕ್ಷಿ, ದವಸ ಧಾನ್ಯಗಳ ಮೂಲಕ ನೀತಿ ಹೇಳುವುದು ಕನಕದಾಸರಿಗೆ ಮೆಚ್ಚಿನ ವಿಷಯ. ಅದು ಅವರ ವಿಚಾರಗಳ ರೂಪಕ ಸಾಮಾಗ್ರಿ. ಶತ್ರುಗಳನ್ನು ಸಂಹರಿಸುವುದು ಮಾತ್ರ ರಾಜ ನೀತಿ. ಅಮಾಯಕರನ್ನು, ಮುಗ್ಧರನ್ನು, ದುರ್ಬಲರನ್ನು ಕೊಲ್ಲುವುದು ಪರಹಿಂಸೆಯಾಗುತ್ತದೆ. ವಿನಾಕಾರಣ ತೊಂದರೆ ಕೊಡದೆ ಇರುವ ಜೀವವರ್ಗವನ್ನು ಹಿಂಸಿಸುವುದು ಪರಮ ಪಾಪವೆಂಬುದು ಇಲ್ಲಿಯ ಹೊಳಹು. ಇನ್ನೊಂದು ಮುಖ್ಯವಾದ ತಾತ್ವಿಕ ಚರ್ಚೆ ಇರುವುದು ಆಹಾರ ಪದ್ಧತಿಯ ಮೇಲೆ.

ಬಡಬಗೌತಣವಿಕ್ಕುವಡೆಯೊ
ಕ್ಕುಡಿತೆ ಹಾಲೇ? ಮಂಜು ಸುರಿಯ
ಲೊಡನೆ ಕೆರೆ ತುಂಬುವುದೆ? ನೃಪ ನೀನೆನ್ನ ಭುಂಜಿಸಲು
ಒಡಲಿಗಾಪ್ಯಾಯನದೆ ಕೇಳಲೆ
ಪೊಡವಿ ಪತಿ ಬಿಡು ನನ್ನ ಮನೆಯಲಿ
ಮಡದಿ ಸುತರುಮ್ಮಳನ ನೊಡೆಂದೊರಲಿತಾ ಪಕ್ಷಿ॥

ಆಹಾರ ಪದ್ಧತಿಯಾಗಿ ಒಂದು ಪ್ರಾಣಿಯನ್ನು ಕೊಂದು ತಿನ್ನುವಲ್ಲಿ ಆಕ್ಷೇಪವಿಲ್ಲ. ಆಕ್ಷೇಪವಿರುವುದು ಹೊಟ್ಟೆ ತುಂಬುವುದಕ್ಕಾಗಿ ಪ್ರಾಣಿ ಹಿಂಸೆ ಮಾಡಬೇಕೆ ಹೊರತು ಮೋಜಿಗಾಗಿ ಅಲ್ಲ ಎನ್ನುವುದರ ಕುರಿತು. ಬಹಳ ದಿನದಿಂದ ಹಸಿದವನಿಗೆ ಒಂದು ಕುಡಿಕೆ ಹಾಲಿನಿಂದ ಏನಾದರೂ ಪ್ರಯೋಜನವಿದೆಯೆ? ಮಂಜು ಸುರಿದರೆ ಕೆರೆ ತುಂಬುವುದೆ? ಕನಕದಾಸರ ದೃಷ್ಟಿಯಲ್ಲಿ ಮಾಂಸಾಹಾರ ನಿಷಿದ್ಧವಲ್ಲ. ಆಹಾರ ಸಾಮಗ್ರಿಗಳ ಬಳಕೆಯ ಇತಿಮಿತಿಗಳ ಬಗ್ಗೆ ಅವರ ಕಾಳಜಿ ಇದೆ. ಪದ್ಯದ ಎರಡನೇ ಭಾಗದಲ್ಲಿ ಪಕ್ಷಿಯಾದರೂ ಅದಕ್ಕೆ ಸಾಂಸಾರಿಕ ಮೋಹವಿದೆ. ಮಡದಿ ಮಕ್ಕಳ ದುಃಖದ ಅರಿವಿದೆ. ಮುಂದೆ ನಳ ತನ್ನ ಹೆಂಡತಿಯನ್ನು ಅರಣ್ಯ ಮಧ್ಯದಲ್ಲಿ ಬಿಟ್ಟು ಹೋಗುವುದಕ್ಕಿರುವ ಸೂಕ್ಷ್ಮವಾದ ಆಕ್ಷೇಪ ಈ ರೂಪದಲ್ಲಿ ಪ್ರಕಟವಾಗಿದೆ. ವ್ಯಕ್ತಿ

ಬದುಕಿನಲ್ಲಿ ಸಾಂಸಾರಿಕ ತತ್ವವೂ ಮುಖ್ಯವೆಂಬ ಸಂಗತಿಯನ್ನು ಸೂಚ್ಯವಾಗಿ ತಿಳಿಸುತ್ತಾರೆ.

ಕನಕದಾಸರಿಗೆ ರಾಜನೀತಿಯ ಅರಿವಿದೆ. ಯುದ್ಧ-ಹಿಂಸೆಗಳಲ್ಲಿ ಅವರಿಗೆ ಒಲವಿಲ್ಲ. ಮನುಕುಲದ ನಾಶವೆಂದರೆ ಯುದ್ಧ, ಮನುಷ್ಯತ್ವದ ನಾಶವೆಂದೆರೆ ಹಿಂಸೆ ಎಂದೇ ಅವರು ಭಾವಿಸುತ್ತಾರೆ.

ಮರನ ಹುತ್ತವನೇರಿದರ ಸಂ
ಗರದಿ ದೈನ್ಯಂಬಡುವರಾಯುಧ
ಮುರಿದ ಬರಿಗೈಯವರ ನೀರೊಳು ಹೊಕ್ಕು ನಿಂದವರ
ತರುಣಿಯರ ಮೊರೆಗೊಂಡವರ
ದಿಬ್ಬರದಿ ಮುರಿದೋಡುವರ ನಿದ್ರಾ
ಭರದೊಳಿರ್ದರ ಕೊಲುವುದುಚಿತವೆಯೆಂದುದಾ ವಿಹಗ

ಕೊಲ್ಲುವುದು ಯಾವ ಸಂದರ್ಭದಲ್ಲಿ ಉಚಿತವಲ್ಲ ಎನ್ನುವುದಕ್ಕಿರುವ ಪಟ್ಟಿ ಇದು. ಇದು ನಮ್ಮ ಸಂಸ್ಕೃತಿಯ ಸನಾತನ ಮೌಲ್ಯ. ಯುದ್ಧ-ಹಿಂಸೆಯ ತಾಣವಾಗಿದ್ದ ಮಧ್ಯಕಾಲೀನ ರಾಜಕೀಯಕ್ಕೆ ಇಂತಹ ಮೌಲ್ಯಗಳ ಅವಶ್ಯಕತೆ ಇತ್ತು ಎನ್ನುವುದನ್ನು ಕನಕದಾಸರು ವಿವರಿಸಿದ್ದಾರೆ.

ನುಡಿಗೆ ನಾಚಿದನರಸ ಹಂಸದ
ನಡವಳಿಗೆ ಮೆಚ್ಚಿದನು ನಿನ್ನನು
ಹಿಡಿದು ಕೊಲುವವನಲ್ಲ ನಿನ್ನಾಲಯಕ್ಕೆ ಹೋಗೆಂದು

ಕೊಲ್ಲುವ-ಕಾಯುವ ಈ ಎರಡು ಕರ್ತವ್ಯಗಳಲ್ಲಿ ಅರಸು ಪ್ರಜ್ಞೆಯನ್ನು ತಿದ್ದುವ ಹಂಸದ ನಡವಳಿಕೆಗೆ ನಳ ಮಹಾರಾಜನು ನಾಚಿಕೊಳ್ಳುತ್ತಾನೆ. ಬೇಟೆಯ ಆರಂಭದಿಂದಲೂ ಜೀವಹಿಂಸೆಯನ್ನೇ ಮಾಡುತ್ತಾ ಬಂದ ನಳನಿಗೆ ಹಂಸವು ನುಡಿದ ತಿಳುವಳಿಕೆ ಮಾತು ಪ್ರಾಯಶಃ ಅವನ ಬದುಕಿನಲ್ಲಿ ಪಡೆದ ಮೊದಲ ವಿವೇಕ. ಅದಕ್ಕಾಗಿ ಅವನ ಮನಸ್ಸು ನಾಚುತ್ತದೆ. ಇದನ್ನೊಂದು ತಾತ್ವಿಕ ಸಿದ್ಧಾಂತವಾಗಿ ನಿರೂಪಿಸುವ ಅವಶ್ಯಕತೆಯೂ ಆಗ ಇತ್ತು. ಮಧ್ಯಕಾಲೀನ ರಾಜಕೀಯ-ಧಾರ್ಮಿಕ ಪ್ರಜ್ಞೆಯಲ್ಲಿ ಹೊಸ ಬದಲಾವಣೆಗಳಾಗುತ್ತಿದ್ದ ಕಾಲ ಜೈನ ವೀರಶೈವ ಧರ್ಮಗಳು ಅಹಿಂಸೆಯ ತತ್ವವನ್ನೇ ಧರ್ಮದ ವಿಸ್ತರಣೆ ಬಳಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಅದರೊಂದಿಗೆ ಸಮಸ್ಪರ್ಧಿಯಾಗಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ವೈದಿಕ ಧರ್ಮ ಅಹಿಂಸೆಯ ತತ್ವವನ್ನು ಪ್ರತಿಪಾದಿಸುವುದು ಅನಿವಾರ್ಯವೂ ಆಗಿತ್ತು. ಹಾಗಾಗಿ ಕನಕದಾಸರು ತನ್ನ ನಿಲುವನ್ನು ಸ್ಪಷ್ಟಪಡಿಸುವುದಕ್ಕಾಗಿಯೇ ಹಂಸ ದರ್ಶನ ಪ್ರಸಂಗವನ್ನು ಸೃಷ್ಟಿಸಿದ್ದಾರೆ. ಪುಣ್ಯದ ವಿವೇಚನೆಯೂ ಇದೆ.

ಪರರ ದುಃಖವ ಪರಿಹರಿಸಿ ಮಿಗೆ
ಪರರಿಗುಪಕಾರಾರ್ಥವೆಸಗಲು
ಪರಮ ಪುಣ್ಯವಿದೆಂದು ಪೇಳ್ವರು ಪಿರಿಯರಾದವರು॥

ಇನ್ನೊಬ್ಬರಿಗೆ ಉಪಕಾರ ಮಾಡುವ ಪ್ರವೃತ್ತಿ ಮನುಷ್ಯತ್ವದ ಗುಣವೆಂದು ಭಾವಿಸುವ ಕನಕದಾಸರು ಸ್ವಾರ್ಥವನ್ನು ಬದಿಗಿಟ್ಟು ವ್ಯವಹರಿಸುವ ಪರೀಕ್ಷೆಯೊಂದನ್ನು ನಳನಿಗಾಗಿ ಏರ್ಪಡಿಸುತ್ತಾರೆ.

ದಮಯಂತಿಯ ಸ್ವಯಂವರ ಪ್ರಸಂಗದಲ್ಲಿ ಇಂದ್ರಾದಿಗಳು ನಳನಲ್ಲಿ ಉಪಕಾರಕ್ಕಾಗಿ ಯಾಚಿಸುವ ಸಂದರ್ಭ ಬರುತ್ತದೆ. ದಮಯಂತಿ ಸ್ವಯಂವರ ಲೋಕೋತ್ತರವಾದುದು ಮೂರು ಲೋಕಗಳಿಂದಲೂ ವಧು ಆಕಾಂಕ್ಷಿಗಳು ವಿದರ್ಭನಗರಿಯನ್ನು ತುಂಬಿಕೊಂಡಿದ್ದರು. ರಾಜರು, ಬ್ರಾಹ್ಮಣರು, ಸಿದ್ಧವಿದ್ಯಾಧರರು, ಸುಜನರು, ಸಚಿವರು, ಋಷಿಗಳು, ಪಂಡಿತರು, ಕವಿ, ನಟ, ಗಾಯಕರು, ಮೊದಲಾದವರ ನಡುವೆ ಇಂದ್ರನು ಯಮ, ವರುಣ, ವಾಯುವಿನೊಂದಿಗೆ ಸ್ವಯಂವರಕ್ಕೆ ಬರುತ್ತಾನೆ. ಸಮ ಸ್ಪರ್ಧಿಗಳ ನಡುವೆ ನಡೆಯುವ ರಾಜಕಾರಣದ ಒಂದು ಸುಂದರ ಚಿತ್ರಣವಿದು. ಕುತೂಹಲಕಾರಿ ಪ್ರಸಂಗ. ದೇವಲೋಕದವರಿಗೂ ಮಾನವ ಲೋಕದವರಿಗೂ ಸಾಕಷ್ಟು ಅಂತರಗಳಿವೆ. ಅದನ್ನೇ ನಳ ತನ್ನನ್ನು ನೋಡಿ ಮಾತಾಡಲು ಬಂದ ದೇವೇಂದ್ರನಿಗೆ 'ನಾವು ನರರು. ನಿಮಗಂತವರೆ?' ಎನ್ನುತ್ತಾನೆ. ಈ 'ಅಂತರದ ಪ್ರಶ್ನೆಗಳು' ಎಂದಿನಿಂದಲೂ ಇವೆ. ವರ್ಗ, ವರ್ಣ, ಲಿಂಗದ ನೆಲೆಯಲ್ಲಿ ಮತ್ತೆ ಮತ್ತೆ ಚಿಂತನೆಗೆ ಒಳಪಡುತ್ತವೆ. ದೇವತೆಗಳು/ಮನುಷ್ಯರು, ಶ್ರೀಮಂತರು/ಬಡವರು, ಬ್ರಾಹ್ಮಣ–ಶೂದ್ರ ಈ ಬಗೆಯ ವೈರುದ್ಧ್ಯಗಳು ನಮಗೆ ಕಲಿಸಿದ ಪಾಠ ಶ್ರೇಷ್ಠ–ಕನಿಷ್ಠವೆಂಬ ತಾರತಮ್ಯಗಳನ್ನು ಒಪ್ಪಿಕೊಳ್ಳುವಂತೆ ಮಾಡಿರುವುದು.. ಇದೆ ನಮ್ಮ ಎಲ್ಲಾ ಸಾಮಾಜಿಕ ಅನಾಹುತಗಳಿಗೆ ಕಾರಣವಾಗಿರುವುದು. ಪ್ರಬಲ ವರ್ಗವು ದುರ್ಬಲ ವರ್ಗದ ಎಲ್ಲಾ ಹಕ್ಕು ಅಧಿಕಾರಗಳನ್ನು ಹೇಗೆ ಕಬಳಿಸುತ್ತಾ ಬಂದಿದೆ ಕೊನೆಗೆ ಬದುಕುವ ಹಕ್ಕನ್ನೂ, ಪ್ರೀತಿಸುವ ಹಕ್ಕನ್ನೂ ಎಂಬುದನ್ನು ಇಂದ್ರ–ನಳ–ದಮಯಂತಿಯ ಪ್ರಸಂಗ ನಮ್ಮ ಮುಂದಿಡುತ್ತದೆ.

ಪ್ರಾಚೀನ ಭಾರತೀಯ ಸಂಸ್ಕೃತಿ ಸಂಕಥನ ಆರ್ಯ ಮತ್ತು ಆರ್ಯೇತರ ಸಂಘರ್ಷದ ನಾನಾ ಮುಖಗಳನ್ನು ತೆರೆದಿಡುತ್ತವೆ. ಆರ್ಯರು ಅಥವಾ ದೇವತೆಗಳು ಅಂದರೆ ಸುರಲೋಕದವರು. ಭೂಲೋಕದ ಮಾನವರ ದೃಷ್ಟಿಯಲ್ಲಿ ಪ್ರಶ್ನಾತೀತರು. ಅವರು ಮಾಡುವ ಅನ್ಯಾಯಗಳನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು ಎನ್ನುವ ಪಾಠಗಳನ್ನು ನಮ್ಮ ಪುರಾಣಗಳು ಕಲಿಸುತ್ತಾ ಬಂದಿವೆ. ಇದನ್ನು ಪ್ರತಿಭಟಿಸುವ ಹಕ್ಕು ನಮಗಿಲ್ಲದಂತೆ ನಿಯಮಗಳನ್ನು ರಚಿಸಿಕೊಂಡಿವೆ. ಅವರೊಂದಿಗಿರುವ

ಅತಿಮಾನುಷ ಶಕ್ತಿ ನಮಗೆ ಭಯವನ್ನು ಹುಟ್ಟಿಸಿದೆ. ಭೀತಗೊಂಡ ಸಮುದಾಯದ ಮೇಲೆ ತಮ್ಮ ಬಲವನ್ನು ಪ್ರದರ್ಶಿಸುವುದು ಅವರಿಗಿಷ್ಟದ ಸಂಗತಿ. ಈ ನೆಲದ ಮೂಲನಿವಾಸಿಗಳಾದ ದಸ್ಯುಗಳಾದ ಅಸುರರು ಅವರನ್ನು ಪ್ರತಿಭಟಿಸಿದರು ಎನ್ನುವ ಕಾರಣಕ್ಕಾಗಿಯೇ ಅವರನ್ನು ಕೊಲ್ಲುವ ನಾನಾ ತಂತ್ರಗಳನ್ನು ಹೂಡುತ್ತಾರೆ. ಅಸುರರನ್ನು ಗೆಲ್ಲಲು ಸಾಧ್ಯವಿಲ್ಲವೆಂದು ತಿಳಿದ ಮೇಲೆ ಅವರ ದೌರ್ಬಲ್ಯಗಳನ್ನು ಬಳಸಿಕೊಂಡು ಹೆಣ್ಣು, ಹೆಂಡದ ಆಮಿಷ ಒಡ್ಡಿ ಅವರನ್ನು ನಾಶಗೊಳಿಸುವ ತಂತ್ರವನ್ನು ಸುರರು ಬಳಸಿಕೊಂಡರು. ಅವುಗಳಿಗೆಲ್ಲಾ ವೈದಿಕ ದೇವರುಗಳ 'ಸಾತ್' ಬೇರೆ. ಅಸುರರಿಗೆ ಸುರರ ಮೇಲೆ ಪ್ರತಿತಂತ್ರ ಹೂಡಲಾಗದ ಅಸಹಾಯಕತೆಯೇ ನಮ್ಮ ಸಂಸ್ಕೃತಿ ಚರಿತ್ರೆ, ಈಗ ಸುರರ ಕಲ್ಪನೆಗಳು ನಮ್ಮಲ್ಲಿಲ್ಲ. ಈಗ ಇರುವುದು ಅವರ ಪ್ರತಿರೂಪವಾದ ಭೂಸುರರ ಕಲ್ಪನೆ ನಮ್ಮಲ್ಲಿದೆ.

ಸುರ/ಭೂಸುರರ ಮುಖ್ಯ ಕಾರ್ಯತಂತ್ರ ಅಸುರರ ಅದರೆ ಸುರರಲ್ಲದವರನ್ನು (ಬ್ರಾಹ್ಮಣೇತರರು – ಕ್ಷತ್ರೀಯ, ವೈಷ್ಯ, ಶೂದ್ರ, ಅಂತ್ಯಜ) ತಮ್ಮ ಮಂತ್ರ ತಂತ್ರ ಶಕ್ತಿ ಹಾಗೂ ಕಾಣದ (ಕಣ್ಕಟ್ಟು ತಂತ್ರ) ಅತಿಮಾನುಷ ಶಕ್ತಿಗಳ ಮೂಲಕ ಭೀತಗೊಳಿಸುವುದು ಇವರ ದಂದುಗ. ಈ ಭೀತಿಯೇ ಸುರರ/ಅಸುರರ ನಡುವೆ ಅಂತರ ಸೃಷ್ಟಿಸಿದೆ. ಮನುಷ್ಯ ಮನುಷ್ಯರ ನಡುವೆ ಭಯವನ್ನು ಉತ್ಪಾದಿಸುವ ಕಾರ್ಯತಂತ್ರಗಳು ಇಂದಿಗೂ ಬೇರೆ ಬೇರೆ ರೂಪದಲ್ಲಿ ನಮ್ಮ ಸಾಮಾಜಿಕ ವಲಯದಲ್ಲಿ ಅಸ್ತಿತ್ವದಲ್ಲಿದೆ. ಇಲ್ಲಿಯ ನಾಯಕ ಸುರರ ಮೋಸ ಅರಿಯದ ಅಮಾಯಕ. 'ನಮಗೇನು ಬುದ್ಧಿಯನ್ನು ಕರುಣಿಸುವಿರಿ ಅದನ್ನು ಮಾಡುತ್ತೇನೆ' ಎಂಬಷ್ಟು ಅಸಹಾಯಕ. ಆರ್ಯೇತರ ನಿಷಧ ನಗರಿಯ ಬುಡಕಟ್ಟು ಅರಸ ಎನಿಸಿಕೊಂಡ ನಳನು ಹೆಸರಿಗೆ 'ಅರಿಭಯಂಕರ' ನಾದರೂ ಸುರರ ಮುಂದೆ ಅವನೊಬ್ಬ ದುರ್ಬಲ ಅರಸು. ಸುರರೂ ಮನುಷ್ಯನ ಬೌದ್ಧಿಕತೆಯನ್ನು ಆಕ್ರಮಿಸುವಷ್ಟು ಶಕ್ತಿವಂತರೂ ಪ್ರತಿಭಟಿಸುವ ಎಲ್ಲಾ ಸಾಮರ್ಥ್ಯವನ್ನು ಕುಗ್ಗಿಸುವ 'ಮಹಿಮಾವಂತರು'. ಪ್ರಬಲ ವರ್ಗಗಳು ದುರ್ಬಲ ವರ್ಗವನ್ನು ತನ್ನ ಸಾಮರ್ಥ್ಯಕ್ಕಾಗಿ ಹೇಗೆ ಬಳಸಿಕೊಳ್ಳುತ್ತದೆ ಎನ್ನುವುದಕ್ಕೆ ಇಂದ್ರ–ನಳನ ಮಾತುಗಳು ಸಾಕ್ಷಿ.

ಭೂತಳದೊಳಿಯ ಸತಿಯರಲಿ ರೂ
ಪಾತಿಷಯೆ ದಮಯಂತಿ ಯೆನಲಾ
ಮಾತಿನಲಿ ಮನಹೊಲದುದವಳಲ್ಲಿ ನೀ ಪೋಗಿ
ಆ ತಳೋದರಿಗುಚಿತವಚನ
ಪ್ರೀತಿ ಪೂರ್ವಕದಿಂದ ಸತಿಯಳ
ನೀ ತಿಳುಹಿಯನುಕೂಲವನು ಮಾಡೆಂದನಮರೇಂದ್ರ॥

ದಮಯಂತಿ ರೂಪದಲ್ಲಿ ಸುಂದರಿ ಎನ್ನುವ ನಾರದನ ಮಾತು ಕೇಳಿ ಇಂದ್ರ ಅವಳನ್ನು ವರಿಸುವ ಆಸೆಯಿಂದ ಬಂದ. ಜಗತ್ತಿನಲ್ಲಿ ಸುಂದರವಾಗಿರುವುದು, ಸಂಪತ್ಭರಿತವಾಗಿರುವುದು ಹೀಗೆ ಶ್ರೇಷ್ಟವೆಂದು ತಿಳಿಯಲ್ಪಟ್ಟ ಎಲ್ಲಾ ವಸ್ತು ವೈಭೋಗಗಳು ಈ ಪ್ರಬಲ ವರ್ಗಕ್ಕೆ ಬೇಕೆನ್ನುವುದೆ ರಾಜಕಾರಣ. ಹಿಂದಿನ ಆಳುವ ವರ್ಗವು ಈ ಪ್ರಬಲ ವರ್ಗದ ಪ್ರತಿನಿಧಿಯಾಗಿ ಅನುಭೋಗದ ಹಕ್ಕನ್ನು ದುರ್ಬಲ ವರ್ಗದಿಂದ ಕಸಿದುಕೊಳ್ಳತ್ತಾ ಹೋಗುತ್ತದೆ. ಎಲ್ಲಾ ಸುಂದರ ವಸ್ತುಗಳನ್ನು ಅಪೋಷಣೆಗೊಳ್ಳುವ, ಬಂಡವಾಳಶಾಹಿ ಜಗತ್ತಿಗೆ ತರ್ಪಣ ನೀಡುವ ಹಕ್ಕು ಅವರಿಗೆ ಮಾತ್ರವಿದೆ ಎಂಬುದು ಅವರ ಭಾವನೆ. ಇಲ್ಲಿಯ ಮಳೆ ಗಾಳಿ, ಖನಿಜ, ಲವಣ, ನೀರು ಎಲ್ಲಾ ಜೀವಿಗಳ ಹಕ್ಕಿನಡಿಯಲ್ಲಿ ಸಮಾನವಾಗಿ ಹಂಚಿಕೆಯಾಗಿದೆ. ಇದನ್ನು ಅನುಭೋಗಿಸುವ ಹಕ್ಕು ಸರ್ವರಿಗಿದೆ. ಇಲ್ಲಿ ದಮಯಂತಿ ಕೇವಲ ಹೆಣ್ಣಿನ ರೂಪಕವಲ್ಲ. ಭೂಮಿಯ ರೂಪಕ. ಹೆಣ್ಣು ಗಂಡಿನ ಖಾಸಗಿ ಆಸ್ತಿಯಾಗಿ ರೂಪುಗೊಂಡ ಚರಿತ್ರೆ ಹಿನ್ನೆಲೆಯಲ್ಲೆ ಭೂಮಿಯನ್ನು ಸಾರ್ವಜನಿಕ ಆಸ್ತಿ ಎನಿಸುವ ಚರಿತ್ರೆಯೂ ಹುಟ್ಟಿದೆ. ಹೆಣ್ಣು – ಭೂಮಿಯ ನಡುವಿನ ಸಂಬಂಧಾಂತರಗಳು ಈ ಬಗೆಯವು. ಬಹುರಾಷ್ಟ್ರೀಯ ಕಂಪೆನಿಗಳು ದೇಸಿಯ ಸಂಪತ್ತುಗಳ ಮೇಲೆ ಹಿಡಿತ ಸಾಧಿಸುವ ರೂಪಕವಾಗಿಯೂ ನಳಚರಿತ್ರೆಯ ಇಂದ್ರನ ಪಾತ್ರವನ್ನು ಮರು ನಿರೂಪಿಸಿಕೊಳ್ಳಬೇಕಾಗಿದೆ. ಬಹು ರಾಷ್ಟ್ರೀಯ ಕಂಪನಿಗಳು ಉದ್ಧಾರದ ಸೂತ್ರಗಳನ್ನು ಹಿಡಿದುಕೊಂಡು ವಿದೇಶದಿಂದ ಈ ದೇಶಕ್ಕೆ ಆಗಮಿಸುತ್ತಿವೆ. ತನ್ನ ವೈಭವಗಳಿಂದ ವಿಭ್ರಮಗೊಳಿಸುತ್ತಿವೆ. ದೇಶೀಯ ಸಂಸ್ಕೃತಿಯ ಎಲ್ಲಾ ಉತ್ತಮ ವಸ್ತು, ಗುಣಗಳನ್ನು ತಾನು ಹೊಂದಬೇಕೆನ್ನುವ ದುರಾಸೆಯಲ್ಲಿ ವಂಚನೆ, ಮೋಸದ ತಂತ್ರಗಳನ್ನು ಅನುಸರಿಸುತ್ತಿವೆ. ನಮ್ಮ ಸಹನೆ, ಸಹಜತೆ, ಸರಳತೆ, ಮಾರ್ದವತೆಗಳನ್ನು ಬಳಕೆಮಾಡಿಕೊಳ್ಳುವ ಎಲ್ಲಾ ಒಳ ತಂತ್ರಗಳು ಇವುಗಳಿಗೆ ತಿಳಿದಿವೆ. ನಮ್ಮ ಕೃಷಿ ಸಂಪತ್ತುಗಳನ್ನು ಖನಿಜಗಳನ್ನು ಕರಕುಶಲತೆಯನ್ನು ಕಬಳಿಸುವ ಹುನ್ನಾರವಾಗಿ ಹೊಸ ಹೊಸ ಮಾರ್ಕೆಟಿಂಗ್ ತಂತ್ರಗಳನ್ನು ಬಳಸುವ ಬಹುರಾಷ್ಟ್ರೀಯ ಕಂಪನಿಗಳಿಗೆ ರೂಪಕವಾಗಿಯೂ ಇಂದ್ರನ ಪಾತ್ರವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಿದೆ.

ಜೊತೆಗೆ ಮಧ್ಯಕಾಲೀನ ರಾಜಕೀಯ ವ್ಯಾಪಾರ ನೀತಿಗೂ, 'ದಮಯಂತಿ ಸ್ವಯಂವರ' ದ ಸಂದರ್ಭವನ್ನು ನಿರೂಪಿಸುವ ಕನಕದಾಸರ ವಿವೇಕಕ್ಕೂ ಸಂಬಂಧವಿದೆ. ಮಧ್ಯಕಾಲೀನ ರಾಜಕೀಯ ಸಂಘರ್ಷ ಒಳ ಹಾಗೂ ಹೊರ ಎಂಬ ಎರಡೂ ಆವರಣಗಳ ನೆಲೆಯಲ್ಲಿ ರೂಪಿಸಲ್ಪಟ್ಟಿದೆ. ಕರ್ನಾಟಕದಲ್ಲಿ ಪಾಳೇಗಾರಿಕೆಯ ಪ್ರಭುತ್ವಕ್ಕಾಗಿ ನಿರಂತರ ಬಂಡಾಯಗಳು ಏರ್ಪಡುತ್ತಿರುವ ಸಂದರ್ಭದಲ್ಲಿ ಒಳ ರಾಜಕಾರಣ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳಲು ಹೊಂಚು ಹಾಕುತ್ತಿದ್ದ ಸಂದರ್ಭ. ಹಾಗೆಯೇ ವ್ಯಾಪಾರದ ಉದ್ದೇಶವನ್ನು ಹಿಡಿದು ರಾಜಕೀಯ ಲಾಭಪಡೆಯಲು ಹೊರ ಆವರಣದಲ್ಲಿ

ಪ್ರಯತ್ನಿಸಲು ಪೋರ್ಚುಗೀಸರು ಸಜ್ಜಾಗುತ್ತಿರುವ ಸನ್ನಿವೇಶ. ಮುಸ್ಲಿಂ ಆಕ್ರಮಣಕಾರರು ಇನ್ನೊಂದೆಡೆ ಮುಂದೊತ್ತಿ ಬರುತ್ತಿರುವ ಆತಂಕ ಎಲ್ಲವೂ ಒಟ್ಟಾಗಿ ದೇಸಿ ರಾಜಕೀಯ ಸಂಘರ್ಷ ತಾರಕಕ್ಕೇರಿಸಿತು. ದುರ್ಬಲ ಅರಸರಿಂದ ಪ್ರಬಲರು ರಾಜಕೀಯ ಲಾಭ ಪಡೆಯುವ ಸೂಚನೆಯನ್ನು ಕನಕದಾಸರು ನೀಡುತ್ತಿದ್ದಾರೆ. ಶತ್ರು ಪಕ್ಷಗಳು ಹೀಗೆ ಒಗ್ಗೂಡಿ ಬಲಿಷ್ಟವಾಗಿ ಒಡೆದು ಆಳುವ ನೀತಿಯನ್ನು ಬೆಂಬಲಿಸುತ್ತದೆ ಎನ್ನುವುದಕ್ಕೆ ಇಲ್ಲಿ ಸ್ಪಷ್ಟ ನಿರ್ದೇಶನವಿದೆ. ವಿಜಯನಗರ ಸಾಮ್ರಾಜ್ಯವು ಮುಸ್ಲಿಂ ಅರಸರ ಒಕ್ಕೂಟ ವ್ಯವಸ್ಥೆಯನ್ನು ಎದುರಿಸಿದ ಐತಿಹಾಸಿಕ ಸನ್ನಿವೇಶಗಳನ್ನು ನೆನಪು ಮಾಡಿಕೊಳ್ಳಬಹುದು. ಇಂದ್ರನು ರಚಿಸಿಕೊಂಡ ಈ ಒಕ್ಕೂಟ ವ್ಯವಸ್ಥೆಯ ಉದ್ದೇಶ ಹೇಗಿತ್ತೆಂದರೆ

ಈತ ಪಿತೃಪತಿಯಮರಪತಿ ತಾ
ನೀತ ವರುಣನು ವಾಯುವೀತನು
ಮಾತ ಮನ್ನಿಸು ಮಾಡುನಮಗುಪಕಾರವನು ನೀನು
ಈ ತತುಕ್ಷಣದೃಶ್ಯ ವರವನು
ಪ್ರೀತಿಯಿಂದೊಲಿದಿತ್ತೆವಿಂದಿನೊ
ಳಾತಳೋದರಿಯೊಲಿವ ಹದನನು ಮಾಡಹೋಗೆಂದ

ಇಂದ್ರ ಅಗ್ನಿ, ವಾಯು, ವರುಣ ಈ ನಾಲ್ವರೂ ರಚಿಸಿಕೊಂಡ ಒಕ್ಕೂಟ ವ್ಯವಸ್ಥೆ ನಳನ ನಿಲುವನ್ನು ಛಿದ್ರಗೊಳಿಸುವಲ್ಲಿ ಸಫಲವಾಗುತ್ತದೆ. ತನ್ನನ್ನೇ ಮೆಚ್ಚಿದ ದಮಯಂತಿಯನ್ನು ಇವರಿಗೆ ಹೊಂದಿಸುವುದು ಹೇಗೆಂದು ಚಿಂತಿಸುವಾಗಲೇ ನಳ ಗಂಡು ಮನಸ್ಸಿನ ತಂತ್ರವೊಂದನ್ನು ಯೋಚಿಸುತ್ತಾನೆ. ಅತ್ತ ಪ್ರಬಲವಾದ ಇಂದ್ರ, ಅಗ್ನಿ, ವಾಯು ವರುಣನನ್ನು ಎದುರಿಸಲಾರದ ಇತ್ತ ಮನಮೆಚ್ಚಿದ ದಮಯಂತಿಯನ್ನು ಬಿಟ್ಟುಕೊಡಲಾರದ ದ್ವಂದ್ವಕ್ಕೆ ಒಳಗಾಗುವ ನಳ ಹುಡುಕುವ ಮಧ್ಯಮ ಮಾರ್ಗ, ಸ್ತ್ರೀ ಚಾರಿತ್ರ್ಯವನ್ನು ದೂಷಿಸುವುದು, ಹೀಗಳೆಯುವುದು. ಇದನ್ನು ಕೇಳಿಯಾದರು ಒಂದೊಮ್ಮೆ ದೇವತೆಗಳು ನಮಗೆ ಬೇಡ ನಿನಗೆ ಇರಲಿ ಎಂದು ಬಿಟ್ಟು ಹೋದರೆ ಹೋಗಲಿ ಎಂಬ ಆಸೆಯಲ್ಲಿ ನಳ ಸ್ತ್ರೀಕುಲವನ್ನು ದಮಯಂತಿಯೊಂದಿಗೆ ಸೇರಿಸಿಕೊಂಡು ತೆಗಳಲಾರಂಭಿಸುತ್ತಾನೆ. ಈ ತೆಗಳಿಕೆ ಮನಃಪೂರ್ವಕವಾದುದಲ್ಲ; ತೋರಿಕೆಯದು. ಈ ಸನ್ನಿವೇಶದ ಅಂತರಾರ್ಥ ತಿಳಿಯದ ಎಷ್ಟೋ ಜನ ವಿಮರ್ಶಕರು ಕನಕದಾಸರು ಹೆಣ್ಣಿನ ಗುಣವನ್ನು ಈ ರೀತಿ ವ್ಯಂಗ್ಯವಾಗಿ ಹೇಳಿದ್ದಾರೆ ಎಂದು ಅವಸರದ ತೀರ್ಮಾನ ಕೊಡುತ್ತಾರೆ. ನಾಲ್ಕು ಪದ್ಯಗಳಲ್ಲಿ ಸ್ತ್ರೀಸ್ವಭಾವವನ್ನು ನಿರೂಪಿಸುವ ಕನಕದಾಸರ ಉದ್ದೇಶ ಗಂಡು ಮನಸ್ಸಿನ ಕುತಂತ್ರವನ್ನು ಹೇಳುವುದು.

ಎಂದು ಮನದಲಿ ಮರುಗಿ ವಿನಯೊದೊ
ಳೆಂದನೆಲೆಯಮರೇಂದ್ರ ನಿಮಗಾ

ಮಂದಗಮನೆಯನೊಳಗುಮಾಡಂದೆನಗೆ ಪೇಳ್ವಿರಲ
ಹಿಂದುಗಳೆದರೆ ಮನಕೆ ಖತಿನಿಮ
ಗಿಂದು ಬಾರದೆ ಬಿಡದು ಲೋಕದಿ
ಯಿಂದುಮುಖಿಯರ ಗುಣವ ತಿಳಿಯಲಸಾಧ್ಯ ಕೇಳೆಂದ.

ದಮಯಂತಿಗೆ ಹೊಗಿ ಇಂದ್ರಾದಿಗಳನ್ನು ವರಿಸು ಎನ್ನಲು ತನಗೆ ನಾಲಿಗೆ ಇದೆಯೆ? 'ಬಾಲಕಿಯ ಬೆಸಗೊಳಲು ನಾಲಗೆಯಂತು ತನಗೆಂದ', ತನ್ನನ್ನೇ ಮೆಚ್ಚಿದ ದಮಯಂತಿಯನ್ನು ಇವರಿಗೆ ಒಪ್ಪಿಸುವುದು ಹೇಗೆಂಬ ಚಿಂತೆಯಲ್ಲಿ ಒಳಗೊಳಗೆ ಮರುಗುತ್ತಾನೆ. ಆದರೆ ಹೊರನೋಟಕ್ಕೆ ಗೋಚರವಾಗದಂತೆ ವಿನಯದಿಂದ 'ಎಲೆ ಅಮರೇಂದ್ರ, ನೀವು ನನಗೆ ಆ ಮಂದಗಮನೆಯನ್ನು ನಿಮಗೆ ಒಲಿಸಿಕೊಡುವಂತೆ ನನ್ನಲ್ಲಿ ಹೇಳುತ್ತಿದ್ದೀರಿ, ನಾನು ಆಗುವುದಿಲ್ಲವೆಂದು ಹಿಂದೇಟು ಹಾಕಿದರೆ ನಿಮಗೆ ಸಿಟ್ಟು ಬಾರದೆ ಬಿಡದು' ಎಂದು ಹೇಳುತ್ತಾ ಕಾರ್ಯ ಕಾರಣವಿಲ್ಲದ ಸಮಯ, ಸಂದರ್ಭದಲ್ಲಿ ಮಾತನಾಡುವ ಬೆಪ್ಪನಂತೆ ಹೆಣ್ಣಿನ ಗುಣ ಸ್ವಭಾವಗಳನ್ನು ದೂಷಿಸುತ್ತಾನೆ. ಈ ಭೂಲೋಕದ ಹೆಣ್ಣುಗಳ ಕೆಟ್ಟಗುಣಗಳನ್ನು ಎತ್ತಿ ಹೇಳಿ ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಾನೆ. ಕುತಂತ್ರ ಫಲಿಸದೇ ಇರುವುದು ಕಂಡು ಬಂದಾಗ ದಾರಿ ಕಾಣದೆ ದಮಯಂತಿಯ ಅಂತಃಪುರ ಪ್ರವೇಶಿಸುತ್ತಾನೆ. ನಳನ ಜೊತೆಯಲ್ಲಿ ಬರುವ ದೇವಕನ್ನಿಕೆಯರ 'ಲಂಚಾವತಾರ'ದ ಚಿತ್ರಣವೂ ಇದೆ. ದೇವತೆಗಳು ನೀಡಿದ ಅದೃಶ್ಯ ಶಕ್ತಿಯಿಂದ ದಮಯಂತಿಯ ಅಂತಃಪುರ ಪ್ರವೇಶಿಸುವ ನಳನಿಗೆ ತನ್ನ ಚರಿತ್ರೆಗಳನ್ನೇ ಆಲಿಸುವ ದಮಯಂತಿ ಕಾಣುತ್ತಾಳೆ. ಇಂದ್ರಾದಿಗಳು ಕೊಟ್ಟ ಅಖಿಲ ವಸ್ತು ಕಾಣಿಕೆಗಳನ್ನು (ಲಂಚ) ಇಟ್ಟು ಕೈ ಮುಗಿದು ನಿಂತ ಅಪ್ಸರೆಯರನ್ನು ನೋಡಿ ದಮಯಂತಿ ನೀವು ಯಾರೆಂದು ಕೇಳುತ್ತಾಳೆ. ಇಂದ್ರನನ್ನು ಮದುವೆಯಾಗೆಂದು ಆ ಅಪ್ಸರೆಯರು ದಮಯಂತಿಗೆ ಹೇಳುತ್ತಾ ಅವಳ ಮನಸ್ಸಿನಲ್ಲಿ ಪ್ರಲೋಭನೆಗಳನ್ನೊಡ್ಡುತ್ತಾರೆ, ಸುರ ಪದವಿಯೇ ಶ್ರೇಷ್ಠ ಭೂಲೋಕದ ಜನರಿಗೆ ಇಂತಹ ಭಾಗ್ಯ ಒದಗಿಬರಲು ಸಾಧ್ಯವೆ? ಸುರಪತಿಯೇ ನಿನ್ನನ್ನು ಬಯಸುತ್ತಾನೆಂದರೆ ಅದು ಸಾಮಾನ್ಯವೇ? ಹೂವನ್ನು ಹುಡುಕಿಕೊಂಡು ದುಂಬಿ ಹೋಗುವುದು ಸಹಜ ಆದರೆ ಹೂವೇ ದುಂಬಿಯ ಬಳಿ ಬರುತ್ತಿದೆ.

ಅಲರು ಪರಿಮಳದೆಡೆಗೆ ತುಂಬಿಗ
ಳೊಲಿದು ಪೋಪಂದದಲಿ ಲೋಕ ದೊ
ಳಲರು ವಿಕಸಿತವಾಗಿ ಹೋಹುದೇ ತುಂಬಿಯಿದ್ದೆಡೆಗೆ

(ಈ ಪದ್ಯದಲ್ಲಿ ಕನಕದಾಸರು ಪರಂಪರಾಗತ ಕಾವ್ಯ ಪ್ರತಿಮೆಯನ್ನು ಬದಲಿಸಿದ್ದಾರೆ. ಹೂವು–ದುಂಬಿ ಇವೆರಡರಲ್ಲಿ ದುಂಬಿ ಹೆಣ್ಣಾಗಿಯೂ, ಹೂವು ಗಂಡಾಗಿರುವ

ಪ್ರತಿಮೆಯನ್ನು ಗಮನಿಸಬೇಕು) ಎಂದು ದಮಯಂತಿಯ ಮನಸ್ಸನ್ನು ಒಲಿಸಲು ಪ್ರಯತ್ನಿಸಿದಾಗ ದಮಯಂತಿಯ ಪ್ರತಿಕ್ರಿಯೆ ಕೂಡ ನೇರ– ನಿಷ್ಠುರವಾಗಿ ಮೂಡಿ ಬರುತ್ತದೆ. 'ಚಿತ್ತವೆನಗೊಬ್ಬನಲಿ ಸಿಲುಕಿತು ಮರಳಿಪೊಡೆ ಕಮಲಾಕ್ಷಗಳವಲ್ಲ'. ದೇವವನಿತೆಯರ ಸರದಿ ಮುಗಿದ ಮೇಲೆ ಮುಂದಿನ ಸರದಿ ನಳನದು. ಅವನು ನಿಜರೂಪತಾಳಿ ಅವಳೆದುರು ಬಂದಾಗ ತಕ್ಷಣ ಇವನು ದೇವಲೋಕದವನಲ್ಲವೆಂದು ಗುರುತಿಸಿಬಿಡುತ್ತಾಳೆ. ಆದರೂ ನಳ ತಾನು ಇಂದ್ರಲೋಕದ ದೂತನೆಂದು ಇಂದ್ರನನ್ನು ವರಿಸುವುದು ಒಳ್ಳೆಯದೆಂದು ದಮಯಂತಿಯ ಮನಸ್ಸನ್ನು ಇಂದ್ರನೆಡೆಗೆ ತಿರುಗಿಸಲು ಪ್ರಯತ್ನಿಸುತ್ತಾನೆ. ಆದರೆ ದಮಯಂತಿಯು ನಿರ್ಧಾರದಲ್ಲಿ ಅಚಲ. ನಳನನ್ನೇ ವರಿಸುವೆನು ಇಲ್ಲವಾದರೆ 'ಅಸುವ ತೆರುವೆನು' ಎಂಬ ಅವಳ ಅಭಿಪ್ರಾಯ ಕಂಡು ನಳ ತನ್ನ ನಿಜ ವೃತ್ತಾಂತವನ್ನು ಹೇಳುತ್ತಾನೆ. 'ನಿನ್ನ ಮನಃ ಪರೀಕ್ಷೆಗೆ ಬಂದ ನಳ' ಎಂದು ಸತ್ಯನುಡಿದರೂ ದಮಯಂತಿ ಅನುಮಾನ ವ್ಯಕ್ತಪಡಿಸುತ್ತಾಳೆ, ದೇವಲೋಕದವರು ಕುಟಿಲ ವಿದ್ಯೆ ಬಲ್ಲವರು ಅವರನ್ನು ನಂಬುವ ಪರಿ ಹೇಗೆ ಎಂದು ದಮಯಂತಿ ಕೇಳಿದ್ದಕ್ಕೆ ನಳ ಹಂಸದ ನಿದರ್ಶನ ನೀಡುತ್ತಾನೆ.

## ದಮಯಂತಿ ಎಂಬ 'ಸ್ತ್ರೀ ಚರಿತ್ರೆ'

ಕನಕದಾಸರ 'ನಳಚರಿತ್ರೆ' ಕೇವಲ ನಳ ಕತೆಯಲ್ಲ; ಅದು ಉಜ್ವಲ ಸ್ತ್ರೀ ಚರಿತ್ರೆ. ದಮಯಂತಿ ಪಾತ್ರವನ್ನು ಉದಾತ್ತೀಕರಿಸುವ ಮೂಲಕ ಇಲ್ಲಿಯವರೆಗೆ ಇರುವ ಸಂಪ್ರದಾಯ ಶರಣತೆಯನ್ನು ಕನಕದಾಸರು ಪ್ರಶ್ನಿಸಿದ್ದಾರೆ. ಅರಸು ಚರಿತ್ರೆಯ ವೈಭವದಲ್ಲಿ ಮರೆಯಾದ ಸ್ತ್ರೀ ಸತ್ವ ಚರಿತ್ರೆಗೆ ಹೊಸ ಮೆರಗನ್ನು ನೀಡಿದ್ದಾರೆ. ಹಳಗನ್ನಡದಲ್ಲಿ ನಡುಗನ್ನಡದಲ್ಲಿ ಯಾರೂ ಕೊಡದ ಉನ್ನತಿಕೆಯನ್ನು ಸ್ತ್ರೀ ಪಾತ್ರವೊಂದಕ್ಕೆ ನೀಡುವುದರ ಮೂಲಕ ಕನಕದಾಸರು ಹೊಸ ವಿಕ್ರಮವನ್ನೇ ಸಾಧಿಸಿದ್ದಾರೆ. ಲೌಕಿಕ ನಡೆಯಲ್ಲಿ ಕಾಣಿಸುವ ಪುರಾಣ ಪಾತ್ರಗಳಾದ ಸೀತೆ, ದ್ರೌಪದಿ, ಮಂಡೋದರಿ, ಯಾರನ್ನೂ ಯಾವ ಕವಿಯೂ ಕನಕದಾಸರ ದಮಯಂತಿಯಷ್ಟು ಉಜ್ವಲವಾಗಿ ನಿರೂಪಿಸಿಲ್ಲ. ಪುರುಷ ಚರಿತ್ರೆಯ ನೆರಳಲ್ಲಿ ಚಿತ್ರಿಸುವ ಸ್ತ್ರೀ ಚರಿತ್ರೆಯ ಉದಾತ್ತತೆಯ ಅರಿವಿರುವ ಕನಕದಾಸರಿಗೆ ಸ್ತ್ರೀ ಚರಿತ್ರೆಯ ನೆರಳಿನಲ್ಲಿ ಪುರುಷ ಚರಿತ್ರೆ ಬರೆಯುವಷ್ಟು ಪುನಾರಚನೆಯ ಕೌಶಲವಿದೆ. ರಾಘವಾಂಕ ಹರಿಶ್ಚಂದ್ರ ಕಾವ್ಯದಲ್ಲಿ 'ಚಂದ್ರಮತಿ'ಯ ಪಾತ್ರ ಚಿತ್ರಿಸಿದರೂ ಕನಕದಾಸರು ದಮಯಂತಿಯ ಪಾತ್ರಕ್ಕೆ ಕೊಟ್ಟ ಮಹತ್ವವನ್ನು ರಾಘವಾಂಕ ನೀಡಿಲ್ಲ. ಹರಿಶ್ಚಂದ್ರನ ಸತ್ಯಸಂಧತೆಯ ಪರೀಕ್ಷೆಯ ಪೂರಕಪಾತ್ರವಾಗಿ ಚಂದ್ರಮತಿ ಬರುತ್ತಾಳೆಯೇ ಹೊರತು ಅವಳೊಂದು ಸ್ವತಂತ್ರ, ಸ್ವಂತಿಕೆಯ ಛಾಪನೊತ್ತಿದ ಪಾತ್ರವಾಗಿ ಕಂಡು ಬರುವುದಿಲ್ಲ. ದಮಯಂತಿಯ ವ್ಯಕ್ತಿತ್ವದ ಘನತೆ ಚಂದ್ರಮತಿಗಿಲ್ಲ. ಪತಿಭಕ್ತಿ, ಹರಭಕ್ತಿ, ಪಾತಿವ್ರತ್ಯದ ಕರುಣೆಯ ಜಲದಲ್ಲಿ ಮುಳುಗಿ ಏಳುವ ಚಂದ್ರಮತಿಗಿಂತ ಸ್ವಾಭಿಮಾನ,

ಸ್ವಾಂತಿಕೆ, ದೃಢತೆ, ಪತಿನಿಷ್ಠೆಯ ಮೌಲ್ಯ ಪ್ರಧಾನ ಪಾತ್ರವಾಗಿ ದಮಯಂತಿ ಚಂದ್ರಮತಿಗಿಂತ ಭಿನ್ನವಾಗಿ ಕಾಣುತ್ತಾಳೆ. ಕನ್ನಡ ಕಾವ್ಯ ಪರಂಪರೆಯಲ್ಲಿ ಸ್ತ್ರೀಚರಿತ್ರೆಗೆ ದಮಯಂತಿಯ ಪಾತ್ರದ ಮೂಲಕ ಮೊದಲ ಮುನ್ನುಡಿ ಬರೆದವರು ಕನಕದಾಸರು. 'ಅದು ಪರಂಪರಗತ ಸ್ತ್ರೀ ಮೌಲ್ಯವನ್ನು ಎತ್ತಿಹಿಡಿಯುವ ಪಾತ್ರವಾದರೂ ಅದರೊಡಲಲ್ಲಿ ಅಡಗಿರುವ ಸ್ತ್ರೀ ಸತ್ಯವನ್ನು ಗಮನಿಸಬೇಕು. ವೈವಾಹಿಕ ಬದುಕಿನ ಆಯ್ಕೆಯಲ್ಲಿ ಸ್ವಂತಂತ್ರಳಾಗಿರುವ ದಮಯಂತಿ ಪುರುಷ ರಾಜಕಾರಣದ ಮೋಸ ವಂಚನೆಯನ್ನು ದಿಟ್ಟವಾಗಿ ಎದುರಿಸಿದವಳು. ಅವಳ ಬದುಕಿನುದ್ದಕ್ಕು ಈ ಮಾತಿಗೆ ಹಲವು ನಿದರ್ಶನಗಳು ದೊರಕುತ್ತಾ ಹೋಗುತ್ತವೆ. ಮೆಚ್ಚಿದ ಪತಿ ಕಾಡಿನಲ್ಲಿ ಒಂಟಿಯಾಗಿ ಬಿಟ್ಟು ಹೋದಾಗಲೂ ಧೈರ್ಯಗುಂದದೆ ಆತ್ಮಶಕ್ತಿಯಿಂದ ಪರಿಸ್ಥಿತಿಯನ್ನು ನಿಭಾಯಿಸುವ ಚಾಕ ಚಕ್ಯತೆವುಳ್ಳವಳು. ಪತಿಯಿಂದ ಪರಿತ್ಯಕ್ತಳಾಗಿ ಬದುಕುವಾಗಲೂ ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳುವ ಹಂಬಲ ಹೊತ್ತು ಕಳೆದು ಹೋದ ಪತಿಯನ್ನು ಹುಡುಕಿ ತೆಗೆಯುವಲ್ಲಿ ತನ್ನ ಬೌದ್ಧಿಕ ಸಾಮರ್ಥ್ಯವನ್ನು ಮೆರೆಯುತ್ತಾಳೆ. ಗುರುತಿಸಲಾರದ ರೂಪದಲ್ಲಿರುವ ತನ್ನ ಪತಿಯನ್ನು ಕಂಡು ಹಿಡಿಯುವಲ್ಲಿ ಸಫಲಳಾಗುತ್ತಾಳೆ.

ಇತಿಹಾಸ ಅಥವಾ History ಎಂದರೆ ಅದು 'ಅವನ ಚರಿತ್ರೆ' (His-Story). ಅವಳ ಚರಿತ್ರೆಯಾಗಿ (Her Story) ನೋಡುವಲ್ಲಿ ಕನಕದಾಸರ ಕಾವ್ಯ ಶ್ರಮಿಸುತ್ತದೆ. ಮಧ್ಯಕಾಲೀನ ಇತಿಹಾಸವು ಹೇಳುವಂತೆ ಸ್ತ್ರೀಯರ ಸಾಂಪ್ರದಾಯಿಕ ಜೀವನ ಮಾದರಿಗಳಲ್ಲಿ ಹೆಚ್ಚು ಕ್ರೌರ್ಯ ತುಂಬಿರುವುದನ್ನು ಕಾಣುತ್ತವೆ. ಸಹಗಮನದಂತಹ ದುಷ್ಟ ಆಚರಣೆಗಳಿದ್ದ ಬಗ್ಗೆ ವಿದೇಶಿ ಪ್ರವಾಸಿಗರು ಬರೆಯುತ್ತಾರೆ. ಆದರೆ ಕನಕದಾಸರು ನೀಡುವ ಚಿತ್ರಣಗಳಲ್ಲಿ ಸ್ತ್ರೀ ಸಮಾಜವು ಸುಸಂಸ್ಕೃತವಾಗಿರುವಂತೆ ತೋರುತ್ತದೆ. ಪತಿಯನ್ನು ವಂಚಿಸದೇ ಇರುವ ಸ್ತ್ರೀಯರ ನಿರ್ಮಲ ಚಾರಿತ್ರ್ಯವನ್ನು ಕವಿ ಹೊಗಳುತ್ತಾನೆ.

ಪತಿಯೆಡೆಗೆ ವಂಚಿಸರು ಸತಿಯರು  
ಸುತರು ಪಿತೃಗಳ ನುಡಿಗಳನು ತಾ  
ವತಿಗಳೆಯರಾಚಾರ ವರ್ಣಾಶ್ರಮದ ಧರ್ಮದಲ್ಲಿ  
ಮತಿಯುತರು ಹರಿಭಕ್ತಿ ಭಾವ  
ವ್ರತ ನಿಯಮ ನಿಷ್ಠೆಯಲಿ ಜಸ  
ಮ್ಮತದೊಳೊಸೆದೊಪ್ಪುವರು ನೈಷಧ ನೃಪನ ರಾಜ್ಯದಲಿ

ತೀರಾ ಅಸ್ಥಿರಗೊಂಡ ಸಾಮಾಜಿಕ ವಾತವರಣದಲ್ಲಿ ಸ್ತ್ರೀ ಮೌಲ್ಯವನ್ನು ಸುಸ್ಥಿರಗೊಳಿಸುವ ದೃಷ್ಟಿಯಿಂದಲೂ ದಮಯಂತಿಯ ಲೋಕೋತ್ತರ ಚರಿತ್ರೆಯನ್ನು ನಿರೂಪಿಸಿರಲೂಬಹುದು. ಬಹುಸಂಖ್ಯಾತ ಸ್ತ್ರೀಯರೇ ದಾಸರ ಹಾಡುಗಳನ್ನು ಕೇಳುವ, ಹೇಳುವ ಕಾರ್ಯದಲ್ಲಿ ತೊಡಗಿಕೊಂಡಿರುವುದರಿಂದ ಸ್ತ್ರೀಯರ

ಆಶಯಗಳಿಗನುಗುಣವಾಗಿ ದಮಯಂತಿಯನ್ನು ನಾಯಕಿಯಾಗಿ ಚಿತ್ರಿಸಿರುವ ಸಾಧ್ಯತೆಯೂ ಇದೆ. ಒಟ್ಟಿನಲ್ಲಿ ಪುರುಷ ಪಾತ್ರ ಪೋಷಣೆಯಲ್ಲಿ ಸೊರಗಿದ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿದ ಪೂರ್ವದ ಎಲ್ಲಾ ಕವಿಗಳಿಗಿಂತ ಕನಕದಾಸರು ಭಿನ್ನವಾಗಿ ನಿಲ್ಲುತ್ತಾರೆನ್ನುವುದಂತೂ ಸ್ಪಷ್ಟ.

ನಳ ಇಲ್ಲಿ ಲೋಕವಿಖ್ಯಾತನಾದ ಅರಸನಾದರೂ ಅವನ ಪಾತ್ರ ಚಿತ್ರಣ ದಮಯಂತಿಯ ಪಾತ್ರ ಪ್ರಜ್ವಲತೆಗೆ ಸೊರಗುತ್ತದೆ. ದೇವತೆಗಳ ಮಾತನ್ನು ಮೀರಲಾರದ ಅಸಹಾಯಕತೆಯಲ್ಲಿ ತನ್ನ ಸ್ವಂತಿಕೆಯನ್ನು ದೃಢತೆಯನ್ನು, ಮರೆಯುವ ನಳ ಆತ್ಮವಿಮರ್ಶೆಗೆ ತೊಡಗಿಕೊಳ್ಳುವಲ್ಲಿ ಎಡವುತ್ತಾನೆ. ದೇವತೆಗಳ ದಾಳದಂತೆ ಭಾಸವಾಗುತ್ತಾನೆ, ದಮಯಂತಿ ಇಂದ್ರನನ್ನು ವರಿಸಲು ತಿರಸ್ಕರಿಸುವ ವಿಷಯವನ್ನು ಅಷ್ಟೇ ವಿನಯದಿಂದ ಇಂದ್ರನಿಗೆ ಬಂದು ಹೇಳಿ ತಾನು ಕರ್ತವ್ಯಪರನೆಂಬುದನ್ನು ಸಾಬೀತುಪಡಿಸಲು ಬಯಸುತ್ತಾನೆ. ಆದರೆ ದಮಯಂತಿಯ ಪಾತ್ರ ಹಾಗಲ್ಲ. ಯಾರ ಬೆದರಿಕೆ, ಪುಸಲಾಯಿಸುವಿಕೆಗೂ ಧೃತಿಗೆಡದೆ ನಳನನ್ನೇ ವರಿಸಲು ಮುಂದಾಗುತ್ತಾಳೆ ನಳನನ್ನು ಮದುವೆಯಾಗುವಲ್ಲಿ ನಳನಿಗಿಂತ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗುವವಳು ದಮಯಂತಿ. ನಳನ ಪ್ರಯತ್ನ ಇಲ್ಲಿ ಏನೇನೂ ಸಾಲದು, ಸ್ವಯಂವರ ಮಂಟಪದಲ್ಲಿ ನಳನ ವೇಷಧರಿಸಿ ನಿಂತ ಇಂದ್ರ, ಅಗ್ನಿ, ವಾಯು, ವರುಣರನ್ನು ಕಂಡು ದಮಯಂತಿ ದಂಗಾಗುತ್ತಾಳೆ. ಎಲ್ಲರನ್ನು ಉಪೇಕ್ಷಿಸಿ ಅರಮನೆಗೆ ಹಿಂದಿರುಗಿ ಬರುವ ದಮಯಂತಿಗೆ ־ರವಾದವಳು ಬ್ರಹ್ಮನ ರಾಣಿ ಸರಸ್ವತಿ ಪುರುಷ ಮೋಸದ ಮುಖವನ್ನು ನಾವರಣಗೊಳಿಸಲು ಹೆಣ್ಣು ಹೆಣ್ಣಿಗೆ ನೆರವು ನೀಡುವ ಅಪೂರ್ವ ಚಿತ್ರವೊಂದನ್ನು ಕನಕದಾಸರು ಸೃಷ್ಟಿಸುತ್ತಾರೆ. ಇಂದ್ರನನ್ನು ಭಜಿಸುವ ಉಪಾಯ ಹೇಳಿ ದಮಯಂತಿಯನ್ನು ಅಪಾಯದಿಂದ ಸರಸ್ವತಿ ಪಾರು ಮಾಡುತ್ತಾಳೆ. ನಳನೊಂದಿಗೆ ದಮಯಂತಿಯ ವಿವಾಹ ಕೈಗೂಡುತ್ತದೆ.

ಇಂದಿನ ಜಾಗತೀಕರಣದ ಚರಿತ್ರೆಯೂ ಹೀಗೆಯೇ ಇದೆ. ದೇಸೀ ಸಂಸ್ಕೃತಿಯ ಮೇಲಿನ ದಾಳಿಯನ್ನು ಎದುರಿಸಲು ದಮಯಂತಿಯಂತಹ ಮನೋ ಭೂಮಿಕೆಯೊಂದು ಸಿದ್ಧಗೊಳ್ಳಬೇಕಾದ ಅಗತ್ಯವಿದೆ. ಹಾಗಾಗಿ ನಳಚರಿತ್ರೆ ಅರ್ಥಾತ್ ದಮಯಂತಿಯ ಚರಿತ್ರೆ ಆಧುನೀಕರಣಕ್ಕೊಡ್ಡಿದ ಪ್ರತಿಕ್ರಿಯೆಯಂತೆ ಕಾಣುತ್ತದೆ. ವೇಷತೊಟ್ಟು ಇಂದ್ರಾದಿಗಳು ದಮಯಂತಿಯನ್ನು ಮೊಸ ಗೊಳಿಸಲು ಬಯಸಿದರೂ ಅವಳು ವಿಚಲಿತಳಾಗಲಿಲ್ಲ. ಜಾಗತೀಕರಣವೂ ಬಗೆಬಗೆಯ ವೇಷತೊಟ್ಟು ನಮ್ಮ ಸಂಸ್ಕೃತಿಯ ದಿಕ್ಕು ತಪ್ಪಿಸಲು ಹವಣಿಸುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳು ಬೀಸುವ ಮಾಯಾಜಾಲಕ್ಕೆ ನಮ್ಮ ದೇಸೀ ಸಂಸ್ಕೃತಿ ತಲೆಬಾಗದ ನಡೆಯಲ್ಲಿ ಮುನ್ನಡೆಯಬೇಕು. ನಮ್ಮ ಆತ್ಮಬಲವನ್ನು ಜಾಗೃತಗೊಳಿಸಬೇಕಾದ ನೆಲೆಯೊಂದನ್ನು ಸ್ತ್ರೀ ಚರಿತ್ರೆಯ ಆಕರವಾಗಿ ನೀಡುವುದು

ನಿಜಕ್ಕೂ ಬೆರಗು ಹುಟ್ಟಿಸುವಂತದ್ದು. ದೇಸೀ ತತ್ವ ಮತ್ತು ಸತ್ವ ಎರಡನ್ನೂ ಒಗ್ಗೂಡಿಸಿ ಕನಕದಾಸರು ದಮಯಂತಿಯ ಪಾತ್ರವನ್ನು ಸೃಷ್ಟಿಸಿದ್ದಾರೆ.

ಮಾರ್ಕ್ಸ್‌ವಾದಿ, ಸ್ತ್ರೀವಾದಿ, ನವ ಆರ್ಥಿಕವಾದಿ ಧೋರಣೆಗಳನ್ನು ಒಡಲಲ್ಲಿರಿಸಿಕೊಂಡು ನಳಚರಿತ್ರೆ, ವರ್ಣ ರಾಜಕಾರಣದ ಸೂಕ್ಷ್ಮ ಪ್ರಶ್ನೆಯನ್ನೂ ನಮ್ಮ ಮುಂದಿಡುತ್ತದೆ. ವಿಧಿವಾದದ ಸೆರಗ ಹಿಡಿದು ರೂಪ–ಕುರೂಪ, ಬಿಳಿ–ಕಪ್ಪು ಬಣ್ಣಗಳ ನಡುವಿನ ಸೂಕ್ಷ್ಮ ವಿಚಾರಗಳನ್ನು ಸಾಮಾಜಿಕ ವಸ್ತು ಸಂಗತಿಗಳ ವಿವರಣೆಯಾಗಿ ನೀಡುತ್ತಾರೆ. ಇಂದ್ರಾದಿಗಳಿಗೆ ದಮಯಂತಿ ಸಿಗಲಿಲ್ಲ ಎನ್ನುವ ಕ್ಷುಲ್ಲಕ ಕಾರಣವನ್ನು ಮುಂದಿಟ್ಟುಕೊಂಡು ಹೆಣ್ಣಿನ ನೆಪಒಡ್ಡಿ ಕಲಿ ಪುರುಷ ನಳನನ್ನು ಪ್ರವೇಶಿಸುತ್ತಾನೆ. 'ಸತ್ಯಜ್ಞಾನಿಯಾದ ದಮಯಂತಿ' ಜೂಜಿನಲ್ಲಿ ತನ್ನ ಪತಿ ಕಳೆದುಕೊಂಡ ರಾಜ್ಯಸಂಪದ ವಾರ್ತೆಯನ್ನು ಕೇಳಿ ಹೇಳುವ ಮಾತು ಗಮನಾರ್ಹ.

ಚಿತ್ತವಿಸು ಶಶಿಕುಲ ಶಿರೋಮಣಿ
ಹೆತ್ತವರು ಸತಿ ಸುತರು ಮನೆಮನೆ
ವಾರ್ತೆ ಬಾಂಧವ ಧರಣಿಪರ ಭೋಗೈಕ ಸಂಪದವು
ನಿತ್ಯವಲ್ಲ ಶರೀರ ಸುಖಗಳ
ನಿತ್ಯವೆಂಬುದ ತಿಳಯುತೀ ನಿಜ
ಸತ್ಯವನು ಕೈಹಿಡಿದು ಸಲಹೆಂದಳು ಸರೋಜಮುಖಿ॥

ಕ್ಷಣಿಕವಾದ ಭೋಗ ಸುಖವನ್ನು, ವೈಭೋಗವನ್ನು ಬಯಸುವ ಅರಸು ಕುಲಕ್ಕೆ ಬೀಸಿದ ಚಾಟಿ ಏಟಿನಂತೆ ಕನಕದಾಸರು ದಮಯಂತಿಯ ಮೂಲಕ ಮಾತಾಡಿದ್ದಾರೆ. ಹೆತ್ತವರು, ಸತಿ ಸುತರು, ಮನೆ, ಮನೆವಾರ್ತೆ ಬಂದುಗಳು ಭೋಗ, ವೈಭೋಗಗಳು ನಿತ್ಯವಲ್ಲ ಶರೀರ ಸುಖಗಳು ಅನಿತ್ಯ ಎನ್ನುವುದನ್ನು ಸಾರುತ್ತಾರೆ. ಸಿರಿವಂತಿಕೆಯಲ್ಲಿ ಭೋಗ ಭಾಗ್ಯದಲ್ಲಿ ಮೆರೆದ ವ್ಯಕ್ತಿ ಬೀದಿ ಬಿಕಾರಿಯಾಗುವುದು, ಸುರೂಪಿಯಾದ ಅರಸು ಕುರೂಪಿಯಾಗುವುದು. ಮಣಿಭೂಷಣಗಳಿಂದ ಮೆರೆದ ವ್ಯಕ್ತಿ ಉಡಲು ತುಂಡು ಬಟ್ಟೆ ಇಲ್ಲದ ಸ್ಥಿತಿಗೆ ಜಾರುವುದು ಇಂತಹ ವೈರುಧ್ಯಗಳ ಚಿತ್ರಣದಲ್ಲಿ ಮನುಷ್ಯತ್ವದ ಹುಡುಕಾಟವನ್ನು ಕಾಣಬಹುದು. ಪತಿಯೊಂದಿಗಿನ ಕಾನನ ವಾಸ ದಮಯಂತಿಗೆ ದೊಡ್ಡಕಷ್ಟವಾಗಿ ಕಾಣಲಿಲ್ಲ.

ನೆಳಲು ತನುವಿನ ಬಳಿಯೊಳಲ್ಲದೆ
ಚಲಿಸುವುದೆ ತಾ ಬೇರೆ ನಿಮ್ಮಡಿ
ನಳಿನದಲಿ ಸುಖದುಃಖವಲ್ಲದೆ ಬೇರೆ ಗತಿಯುಂಟೆ?
ಹಳುವವೇ ಸಾಮ್ರಾಜ್ಯ ನಿನ್ನಡಿ

ನೆಳಲಿನಲಿ ತಾನಿರುವೆನಲ್ಲದೆ
ನಿಳಯವೇ ನನಗಡವಿ ಯೆಂದೆರಗಿದಳು ಪದಯುಗಕೆ॥

'ಅಡವಿಯೇ ತನಗೆ ಮನೆ. ನಿನ್ನ ನೆರಳಿನಲ್ಲಿ ತಾನಿರುವೆ ಎನ್ನುವ ಸಾಧ್ವಿ ದಮಯಂತಿ' 'ಕಾನನವ ಸಂಚರಿಸುವೆನು ನಿಮ್ಮೊಡನೆಂದಳು' ಪತಿಯ ಸಹ ಚರ್ಯೆಗಾಗಿ ಪರಿತಪಿಸುವ ಸಂಪ್ರದಾಯಸ್ಥ ಮನೋಭಾವದ ಮಹಿಳೆಯಾಗಿ ಕಾಣುವ ದಮಯಂತಿಗೆ ಆಘಾತವಾಗಿರುವುದು, ಕಾಡಿನ ಮಧ್ಯದಲ್ಲೇ ಏಕಾಂಗಿಯಗಿ ಬಿಟ್ಟುಹೋದ ಪತಿಯ ನಂಬಿಕೆ ದ್ರೋಹದ ಕುರಿತು ನಿದ್ರೆಯಿಂದ ಎದ್ದು 'ಘೋರ ಕಾನನದೊಳಗೆ ನಂಬಿದ ನಾರಿಯನ ಬಿಸುಡುವರೆ'? ಎಂದು ರೋದಿಸುವ ದಮಯಂತಿಗೆ ದಿಕ್ಕು ಕಾಣದ ಹಾಗಾಗಿದೆ.

ಮುಡಿ ಕೆದರಿ ಹುಡಿಯೊಳಗೆ ಹೊರಳುತ
ಲೊಡಲ ನೀಡಾಡಿದಳು ಧರೆಯೊಳ
ಗಡವಿ ಪಾಲಾಗೆಂದು ಪಡೆದಳೋ ತನ್ನ ನಿಜಜನನಿ

ಆದರೂ ಗಂಡನ ವರ್ತನೆ ಶೋಕತರುತ್ತದೆಯೇ ಹೊರತು ಕ್ರೋದವನ್ನು ಹುಟ್ಟಿಸುವುದಿಲ್ಲ. ಕ್ರೂರ ಸರ್ಪದ ಬಾಯಿಗೆ ತುತ್ತಾಗುವ ಸಂದರ್ಭದಲ್ಲಿ ಬಿಲ್ಲುಗಾರನೊಬ್ಬ ದಮಯಂತಿಯನ್ನು ರಕ್ಷಿಸಿ ತನಗೆ 'ಹೆಂಡತಿಯಾಗು' ಎಂದು ಬೇಡಿಕೊಂಡಾಗ ಕೋಪಗೊಂಡು ನೀ ನನಗೆ ತಂದೆಯ ಸಮಾನವೆಂದು ನುಡಿಯುತ್ತಾಳೆ ಚೇದಿ ದೇಶದಲಿ ಸುನೀತಿಯ ಮನೆಯಲಿ ಸೈರಿಂಧ್ರಿ ತನದಲ್ಲಿ ಬದುಕುವ ಅವಕಾಶ ಪಡೆದ ದಮಯಂತಿ ಪತಿಯನ್ನು ಮರಳಿ ಪಡೆಯುವಲ್ಲಿ ತೋರುವ ಸಮಯ ಪ್ರಜ್ಞೆ, ಧೈರ್ಯ ಮೆಚ್ಚುವಂತದ್ದು.

ನಳಚರಿತ್ರೆಯನ್ನು ಅರ್ಥೈಸುವ ಪ್ರಮುಖ ತಿಳುವಳಿಕೆ ಇರುವುದು ಅದು ಸೂಚಿಸುವ ವೈರುದ್ಧ್ಯಗಳಲ್ಲಿ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಲೋಕ ಸಂಗತಿಗಳಿಗೆ ಪರ್ಯಾಯಗಳನ್ನಿಟ್ಟು ನೋಡುವುದು ಇಲ್ಲಿಯ ಕುತೂಹಲ, ರಾಜ ಸೇವಕನಾಗುವುದು, ರಾಣಿ ಸೇವಕಿಯಾಗುವುದು, ಅರಮನೆ – ಎಲೆಮನೆ, ಸುಖ – ದು:ಖ, ಸುರೂಪ– ಕುರೂಪ ಇತ್ಯಾದಿಗಳನ್ನು ಕರ್ಮಗತಿಯಾಗಿ ನೋಡುವ ಮನೋಭೂಮಿಕೆ ನಮ್ಮ ತತ್ವಜ್ಞಾನ, ಜನಪದ ತಿಳುವಳಿಕೆಯ ಭಾಗವಾಗಿದೆ. ಮುಖ್ಯವಾಗಿ ನಳಚರಿತ್ರೆ ಜನಪದ ಕಥೆಯೇ ಆಗಿದೆ. ಅದರ ಮೂಲವನ್ನು ಬುಡಕಟ್ಟು ಚರಿತ್ರೆಗಳಲ್ಲಿ ಹುಡುಕಬೇಕಾಗಿದೆ. ಬರು ಬರುತ್ತಾ ವೈದಿಕ ಮಹಾಭಾರತದ ಭಾಗವಾಗಿದೆ. ಬುಡಕಟ್ಟು ಚರಿತ್ರೆಯನ್ನು ಸಂಸ್ಕೃತೀಕರಣಗೊಳಿಸುವುದು, ಆರ್ಯ ಸಂಪ್ರದಾಯವಾಗಿ ಗುರುತಿಸುವುದು ಎಂದಿನಿಂದಲೂ ನಮ್ಮಲ್ಲಿ ನಡೆದು ಬಂದಿರುವ ಪದ್ಧತಿ. ಇಡೀ ಭಾರತದ ಚರಿತ್ರೆಯನ್ನು

ಉತ್ಪಾದನಾ ಶಕ್ತಿ ಮತ್ತು ಸಂಬಂಧಗಳ ಕ್ರಮಾನುಗತ ಪರಿಣಾಮಗಳ ವಿವರಣೆಯಾಗಿ ನೋಡಬೇಕೆನ್ನುವುದನ್ನು ಕೋಸಾಂಬಿಯವರು ಪ್ರತಿಪಾದಿಸುತ್ತಾರೆ. ಆಗ ಕೃಷಿ ಆಧಾರಿತ ಜೀವನ ವಿಧಾನವೊಂದು ಮುನ್ನೆಲೆಗೆ ಬರುತ್ತದೆ. ವೇದಗಳ ಕಾಲದಲ್ಲಿಯೂ 'ರಾಜ' 'ರಾಜ್ಯ' ವೆಂಬ ವ್ಯವಸ್ಥೆ ಇರಲಿಲ್ಲ ರಾಜ ಎಂದರೆ ಸಮುದಾಯದ ಮುಖ್ಯಸ್ಥ ಎಂದಷ್ಟೇ ಅರ್ಥ. ಕ್ರಿ.ಪೂ. ೨೦೦೦-೧೦೦೦ ದ ಮಧ್ಯಭಾಗದಲ್ಲಿ ವಲಸೆ ಬಂದ ಆರ್ಯರು, ಪಶುಪಾಲಕರು, ಯುದ್ಧದಲ್ಲಿ ನಿಪುಣರೂ ಆಗಿದ್ದರು. ಕುದುರೆ ರಥವನ್ನು ಬಳಸಿ ಯುದ್ಧ ಮಾಡುವ ನಿಪುಣತೆಯನ್ನು ಹೊಂದಿದ್ದರು. ಇಂದ್ರ, ಅಗ್ನಿ, ವರುಣ, ಸೂರ್ಯ, ವಾಯು, ಅಶ್ವಿನಿ, ಪರ್ಜನ್ಯ ಮೊದಲಾದವರೆಲ್ಲ ಆರ್ಯರ ಮುಂಖಡರು. ಆರ್ಯೇತರರೆಂದರೆ 'ದಸ್ಯು'ಗಳು, ವಣಿಕರು (ವ್ಯಾಪಾರಸ್ಥರು). ಇಂದ್ರನು ಇವರ ಸಂಪತ್ತನ್ನು ಲೂಟಿ ಮಾಡುತ್ತಾನೆ. ಇವರು ಆರ್ಯರ ಶತ್ರುಗಳೆಂದೂ ನಿರೂಪಿಸಲಾಗುತ್ತದೆ. ಇವರೊಳಗೆ ಎರಡು ಪ್ರಭೇದಗಳಿವೆ ಯಾರು ಇವರನ್ನು ಪ್ರತಿಭಟಿಸುವ ಸಾಮರ್ಥ್ಯ ಹೊಂದಿರುತ್ತಾರೋ ಅವರು 'ರಾಕ್ಷಸರು' ಯಾರಿಗೆ ಅವರನ್ನು ಪ್ರಭಟಿಸಲು ಸಾಧ್ಯವಿಲ್ಲವೋ ಅಂಥವರು ಅವರ ದೃಷ್ಟಿಯಲ್ಲಿ 'ದಾಸರು' ಸೇವಕರು.

"ಆರ್ಯರು ಕೃಷಿವರ್ಗ ಸಮಾಜವನ್ನು ರೂಪಿಸಿದ ನಂತರದಲ್ಲಿ, ಈ ದಾಸರಲ್ಲಿ ಕೆಲವರು ಶೂದ್ರರನ್ನಾಗಿಸಿ ತಮ್ಮ ಅಧಿನವಾಗಿಸಿಕೊಂಡ ಮೇಲೆ ಇವರ ಹೆಸರೇ ದೀನತೆಯನ್ನು ಸೇವಕತನದ ಸ್ವಭಾವನ್ನು ಸೂಚಿಸುವ ಪದವಾಗಿ ಬಿಟ್ಟಿತು. ಋಗ್ವೇದ ಕಾಲದಲ್ಲೇನೂ ಇಂಥ ಅರ್ಥದಲ್ಲಿ ಈ ಮಾತಿನ ಪ್ರಯೋಗವಿಲ್ಲ. ದಾಸರು ಎಂದರೆ ಆರ್ಯೇತರ ಜನ ಮಾತ್ರ. ಅವರು ಕಪ್ಪಗಿದ್ದವರು" ಎಂದು ಡಿ.ಡಿ. ಕೊಸಾಂಬಿ ಅಭಿಪ್ರಾಯ ಪಡುತ್ತಾರೆ. [೩]

ಕನಕದಾಸರ ನಳ ಚರಿತ್ರೆಯನ್ನು ಪ್ರಾಚೀನ ಭಾರತದ ಚರಿತ್ರೆಯೊಂದಿಗಿಟ್ಟು ನೋಡಿದರೆ, ಬಹಳಷ್ಟು ಸಂಗತಿಗಳು ಕುತೂಹಲ ಹುಟ್ಟಿಸುತ್ತವೆ. ನಳ ಚರಿತ್ರೆಯ ಕಥೆಯೂ ಬಹಳ ಪುರಾತನವಾದದ್ದು. ವೇದಗಳ ಕಾಲಕ್ಕೆ ಸೇರಿದ್ದು. ಪುರಾಣಗಳ ಕಾಲಕ್ಕಿಂತಲೂ ಹಿಂದಿನದು. ವೇದಗಳ ಕಾಲದ ಆರ್ಯ ಆರ್ಯೇತರ ರಾಜಕಾರಣದ ಚರಿತ್ರೆಯಾಗಿ ನಳ ಚರಿತ್ರೆಯನ್ನು ರೂಪಿಸಿದ ಹೊಳಹುಗಳು ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ನಳಚರಿತ್ರೆ ಆರ್ಯ ಮತ್ತು ಆರ್ಯೇತರ ಸಮುದಾಯಗಳ ಸಂಘರ್ಷದ ಕಥನವಾಗಿಯೂ, ಬುಡಕಟ್ಟು ಚರಿತ್ರೆಯಾಗಿಯೂ ಕಾಣಿಸುತ್ತದೆ.

ನಳ, ಭೀಮನೃಪಾಲ ಮೊದಲಾದವರು ಆರ್ಯೇತರರಾದ ಅರಸರು. ಬುಡಕಟ್ಟು ಅಥವಾ ಸಣ್ಣ ಸಮುದಾಯಗಳ ಒಡೆಯರು. ಕೃಷಿ ಪ್ರಧಾನ ಬದುಕಿನ ಶ್ರಮಿಕ

---

೩: .ಪ್ರಾಚೀನ ಭಾರತದ ಚರಿತ್ರೆ: ಡಿ.ಡಿ.ಕೊಸಾಂಬಿಯವರ ಚಿಂತನೆಗಳು ಮೂಲ: ಕೆ.ಬಾಲಗೋಪಾಲನ್ ಕನ್ನಡಕ್ಕೆ: ಎಚ್.ಎಸ್. ಶ್ರೀಮತಿ,: ಪುಟ ೬೮.

ವರ್ಗದ ಪ್ರತಿನಿಧಿಗಳು. ಆರ್ಯರ ಪ್ರತಿನಿಧಿಗಳಾದ ಇಂದ್ರ, ವರುಣ, ಅಗ್ನಿ ಮೊದಲಾದವರು ಆರ್ಯೇತರರ ನಿಷೇಧ(ಬೇಡ)ದ ಅರಸನಾದ ನಳನ ಮೇಲೆ ನಡೆಸುವ ಅಧಿಕಾರವನ್ನು ಗಮನಿಸಬೇಕು, ಕಲಿ ಪುರುಷನೂ ಆರ್ಯ ದೇವತೆಗಳಲ್ಲಿ ಒಬ್ಬ. ಆರ್ಯೇತರ ಅರಸರ ಸಂಪತ್ತನು ದೋಚುವಲ್ಲಿ ಆಸಕ್ತರಾಗಿರುವ ಇಂದ್ರ ಮೊದಲಾದ ದೇವತೆಗಳಿಗೆ ದಮಯಂತಿಯನ್ನು ನಳನಿಂದ ಬೇರ್ಪಡಿಸಲಾಗದ ಸೇಡು ಕಲಿಪುರುಷನ ರೂಪದಲ್ಲಿ ವ್ಯಕ್ತವಾಗಿದೆ.

ಅನಿಮಿಷರು ನೀವಧಿಕ ಬಲರಾ
ವನಿತೆಯನು ಕೈಕೊಳ್ಳಲಾರದೆ
ಜನಪ ನಳನೃಪಗಿತ್ತು ಬಂದಿರೆ ಹರ ಮಹಾದೇವ
ಎನಗೆ ನೇಮಿಸಿ ಕಳುಹಿನಿಮ್ಮಯ
ಮನದ ಬಯಕೆಯ ಪಲಿಸುವೆನು

ಎಂದು ಕಲಿಪುರುಷ ಇಂದ್ರನಿಗೆ ಹೇಳಿದಾಗ ಅವನು ನಳನ ಪೌರುಷದ ಕುರಿತು ಮಾತಾಡುತ್ತಾನೆ. ಆಗ ಕಲಿಪುರುಷ 'ತಹೆನಾ ವನಿತೆಯನು ಕುಹಕದಲಿ ನಳ ಭೂಪನನು ಕೆಡೆಸಿಯೆ ಕಾನನಕೆ ಕಳುಹುವೆನು' ಎಂಬ ಛಲವೊಡ್ಡಿ ತಂತ್ರವೆಸಗುತ್ತಾನೆ. 'ನಿಷಧನ ಅಡವಿಗಟ್ಟದೆ ಮಾಣೆ' ಎಂದು ಶಪಥವನ್ನು ಕೈಗೊಂಡು ನಿಷಧನಗರಿಯನ್ನು ಪ್ರವೇಶಿಸುತ್ತಾನೆ.

ಶತ್ರುವನ್ನು ಗೆಲ್ಲಲು ಅವನ ದೌರ್ಬಲ್ಯವನ್ನು ಬಳಸುವ ಉಪಾಯ ಆರ್ಯರಿಗೆ ಬಹಳ ಹಿಂದೆಯೆ ಗೊತ್ತಿದ್ದ ಸಂಗತಿ. ಇಲ್ಲಿಯೂ ನಳನಿಗಿರುವ ದ್ಯೂತದ ನೆವವೊಡ್ಡಿ ಪುಷ್ಕರನ ಮೂಲಕ ಕಲಿಪುರುಷ ತನ್ನ ಕಾರ್ಯ ಸಾಧಿಸುತ್ತಾನೆ. 'ನಿಷಧನ ಕಿತ್ತು ಬಿಸುಡುವೆ' ಎನ್ನುವುದೇ ಅಲ್ಲಿಯ ರಾಜಕಾರಣ. ಪುಷ್ಕರನೂ ಒಬ್ಬ ಆರ್ಯೇತರನಾದ ರಾಕ್ಷಸ ಅರಸು. ಬ್ರಾಹ್ಮಣ ವೇಷದಲ್ಲಿ ಬಂದ ಕಲಿಪುರುಷ ಪುಷ್ಕರನೊಂದಿಗೆ ಸೇರಿ ನಳನನ್ನು ಜೂಜಿನಲ್ಲಿ ಸೋಲಿಸುವುದರಲ್ಲಿ ಸಫಲನಾಗುತ್ತಾನೆ. ರಾಜ್ಯ ಅಥವಾ ಕಾಡು ಇವೆರಡರಲ್ಲಿ ಗೆದ್ದವನಿಗೆ ರಾಜ್ಯ ಸೋತವನಿಗೆ ಕಾಡು. ಕಲಿಪುರುಷನ ಮೋಸದಿಂದ ನಳ ಸೋಲುವಂತಾದುದು ರಾಜ್ಯವನ್ನು ಕಳೆದುಕೊಂಡು ಸತಿ ಸಹಿತ ಅಡವಿ ಪಾಲಾಗುವುದು ಮುಂದಿನ ಕಥೆ.

ಆರ್ಯ-ಆರ್ಯೇತರ ಅರಸರ ಪ್ರಾಚೀನ ಚಾರಿತ್ರಿಕ ಆಕರವಾಗಿ ನಿರೂಪಿಸುವ ನಳ ಚರಿತ್ರೆಯಲ್ಲಿ 'ಕಾಡು' ಮಾನವ ಜೀವನದ ಅವಸ್ಥೆಗಳ ಬದಲಾವಣೆಗೆ ಕಾರಣವಾಗುವುದನ್ನು ಕಾಣಬಹುದು. ಅರಸ ಅಲೆ ಮಾರಿಯಾಗುವ ಈ ಬದಲಾವಣೆ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಜಗನ್ಮೋಹನ ಪಕ್ಷಿಗಳು ಉಟ್ಟ ಹಚ್ಚಡವನ್ನು

ಕಸಿದೊಯ್ದಾಗ ಬೆತ್ತಲೆಯಾಗಿ ನಿಂತ ಅರಸನಿಗೆ ದಮಯಂತಿ ತನ್ನ ಸೆರಗು ಹರಿದು ನಿರ್ವಾರಣದಲ್ಲಿ ನಿಂತ ಪತಿಯ ಮಾನ ಮುಚ್ಚುತ್ತಾಳೆ. ಕಾಡಿನಲ್ಲಿ ದಮಯಂತಿಯನ್ನು ಬಿಟ್ಟು ನಳ ನಡೆದಾಗ ಅವಳಿಗೆ ವಣಿಕರು ಸಿಗುವೂದೂ ಕೂಡ ವೇದಪೂರ್ವ ಸಾಂಸ್ಕೃತಿಕ ಚಹರೆಗಳನ್ನು ನೆನಪಿಸುತ್ತದೆ.

**ವರ್ಣರಾಜಕಾರಣ:** 'ವರ್ಣ' ಅಥವಾ 'ಬಣ್ಣ' ಆರ್ಯರನ್ನು ಆರ್ಯೇತರರನ್ನು ಪ್ರತ್ಯೇಕಿಸುವ ಪ್ರಮುಖ ಮಾನದಂಡ. ನಮ್ಮ ದೇಶದಲ್ಲಿ ಪೂರ್ವಕಾಲದಿಂದಲೂ ವರ್ಗ, ವರ್ಣ, ಲಿಂಗದ ಕಾರಣದಿಂದ ತಿಕ್ಕಾಟಗಳು ನಡೆಯುತ್ತಲೇ ಇದ್ದವು. ಬ್ರಿಟೀಷರು ಭಾರತೀಯರನ್ನು ಆಳಲು ಬಯಸಿದ್ದೂ ಕೂಡ ಈ ಬಣ್ಣದ ರಾಜಕಾರಣದಿಂದಲೇ ಎಂಬುದು ಗಮನಾರ್ಹ. ದೇಶೀಯ ಚರಿತ್ರೆಯುದ್ದಕ್ಕೂ ಕಪ್ಪು ಬಿಳಿ, ಮೇಲು-ಕೀಳಿನ ಪರಿಕಲ್ಪನೆಯನ್ನು ತಂದವರೆ ಆರ್ಯರ ಪ್ರತಿನಿಧಿಗಳಾದ ಪುರೋಹಿತಶಾಹಿಗಳು. ಈ ಕಾರಣದಿಂದ ಉಂಟಾದ ಶೋಷಣೆಗಳು ಪ್ರಧಾನವಾಗಿ ಗೋಚರಿಸುತ್ತದೆ, ವರ್ಣ ತರತಮ ನೀತಿಗಳು ಇಂದಿಗೂ ಬಿಡಿಸಲಾರದ ಕಗ್ಗಂಟಾಗಿ ದೇಶವನ್ನು ಹಿಂಸಿಸುತ್ತಿದೆ. ವರ್ಣ ಮೊದಲು ಅನಂತರ ವರ್ಗ,ಲಿಂಗ ವಿಷಯಗಳಲ್ಲಿ ಮನುಷ್ಯ ಮನುಷ್ಯರಿಗೆ ತೋರಿದ ಹಿಂಸೆ, ಅನಾದರ, ಅಧೀನತೆಗೆ ತಂದುಕೊಳ್ಳುವ ಭ್ರಾಂತಿಯೆ ಈ ದೇಶದ ಚರಿತ್ರೆ. ಮೇಲು-ಕೀಳು, ಬ್ರಾಹ್ಮಣ-ಶೂದ್ರ, ಶ್ರೀಮಂತ-ಬಡವ ಈ ಮೂರು ನೆಲೆಯಲ್ಲಿ ವರ್ಗ ವಿನ್ಯಾಸವಿದ್ದರೆ ಕಪ್ಪು-ಬಿಳಿ, ಶ್ರೇಷ್ಟ-ಕನಿಷ್ಟ ಎಂಬುದರ ಮೇಲೆ ವರ್ಣ ರಾಜಕಾರಣವಿದೆ. ಈ ವರ್ಗ ವ್ಯವಸ್ಥೆ ರೂಪುಗೊಳ್ಳಲು ಕಾರಣನಾಗಿರುವುದು ವರ್ಣ ವ್ಯವಸ್ಥೆ ಎನ್ನುವುದನ್ನು ಮರೆಯುವ ಹಾಗಿಲ್ಲ. ಶೂದ್ರರು ಗುಲಾಮರಾಗುವುದು, ಸೇವಕರಾಗುವುದು ವರ್ಗ, ವರ್ಣವ್ಯವಸ್ಥೆಯ ರಾಜಕಾರಣದಿಂದಲೇ ಹೊರತು ಗುಲಾಮ ವ್ಯವಸ್ಥೆಯಿಂದಲ್ಲ. ಕಾಡುಗಳನ್ನು ದಹಿಸಿ, ಕೃಷಿ ಯೋಗ್ಯವಾಗಿಸಿಕೊಂಡು, ಕಬ್ಬಿಣಗಳನ್ನು ಬಳಸಿ ಭಾರವಾದ ನೇಗಿಲುಗಳನ್ನು ತಯಾರಿಸಿಕೊಂಡು, ಎತ್ತುಗಳನ್ನು ಹೂಡಿ ಬೆಳೆ ತೆಗೆಯುತ್ತಾ ಬೆಳದು ಬಂದ ಸಾಮಾಜಿಕ ಜೀವನದಲ್ಲಿ ಉತ್ಪಾದನಾ ಶಕ್ತಿಗಳಲ್ಲಿ ಉಂಟಾದ ಬದಲಾವಣೆಗಳಿಂದಲೇ ವರ್ಗವ್ಯವಸ್ಥೆ ರೂಪುಗೊಂಡಿತು. ಆರ್ಯರ ಸಮಾಜದಲ್ಲಿ ಹೆಚ್ಚುವರಿ ಉತ್ಪಾದನೆಯನ್ನು ದಕ್ಕಿಸಿಕೊಳ್ಳಲು ಮೂರು ವರ್ಗಗಳು ಬೆಳೆದವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ. ಈ ಮೂರೂ ವರ್ಗಗಳ ಸೇವೆಯನ್ನು ಮಾಡುತ್ತಾ, ಪಶುಗಳನ್ನು ಮೇಯಿಸುತ್ತಾ, ದಾಸರಾಗಿ, ಸೇವಕರಾಗಿ ಬದುಕಿದ ವರ್ಗವೇ ಶೂದ್ರವರ್ಗ. ಆರ್ಯರು ತಮ್ಮ ಭೂಮಿಯನ್ನು ತಮ್ಮ ವೈಯಕ್ತಿಕ ಆಸ್ತಿ ಎಂದು ಪರಿಗಣಿಸಿ ಭೂಮಿಯ ಮೇಲಾಗಲಿ, ಪಶುಗಳ ಮೇಲಾಗಲಿ ದಾಸರು ಯಾವುದೇ ಬಗೆಯ ಹಕ್ಕುಗಳನ್ನು ಸಾಧಿಸಲು ಸಾಧ್ಯವಾಗದಂತೆ ಮಾಡುವ ಎಲ್ಲಾ ಪ್ರಯತ್ನಗಳನ್ನು ಅವರು ಮಾಡಿದರು.

ಶೂದ್ರರು, ದಾಸರು, ಸೇವಕರು ಕಪ್ಪು ಬಣ್ಣದವರು. ಋಗ್ವೇದದಲ್ಲಿ ಆದಿಯಲ್ಲಿರುವ

ಐದು ಸಮುದಾಯಗಳ ಹೆಸರು ಹೇಳಿದೆ. ಅವರಲ್ಲಿ ಯಾದವರು ಒಬ್ಬರು. ಯಾದವರ ಕುಲದಲ್ಲಿ ಕಪ್ಪು ಬಣ್ಣದ ಕೃಷ್ಣ ಬಣ್ಣದವರು ಕುದುರೆ, ಒಂಟೆಗಳನ್ನು ಪಳಗಿಸುವುದರಲ್ಲಿ ನಿಸ್ಸೀಮರು ವಶು ಅಶು ಎಂಬ ಪುರೋಹಿತ ಬಲ್ಬೂತ, ತರುಕ್ಷ ಎಂಬ ದಾಸರಿಂದ ನೂರು ಒಂಟೆಗಳನ್ನು ದಕ್ಷಿಣೆಯಾಗಿ ಪಡೆದು ಅವರನ್ನು ಹೊಗಳಿದ್ದಾನೆ ಎಂದು ಕೊಸಾಂಬಿಯವರು '*Urwasi and puurava, myth and Reality*' ಕೃತಿಯಲ್ಲಿ ಉಲ್ಲೇಖಿಸಿ ಚರ್ಚಿಸುತ್ತಾರೆ. ಮಾತೃ ಮೂಲೀಯ ಸಂಸ್ಕೃತಿ ಪ್ರತಿಪಾದಕರಾದ ಈ ಆರ್ಯೇತರರು ವರ್ಣದ ಕಾರಣದಿಂದಾಗಿ ಕೀಳು ಎಂದು ಭಾವಿಸಲ್ಪಡುತ್ತಿದ್ದರು ಶ್ರಮಿಕ ವರ್ಗದವರನ್ನು ಅಧೀನವಾಗಿಸಿಕೊಂಡು ಅವರನ್ನು ಶೂದ್ರರೆಂದು ಕರೆದು ಅವರಿಂದ ಕೂಲಿ ಮಾಡಿಸಿಕೊಳ್ಳಲು ಅನುಕೂಲವಾಗುವ ವರ್ಣವ್ಯವಸ್ಥೆಯನ್ನು ಹುಟ್ಟು ಹಾಕುವಲ್ಲಿ ಈ ಪುರೋಹಿತರದ್ದು ಮುಖ್ಯ ಪಾತ್ರ.

ಕುತೂಹಲದ ಸಂಗತಿ ಎಂದರೆ ಪೂರ್ವ ಭಾರತದ ಆದಿವಾಸಿಗಳೆಂದು ಕರೆದುಕೊಂಡ ನಿಷಾದರು ಕಪ್ಪು ಬಣ್ಣ ಮತ್ತು ಚಪ್ಪಟೆ ಮೂಗು ಹೊಂದಿರುವವರು. ಭಾರತದ ಮೂಲ ನಿವಾಸಿಗಳಾಗಿ ಗುರುತಿಸಿಕೊಂಡ ಇವರು ವೇದ ಪೂರ್ವಕಾಲದಿಂದಲೇ ಇದ್ದವರು. ಈಗ ಇವರನ್ನು ಆಸ್ಟ್ರೀಕ್ ವರ್ಗದ ಜನ ಅಥವಾ ಕೋಲ್-ಮುಂಡಾ ಜನವರ್ಗವೆಂದು ಗುರುತಿಸುತ್ತೇವೆ. ೧೫೦೦ ವರ್ಷಗಳ ಹಿಂದಿನಿಂದಲೂ ಬೇರೆ ಬೇರೆ ಹೆಸರುಗಳಿಂದ ಇವರು ಗುರುತಿಸಿಕೊಂಡು ಬಂದಿದ್ದಾರೆ. ನಿಷಾದರು, ಬೇಡರು, ಕಿರಾತರು, ಶಬರರು, ಪುಳಿಂದರು, ಬೇಡರು, ಭಿಲ್ಲರು, ಕೊಲ್ಲರು ಇತ್ಯಾದಿ. ಸ್ವಭಾವತಃ ಇವರು ಆಕ್ರಮಣಕಾರಿಗಳಲ್ಲ. ಇನ್ನೊಬ್ಬರು ತಮ್ಮ ಮೇಲೆ ಎರಗಿ ಬಂದಾಗ ಮಾತ್ರ ಸುಮ್ಮನೆ ಬಿಡುವವರಲ್ಲ. ಹಿಡಿದ ಕಾರ್ಯವನ್ನು ಬಿಡದೆ ಸಾಧಿಸುವ ಛಲವುಳ್ಳವರಾಗಿದ್ದಾರೆ. ಯಾವುದನ್ನೂ ಪ್ರಶ್ನಿಸದೆ ಸುಲಭವಾಗಿ ನಂಬುವವರು. ಅವರದ್ದು ಪ್ರಣಯಶೀಲ ಪ್ರವೃತ್ತಿ. ಕುಟುಂಬ ವ್ಯವಸ್ಥೆಗೆ ಬದ್ಧರಾದವರು.[೪] ರಾಜ್ಯ, ಆಯುಧ, ಸಂಪತ್ತು, ವಸ್ತ್ರ, ಒಡವೆಗಳನ್ನು ಕಳೆದುಕೊಂಡು ಅಡವಿಗೆ ಬಂದ ನಳ ಅರಣ್ಯವಾಸಿ ಸಮುದಾಯಗಳ ರಾಜ. ನಿಷದ ರಾಜ್ಯದ ಆರ್ಯೇತರ ಅರಸು. ಕಾಡಿನಲ್ಲಿ ಹುಟ್ಟಿದ ಕಿಚ್ಚಿನ ಪರಿಣಾಮವಾಗಿ ಸುಟ್ಟು ಹೋಗುತ್ತಿದ್ದ ಉರಗಪತಿ ಕಾರ್ಕೋಟಕನನ್ನು ನಳ ಕಾಪಾಡಿದ. ಅದಕ್ಕೆ ಪ್ರತಿಯಾಗಿ ಕಾರ್ಕೋಟಕನು ನಳನನ್ನು ಕಚ್ಚಿದ್ದರಿಂದ ನಳನ ಮೈ ಕಪ್ಪು ಬಣ್ಣಕ್ಕೆ ತಿರುಗಿಸಿತು. 'ನೃಪತಿಯ ಪರಮತೇಜದ ದೇಹಕೆಟ್ಟಿತು ವಿಕೃತ ರೂಪವಾಗಿ' ಎಂದು ಕವಿ ಸನ್ನಿವೇಶವನ್ನು ವರ್ಣಿಸುತ್ತಾನೆ.

೪. ಡಾ. ಹಂ.ಪ. ನಾಗರಾಜಯ್ಯ; ಕಡೆಗೋಲು-ವಿಭಿನ್ನ ಭಾಷಾ ಸಂಸ್ಕೃತಿ ವರ್ಗಗಳ ಕಾಣಿಕೆ, ಪುಟ: ೧೫೩

ದೊಡ್ಡ ಹೊಟ್ಟೆಯ ಗೂನು ಬೆನ್ನಿನ
ಅಡ್ಡ ಮೋರೆಯ ಗಂಟು ಮೂಗಿನ
ದೊಡ್ಡ ಕೈ ಕಾಲುಗಳ ಉದುರಿದ ರೋಮಮೀಸೆಗಳ
ಜಡ್ಡು ದೇಹದ ಗುಜ್ಜುಗೊರಲಿನ
ಗಿಡ್ಡು ರೂಪಿನ ಹರಕು ಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ॥

ನಳ ಅರಸುತನದಿಂದ ಸೇವಕತನಕ್ಕೆ ಸಜ್ಜುಗೊಳಿಸುವ ವರ್ಣರಾಜಕಾರಣದ ಮೂಲ ಶೋಧ ಇಲ್ಲಿಂದಲೆ ಆರಂಭವಾಗುತ್ತದೆ. ಇದರ ಮುಖ್ಯ ಸೂತ್ರಧಾರಿ ಅಗ್ನಿಯೇ. ವನ ಸಂಸ್ಕೃತಿಯ ಪ್ರತಿನಿಧಿಗಳಾದ ನಳ, ಕಾರ್ಕೋಟಕರಿಬ್ಬರು ಶೋಷಿತ ವರ್ಗಕ್ಕೆ ಸೇರಿದ ವನ್ಯ ಸಂಸ್ಕೃತಿಯ ಪ್ರತಿಪಾದಕರು. ನಳನ ವರ್ಣ ಬದಲಾವಣೆ ಅನುಕೂಲತೆಯ ದೃಷ್ಟಿಯಿಂದ ಇಲ್ಲಿ ಅನಿವಾರ್ಯ. ರೈತನ, ಶ್ರಮಿಕನ ಕಷ್ಟಗಳು ಪ್ರಭುತ್ವಕ್ಕೆ ತಿಳಿಯಬೇಕಾದರೂ ಜನ ಸಾಮಾನ್ಯರ ಬದುಕಿನ ವೇಷ ಹಾಕುವುದು ಅಗತ್ಯವಾಗಬೇಕು. ಅರಸ ಶ್ರಮಿಕನಾಗಬೇಕಾದರೆ ಕಪ್ಪು ಬಣ್ಣದವನಾಗಬೇಕು. ಹಾಗಾಗಿಯೇ 'ಮಾರನಾಕಾರದ ನೃಪಾಲಕ ಕ್ರೂರರೂಪಾದನು'. ಈ ಕ್ರೂರ ರೂಪ ಅವನಿಗೆ ಉಪಕಾರವನ್ನುಂಟು ಮಾಡಲಿದೆ ಎಂದು ಕಾರ್ಕೋಟಕ ನುಡಿಯುತ್ತಾನೆ.

ಏಕೆ ನೃಪತಿ ವೃಥಾ ಮನೋವ್ಯಥೆ
ಕಾಕಬಳಸಲು ಬೇಡ ನೀನವಿ
ವೇಕಿಯೇ ಸಾಕಿನ್ನು ನಿನಗುಪಕಾರ ವಂಜದಿರು
ಲೋಕ ನಿನ್ನನು ಕಾಣದಂತಿರ
ಬೇಕೆನುತಲೇರಿಸಿದೆ ಗರಳವ
ನೇಕವುಪಕಾರಂಗಳವದರಿಂದ ನಿನಗೆಂದ॥
    ಗರಳವಿದು ಸರ್ವಾಂಗದಲಿ ಸಂ
    ಚರಿಸುತಿಹ ಪರಿಯಂತ ರಿಪುಗಳ
    ಶರಜಲಾಗ್ನಿ ಭುಜಂಗರೋಗಾದಿಗಳ ಭಯವಿಲ್ಲ
    ನಿರುತವಿದು ವಜ್ರಾಂಗಿ ಬೇಡಿ
    ನ್ನರಸ ಚಿಂತಿಸಬೇಡ ಕಾರ್ಯದ
    ಹೊರಗೆ ತಾನಿದು ಬೇರೆ ಭಯ ಬೇಡಿನ್ನು ನಿನಗೆಂದ॥

ವನ ಸಂಸ್ಕೃತಿ, ಕೃಷಿ ಸಂಸ್ಕೃತಿ ಮನುಷ್ಯನ ದೇಹವನ್ನು ಸುಸ್ಥಿರ, ದೃಢವಾಗಿಸುವ ಶಕ್ತಿಹೊಂದಿದೆ ಎನ್ನುವ ಸೂಕ್ಷ್ಮತೆಯನ್ನೆಲ್ಲ ಅರ್ಥೈಸಿಕೊಳ್ಳಬೇಕು. ಇದು ಗರಳ ಅಂದರೆ ವಿಷ. ಆದರೆ ಸಾಯಿಸುವ ವಿಷವಲ್ಲ; ಬದುಕಿಸುವ ಬಲಿಷ್ಠವಾಗಿಸುವ ವಿಷ. ಇದನ್ನು

ವಿಷವೆಂದು ಕರೆಯುವುದಕ್ಕಿಂತ ನಾಟಿ ಔಷಧವೆನ್ನುವುದು ಸೂಕ್ತ. ಶತ್ರುಗಳ ಆಕ್ರಮಣದಿಂದ ಬದುಕಿಕೊಳ್ಳಲು ಇದು ಪ್ರಯೋಜನಕಾರಿಯಾದ ಔಷಧ. ಈ ಶತ್ರುಗಳಾರು? ವೈರಿಗಳ ಬಾಣ, ಜಲ, ಅಗ್ನಿ, ಭುಜಂಗಾದಿಗಳ ಭಯವಿಲ್ಲ; ರೋಗಾದಿಗಳ ಹೆದರಿಕೆ ಇಲ್ಲ. ಇದು ವಜ್ರ ಸದೃಶ ಶರೀರವನ್ನು ನಿರ್ಮಿಸುವ ಆಯುರ್ವೇದಿಯ ಜೀವಸಾರ ಎನ್ನುವುದು ಕಾರ್ಕೋಟಕನ ಅಭಿಪ್ರಾಯ. ಶತ್ರುಗಳಿಂದ ತಪ್ಪಿಸಿಕೊಳ್ಳಲು ಇಂತಹ ಪ್ರತಿತಂತ್ರಗಳನ್ನು ಹೂಡುವುದು ಆರ್ಯೇತರ ರಾಜರಿಗೆ ಅನಿವಾರ್ಯವೂ ಆಗಿತ್ತು. 'ಕಾರ್ಯದ ಹೊರಗೆ ತಾನಿದು ಬೇರೆ'. ಈ ಮಾತುಗಳನ್ನು ಗಮನಿಸಿದರೆ ನಳನ ವರ್ಣ ಪಲ್ಲಟಕ್ಕೆ ಶತ್ರು ಭಯವೂ ಒಂದು ಕಾರಣವಾದರೆ ಯಾರೂ ಗುರುತಿಸದಂತೆ ಸಮಯ ಸಾಧಿಸುವುದಕ್ಕೂ, ಅಜ್ಞಾತದಲ್ಲಿರುವುದಕ್ಕೂ, ಸೇವಕತನ ಕೈಗೊಳ್ಳುವುದಕ್ಕೂ ಇದು ಪೂರಕ. ವರ್ಣಪಲ್ಲಟ, ನಾಮಪಲ್ಲಟಗಳ ಮೂಲಕ ನಳಮಹರಾಜ ಬಾಹುಕನೆಂಬ ಅಭಿಧಾನದಿಂದ ಋತುಪರ್ಣನ ರಾಜ್ಯವನ್ನು ಪ್ರವೇಶಿಸುತ್ತಾನೆ.

ಸೇವಕನಾಗಿ ಬದುಕುವುದನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಕುದುರೆಯನ್ನು ಪಳಗಿಸುವುದು, ಸವಾರಿಮಾಡುವುದು ಮೊದಲಾದ ಕಾಡುವಿದ್ಯೆಗಳಲ್ಲಿ ಪರಿಣಿತನಾದ ನಳನಿಗೆ ಅಶ್ವಹೃದಯ ವಿದ್ಯೆ ಗೊತ್ತು. ಋತುಪರ್ಣನಿಗೆ ಅಕ್ಷ ಹೃದಯ(ಜೂಜಿನ) ವಿದ್ಯೆ ಗೊತ್ತು. ಕಾಡಿಗನಾದ ನಳನನ್ನು ನಾಡಿಗರು ಮೋಸಗೊಳಿಸಿದ್ದು ಅಕ್ಷ ಹೃದಯ (ಜೂಜು ವಿದ್ಯೆ)ದಿಂದ. ಈ ವಿದ್ಯೆ ನಳನಿಗೆ ತಿಳಿದಿಲ್ಲ. ಹಾಗಾಗಿ ಅವನು ಸೋಲಬೇಕಾಯಿತು. ಋತುಪರ್ಣ ಮತ್ತು ನಳ ಪರಸ್ಪರ ಸ್ನೇಹ ಸೌಹಾರ್ದತೆಯ ಮೂಲಕ ತಮ್ಮಲ್ಲಿರುವ ವಿದ್ಯೆಯನ್ನು ವಿನಿಮಯ ಮಾಡಿಕೊಳ್ಳಬೇಕಾದುದು ಒಂದು ತಂತ್ರವೇ ಆಗಿತ್ತು. ಈ ಮೂಲಕ ಪುಷ್ಕರನಿಂದ ರಾಜ್ಯವನ್ನು ಪುನಃ ಪಡೆದುಕೊಳ್ಳುವ ಉದ್ದೇಶ ಸ್ಪಷ್ಟವಾಗಿದೆ. 'ಪುಷ್ಕರನ ಗೆಲಿದುನ್ನತದ ರಾಜ್ಯದ ಸಿರಿ ಮಿಗಿಲು ಸಾಮ್ರಾಜ್ಯವಾಳುವೆ' ಎಂಬ ಕಾರ್ಕೋಟನ ಮಾತಿನ ಸತ್ಯದ ಹಿಂದೆ ಇಷ್ಟೆಲ್ಲಾ ವಿಚಾರಗಳಿವೆ. ಪ್ರಾಚೀನ ಭಾರತದಲ್ಲಿ ವರ್ಣಾಶ್ರಮ ಧರ್ಮದ ಪಾಲನೆ ಎಷ್ಟು ವ್ಯವಸ್ಥಿತವಾಗಿತ್ತು ಎನ್ನುವುದನ್ನು ಕನಕದಾಸರು,

> ಅರಸುಗಳು, ಭೂಸುರರು ಮಿಗೆ ವೈ
> ಶ್ಯರು ಚತುರ್ಥರುನಾಗರೀಕದ
> ಪುರಜನರು

ಎಂದು ಋತುಪರ್ಣನ ಅಯೋಧ್ಯೆಯ ನಗರವನ್ನು ವರ್ಣಿಸುತ್ತಾರೆ. ಈ 'ಚತುರ್ಥರು' ಶೂದ್ರರು ಸೇವಕನಾಗುವುದಕ್ಕೆ ಯೋಗ್ಯರು. ರಾಜನಾಗುವುದಕ್ಕಲ್ಲ. ದೈಹಿಕವಾಗಿ ಕಪ್ಪು

ಶರೀರವುಳ್ಳ, ಕುರೂಪಿಯೂ, ಆಗಿರುವ ನಳ ಋತುಪರ್ಣನಲ್ಲಿ ಒಂದು ಹೇಳಿಕೊಳ್ಳುವ ಮಾತು,

ಅವನಿ ಪತಿ ಕೇಳ್ನಿಮ್ಮ ಪದಕಮ
ಲವನು ಭಗಿಸುವೆ ಜೀಯ ಚಿತ್ತದಿ
ಸವಡಿನುಡಿ ತನಗಿಲ್ಲ ಬಾಹುಕನೆಂಬುದಭಿಧಾನ.
ಭುವನದೊಳು ತಾನಶ್ವಕುಲ ಹೃದ
ಯವನು ಬಲ್ಲೆನು ಶಾಕ ಪಾಕದಿ
ಸವಿಗೊಳಿಪ ವರವಿದ್ಯೆ ತನಗುಂಟೆಂದನವ ನಗುತ॥

'ಜೀಯ ನಿನ್ನ ಪದಕಮಲವನ ಭಜಿಸುವೆ', 'ಸವಡಿನುಡಿ' ಅಂದರೆ ಇಬ್ಬಗೆಯ ನುಡಿ ಅಥವಾ ಸುಳ್ಳು ಮಾತು ತನಗಿಲ್ಲವೆಂದು ಬೇಡಿಕೊಳ್ಳುತ್ತ, 'ಕಡು ರೂಪಿನವ ನಾನಲ್ಲ' ಎನ್ನುತ್ತಾನೆ. ಸೇವಕನಾಗಿ ಸೇರಿಸಿಕೊಳ್ಳುವುದಕ್ಕೆ 'ಕುರೂಪ'ವೂ ಒಂದು ಅರ್ಹತೆ. ಅಡುಗೆ ಮಾಡುವ, ಕುದುರೆ ಓಡಿಸುವ ಕಾಯಕದಲ್ಲಿ ನಿಷ್ಣಾತನಾಗಿರುವ ತಾನು ಕುರೂಪಿ ಎಂಬ ವರ್ಣಾರ್ಹತೆಯ ಮೂಲಕ, ಬಾಹುಕನೆಂಬ ನಾಮಾರ್ಹತೆಯ ಮೂಲಕ ನಳ ಋತುಪರ್ಣದಲ್ಲಿ ಊಳಿಗಕ್ಕೆ ಸೇರಿಕೊಳ್ಳುತ್ತಾನೆ. ದಲಿತರನ್ನು, ಶೂದ್ರರನ್ನು ಪ್ರತ್ಯೇಕವಾಗಿ ಗುರುತಿಸಲು ನಮ್ಮಲ್ಲಿ ಹೆಸರೂ ಒಂದು ಸಂಜ್ಞೆ. ಬಣ್ಣವೂ ಒಂದು ಸಂಕೇತ, ಮಾನವ ಕುಲದ ಆದಿಯಿಂದಲೂ ವರ್ಣರಾಜಕಾರಣ ನಮ್ಮ ಸಮಾಜವನ್ನು ಹೇಗೆ ಆವರಿಸಿಕೊಂಡಿದೆ ಎಂಬುದಕ್ಕೆ ಸ್ಪಷ್ಟ ಹೊಳುಹುಗಳು ನಳಚರಿತ್ರೆಯಲ್ಲಿದೆ. ಹಾಗಾಗಿ ನಳ ಚರಿತ್ರೆ ಮಾನವ ಕುಲದ ವರ್ಣರಾಜಕಾರಣದ ಆದಿಮ ಕಥನವೊಂದನ್ನು ನಮ್ಮ ಮುಂದಿಡುತ್ತದೆ.

ಪ್ರಭುತ್ವವು ಯಾವಾಗಲೂ ತನ್ನನ್ನು ಸಂಪತ್ತು ಅಧಿಕಾರ, ಸೌಂದರ್ಯ ಬಣ್ಣದ ಮೇಲ್ಮೆಯಲ್ಲಿಯೇ ನಿರ್ವಚಿಸಿಕೊಳ್ಳುತ್ತಾ ಬರುತ್ತದೆ. ಮನುಷ್ಯರನ್ನು ಬಣ್ಣದ ಮೂಲಕ ಒಡೆದು ನೋಡುವ ರಾಜಕಾರಣವೇ ಅತ್ಯಂತ ಕ್ರೂರ ಮತ್ತು ಹೇಯ ಎನ್ನುವುದನ್ನು ನಮ್ಮ ಆಧುನಿಕ ಇತಿಹಾಸದ ಪಾಠಗಳು ಕಲಿಸಿವೆ. ಜಗತ್ತಿನ ಮಹತ್ತರ ದಬ್ಬಾಳಿಕೆಯಲ್ಲಿ ವರ್ಣಹಿಂಸೆ ಒಂದಾಗಿದೆ, ಸೌಂದರ್ಯ ನಿರ್ಧಾರದ ಅಪಮಾರ್ಗಕ್ಕೆ ರಾಜಕಾರಣದ ಪ್ರಚೋದನೆಗಳೇ ಕಾರಣ. ಅದು ಸೌಂದರ್ಯದ ಕಲ್ಪನೆಯನ್ನು ರೂಪಿಸಬಲ್ಲದು ಎಂದು ಲೋಹಿಯಾ ತಿಳಿಸುತ್ತಾರೆ. ಅವರು ತಮ್ಮ 'ಸೌಂದರ್ಯ ಹಾಗೂ ಮೈಬಣ್ಣ' (ಅನು: ಕೆ. ವಿ. ಸುಬ್ಬಣ್ಣ) ಲೇಖನದಲ್ಲಿ "ಜಾತಿ ಎಂಬುವುದಕ್ಕೆ ಹಿಂದೂಸ್ತಾನಿಯಲ್ಲಿ 'ವರ್ಣ' ಎನ್ನುತ್ತಾರೆ. ಅದರ ಅರ್ಥ ಪ್ರಾಯ:ಬಣ್ಣ ಋಗ್ವೇದದಲ್ಲಿ ಶ್ವೇತವರ್ಣವನ್ನೇ 'ಆರ್ಯ' ಎಂದು ಕರೆದಿದೆ. ಇಡಿ ಪ್ರಪಂಚದಲ್ಲಿ ಬಿಳಿಯರ ಮೇಲಾಟ ಪರಂಪರೆಯನ್ನು ಸೃಷ್ಟಿಸಿರುವ ಕಾರಣ ಅದಕ್ಕೆ ಒತ್ತುಕೊಟ್ಟು ಇಂಡಿಯಾದ ಜಾತಿ ಪದ್ಧತಿಯ ವೈಶಿಷ್ಟ್ಯವೂ

ಕಾರಣವಾಗಿ ಶ್ವೇತವರ್ಣಕ್ಕೆ ನಿರೋಧಕಾಣದ ಪ್ರತಿಷ್ಠೆ ದೊರಕಿಬಿಟ್ಟಿದೆ, ಬಣ್ಣ ತಾನೇ ಚೆಲುವಿಕೆಯೆನ್ನಿಸಿಕೊಂಡು ಬಿಟ್ಟಿದೆ" ಎನ್ನುತ್ತಾರೆ. ೫

ದಾಸ್ಯದ ಕ್ರೌರ್ಯ ಕನಸು ಕಾಣುವ ಅಧಿಕಾರವನ್ನು ಕಸಿದುಕೊಂಡಿದೆ ಎಂಬುದಕ್ಕೆ ನಳ ಚರಿತ್ರೆಯಲ್ಲಿ ಸ್ಪಷ್ಟ ನಿದರ್ಶನವಿದೆ. ಋತುಪರ್ಣನಲ್ಲಿ ಸೇವಕನಾದ ಬಾಹುಕ(ನಳ)ನಿಗೆ ವಾಲಾಖ್ಯನೆಂಬ ಇನ್ನೊಬ್ಬ ಸೇವಕನೊಂದಿಗೆ ಸಖ್ಯ ಬೆಳೆಯುತ್ತದೆ. ಒಂದು ದಿನ ರಾತ್ರಿ ಅವನು ದಮಯಂತಿಯೊಂದಿಗಿನ ಸರಸ ಸಲ್ಲಾಪದಲ್ಲಿ ಇರುವ ಕನಸು ಕಂಡು 'ಹಾ ತರುಣಿ ನಳಿನಾಕ್ಷಿ' ಎಂದು ಕನವರಿಸುತ್ತಿರುವಾಗ ಅದನ್ನು ಕೇಳಿ ವಾಲಾಖ್ಯ,

ವಿಕಳವನು ವಾಲಾಖ್ಯ ಕೇಳಿದು
ಪಕಪಕನೆ ನಗುತೆಂದನೆಲೆ ಬಾ
ಹುಕನೆ ಹಲುಬುವುದೇನು ಕಾಂತೆಗೆ ತಕ್ಕ ಬೊಂತೆಯದು
ಅಕಟ ನೀನತಿ ಚೆಲುವನೇ ಬಾ
ಲಕಿ ನಿನಗೆ ತಕ್ಕವಳೊ ಲೋಕದಿ
ಮರಕಕೇತನ ಮರುಳನೆಂದಪಹಾಸ್ಯ ಮಾಡಿದನು.

ಸತ್ಯವನ್ನು ಹೇಳಲಾಗದ ಸಂಕಟದಲ್ಲಿ 'ಹಿಂದೆ ಬ್ರಾಹ್ಮಣನೊಬ್ಬ ನಿಜ ಸತಿ ಅಗಲಿಕೆಯನ್ನು ನನ್ನೊಡನೆ ನೊಂದು ನುಡಿದನು. ಅದನ್ನು ಕನಸಿನಲ್ಲಿ ಕಂಡು ಭ್ರಾಂತಿಯಾಯಿತು' ಎಂದು ಉತ್ತರಿಸುತ್ತಾನೆ. ಬ್ರಾಹ್ಮಣನಾದವನು ಮುಕ್ತವಾಗಿ ಹೇಳಿಕೊಳ್ಳಬಹುದಾದ ಕನಸಿನ ವೃತ್ತಾಂತವನ್ನು ಶೂದ್ರನಾದವನು ಹೇಳಿಕೊಳ್ಳಬಾರದು ಎನ್ನುವುದೆ 'ವರ್ಣ ಹಿಂಸೆ'. ಈ ಪ್ರಸಂಗ ಇದಕ್ಕೊಂದು ಮಾದರಿ. ಕನಸನ್ನು ಕಸಿದುಕೊಳ್ಳುವ ಈ ವರ್ಣರಾಜಕಾರಣ, 'ತನಗೆ ಸತಿ ಸುತರಿಲ್ಲ' ಎಂದು ಸುಳ್ಳು ಹೇಳುವುದನ್ನು ನಳನಿಗೆ ಕಲಿಸಿದೆ. ಪ್ರಭುತ್ವ ಹಾಗೂ ಪುರೋಹಿತಶಾಹಿ ವ್ಯವಸ್ಥೆ ಶೂದ್ರತ್ವವನ್ನು, ವರ್ಣತ್ವವನ್ನೂ ತನ್ನ ಅಧೀನವಾಗಿಸಿಕೊಳ್ಳುವ ಸ್ವಾರ್ಥದಲ್ಲಿ ಹೊಸ ಹೊಸ ತಂತ್ರಗಳನ್ನು ಹೂಡುತ್ತಲೇ ಇರುತ್ತದೆ ಎನ್ನುವ ಮುಖ್ಯ ತಿಳುವಳಿಕೆಯ ಮೂಲಕ ಕನಕದಾಸರ ನಳಚರಿತ್ರೆಯನ್ನು ಪ್ರವೇಶಿಸಬೇಕು.

---

೫: ರಾಮ ಮನೋಹರ ಲೋಹಿಯಾ ;ಅನು: ಕೆ. ವಿ. ಸುಬ್ಬಣ್ಣ, ಸಾಕ್ಷಿ ಸಂಚಿಕೆ. ೦೭: ಪುಟ-೧೨೧

## ಅಧ್ಯಾಯ ೭

# ರಾಮಧಾನ್ಯಚರಿತ್ರೆ : ಧರ್ಮ ಮತ್ತು ಜಾತಿ ತಿಕ್ಕಾಟಗಳ ಐತಿಹಾಸಿಕ ರೂಪಕ

ಕನಕದಾಸರ ಇನ್ನೊಂದು ಮಹತ್ವಪೂರ್ಣವಾದ ಕೃತಿ 'ರಾಮಧಾನ್ಯ ಚರಿತ್ರೆ'. ಹೆಸರಿನಲ್ಲಿಯೆ ಇದೂ ಕೂಡ ಚರಿತ್ರೆಯನ್ನು ಹೇಳುವ ಉದ್ದೇಶವನ್ನು ಹೊಂದಿದೆ. ಅವರ ಮೂರೂ ಕೃತಿಗಳು ಒಂದಲ್ಲಾ ಒಂದು ವಿಧದಲ್ಲಿ ಈ ನಾಡಿನ ಚರಿತ್ರೆಯನ್ನು ಕಟ್ಟಲು ತೊಡಗುತ್ತವೆ. ಮೋಹನತರಂಗಿಣಿ ಎಂಬ ಕೃಷ್ಣಚರಿತೆ ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನ ಅರಸನ ವೈಯಕ್ತಿಕ ಬದುಕಿನ ಕಥನವಾಗಿ ನಿರೂಪಿಸಲ್ಪಟ್ಟರೆ ನಳಚರಿತ್ರೆ ಈ ದೇಶದ ಆರ್ಯ-ಆರ್ಯೇತರ ಮೂಲದ ಸಂಸ್ಕೃತಿ ಚರಿತ್ರೆಯನ್ನು ಕಟ್ಟಲು ಹಂಬಲಿಸುತ್ತದೆ. ರಾಮಧಾನ್ಯ ಚರಿತ್ರೆಯೂ ಒಂದು ದೃಷ್ಟಿಯಲ್ಲಿ ನಳಚರಿತ್ರೆಯ ಮುಂದುವರಿದ ಭಾಗವೆಂದರೆ ತಪ್ಪಾಗದು. ಮಾನವ ಸಮುದಾಯಗಳು ಜಾತಿ, ಧರ್ಮ, ವರ್ಗ, ವರ್ಣಗಳ ಆಧಾರದ ಮೇಲೆ ಯಾವಾಗ ವಿಂಗಡಿಸಲ್ಪಟ್ಟಿತೊ ಅಂದಿನಿಂದ ಸಂಘರ್ಷಗಳ, ಕ್ರೌರ್ಯಗಳ ಚರಿತ್ರೆ ಪ್ರಾರಂಭವಾಯಿತು. ಮಧ್ಯಕಾಲೀನ ಇತಿಹಾಸ ಅನುಭವಿಸಿದ ರಾಜಕೀಯ, ಸಾಮಾಜಿಕ, ಧಾರ್ಮಿಕ ಸಂಘರ್ಷದ ಮುಖಗಳನ್ನು ಪರಿಚಯಿಸಲು ಸಾಹಿತ್ಯ ಸಾಮಗ್ರಿ ಬಳಕೆಯಾಗಿದೆ. ಕನಕದಾಸರ ಕೃತಿಗಳು ಇದಕ್ಕೊಂದು ಉದಾಹರಣೆ.

ಕನಕಕೃತಿಗಳು ನೇರವಾಗಿ ಸಾಮಾಜಿಕ ಜೀವನಕ್ಕೆ ಮುಖಾಮುಖಿಯಾದ ಸಾಹಿತ್ಯ ಕೃತಿಗಳು. ಒಂದು ಅಖಂಡವಾದ ಕೃತಿ ತನ್ನ ಸಾಂಸ್ಕೃತಿಕ ಚಹರೆಗಳನ್ನು ಇಷ್ಟು ಸ್ಪಷ್ಟವಾಗಿ ತನ್ನ ಕಾಲದ ಅನುಭವಗಳನ್ನು ದಾಖಲಿಸುತ್ತದೆ ಎಂದರೆ ಅದರ ಪರಿಣಾಮಗಳ ತೀವ್ರತೆಯನ್ನು ಯಾರೂ ಗುರುತಿಸಬಹುದು. ಮಧ್ಯಕಾಲೀನ ಸಮಾಜ ಜೀವನ ಜಾತಿ, ಧರ್ಮಗಳ ಕಚ್ಚಾಟದಲ್ಲಿ ತೊಡಗಿ ಸೃಷ್ಟಿಸಿಕೊಂಡ ಗೊಂದಲಗಳಿಗೆ ಕನಕ ಕೃತಿಗಳಲ್ಲಿ ಉತ್ತರವಿದೆ. ಕೆಳವರ್ಗದ ಬರಹಗಾರರಾಗಿ ಕನಕದಾಸರು 'ರಾಮಧಾನ್ಯ ಚರಿತ್ರೆ' ಯಂತಹ ಕೃತಿ ಬರೆದಿರುವ ಸಂದರ್ಭವೇ ಅವರ ಅಸಾಹಾಯಕತೆಗೆ ಮೊದಲ ನಿದರ್ಶನ. ವೈಷ್ಣವ ಧರ್ಮ ಪಂಜರದಲ್ಲಿ ಬಂಧಿಯಾದ ಅವರಿಂದ ಈ ಬಗೆಯ ಪ್ರತಿಕ್ರಿಯೆ ನಿರೀಕ್ಷಿಸುವುದೆ ಒಂದು ಆಶ್ಚರ್ಯ. ಸಮಾಜದ ಓರೆ ಕೋರೆಗಳನ್ನು ವೈಷ್ಣವರ ಜಾತಿ ವರ್ಗವಾದವನ್ನು ನೇರವಾಗಿ ಪ್ರತಿಭಟಿಸಲಾರದ ಅವರ ಅಸಾಹಾಯಕತೆಯಲ್ಲಿ ಧಾನ್ಯರೂಪಕದ ಮೂಲಕ ತನ್ನ ಅಸ್ತಿತ್ವವನ್ನು ದಾಖಲಿಸಲು ತೊಡಗುತ್ತಾರೆ. ಈ ತೊಡಕು ಅವರಿಗಿಲ್ಲದಿದ್ದರೆ ಈ ಕೃತಿಯ ಹೆಸರು ಇದಾಗುತ್ತಿರಲಿಲ್ಲವೋ ಏನೊ!

ಪ್ರಭುತ್ವದ ಉದಾರತೆಯನ್ನೂ ಮರೆಯುವ, ಮೇಲ್ವರ್ಗದ ಅಹಂಕಾರವನ್ನೂ ಮುರಿಯುವ, ಕೆಳವರ್ಗದ ಆತ್ಮಗೌರವವನ್ನೂ ಒಟ್ಟಾಗಿ ಕಾಯ್ದುಕೊಳ್ಳುವ ಸವಾಲನ್ನು ಇಷ್ಟು ಪ್ರಜ್ಞಾಪೂರ್ವಕವಾಗಿ ನಿರ್ವಹಿಸಿದ ಕವಿಯ ಪ್ರತಿಭಾ ಸಂಪನ್ನತೆ ಅಚ್ಚರಿಯನ್ನು ಹುಟ್ಟಿಸುತ್ತದೆ.

ಕನಕದಾಸರು ವೈಷ್ಣವ ನಿಷ್ಠ ಬರವಣಿಗೆಗೆ ಕಟ್ಟು ಬಿದ್ದವರು. ಅದರಾಚೆ ಯೋಚಿಸುವ, ಬರೆಯುವ ವಾತಾವರಣ ಅವರಿಗೆ ಇರಲಿಲ್ಲವೆನ್ನುವುದು ಸ್ಪಷ್ಟ. "ಏಕೆ ನಡುಗಿದೆ ತಾಯಿ ಭೂಮಿ"ಎಂಬ ಕೀರ್ತನೆಯಲ್ಲಿ ಕೆಳವರ್ಗವು ಬರವಣಿಗೆಗೆ ತೊಡಗಿಕೊಂಡ ಬಗ್ಗೆ ಮೇಲ್ವರ್ಗ ತೋರಿದ ಅಸಹನೆಯನ್ನು ವ್ಯಂಗ್ಯವಾಗಿ ನಮ್ಮ ಮುಂದಿಡುತ್ತದೆ. ಈ ಬಗೆಯ ವಿವೇಚನೆಯನ್ನು ಹಿಂದಿನ ಅಧ್ಯಾಯದಲ್ಲಿ ಗಮನಿಸಿದ್ದೇವೆ. ಅಲ್ಲದೆ ಹರಿದಾಸರು ಯಾರೂ ಕೂಡ ಲೌಕಿಕ ವಸ್ತುವನ್ನು ಬಳಸಿ ಕಾವ್ಯ ರಚನೆ ಮಾಡಿದ ಪರಂಪರೆಯೂ ಕನಕದಾಸರ ಮುಂದಿಲ್ಲ. ಪರಂಪರೆಗೆ ಹೊಸ ನಡೆಯನ್ನು ತರುವ ಯಾವ ವ್ಯಕ್ತಿಯೂ ತೀರಾ ಸರಳ ಹಾಗೂ ಸುಲಭದ ದಾರಿಯಲ್ಲಿ ನಡೆದಿರುವುದಿಲ್ಲ ಎನ್ನುವುದನ್ನು ಮೊದಲು ಗಮನಿಸಬೇಕು. ಕನಕ ತನ್ನ ಕವಿತಾ ಶಕ್ತಿಯ ಮೂಲಕವೇ ಜನಮನದಲ್ಲಿ ಎಷ್ಟು ಪ್ರಸಿದ್ಧಿ ಪಡೆದಿದ್ದ ಎನ್ನುವುದಕ್ಕೆ ಕನಕನ ಕಾವ್ಯಗಳ ಹಸ್ತಪ್ರತಿಗಳು ಸಾಕ್ಷಿ. ಕನಕನ ಬಗ್ಗೆ ಸ್ವಾಭಾವಿಕ ಜಾತಿ ನೆಲೆಯ ಮತ್ಸರ ಸವರ್ಣೀಯರಲ್ಲಿ ಮೂಡಿರುವ ಸಾಧ್ಯತೆಗಳು ಇವೆ. ಕಾವ್ಯ ಶಕ್ತಿಯನ್ನು ನಿಂದಿಸಲಾಗದವರು ಕೊನೆಗೆ ಜಾತಿ ನೆಲೆಯನ್ನಾದರೂ ಕೇಂದ್ರೀಕರಿಸಿ ಕನಕದಾಸರನ್ನು ಅವಮಾನ ಮಾಡಿರಬಹುದು. ಒಂದು ಶಕ್ತವಾದ ಕಾವ್ಯ ಎಂತಹ ಎಡರು ತೊಡರುಗಳನ್ನು ಸಹಿಸಿಕೊಂಡು ತನ್ನ ಅಸ್ಮಿತೆಯನ್ನು ಹೇಗೆ ಕಾಯ್ದುಕೊಳ್ಳಬಹುದು ಎಂಬುದನ್ನು ರಾಗಿಯ ದೃಷ್ಟಾಂತದ ಮೂಲಕ ಕನಕದಾಸರು ಪ್ರತಿಪಾದಿಸಿದ್ದಾರೆ. ಬರವಣಿಗೆಯೆನ್ನುವುದು ಮೇಲ್ವರ್ಗದ ಗುರುಗಳ, ವಿದ್ವಾಂಸರ ಸ್ವತ್ತು ಎನ್ನುವ ತಿಳುವಳಿಕೆಗೆ ಮಧ್ಯಕಾಲೀನ ಸಾಹಿತ್ಯ ಚರಿತ್ರೆಯಿಂದ ಕಂಡುಕೊಂಡ ವಿಚಾರವೆ ಆಗಿದೆ. ವಚನಕಾರರನ್ನು ಹೊರತು ಪಡಿಸಿದರೆ ಈಗ ತಿಳಿದ ಮಟ್ಟಿಗೆ **ಕನಕದಾಸನೇ ಮಧ್ಯಕಾಲೀನ ಕನ್ನಡದ ಮೊದಲ ಕೆಳವರ್ಗದ ಸ್ವತಂತ್ರ ಬರಹಗಾರ; ಕಥನಕಾರ.** ಹಾಗಾಗಿ ಇಲ್ಲಿ ರಾಗಿ ಕೆಳವರ್ಗದ ಜನರ ಆತ್ಮರೂಪಕ ಮಾತ್ರವಲ್ಲ, ಕೆಳವರ್ಗದ ಬರಹಗಾರನ ಸಾಹಿತ್ಯ ಸತ್ವವೂ ಹೌದು. ಮೋಹನತರಂಗಿಣಿ, ನಳಚರಿತ್ರೆ ಬಂದ ಮೇಲೆ ಕನಕನ ಬಗೆಗಿನ ಟೀಕೆಗೆ ಇದು ಉತ್ತರ ರೂಪವಾಗಿ ಬಂದಿದೆ ಎಂಬ ಊಹೆ ಸರಿಯಾದುದೆ.[೧] ೧೫೮ ಪದ್ಯಗಳ ಭಾಮಿನಿ ಷಟ್ಪದಿಯಲ್ಲಿರುವ ಈ ಕಾವ್ಯವನ್ನು ಕವಿ 'ಮಹಾಕಥೆ'ಎಂದು ಕರೆದುಕೊಳ್ಳುತ್ತಾನೆ.

೧. ಹ.ಕ.ರಾಜೇಗೌಡ; ಸಾಹಿತ್ಯ ಶೋಧ, ಪುಟ-೧೬೫

'ಭೂಮಿಗಚ್ಚರಿಯಾಗಿ ಪೇಳುವ ಮಹಾಕಥೆ'. ಇಲ್ಲಿ ಕಥೆ ಎಂಬ ಪದವನ್ನು ಗಮನಿಸಬೇಕು. ಅದು ಕಾವ್ಯ ಅಲ್ಲ, ಅದು ಕನಕನ ಆತ್ಮ 'ಕಥೆ'. ತಳವರ್ಗಗಳ ಕಥೆ, ಚರಿತ್ರೆ.

ರಾಮಧಾನ್ಯದ ಕೃತಿಯನೀ ಜನ
ಸ್ತೋಮವೆಲ್ಲಾದರಿಸುವಂದದಿ
ಭೂಮಿಗಚ್ಚರಿಯಾಗಿ ಪೇಳುವೆನೀ ಮಹಾಕಥೆಯ

ಕನಕದಾಸರ ದೃಷ್ಟಿಯಲ್ಲಿ 'ರಾಮಧಾನ್ಯ ಚರಿತ್ರೆ' ಬಹು ಮುಖ್ಯವಾದ ಕೃತಿ. ಉಳಿದ ಯಾವ ಕೃತಿಯನ್ನು ಅವರು ಇಷ್ಟು ಕಾಳಜಿಯಿಂದ ಜನಸಮೂಹಕ್ಕೆ ತಲುಪಿಸುವ ಮಾತನಾಡುವುದಿಲ್ಲ. ಎಲ್ಲಾ ಜನರು ಕನಕನ ಆತ್ಮರೂಪಿ ಈ ಕಥನವನ್ನು ಕೇಳಬೇಕು. ಶ್ರವ್ಯಮೂಲದಿಂದ ಪ್ರಾರಂಭವಾಗಿ ಬಾಯಿಯಿಂದ ಬಾಯಿಗೆ ಹರಿಯಬೇಕು. ಇಲ್ಲಿಯವರೆಗೆ ಹೇಳುವ ಅಧಿಕಾರವನ್ನು ಉಳಿಸಿಕೊಂಡು ಬಂದದ್ದು ಮೇಲ್ವರ್ಗ ಮಾತ್ರ. ಅದು ಯಾವಾಗಲೂ ತನಗಿಂತ ಕೆಳಗಿರುವವರು ಕೇಳಬೇಕೆ ಹೊರತು ಪ್ರಶ್ನಿಸುವ ಅಧಿಕಾರವನ್ನು ನೀಡಿಲ್ಲ. ಈಗ ಮೊದಲ ಬಾರಿಗೆ ಕೆಳವರ್ಗದ ಸತ್ವವೊಂದು ಮಾತಾಡುತ್ತಿದೆ. ಕನಕದಾಸರು ಮಾತಾಡುತ್ತಿದ್ದಾರೆ. ಅದನ್ನು ಈ ಜನಸ್ತೋಮ ಕೇಳಬೇಕು. ಹೇಳುವ ಕೇಳುವ ಅಧಿಕಾರ ಕೇಂದ್ರಗಳು ಪಲ್ಲಟಗೊಳ್ಳಬೇಕೆಂಬ ಈ ಆಶಯವೇ ಚರಿತ್ರೆಯನ್ನು ಕೆಳಗಿನಿಂದ ನೋಡುವುದಕ್ಕೆ ಒತ್ತಾಯಿಸುತ್ತದೆ. ಇಂತಹ ಆಲೋಚನೆಯ ಮೂಲಕವೇ ಕನಕ ಕೃತಿಗಳು ಚರಿತ್ರೆಯನ್ನು ಪುನಾರಚಿಸಿಕೊಳ್ಳುವ ಆಶಯವನ್ನು ಹೊಂದಿರುವುದು.

ಕವಿಗೆ ರಾಮಾಯಣದ ಕಥೆ ಹೇಳುವುದು ಮುಖ್ಯವಲ್ಲ. ಕೇವಲ ಎಂಟು ಭಾಮಿನಿಯಲ್ಲಿ ಇಡೀ ರಾಮಾಯಣದ ಕಥೆ ಹೇಳುತ್ತಾನೆ. ಈ ಕಥೆಯೂ ಧರ್ಮರಾಯನಿಗೆ ಹೇಳಿದ್ದು ಎನ್ನುವುದು ಗಮನಾರ್ಹ. ನಿಜದ ಕಥೆ ಕೇಳಲು ಧರ್ಮ ಪ್ರಜ್ಞೆ ಅಥವಾ ವಿವೇಕವು ಜಾಗೃತವಾಗಬೇಕಾದುದು ಅಗತ್ಯ ಎಂಬುದು ಇಲ್ಲಿಯ ತಾತ್ವಿಕತೆ. ರಾಮ ಲಂಕೆಯಿಂದ ಅಯೋಧ್ಯೆಗೆ ಹೊರಡುವ ದಾರಿಯಲ್ಲಿ ಮುಚುಕುಂದ ಋಷಿಯ ಆಶ್ರಮವನ್ನು ಪ್ರವೇಶಿಸುತ್ತಾನೆ. ರಾಮ ಪರಿವಾರಕ್ಕೆ ಸುಭಕ್ಷ ಭೋಜನವನ್ನು ಏರ್ಪಡಿಸಿದ ಮುನಿಗಳಲ್ಲಿ ಇದನ್ನು ತಯಾರಿಸಿದ ಧಾನ್ಯಗಳನ್ನು ತರಿಸಲು ರಾಮ ಸೂಚಿಸುತ್ತಾನೆ. ಗೌತಮನನ್ನು ಕುರಿತು ರಾಮ ಇದರಲ್ಲಿ ಪರಮಸಾರದ ಧಾನ್ಯ ಯಾವುದೆಂದು ಕೇಳಲು ಗೌತಮನು 'ನರೆದೆಲಗ(ರಾಗಿ)' ಎಂದು ಉತ್ತರಿಸುತ್ತಾನೆ. ಈ ಮಾತನ್ನು ಕೇಳಿ ಬತ್ತಕ್ಕೆ ಕೋಪ ಬರುತ್ತದೆ. ರಾಗಿಯನ್ನು ತುಚ್ಛವಾಗಿ ನೋಡುತ್ತಾ ಅದನ್ನು ದೂಷಿಸುತ್ತದೆ. ಇದಕ್ಕೆ ರಾಗಿಯೂ ಬತ್ತದ ಗುಣಗಳನ್ನು ಹೇಳಿ ಅದರ ಶ್ರೇಷ್ಠತೆಯ ಭ್ರಮೆಯನ್ನು ಮುರಿಯುತ್ತದೆ. ಇಬ್ಬರ ವಾದ ಮತ್ತು ಪ್ರತಿವಾದ ಕೇಳಿದ ರಾಮ ಇಬ್ಬರನ್ನೂ ಆರು ತಿಂಗಳು ಸೆರೆವಾಸದಲ್ಲಿರಿಸಿ ಪರೀಕ್ಷಿಸುತ್ತಾನೆ. ಆ ಸತ್ವ

ಪರೀಕ್ಷೆಯಲ್ಲಿ ರಾಗಿ ವಿಜಯವನ್ನು ಪಡೆಯುತ್ತದೆ. ರಾಮ ತನ್ನ ಹೆಸರಿನ ಎರಡಕ್ಷರವನ್ನು ನರೆದೆಲಗನಿಗಿಟ್ಟು 'ರಾಘವ' ರಾಗಿ ಎಂದಾಯ್ತು ಎನ್ನುವುದು ಕಥಾ ಭಾಗ. ನ್ಯಾಯ ಮೂರ್ತಿಯಾದ ರಾಮ ಮಧ್ಯಸ್ಥಿಕೆವಹಿಸಿ ಇಬ್ಬರನ್ನೂ ಸಮಾಧಾನ ಪಡಿಸಿ ಹೊಂದಾಣಿಕೆ ಮಾಡುವುದು ಕಥೆಯ ಮುಕ್ತಾಯದ ಹಂತ.

ರಾಮಧಾನ್ಯ ಚರಿತ್ರೆಯನ್ನು ಕೇವಲ ಬ್ರಾಹ್ಮಣ–ಶೂದ್ರ ನೆಲೆಯ ತಿಕ್ಕಾಟವಾಗಿ ಮಾತ್ರ ಕಾಣದೆ ಮಧ್ಯಕಾಲೀನ ಕರ್ನಾಟಕದ ರಾಜಕೀಯದ ಭಾಗವಾಗಿಯೂ ಗುರುತಿಸಬೇಕು. ಅದು ವಿಸ್ತರಿಸುವ ತಿಳಿವು ಕೇವಲ ಯಾವುದೋ ಕೆಲವು ಸೀಮಿತ ನೆಲೆಯ ಅಭಿಪ್ರಾಯಗಳನ್ನು ಒಳಗೊಂಡಿಲ್ಲ. ಅದರ ತಿಳಿವಿನ ದಾರಿಗಳನ್ನು ಈ ಕೆಳಗಿನಂತೆ ಪುನಾರಚಿಸಿಕೊಳ್ಳಬಹುದು:

೧. ಜೈನ–ವೈಷ್ಣವ ಧರ್ಮ ಸಂಘರ್ಷವನ್ನು ಪ್ರಭುತ್ವ ನಿಭಾಯಿಸಿದ ಹಿನ್ನಲೆಯಲ್ಲಿ
೨. ಕನಕದಾಸನ ಆಧ್ಯಾತ್ಮ ಸಾಧನೆಯ ಪ್ರಾರಂಭಿಕ ಹಂತದಲ್ಲಿ ಅವರು ಎದುರಿಸಿದ ಜಾತಿ ನೆಲೆಯ ಮಾನಸಿಕ ಹಿಂಸೆಯ ಕಥನವಾಗಿ
೩. ಉಡುಪಿಯ ಕನಕನಕಿಂಡಿಗೆ ಹಿಡಿದ ಕನ್ನಡಿಯಾಗಿ
೪. ಮಧ್ಯಕಾಲೀನ ವ್ಯಾಪಾರಿ ಅರ್ಥವ್ಯವಸ್ಥೆ ರೂಪಿಸಿದ ಸಿರಿವಂತಿಕೆಯ ವಿಡಂಬನೆಗಾಗಿ
೫. ವರ್ಗ ಸಂಘರ್ಷದ (class struggle) ಮೂಲ ತಾತ್ವಿಕ ಪ್ರಶ್ನೆಗಳನ್ನೆತ್ತುವ ಸಾಹಿತ್ಯ ಕೃತಿಯಾಗಿ
೬. ಅಲಕ್ಷಿತ ಸಮುದಾಯಗಳ ಸಾಮಾಜಿಕ ನ್ಯಾಯ, ಪ್ರತಿಭಟನೆಯ ದನಿಯಾಗಿ
೭. ಬಡಜನರ ಆಹಾರ ಮತ್ತು ಹಸಿವಿನ ಪ್ರಶ್ನೆಯಾಗಿ
೮. ಕನಕದಾಸರ ಆತ್ಮಚರಿತ್ರೆಯಾಗಿ

೧. ವಿಜಯನಗರ ಸಾಮ್ರಾಜ್ಯವು ಆದಿಯಿಂದಲೂ ಧಾರ್ಮಿಕ ಸಂಘರ್ಷಗಳನ್ನು ಎದುರಿಸುತ್ತಾ ಬಂದಿದೆ. ಏಕೆಂದರೆ ದಕ್ಷಿಣ ಭಾರತದ ಇತಿಹಾಸದಲ್ಲಿ ಜೈನ ಧರ್ಮ ಕರ್ನಾಟಕದಲ್ಲಿ ಪಡೆದಷ್ಟು ಪ್ರಾಶಸ್ತ್ಯ ಬೇರೆ ಎಲ್ಲೂ ಪಡೆದಿಲ್ಲ. ಜೈನ ಧರ್ಮಕ್ಕೆ ಪ್ರಮುಖ ಆಶ್ರಯ ನೀಡಿದ ಶ್ರವಣಬೆಳಗೊಳ ಗಂಗರ ಕಾಲದಲ್ಲಿ ಇನ್ನೂ ಹೆಚ್ಚಿನ ಹಿರಿಮೆಯನ್ನು ಸಾಧಿಸಿತ್ತು. ೯–೧೦ನೇ ಶತಮಾನದಲ್ಲಿ ಜೈನಧರ್ಮದ ಉಚ್ಛ್ರಾಯಕಾಲ. ಮುಂದೆ ೧೧–೧೨ನೇ ಶತಮಾನದಲ್ಲಿ ಶ್ರೀ ರಾಮಾನುಜಾಚಾರ್ಯರ ಮೂಲಕ ಶ್ರೀವೈಷ್ಣವ ಧರ್ಮ ಕರ್ನಾಟಕಕ್ಕೆ ಕಾಲಿಟ್ಟಿತು. ಆಗಲೇ ಬಸವಣ್ಣನ ಮೂಲಕ ವೀರಶೈವ ಧರ್ಮ ಉತ್ತರ ಕರ್ನಾಟಕ ಭಾಗದಲ್ಲಿ ಜನಪ್ರಿಯವಾಗಿತ್ತು. ಇದುವರೆಗೆ ಧಾರ್ಮಿಕ ಜಗತ್ತಿನ ಅನಭಿಷಕ್ತ ದೊರೆಯಾಗಿದ್ದ ಜೈನ ಧರ್ಮದ ಪ್ರತಿಷ್ಠೆ, ಪ್ರಾಶಸ್ತ್ಯ, ಪ್ರಭಾವ, ಪ್ರಗತಿಗಳು ಈ ಎರಡು ಹೊಸ

ಧರ್ಮಗಳ ಆಗಮನದಿಂದ ಹೆಚ್ಚು ಕಡಿಮೆ ಕುಗ್ಗಿತು. ಜೈನ ಧರ್ಮದಿಂದ ಅನ್ಯ ಧರ್ಮಗಳಿಗೆ ವಲಸೆಹೋಗುವವರ ಸಂಖ್ಯೆಯೂ ಹೆಚ್ಚಾಯಿತು. ಇದಕ್ಕೆ ಕಾರಣ ಶ್ರೀ ರಾಮಾನುಜಾಚಾರ್ಯರ ಪ್ರಭಾವ. ಇವರು ಶ್ರವಣಬೆಳಗೊಳದ ಸಮೀಪ ಮೇಲುಕೋಟೆಯನ್ನು, ತೊಣ್ಣೂರು, ಹೊಳೆನರಸಿಪುರಗಳಲ್ಲಿ ಶ್ರೀ ವೈಷ್ಣವ ಕೇಂದ್ರಗಳನ್ನು ತರೆದರು. ಇವರು ತಮ್ಮ ಧರ್ಮ ಸ್ಥಾಪನೆಗೆ ಆಶ್ರಯಿಸಿದ್ದು ಕೆಳವರ್ಗದ ಪಂಚಮರನ್ನು. ಅವರನ್ನು 'ತಿರುಕುಲತ್ತಾರ್' ಎಂದು ಕರೆದು ಅವರಿಗೆ ದೇಗುಲ ಪ್ರವೇಶವನ್ನು ನೀಡಿ, ಶ್ರೀ ವೈಷ್ಣವರಿಗೆ ಮೀಸಲಾದ ಪಂಚಸಂಸ್ಕಾರಗಳಲ್ಲಿ ಕೆಲವನ್ನು ಆಚರಿಸುವ ಹಕ್ಕನ್ನು ನೀಡಿದರು. ಇದರಿಂದಾಗಿ ಕೆಳವರ್ಗದ ಜನ ಶ್ರೀವೈಷ್ಣವ ಧರ್ಮಕ್ಕೆ ಆಕರ್ಷಿತರಾದರು. ಜೈನ ಧರ್ಮದಲ್ಲಾದರೆ ಅಹಿಂಸೆಗೆ ಮೊದಲ ಆದ್ಯತೆ. ಅಲ್ಲಿ ಮಾಂಸಾಹಾರ, ಪ್ರಾಣಿಹಿಂಸೆ ನಿಷಿದ್ಧ. ಇದು ಕೆಳವರ್ಗದವರಿಗೆ ನುಂಗಲಾರದ ತುತ್ತಾಯಿತು. ಬೇಟೆಯಾಡಿ ಬದುಕುವ ಇವರಿಗೆ ಇಂತಹ ಕಠಿಣ ಆಚರಣೆಗಳು ಕಷ್ಟವೆನಿಸಿದವು.

ಚೋಳದೇಶದಿಂದ ಬಂದ ರಾಮಾನುಜಾಚಾರ್ಯರು ದೀಕ್ಷೆ ನೀಡಿದ ಅನೇಕ ವೈಷ್ಣವರಲ್ಲಿ ದಲಿತರೂ ಸೇರಿದ್ದರು. ತಿರಿಕುಲ ಜಾಂಬವಕುಲಗಳು ಸೇರಿದ್ದವು ಎನ್ನುವುದನ್ನು ಬುಕ್ಕರಾಯನ ಶ್ರವಣಬೆಳಗೊಳ ಶಾಸನ ಉಲ್ಲೇಖಿಸುತ್ತದೆ.(೧೩೬೮) ತಮ್ಮನ್ನು ಅನುಸರಿಸಿ ಬಂದ ತಿರಿಕುಲದಾಸರಿಗೆ ಶಂಖ, ಜಾಗಟೆ ಕೊಟ್ಟು ವೈಷ್ಣವ ದೀಕ್ಷೆ ನೀಡಿದವರು ರಾಮಾನುಜಾಚಾರ್ಯರೆಂದು ದೇವಚಂದ್ರನ ರಾಜಾವಳಿ ಕಥೆ ಹೇಳುತ್ತದೆ. ಬುಕ್ಕರಾಯನ ಶ್ರವಣಬೆಳಗೊಳ ಶಾಸನವು ಉಲ್ಲೇಖಿಸುವ 'ಹದಿನೆಂಟು ನಾಡ ವೈಷ್ಣವರಲ್ಲಿ' ಇವರೂ ಸೇರಿದ್ದಾರೆ. ವಿಜಯನಗರದ ಬುಕ್ಕರಾಯನ ಕಾಲದಲ್ಲಿ ಜೈನ–ವೈಷ್ಣವರಿಗೆ ಏರ್ಪಟ್ಟ ಧಾರ್ಮಿಕ ಸಂಘರ್ಷದ ಕಾರಣದಿಂದ ವೈಷ್ಣವರು ಜೈನರ ಮೇಲೆ ಆಕ್ರಮಣ ಮಾಡಿ ಬಸದಿಗಳನ್ನು ನಾಶ ಮಾಡಿದರು. ಪ್ರಾಣಹಾನಿಯನ್ನೂ ಮಾಡಿದರು.

ಬೆಂಗಳೂರಿನ ಮಾಗಡಿ ತಾಲೂಕಿನ ಕಲ್ಯಶಾಸನದಲ್ಲೂ (೧೩೬೮) ಈ ಸಂಘರ್ಷದ ಉಲ್ಲೇಖ ದೊರೆಯುತ್ತದೆ. ಜೈನರು ಬುಕ್ಕರಾಯನಿಗೆ ಅಹವಾಲು ಸಲ್ಲಿಸಿದಾಗ ಬುಕ್ಕರಾಯ "ವೈಷ್ಣವರ ಕೈಯಲು ಜೈನರ ಕೈವಿಡಿದುಕೊಟ್ಟು" ಪರಸ್ಪರ ಕೈಕುಲುಕಿಸಿ ಸಂಧಾನ ಮಾಡಿಸುತ್ತಾನೆ. "ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲ" "ವೈಷ್ಣವರೂ ಜೈನರೂ ವೊಂದು. ಭೇದವಾಗಿ ಕಾಣಲಾಗದು" ಎಂಬ 'ಜಯಪತ್ರ' ರೂಪದ ಶಾಸನವನ್ನು ಬರೆಸುತ್ತಾನೆ. ಬುಕ್ಕರಾಯನ ಸಮಾನತೆಯ ತತ್ವವೂ ಗಮನಾರ್ಹವಾದುದು. ಅವನು ಈ ನ್ಯಾಯ ತೀರ್ಮಾನಕ್ಕೆ ನಾಲ್ಕು ಶ್ರೀವೈಷ್ಣವ ಕೇಂದ್ರದಿಂದ ವೈಷ್ಣವ ಪ್ರಮುಖರನ್ನು ಕರೆಸಿದ್ದು ಅವರಲ್ಲಿ ಸಕಲಾಚಾರ್ಯರು,

ಸಕಲಸಮಯಿಗಳು,ಸಕಲ ಸಾತ್ವಿಕರು, ಮೋಷ್ಟಿಕರು(ಮುಷ್ಟಿಕರು, ಜೋಳಿಗೆ ಹಿಡಿದು ಭತ್ತ, ರಾಗಿ ಭಿಕ್ಷೆ ಬೇಡುವವರು) ತಿರುಪಣಿ, ತಿರುವಿಡಿ, ತಂಣ್ಣೀರವರು, ನಾಲ್ವತ್ತೆಂಟು ಜನಗಳು, ಸಾವಂತಬೋವರ್ಕಳು, ತಿರಿಕುಲ, ಜಾಂಬವಕುಲವೂ ಸೇರಿದ ಹದಿನೆಂಟು ನಾಡ ಶ್ರೀವೈಷ್ಣವರಿದ್ದರು ಎಂಬ ವಿವರಗಳನ್ನುಡಾ.ಎನ್.ಎಸ್.ತಾರಾನಾಥರು ಗುರುತಿಸುತ್ತಾರೆ.[೨] ಬುಕ್ಕರಾಯನ ಈ ಉದಾತ್ತ ನಡವಳಿಕೆಯನ್ನು ಇತಿಹಾಸವು ಗುರುತಿಸಿದೆ.

ಈ ಶಾಸನವು ಧರ್ಮ ಸಮನ್ವಯವನ್ನು ಸಾರುವ 'ಜಯಪತ್ರ' ಮಾದರಿಗೆ ಒಂದು ಉತ್ತಮ ಉದಾಹರಣೆ. ಕನಕದಾಸರು ಈ ಘಟನೆ ನಡೆದ ಕಾಲಕ್ಕೆ ಈಗ ತಿಳಿದ ಮಟ್ಟಿಗೆ ಬದುಕಿಲ್ಲ. ಆದರೆ ಈ ಧರ್ಮ ಸಂಘರ್ಷದ ಪರಿಣಾಮಗಳನ್ನು ಅವರು ಎದುರಿಸಿದ್ದಾರೆ. ಅವರ ಕಾಲಕ್ಕೂ ಅದು ಮುಂದುವರಿದುಕೊಂಡು ಬಂದಿದೆ. 'ರಾಮಧಾನ್ಯ ಚರಿತ್ರೆ' ಯು ಈ ಸಂಘರ್ಷದ ಒಂದು ರೂಪಕವೂ ಹೌದು. ರಾಮ ಇಲ್ಲಿ ಪ್ರಭುತ್ವದ ಪ್ರತಿನಿಧಿ. ಅರಮನೆಯಿಂದ ಎಲೆಮನೆಗೆ ಪಲ್ಲಟಗೊಳ್ಳುವ ರಾಮನ ವೈಯಕ್ತಿಕ ಬದುಕಿನಲ್ಲಿ ರಾಜದರ್ಪವಿಲ್ಲ. ಎಲ್ಲವನ್ನೂ ಕೂಲಂಕಷವಾಗಿ ವಿವೇಚಿಸುವ ವಿವೇಕವಿದೆ. ರಾಮನ ನ್ಯಾಯತೀರ್ಮಾನದ ಅತ್ಯುತ್ಕೃಷ್ಟ ಮಾದರಿಯ ಕಥನಗಳು ಹರಿಕಥೆದಾಸರ ಸಾಮಗ್ರಿಗಳಲ್ಲಿ ಹಲವಿವೆ. ರಾಮನ ರಾಜ್ಯದಲ್ಲಿ ನಾಯಿಗೂ ನ್ಯಾಯದಾನವಿತ್ತು, ಪಕ್ಷಿಗೂ ರಕ್ಷಣೆಯಿತ್ತು. ಸಂಗ್ರಹ ರಾಮಾಯಣದಲ್ಲಿ ಹಾಗೂ ಪದ್ಮಪುರಾಣದಲ್ಲಿ ಈ ಕಥೆ ಬರುತ್ತದೆ. ಅಯೋಧ್ಯೆಯ ಮಹಾದ್ವಾರದಲ್ಲಿ ಮುದಿ ನಾಯಿಯೊಂದು ಬಂದು ಎರಡೇ ಕಾಲಿನಲ್ಲಿ ನಿಂತು ತನ್ನ ಅಹವಾಲನ್ನು ಸ್ವೀಕರಿಸಬೇಕೆಂದು ಪ್ರಲಾಪಿಸಿತು.

ಅಗಣ್ಯ ಗುಣಸಂಪನ್ನ ಜಗನ್ಮಂಗಲ ಕೀರ್ತನ
ನೀಚಜಾತೇಃ ಪ್ರಲಾಪೋ ಮೇ ಕ್ಷಮ್ಯತಾಂ ಕರುಣಾಕರ (ಸಂಗ್ರಹ
ರಾಮಾಯಣ)[೩]

ಈ ಮೊರೆಯನ್ನು ಕೇಳಿ ರಾಮ ನಾಯಿಯನ್ನು ವಿಚಾರಿಸಿದಾಗ 'ಸವಾರ್ಥಸಿದ್ಧ' ನಾಮಕನೆಂಬ ಸಂನ್ಯಾಸಿಯು ತನ್ನನ್ನು ಹೊಡೆದು ಹಿಂಸಿಸಿದ ಬಗ್ಗೆ ಹೇಳಿಕೊಳ್ಳುತ್ತದೆ. ಹಾಗೆಯೇ ಪದ್ಮಪುರಾಣದಲ್ಲಿ ರಣಹದ್ದು ಮತ್ತು ಗೂಬೆಗೆ ಸಂಬಂಧಿಸಿ ನಡೆದ ವಾಸಸ್ಥಾನದ ವ್ಯಾಜ್ಯವನ್ನು ರಾಮ ಸುಧಾರಣೆ ಮಾಡುತ್ತಾನೆ. ತಪ್ಪಿತಸ್ಥರಿಗೆ ಶಿಕ್ಷೆಯನ್ನೂ

---

೨. ಡಾ. ಎನ್.ಎಸ್. ತಾರಾನಾಥ: ಶ್ರವಣಬೆಳಗೊಳದ ಬುಕ್ಕರಾಯನ ಶಾಸನ: ಕೆಲವು ಹೊಸ ಸಂಗತಿಗಳು, ಅರುಹು- ಕುರುಹು, ಸಂಚಿಕೆ ೧೫, ಪುಟ೭-೨೧,ಅಕ್ಟೋಬರ್-ಡಿಸೆಂಬರ್೨೦೧೨

೩. ಸಂತ ಭದ್ರಗಿರಿ ಅಚ್ಯುತದಾಸರು, ಶ್ರೀ ಹರಿಕಥಾಮೃತ ಸಿಂಧು, ಪುಟ-೬೫೬,

ವಿಧಿಸುತ್ತಾನೆ. ರಾಮ ರಾಜ್ಯದಲ್ಲಿ ಸತ್ಯ, ಧರ್ಮ, ಪರೋಪಕಾರ ಹಾಗೂ ನ್ಯಾಯನಿಷ್ಠುರತೆ ಎಂಬ ನಾಲ್ಕು ಕಾಲುಗಳಿಂದ ಸಧೃಢವಾಗಿತ್ತು ಎಂದು ತುಳಸೀದಾಸರ ರಾಮಚರಿತ ಮಾನಸ ಹೇಳುತ್ತದೆ. ಪ್ರಾಯಶಃ ಕನಕದಾಸರಿಗೆ ಧಾನ್ಯ ರೂಪಕ ಸೃಷ್ಟಿಸಲು ಇಂತಹ ರಾಮಕಥಾ ಹಿನ್ನಲೆ ಪ್ರೇರಣೆ ನೀಡಿದೆ. ರಾಮ ರಾಜ್ಯದ ಆದರ್ಶವನ್ನು ಸಮಕಾಲೀನ ಪ್ರಭುತ್ವದಲ್ಲೂ ನೋಡಬಯಸುವ ಕನಕದಾಸರಿಗೆ ಬುಕ್ಕರಾಯನ ಉದಾರತೆಯು ರಾಮನ ವ್ಯಕ್ತಿತ್ವದಲ್ಲಿ ಕಂಡಿದೆ. ಅಲ್ಪ ಸಂಖ್ಯಾತರಾದ ಜೈನರು ಪ್ರಬಲ ವರ್ಗವಾದ ವೈಷ್ಣವರಿಂದ ದೌರ್ಜನ್ಯಕ್ಕೆ ಒಳಗಾಗುವ ಸನ್ನಿವೇಶ ಬಂದಾಗ ಸ್ವತಃ ಬುಕ್ಕರಾಯನೇ ಯಾವ ಧರ್ಮಕ್ಕೂ ಅನ್ಯಾಯವಾಗದ ಹಾಗೆ ನ್ಯಾಯ ತೀರ್ಮಾನ ಮಾಡುವುದು ರಾಗಿ – ಬತ್ತದ ಜಗಳವನ್ನು ಪರಿಹರಿಸಿದ ರೀತಿಯೇ ಆಗಿದೆ.

ಪ್ರಭುತ್ವವು ಯಾವಾಗಲು ತಾನು ಮಾತನಾಡುತ್ತದೆಯೇ ಹೊರತು ಇತರರಿಗೆ ಮಾತನಾಡುವ ಅವಕಾಶವನ್ನು ನೀಡುವುದಿಲ್ಲ. ತನ್ನ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಉದ್ದೇಶಕ್ಕಾಗಿಯೇ ನ್ಯಾಯದ ಪರಿಕಲ್ಪನೆಯನ್ನೂ ಸೃಷ್ಟಿಸುತ್ತದೆ. ಅಲ್ಲಿ ಬಹುಸಂಖ್ಯಾತರ, ಪ್ರಬಲ ವರ್ಗದ ಅಧಿಕಾರ ಕೇಂದ್ರಗಳನ್ನು ಗಟ್ಟಿಗೊಳಿಸಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಬಯಸುತ್ತದೆ. ಆದರೆ ಬುಕ್ಕರಾಯನ ಔದಾರ್ಯ ಇದಕ್ಕಿಂತ ಭಿನ್ನವಾದುದು ಎನ್ನುವುದು ಗಮನಾರ್ಹ. ಶ್ರವಣಬೆಳಗೊಳದ ಈ ಘಟನೆಯು ಪ್ರಭುತ್ವವು ಧಾರ್ಮಿಕ ನ್ಯಾಯವನ್ನು ಹೇಗೆ ಪ್ರತಿಪಾದಿಸಿತು ಎನ್ನುವುದಕ್ಕೆ ಸಾಕ್ಷಿಯಾಗಿರುವಂತೆ ದುರ್ಬಲ ಹಾಗೂ ಪ್ರಬಲವರ್ಗಗಳ ನಡುವಿನ ವಾಗ್ವಾದಕ್ಕೆ ರಾಮನ ಪ್ರತಿಕ್ರಿಯೆ ಕೂಡ ಅದೇ ಮಾದರಿಯದು. ಮುಚುಕುಂದನ ಆಶ್ರಮದಲ್ಲಿ ನಡೆದ ಈ ಜಗಳದ (ಮಾತುಗಳಲ್ಲಿ 'ರಾಗಿ' 'ಶಿವಶಿವ' ಎನ್ನುವುದನ್ನು,ರಾಮ ಶಿವನನ್ನು ಸ್ಮರಿಸುವುದನ್ನು ಗಮನಿಸಬೇಕು) ತೀರ್ಮಾನಕ್ಕೆ ಆರು ತಿಂಗಳ ಕಾಲಾವಕಾಶವನ್ನು ನಿಗದಿಪಡಿಸಿ ರಾಮ ಅಯೋಧ್ಯೆಗೆ ತೆರಳುತ್ತಾನೆ. ಕಾಡಿನಿಂದ ನಾಡಿಗೆ ಕಥನವು ಚಲಿಸುತ್ತದೆ. ಆರೇಳು ತಿಂಗಳ ಬಳಿಕ ರಾಮ ಈ ಚಿಕ್ಕದಾದ, ಪ್ರಭುತ್ವದ ದೃಷ್ಟಿಯಲ್ಲಿ ಕ್ಷುಲ್ಲಕವಾದ ಈ ಜಗಳದ ತೀರ್ಮಾನವನ್ನು ಮರೆಯುವುದಿಲ್ಲ. ನೃತ್ಯ, ಸಂಗೀತ, ಗಾನ ವೈಭವದಲ್ಲೂ ರಾಮ ಆಶ್ರಮದಲ್ಲಿ ಸೆರೆಯೊಳಗಿರುವ ನೆಲ್ಲು–ನರೆದಲೆಗನನ್ನು ಹನುಮಂತನ ಮೂಲಕ ಸಭೆಗೆ ಕರೆಸುತ್ತಾನೆ. ಬುಕ್ಕರಾಯನ ನ್ಯಾಯ ತೀರ್ಮಾನದಲ್ಲಿ ಸಕಲಾಚಾರ್ಯರು (ಅಂದರೆ ಶಿಷ್ಯಕೋಟಿ ವೃದ್ಧಿಸುವ ಗುರುವರ್ಗ ಹಾಗೂ ೭೨ ಸಿಂಹಾಸನಾಧಿಪತಿಗಳು) ಸಕಲ ಸಮಯಿಗಳು (ಗೌಡ, ಹೆಗ್ಗಾಣಿಗ, ಗಾಣಿಗ, ದೇವಾಂಗ ಮೊದಲಾದ ವೈಷ್ಣವ ದೀಕ್ಷೆ ಪಡೆದವರು),

ಸಕಲ ಸಾತ್ವಿಕರು (ವೈಷ್ಣವ ಧರ್ಮದ ಗುರು ಪರಂಪರೆಯವರು), ಮೋಷ್ಟಿಕರು (ಭಿಕ್ಷೆ ಬೇಡುವ ವರ್ಗದವರು), ತಿರುಪಣಿ (ನೈವೇದ್ಯ ಸಿದ್ಧಗೊಳಿಸುವವರು),

ತಂಣ್ಣೀರವರು (ದೇವರ ಆಭಿಷೇಕಕ್ಕೆ ನೀರು ತರುವವರು), ನಲ್ವತ್ತೆಂಟು ಜನಂಗಳ್ (ಆಧಿಕಾರಿ ವರ್ಗದವರು), ತಿರುವಿಡಿ (ದೇವರ ಪಲ್ಲಕ್ಕಿ, ಉತ್ಸವ ಮೂರ್ತಿ ಹೊರುವವರು) ಹದಿನೆಂಟು ನಾಡ ವೈಷ್ಣವರೂ ಸೇರಿದ್ದರೆನ್ನುವುದನ್ನು ಶಾಸನಗಳು ತಿಳಿಸುತ್ತವೆ. ಅದೇ ರೀತಿ ರಾಮನು ಶಿವನನ್ನು ನೆನೆದ ತಕ್ಷಣ ಇಂದ್ರ, ಮೂರು ಲೋಕದ ಸೃಷ್ಟಿಕರ್ತರು ಹಾಗೂ

ವಸುಗಳಮರರು ಭುಜಂಗಾಮರ
ರಸುರ ಕಿನ್ನರ ಯಕ್ಷ ರಾಕ್ಷಸ
ಶಶಿರವಿಗಳಾದಿತ್ಯ ವಿದ್ಯಾಧರರು ಗುಹ್ಯಕರು
ವಸುಧೆಯಮರರು ಕ್ಷತ್ರಿಯರು ಜೋ
ಯಿಸರು ವೈಶ್ಯ ಚತುರ್ಥರುನ್ನತ
ಕುಶಲ ವಿದ್ಯಾಧಿಕರು ನೆರೆದುದು ನೃಪನ ಸಭೆಯೊಳಗೆ

ಎನ್ನುವಲ್ಲಿ ಕನಕದಾಸರು ನೀಡುವ ವಿವರಗಳನ್ನು ಗಮನಿಸಬಹುದು. ರಾಮ ಸಭೆಗೆ ಬಂದ ನರೆದಲಗನ ವಿನಯವನ್ನು ಗಮನಿಸಬೇಕು.

ನಿಂತು ಕರಗಳ ಮುಗಿದು ಧರಣೀ
ಕಾಂತ ರಘುವರನೀ ಸುಬುದ್ಧಿಯ
ನೆಂತು ನಮ್ಮಗ್ಗರುಹುವಿರಿಯದ ಪೇಳೆಂದ

ಅದಕ್ಕೆ ರಾಮ ಘನ ತಪೋಮಹಿಮರನ್ನು ಕುರಿತು, 'ಮನವ ವಂಚಿಸಲಾಗದು ಈ ಧರ್ಮವನು ನೆರೆ ತಿಳಿದು' ಎನ್ನುತ್ತಾ 'ಪರಮಸಾರ ಹೃದಯ' ವುಳ್ಳವರನ್ನು ಗುರುತಿಸಲು ಹೇಳುತ್ತಾನೆ. ಯಾವ ಧರ್ಮ ಬಡವರನ್ನು, ಶೂದ್ರವರ್ಗವನ್ನು ಒಳಗೊಂಡು ಬಲ್ಲಿದರ ಧರ್ಮವಾಗಿ ಬೆಳೆಯುತ್ತದೊ ಅದು 'ಪರಮ' ಸಾರವುಳ್ಳದ್ದೆಂದರ್ಥ. ಶ್ರೇಷ್ಠತೆಯ ಮಾನದಂಡ ಬದಲಾಗುವುದನ್ನು ಇಲ್ಲಿ ಕಾಣಬಹುದು. ಇಂದ್ರ, ನಾರದರು, ಕಪಿಲಮುನಿಗಳು ನರೆದಲೆಗನನ್ನೆ ಶ್ರೇಷ್ಠವೆಂದು ಗುರುತಿಸಿದಾಗ ರಾಮ ರಾಗಿಗೆ 'ಜಯಪತ್ರದ' ರೂಪದಲ್ಲಿ ರಾಘವನೆಂಬ ಅಭಿಧಾನ ನೀಡುತ್ತಾನೆ. ಜೊತೆಗೆ ಬತ್ತವನ್ನೂ ಕರೆದು ರಾಮ ನುಡಿದ ಮಾತು ಬುಕ್ಕರಾಯನನ್ನೇ ನೆನಪಿಸುತ್ತದೆ.

ದೀನರಲಿ ದಾರಿದ್ರ ಜನದಲಿ
ನೀನು ನಿರ್ದಯನೆಂದದೆವಲ್ಲದೆ
ಹೀನಗಳೆದವರಲ್ಲ ನಿನ್ನನು ಸಭೆಯೊಳಗೆ

ಎಂದು ಸಮಾಧಾನ ಪಡಿಸುತ್ತಾ "ನೀವು ಧರೆಯೊಳಗಿಬ್ಬರತಿ ಹಿತದಲಿ ನೀವಿಹುದು" ಎನ್ನುತ್ತಾನೆ. "ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲ"

ಎಂಬ ಬುಕ್ಕರಾಯನ ಶಾಸನದ ಮಾತೇ ಇಲ್ಲಿ ಪ್ರತಿಬಿಂಬಿಸಿದೆ. ರಾಗಿಯೂ ಬತ್ತದ ಕಣ್ಣೀರನ್ನು ಒರೆಸಿ ಸಮನ್ವಯ ಸಾಧಿಸುವ ಚಿತ್ರ ಹೃದಯಸ್ಪರ್ಶಿಯಾಗಿದೆ. "ವೈಷ್ಣವರ ಕೈಯಲು ಜೈನರ ಕೈವಿಡಿದುಕೊಟ್ಟು" ಎಂಬ ಬುಕ್ಕರಾಯನ ಶಾಸದಲ್ಲೂ ಇಂತದೇ ಹೃದಯಸ್ಪರ್ಶಿಚಿತ್ರ ಕಾಣಬಹುದು. ಈ ಹಿನ್ನೆಲೆಯಲ್ಲಿ ರಾಮಧಾನ್ಯ ಚರಿತ್ರೆಯನ್ನು ಮಧ್ಯಕಾಲೀನ ಜೈನ ವೈಷ್ಣವ ಸಂಘರ್ಷದ ರಾಜಕೀಯ ಸಂಕಥನವಾಗಿ ನೋಡಲು ಸಾಧ್ಯವಿದೆ. ಮತೀಯ ಸಂಘರ್ಷವನ್ನು ಪ್ರಭುತ್ವವು ನಿಭಾಯಿಸಿದ ರೀತಿಗೆ ದಾಸರ 'ರಾಮಧಾನ್ಯ ಚರಿತ್ರೆ' ಒಂದು ಉತ್ತಮ ಉದಾಹರಣೆ. ಕೊನೆಗೆ 'ಕಲಿತನವ ಕೈಗೊಂಡು ಸತ್ಯದ ಹೊಲಬುದಪ್ಪದೆ ಚೋಳದೇಶವ ನೊಲಿದು ನೀ ಸಲಹು' ಎಂದು ಬತ್ತವನ್ನು ಕರೆದು ರಾಮ ಚೋಳದೇಶವನ್ನು ಆಳಿಕೊಂಡಿರು ಎಂದು ಹೇಳುವುದನ್ನು ನೋಡಿದರೆ ವೈಷ್ಣವ ಧರ್ಮವನ್ನು ಹುಟ್ಟು ಹಾಕಿದ ರಾಮಾನುಜಾಚಾರ್ಯರನ್ನು ಈ ಮೂಲಕ ನೆನೆದು ಕೊಂಡಿರಬಹುದೆ? ಜೊತೆಗೆ ತಮಿಳುನಾಡು ಬತ್ತದ ಬೆಳೆಗೆ ಪ್ರಸಿದ್ಧ ಎನ್ನುವುದನ್ನು ಸೂಚಿಸಿರಬಹುದೆ? ಈ ಎರಡೂ ಸಾಧ್ಯತೆಗಳಿವೆ. ಪುರಾಣವನ್ನೂ ಇತಿಹಾಸವನ್ನು ಒಟ್ಟಾಗಿ ಬೆರೆಸಿ ಎಲ್ಲಾ ದೀನ, ದರಿದ್ರ ವರ್ಗದವರಿಗೂ ಸಮಾನ ಅವಕಾಶಗಳು ಸಿಗಬೇಕೆನ್ನುವ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ಸೃಷ್ಟಿಸಿದ ಕನಕದಾಸರು ಹರಿದಾಸ ಪಂಥದ ಮಹಾ ಮಾನವತಾವಾದಿ.

೧. 'ರಾಮಾಯಣ'ವೆಂಬ ಮಹಾಕಥೆಗೆ ತನ್ನ ಕಥೆಯನ್ನೂ ಸೇರಿಸ ಬಯಸುವ ದಾಸರು ಮಹಾ ಕಾವ್ಯಗಳಲ್ಲಿ ಉಪಕತೆ ಸೇರಿಸುವ ಅವಕಾಶ ಜಾನಪದ ಹಿನ್ನಲೆಯಿಂದ ಸ್ವೀಕರಿಸಿದ್ದಾರೆ. ಮುಖ್ಯವಾಗಿ ರಾಮಧಾನ್ಯ ಚರಿತ್ರೆ ಧಾನ್ಯಗಳ ರೂಪಕ (Alligery). ಈ ರೂಪಕ ಸೃಷ್ಟಿಯ ಹಿಂದೆ ಕನಕದಾಸರು ದಾಸಪಂಥ ಸೇರಿದ ದಿನದಿಂದ ಅನುಭವಿಸಿದ ಜಾತಿ ಕೀಳರಿಮೆಯ ನೋವುಗಳಿವೆ. ಇಲ್ಲಿರುವ ವಾಗ್ವಾದಗಳು ಧಾನ್ಯದ ಹೆಸರುಗಳ ಮೂಲಕ ನಡೆದಿದೆ ಇದರ ಅನ್ವಯಾರ್ಥ ಮನುಷ್ಯ ವರ್ಗದ ಜಾತಿ ಕಲಹಕ್ಕೆ ಸಂಬಂಧಿಸಿದೆ. ಈ ಸಂಭಾಷಣೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಇಬ್ಬರೂ ಸಮಬಲರು. ಪರಸ್ಪರರ ಹೆಚ್ಚುಗಾರಿಕೆಯನ್ನು ವಿವರಿಸಿ ಕೊಳ್ಳಲು ಸಮರ್ಥರು. ಮಾತುಗಳಿಗೆ ಪ್ರತಿ ಮಾತುಗಳು ಬೆಳೆಯುವುದನ್ನು ಗಮನಿಸಬೇಕು. ಇಲ್ಲಿಯವರೆಗಿನ ಕೇಳವರ್ಗದ ಮಾತಿನ ಗೈರುಹಾಜರಿ ಒಮ್ಮೆಲೆ ಆಸ್ಫೋಟಿಸಿದೆ. 'ಸಿಡಿಲ ಗರ್ಜನೆಯಂತೆ ಸಭೆಯಲಿ ಜರೆದನಾ ವ್ರೀಹ್ರಿಯ'. ವ್ಯಾಸರಾಯರ ಬಳಿ ಶಿಷ್ಯತ್ವ ಕೈಗೊಂಡ ದಿನದಿಂದ ಅನುಭವಿಸಿದ ಅಪಮಾನಕ್ಕೆ ಬಹಳ ದೀರ್ಘ ಚಿಂತನೆಯ ಉತ್ತರಗಳನ್ನು ಕನಕದಾಸರು ಸಿದ್ಧಗೊಳಿಸಿಕೊಂಡು ಬಹು ಚಾತುರ್ಯದಿಂದ ಅದನ್ನು ಪ್ರಯೋಗಿಸಲು ಸಮಯ, ಸಂದರ್ಭ ಕಾಯುವ ಮನೋಸ್ಥಿತಿ

ಯೊಂದನ್ನು ಕಾಯ್ದುಕೊಂಡಂತೆ ತೋರುತ್ತದೆ. ಕನಕನ ಬೌದ್ಧಿಕತೆ, ಆಧ್ಯಾತ್ಮ ನಿಷ್ಠೆಯನ್ನು ಮೊದಲಿನಿಂದಲೂ ಪರೀಕ್ಷಿಸುತ್ತಾ, ಗೌರವಿಸುತ್ತಾ ಬಂದ 'ಸತ್ವ ಪರೀಕ್ಷೆಯ ಮಾದರಿ' ಇಲ್ಲಿಯೂ ಬಳಕೆಯಾಗಿದೆ. ಬಾಳೆಹಣ್ಣಿನ ಕಥೆ, ನಾನು ಹೋದರೆ ಹೋದೇನು ಪ್ರಸಂಗ ಎಲ್ಲವನ್ನೂ ಹಿನ್ನಲೆಯಾಗಿಟ್ಟುಕೊಂಡು ಈ ಕೃತಿಯನ್ನು ನೋಡಿದರೆ ಅದು ಅಂದಿನ ಸನ್ನಿವೇಶಗಳಿಗೆ ಹೇಗೆ ಉತ್ತರದಾಯಿತ್ವವನ್ನು ರೂಪಿಸಿಕೊಂಡಿದೆ ಎನ್ನುವುದು ಸ್ಪಷ್ಟವಾಗುತ್ತದೆ. ವ್ಯಾಸರಾಯರು ರಾಮನಾಗಿಯೂ, ಪುರಂದರದಾಸರು ಗೌತಮರಾಗಿಯೂ, ಜಾತಿ ಶ್ರೇಷ್ಠತೆಯ ಅಹಮಿಕೆಯನ್ನು ರೂಢಿಸಿಕೊಂಡ ಇತರರು ಬತ್ತವಾಗುವ ರೂಪಕವಾಗಿಯೂ ರಾಮಧಾನ್ಯಚರಿತ್ರೆಯನ್ನು ವಿಸ್ತರಿಸಿಕೊಳ್ಳಬಹುದು.

೨. ರಾಮಧಾನ್ಯ ಚರಿತ್ರೆ ಉಡುಪಿಯ ಜಾತೀಯ ಪರಿಸರಕ್ಕೆ ಹಿಡಿದ ಕನ್ನಡಿ. ಹಿಂದಿನ ಅಧ್ಯಾಯದಲ್ಲಿ ಇದರ ಸ್ವರೂಪವನ್ನು ಗಮನಿಸಿದ್ದೇವೆ. ವಾದಿರಾಜರು ಕೆಳವರ್ಗಗಳನ್ನು ವೈಷ್ಣವ ಮತಕ್ಕೆ ತರುವ ಕಾರ್ಯದಲ್ಲಿ ಕನಕದಾಸರು ಮುಖ್ಯಪಾತ್ರವಹಿಸಿದ್ದರು. ದಾಸರ ಕುರಿತಾಗಿ ಹುಟ್ಟಿದ ಐತಿಹ್ಯಗಳೆ ಇದಕ್ಕೆ ಸಾಕ್ಷಿ. ಕನಕದಾಸರಿಗೆ ಮಂದಿರ ಪ್ರವೇಶ ನಿರಾಕರಿಸಿದ ಜಾತಿ ವ್ಯವಸ್ಥೆಯನ್ನು ವಾದಿರಾಜರು ಕಟುವಾಗಿಯೇ ವಿರೋಧಿಸಿದ್ದರು. ಅಲ್ಲಿಯ ಸಂಘರ್ಷದ ತೀವ್ರತೆಯನ್ನು ನಿರೂಪಿಸುವ ಕಾರಣವೂ ಈ ಕೃತಿಗಿದೆ. ಬ್ರಾಹ್ಮಣ-ಶೂದ್ರ ನೆಲೆಯ ತಿಕ್ಕಾಟಕ್ಕೆ ಇಲ್ಲಿನ ವಾಗ್ವಾದಗಳು ನಿದರ್ಶನವಾಗಿವೆ. ವೈದಿಕರ ಆಚರಣೆಗಳ ಬಗೆಗೂ ಇರುವ ವಿಡಂಬನೆಯನ್ನು ಗಮನಿಸಬಹುದು.

೩. ವಿಜಯನಗರ ಕಾಲದ ಆರ್ಥಿಕ ಚಟುವಟಿಕೆಯನ್ನು ಗಮನಿಸಿದರೆ ಅಲ್ಲಿನ ವೈಭವದಲ್ಲಿ ವ್ಯಾಪಾರಿ ದೃಷ್ಟಿ ವ್ಯಕ್ತವಾಗುತ್ತದೆ. ಮುತ್ತು ರತ್ನಗಳು ಬೀದಿಯಲ್ಲಿ ಮಾರಾಟ ಮಾಡುತ್ತಿದ್ದ ದೃಶ್ಯ, ಮೋಹನ ತರಂಗಿಣಿಯು ನಿರೂಪಿಸುವ ವಿಜಯನಗರದ ವೈಭವ ಇವೆಲ್ಲವೂ ಇದಕ್ಕೆ ಸಾಕ್ಷಿ. ಆಗ ತಾನೆ ಪೋರ್ಚುಗೀಸರಿಂದ ಸಮುದ್ರ ಮಾರ್ಗದ ಮೂಲಕ ದೇಸೀಯ ಉತ್ಪನ್ನಗಳಿಗೆ ವ್ಯಾಪಾರವು ಆರಂಭವಾದ ಕಾಲ ಹಾಗೂ ಧನ ಸಂಪತ್ತುಗಳನ್ನು ಗಳಿಸುವ ಸಿರಿವಂತರ ದರ್ಪವೂ ಮಿತಿ ಮೀರುತ್ತಿದ್ದ ಆ ಸಂದರ್ಭದಲ್ಲೇ ಕನಕದಾಸರು, ಪುರಂದರದಾಸರು ಶ್ರೀಮಂತಿಕೆಯ ಮದದಲ್ಲಿ ಮುಳುಗಿದ ಸಿರಿವಂತ ವರ್ಗವನ್ನು ತಮ್ಮ ಕೀರ್ತನೆಗಳ ಮೂಲಕ ಎಚ್ಚರಿಸುವ ಕೆಲಸವನ್ನು ಮಾಡಿದ್ದಾರೆ. ಕೆಲವೊಮ್ಮೆ ನೆರವಾಗಿ ಈ ವರ್ಗವನ್ನು ಎದುರು ಹಾಕಿಕೊಳ್ಳದ ಅಸಾಹಾಯಕತೆಯಲ್ಲಿ ತಿರುಪತಿ ಗೋವಿಂದನನ್ನು'ಶೆಟ್ಟಿ'(ಬಣಜಿಗ)ಯಾಗಿ ಪರಿಕಲ್ಪಿಸಿ ತಮ್ಮ ಆಕ್ಷೇಪವನ್ನು ದಾಖಲಿಸಿದ್ದಾರೆ. 'ಸತ್ವಹೀನರನು ಬಡವರನು ಕಣ್ಣೆತ್ತಿ ನೋಡೆ ಧನಾಢ್ಯರನು

ಬೆಂಬತ್ತಿ ನಡೆವವುಪೇಕ್ಷೆ ನಿನ್ನದು' ಎನ್ನುವ ನುಡಿಯಲ್ಲಿ ಧನಾಢ್ಯರ ಶ್ರೇಷ್ಠತೆಯ ಭ್ರಮೆಗೂ ರಾಮಧಾನ್ಯ ಚರಿತ್ರೆಯಲ್ಲಿ ಚಾಟಿ ಏಟು ದೊರೆತಿದೆ.

೪. ಮಧ್ಯಯುಗೀನ ಸಂದರ್ಭದಲ್ಲಿ ವರ್ಗ ಸಂಘರ್ಷದ ಸ್ವರೂಪವನ್ನು ಕಟ್ಟಿಕೊಡುವ ಮಹತ್ವದ ಕೃತಿಯಾಗಿ ಕನಕದಾಸರ ರಾಮಧಾನ್ಯ ಚರಿತ್ರೆ ಕೆಲಸ ಮಾಡಿದೆ. ಮಾರ್ಕ್ಸ್‌ವಾದಿ ಆಲೋಚನೆ, ಸಿದ್ಧಾಂತಗಳು ಕಣ್ಣು ಬಿಡುವ ಐದಾರು ಶತಮಾನಗಳ ಹಿಂದೆ ಈ ನೆಲದಲ್ಲಿ ವಚನಕಾರರ ಮೂಲಕ, ದಾಸರ ಮೂಲಕ ವರ್ಗವಾದಿ ಧೋರಣೆಯನ್ನು ವಿಡಂಬಿಸುವ ಸಿದ್ಧಾಂತ ಹುಟ್ಟಿದೆ. ಮಧ್ಯಕಾಲೀನ ಫ್ಯೂಡಲ್ ವ್ಯವಸ್ಥೆ ಸೃಷ್ಟಿಸಿದ ಭೂಮಿ ರಾಜಕಾರಣದ ಪ್ರಶ್ನೆಗಳನ್ನು ಕನಕದಾಸರ ರಾಮಧಾನ್ಯ ಚರಿತ್ರೆ ನಿರ್ವಹಿಸುವ ರೀತಿ ನೋಡಿದರೆ ಬಡವರ, ರೈತರ ಪರವಾದ ನಿಲುವುಗಳಿಗೆ ಆಗಲೇ ಮುಖಾಮುಖಿಯಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ದುಡಿಯುವ ವರ್ಗ ಮತ್ತು ಭೋಗಿಸುವ ವರ್ಗಗಳ ನಡುವೆ ಕಾಣಿಸಿಕೊಳ್ಳುವ ಸಂಘರ್ಷ ಮುಖ್ಯವಾಗಿ ಭೂಮಿಯ ಅಧಿಕಾರದ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತದೆ. ಬತ್ತ– ರಾಗಿಗಳೆರಡೂ ಭೂಮಿಯನ್ನೇ ತಮ್ಮ ಜೀವನಾಧಾರವಾಗಿ ಆಶ್ರಯಿಸಿರುವ ಆಳುವ ಹಾಗೂ ದುಡಿಯುವ ವರ್ಗದ ಪ್ರನಿಧಿಗಳು. ಧಾನ್ಯಗಳ ಹೆಸರುಗಳಲ್ಲಿಯೇ ಕನಕದಾಸರು ಇದನ್ನು ಸೂಕ್ಷ್ಮವಾಗಿ ಪ್ರತಿಪಾದಿಸುತ್ತಾರೆ. ವ್ರೀಹಿ – ನರೆದಲೆಗ. ಕನ್ನಡದಲ್ಲಿ ವ್ರೀಹಿಗೆ ನೆಲ್ಲು ಎಂಬ ಪ್ರಯೋಗವಿದ್ದರೂ ಕನಕದಾಸರು ಅದನ್ನು ಬಳಸದೆ ವ್ರೀಹಿಯನ್ನೆ ಹೆಚ್ಚಾಗಿ ಬಳಸುತ್ತಾರೆ. ಈ ನೆಲದ ಪ್ರತಿನಿಧಿ ನಿಜವಾಗಿಯೂ ದೇಸೀಯತೆಯ ಹೆಸರನ್ನು ರೂಢಿಸಿಕೊಂಡ ನರೆದಲೆಗನೆ. ವ್ರೀಹಿ ಪರಕೀಯ ಭಾಷೆಯ ಹೆಸರಿನ (ಸಂಸ್ಕೃತ) ಮೂಲಕ ಕಾವ್ಯದಲ್ಲಿ ಪ್ರತಿನಿಧೀಕರಣಗೊಳ್ಳುತ್ತಿದೆ. ವರ್ಷವಿಡೀ ತಮ್ಮ ಜಮೀನುಗಳಲ್ಲಿ ದುಡಿಸಿಕೊಳ್ಳುವ ಜಮೀನ್ದಾರಿ ವರ್ಗ 'ಮಳೆ, ಕ್ಷಾಮ, ಪ್ರಳಯ ಕಾಲ'ದಲ್ಲಿ ದುಡಿಯುವ ವರ್ಗವನ್ನು ಎಷ್ಟು ಆಧರಿಸಿ ಹಿಡಿಯುತ್ತದೆ? ಅಂತಹ ಸಂದರ್ಭಗಳು ಬಂದರೆ ಬಡವರತ್ತ ಅವರು ಕಣ್ಣೆತ್ತಿಯೂ ನೋಡುವುದಿಲ್ಲ. ವರ್ಗ ಹಿತಾಸಕ್ತಿಗಳು ಯಾವಾಗಲೂ ಸಿರಿವಂತರ ಪರವಾಗಿರುತ್ತದೆಯೇ ಹೊರತು ಬಡವರ ಪರವಲ್ಲ. ವರ್ಗ ಹಿತಾಸಕ್ತಿ ಇರುವ ಬತ್ತ ಹಾಗೂ ಅದರ ಎಲ್ಲಾ ಬಳಗವನ್ನು ರಾಗಿ ಮೂದಲಿಸುತ್ತದೆ. ಆಳುವ ಹಾಗೂ ದುಡಿಯುವ ಜನರ ನಡುವೆ ಎದ್ದ ಈ ಜಗಳವನ್ನು ಪರಿಹರಿಸಬೇಕಾದ ಹೊಣೆ ಅರಸನಿಗಿದೆ. ಅಧಿಕಾರ ಕೇಂದ್ರವು ಬಡವರನ್ನೂ ಸಿರಿವಂತರನ್ನೂ ಸಮಾನವಾಗಿ ಪರಿಗಣಿಸಿ ನ್ಯಾಯ ನೀಡಬೇಕೆನ್ನುವುದನ್ನು ಕಾವ್ಯ ಪ್ರತಿಪಾದಿಸುತ್ತದೆ. ವರ್ಗವಿರೋಧಿ ಆಶಯಗಳಿಗೆ ಕಾವ್ಯವು ಕೊಡುವ 'space'ನ್ನು ಗಮನಿಸಬೇಕು. ಸಮಕಾಲೀನ ತಲ್ಲಣಗಳ ಮೂಲಕ ವರ್ತಮಾನಕ್ಕೂ ವಿಸ್ತರಿಸಿಕೊಳ್ಳುವ ವೈಚಾರಿಕ ಪ್ರಜ್ಞೆಯನ್ನು ಗುರುತಿಸಬೇಕು.

೫. ಕನಕದಾಸರಲ್ಲಿ ಸಾಮಾಜಿಕ ನ್ಯಾಯ ಪರಿಕಲ್ಪನೆಯ ಭಾಗವಾಗಿಯೂ ಕೃತಿಯು ಕಾಣಿಸಿಕೊಳ್ಳುತ್ತದೆ. ಮಧ್ಯಕಾಲೀನ ನ್ಯಾಯ ಪದ್ಧತಿಗಳ ಪುನರಾವಲೋಕನಕ್ಕೆ ಇದು ದಾರಿ ಮಾಡುತ್ತದೆ. ಬುಕ್ಕರಾಯ, ದೇವರಾಯ, ಕೃಷ್ಣದೇವರಾಯರ ಕಾಲದಿಂದಲೂ ಜನಸಾಮಾನ್ಯರಿಗೆ ನ್ಯಾಯ ಕೊಡುವ ವ್ಯವಸ್ಥೆ ಚೆನ್ನಾಗಿಯೇ ಇತ್ತು. ಕೆಳದಿನೃಪವಿಜಯವು ಕೆಳದಿಯ ರಾಜ್ಯದಲ್ಲಿ ಶಿವಪ್ಪ ನಾಯಕನು ರೈತಾಪಿ ವರ್ಗದ ಅಹವಾಲನ್ನು ಹೇಗೆ ಸ್ವೀಕರಿಸುತ್ತಿದ್ದ ಮತ್ತು ಅವರಿಗೆ ಯಾವ ಬಗೆಯ ನ್ಯಾಯ ನೀಡುತ್ತಿದ್ದ ಎಂಬ ಸಂಗತಿಯು ದೊರೆಯುತ್ತದೆ.

"ಪ್ರಜೆಗಳುಸಿರ್ವ ಬಿನ್ನಪವನಾಲಿಸಿಯೊಳ್ಗೆರೆ ಕಾಳ್ಪುರಂಗಳಂ
ಸೃಜಿಯಿಸಿ ಮೇಣವರ್ಗೆ ಕರಮೂಲ ಧನಂಗಳನಿತ್ತು ಬಿತ್ತುಮಂ"[೪]

ಕನಕದಾಸರು ಪ್ರತಿಪಾದಿಸುವ ಸಾಮಾಜಿಕ ನ್ಯಾಯ ಪರಿಕಲ್ಪನೆಯು ಪ್ರಭುತ್ವವನ್ನು ಕೇಂದ್ರೀಕರಿಸಿ ಕೆಳವರ್ಗದ ಸಮಾನತೆಯನ್ನು ಎತ್ತಿಹಿಡಿಯುವುದಾಗಿದೆ.

೬. ಹಸಿವು ಮತ್ತು ಆಹಾರದ ಪ್ರಶ್ನೆಯಾಗಿಯೂ ಈ ಕಾವ್ಯ ಮುಖ್ಯವಾಗುತ್ತದೆ. ಮನುಷ್ಯನ ಮೂಲ ಭೂತ ಆವಶ್ಯಕತೆಯಾದ ಆಹಾರವು ಎಲ್ಲರ ಹಕ್ಕು. ಇಲ್ಲಿ ನರೆದಲೆಗನ ಮಾತಿನಲ್ಲಿ ಮಳೆಯ ಅಭಾವ, ಬೆಳೆಯಿಲ್ಲದೆ, ಕ್ಷಾಮ, ಪ್ರಳಯಕ್ಕೆ ತುತ್ತಾಗುವ ಜನರ ಚಿತ್ರಣಗಳಲ್ಲಿ ಹಸಿವು ಮಧ್ಯ ಕಾಲೀನ ಸಮಾಜ ವ್ಯವಸ್ಥೆಯನ್ನು ಕಂಗೆಡಿಸಿದ ಬಗೆಯನ್ನು ಕಾಣಬಹುದು. "ಮಳೆದೆಗೆದು ಬೆಳೆಯಡಗಿ ಕ್ಷಾಮದ ವಿಲಯ ಕಾಲದೊಳನ್ನವಿಲ್ಲದೆ ಅಳಿವ ಪ್ರಾಣಿಗಳಾದರಿಸಿ ಸಲಹುವೆನು" ಎಂಬ ನರೆದೆಲಗನ ಈ ಮಾತನ್ನು ಗಮನಿಸಿದರೆ ಮಧ್ಯಯುಗದ ಕರ್ನಾಟಕದಲ್ಲಿ ಅನ್ನ ಶ್ರೇಷ್ಟ ವರ್ಗದ ಭೋಜನವಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಮೋಹನ ತರಂಗಿಣಿಯಲ್ಲಿ ಬರುವ ಭೂರಿ ಭೋಜನಗಳಲ್ಲಿ ಅನ್ನಕ್ಕೆ ಮೊದಲ ಸ್ಥಾನವಿದ್ದಂತೆ ತೋರುತ್ತದೆ. ಇಲ್ಲಿ ಹೆಸರಿಸುವ ಧಾನ್ಯಗಳ ಜೊತೆಯಲ್ಲಿ ಗೋಧಿಯನ್ನು ಹೆಸರಿಸುವುದಿಲ್ಲ. ಗೋಧಿ ಉಲ್ಲೇಖ ನಂತರ ಬರುತ್ತದೆ. ಕರ್ನಾಟಕಕ್ಕೆ ಗೋಧಿ ಹೊರಗಿನಿಂದ ಬಂದ ಬೆಳೆ ಎಂಬುದರ ಸೂಚನೆಯೂ ಇರಬಹುದು. ಪ್ರಾದೇಶಿಕವಾಗಿ ಸ್ಥೂಲವಾದ ಅರ್ಥದಲ್ಲಿ ಅನ್ನವು ಕರಾವಳಿಯ ಮೂಲ ಆಹಾರ ಬೆಳೆಯಾದರೆ ಗೋಧಿ, ಜೋಳ ಉತ್ತರಕನ್ನಡದ ಬೆಳೆ. ರಾಗಿ ಮುಖ್ಯವಾಗಿ ದಕ್ಷಿಣ ಕರ್ನಾಟಕ, ಮೈಸೂರು ಭಾಗದ ಬೆಳೆ. ಆಹಾರದ ಪ್ರಾದೇಶಿಕತೆಯನ್ನು ಬಳಸಿ ಬೌದ್ಧಿಕತೆಯನ್ನು ಅಳೆಯುವ ಮಾಪಕಗಳೂ ಒಂದು ಕಾಲಕ್ಕೆ ಸಿದ್ಧವಾಗಿದ್ದವು. ಹಾಗಾಗಿ ಅನ್ನ ತಿಂದವರು ಬುದ್ಧಿವಂತರು, ಜೋಳ ತಿಂದವರು ದಡ್ಡರು ಎಂಬ ಭಾವನೆ ಬಲಿಯಲು ಈ ಪ್ರಾದೇಶಿಕತೆಯೂ ಒಂದು

---

೪. ಲಿಂಗಣ್ಣ ಕವಿ (೧೭೫೦): ಕೆಳದಿ ನೃಪವಿಜಯಂ: ಪುಟ-೧೧೨

ಕಾರಣವಾಗಿರಬೇಕು. ಜಮೀನ್ದಾರಿಕೆಯು ರೈತರಿಂದ ಅನ್ನವನ್ನು ಕಸಿದುಕೊಂಡು ಶ್ರೇಷ್ಠ ವರ್ಗಕ್ಕೆ ನೀಡುವಲ್ಲಿ ತೋರಿದ ರಾಜಕಾರಣ ಅನಿವಾರ್ಯವಾಗಿ ಬಡವರಲ್ಲಿ ಹಸಿವಿನ ಪ್ರಶ್ನೆಯನ್ನು ಮುಂದೆ ತಳ್ಳಿತು. ಅಂತಹ ಸಂದರ್ಭದಲ್ಲಿ ಬತ್ತದ ಸ್ಥಾನದಲ್ಲಿ ರಾಗಿ, ಜೋಳ, ಗೋಧಿಗಳು ಬಡವರ ಹಸಿವನ್ನು ಹಿಂಗಿಸಿದೆ. ಈ ಕಾರಣವೂ ಕಾವ್ಯದಲ್ಲಿ ಸ್ಪಷ್ಟವಾಗಿದೆ. ಇದರ ಆರೋಗ್ಯ ಗುಣವು ಎಲ್ಲರಿಗೂ ತಿಳಿದ ಮೇಲೆ ಅದು ಬಡವರ ಶ್ರೀಮಂತರ ಆರೋಗ್ಯ ಸಾಧನವಾಯಿತು. ಕನಕದಾಸರ ಈ ಕೃತಿಯನ್ನು ಆಧರಿಸಿ ಕರ್ನಾಟಕದ ಆಹಾರ ಧಾನ್ಯಗಳನ್ನು ಕುರಿತು ಅಧ್ಯಯನ ಮಾಡಲು ಹೀಗೊಂದು ದಾರಿ ಇದೆ.

ಈ ಎಲ್ಲಾ ಮತ್ತು ಇದಕ್ಕಿಂತಲೂ ಹೆಚ್ಚು ವೈವಿಧ್ಯವಾಗಿ ರಾಮಧಾನ್ಯ ಚರಿತ್ರೆಯನ್ನು ಅರ್ಥೈಸಲು ಸಾಧ್ಯವಿದೆ. ಇಡೀ ಕನಕನ ಆತ್ಮಕಥೆಗೆ ಇದೊಂದು ರೂಪಕ. ಆದರೆ ಗಮನಿಸಲೇ ಬೇಕಾದ ಒಂದು ಮುಖ್ಯ ಸಂಗತಿಯೆಂದರೆ ಈ ಕೃತಿಯು ಮುನ್ನೆಲೆಗೆ ಬರದ ಹಾಗೆ ವ್ಯವಸ್ಥಿತವಾಗಿ ನೋಡಿಕೊಂಡ ವಿದ್ವಾಂಸರ ಜಾತಿ ರಾಜಕಾರಣ. ಕನಕದಾಸರ ಈ ಕೃತಿ ಮೇಲ್ವರ್ಗದ ವಿದ್ಯಾವಂತರಿಗೆ ಪ್ರಿಯವಾಗಿಲ್ಲ ಎನ್ನುವುದಕ್ಕೆ ಇದರ ಒಂದೆ ಒಂದು ಹಸ್ತಪ್ರತಿಯ ದೊರೆತಿರುವುದೆ ಸಾಕ್ಷಿ. ದೇ.ಜವರೇಗೌಡರು ಒಂದೇ ಒಂದು ಅಶುದ್ಧ ಹಸ್ತ ಪ್ರತಿಯಿಂದ ಕನಕದಾಸರ ನಾಲ್ಕನೇ ಜನ್ಮಶತಮಾನೋತ್ಸವ ರಾಜ್ಯ ಸಮಿತಿಯ ಮೂಲಕ ೧೯೬೫ರಲ್ಲಿ ಪೂರ್ಣ ಪ್ರಮಾಣದಲ್ಲಿ ಸಂಪಾದನೆ ಮಾಡಿದರು. "ಕನಕದಾಸನಂತೆಯೇ ದೀನ ಸಾಮಾನ್ಯವಾಗಿ ಕಾಣುವ ಈ ಕೃತಿ, ಒಳಹೊಕ್ಕು ನೋಡಿದಾಗ, ತನ್ನಲ್ಲಿನ ಸಾಮಾಜಿಕ ಧ್ವನಿಯಿಂದಾಗಿ ಚೈತನ್ಯಾತ್ಮಕವೆಂದೂ, ಹಿಂದಿನ ಕನ್ನಡದ ಅಂತಹ ಅಸಾಧಾರಣ ವಿರಳ ಕೃತಿಗಳಲ್ಲಿ ಒಂದೆಂದೂ ತಿಳಿದು ಬರುತ್ತದೆ" ಎನ್ನುವ ಡಾ. ಎಂ.ಚಿದಾನಂದ ಮೂರ್ತಿಗಳ ಮಾತನ್ನು ಗಮನಿಸಬೇಕು.[೫] ಇಷ್ಟು ಮೌಲ್ಯಯುಕ್ತ ಕೃತಿ ಯಾವ ಕಾರಣದಿಂದ ಉಪೇಕ್ಷೆಗೆ ಒಳಗಾಯಿತು ಎನ್ನುವುದಕ್ಕಿರುವ ಕಾರಣ ಸ್ಪಷ್ಟ. ಅಲ್ಲದೆ ೧೯೩೮ರಲ್ಲಿ ಬಂದ ಕಟ್ಟಿ ಶೇಷಾಚಾರ್ಯರು ಬರೆದ ಕವಿ ಕನಕದಾಸರು ಕೃತಿ ಇನ್ನೂರಕ್ಕೂ ಹೆಚ್ಚು ಪುಟಗಳ ಒಂದು ಉದ್ಗ್ರಂಥ. ಇದು ಕನಕದಾಸರ ಬಗ್ಗೆ ಅಧಿಕೃತವಾಗಿ ಮಾತಾಡಬಲ್ಲ ಸಂಶೋಧನಾತ್ಮಕ ಮೌಲ್ಯವುಳ್ಳ ಕೃತಿ ಎಂಬುದರಲ್ಲಿ ಎರಡು ಮಾತಿಲ್ಲ.

ಆದರೆ ಅದರಲ್ಲಿ 'ರಾಮಧಾನ್ಯ ಚರಿತ್ರೆ'ಯ ಪರಿಚಯಕ್ಕೆ ಕೊಟ್ಟ ಸ್ಥಳಾವಕಾಶ ತೀರಾ ಕಡಿಮೆ. ಮೋಹನ ತರಂಗಿಣಿ, ನಳಚರಿತ್ರೆಗಿರುವ ಧಾರ್ಮಿಕ ಪ್ರಾಧಾನ್ಯತೆಯನ್ನು ವಿವರವಾಗಿ ಚರ್ಚಿಸುವ ಈ ಕೃತಿಯಲ್ಲಿ 'ರಾಮಧಾನ್ಯ ಚರಿತ್ರೆ'ಗೆ ಅಷ್ಟು ಮಹತ್ವ

೫೦. ಡಾ. ಎಂ.ಚಿದಾನಂದ ಮೂರ್ತಿ: ಹಾಸ್ಯದ ಕತೆಯೊಂದರಲ್ಲಿ ವರ್ಗ ಹೋರಾಟ: 'ರಾಮಧಾನ್ಯ ಚರಿತೆ', ಜನ-ಜನಪದ-ಜಾನಪದ, ಪುಟ ೧೪೬,

ದೊರೆಯುವುದಿಲ್ಲ. ಕೇವಲ ಎರಡು ಕಾಲು ಪುಟಗಳಲ್ಲಿ ಕೃತಿಯ ಪರಿಚಯ ಮಾತ್ರವಿದೆ. ಎಲ್ಲಿಯೂ ಅದು ಎತ್ತುವ ಪ್ರಶ್ನೆಗಳ ಚರ್ಚೆ ಇಲ್ಲ. ಕನಕದಾಸರ ಕಾಲದ ಜನ ಜೀವನ ಹೇಳುವಾಗಲೂ ದೇಶದ ಸುಸ್ಥಿತಿ,ರಾಜಧಾನಿ–ರಾಜಾಸ್ಥಾನಗಳು, ವಿನೋದ, ಬ್ರಾಹ್ಮಣರು–ಊಟ–ಅಡುಗೆಗಳು,ಪಕ್ವಾನ್ನಗಳು,ಬ್ರಾಹ್ಮಣ ಗಂಡಸರ, ಹೆಂಗಸರ ಉಡುಗೆ ತೊಡುಗೆಗಳ, ಆಭರಣಗಳ, ವಾದ್ಯಗಳು, ಸಂಪ್ರದಾಯಗಳ ಪ್ರಸ್ತಾಪ ಮಾಡುತ್ತಾರೆಯೇ ವಿನಹ ರಾಮಧಾನ್ಯದ ವಿಷಯಗಳು ಚರ್ಚಿಸಲ್ಪಡುವುದಿಲ್ಲ.[೬] ಮಧ್ಯಕಾಲೀನ ರಾಜಕೀಯ ಚರಿತ್ರೆಯ ಬಹುಮುಖ್ಯ ನೋಟಗಳನ್ನು ವಿಭಿನ್ನವಾಗಿ ನೋಡಲು ಒತ್ತಾಯಿಸುವ ಕನಕಕೃತಿಗಳು ಅಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಕೆಳವರ್ಗಗಳ, ರೈತರ ಸ್ತ್ರೀಯರ ಬದುಕಿನ ಚಿತ್ರಣಗಳನ್ನು ಕೊಡಲು ಸಮರ್ಥವಾಗುತ್ತದೆ. ರಾಜಕೀಯವನ್ನು ಅರ್ಥೈಸುವ ಹೊಸ ದಾರಿಗಳನ್ನು ತೆರೆಯುವ ಕನಕ ಕೃತಿಗಳು ಪ್ರಾಚೀನ ಭಾರತದ ಆರ್ಯ–ಆರ್ಯೇತರ ಸಂಘರ್ಷದ ರೂಪಕವಾಗಿಯೂ ಹೇಗೆ ಕಾಣಿಸುತ್ತದೆ ಎಂಬುದು ನಿಜಕ್ಕೂ ಕುತೂಹಲಕಾರಿ ಅಂಶವಾಗಿದೆ. ಒಬ್ಬ ಲೇಖಕನ ಕೃತಿಗಳು ಈ ಎಲ್ಲಾ ಸಂವೇದನೆಗಳ ಮೂಲಕ ಕಾಣಿಸಿಕೊಳ್ಳುವುದು ಆಶ್ಚರ್ಯವನ್ನು ಹುಟ್ಟಿಸುತ್ತದೆ.

---

೫೧. ಕಟ್ಟಿ ಶೇಷಾಚಾರ್ಯರು: ಕವಿ ಕನಕದಾಸರು: ಕನ್ನಡ ಪುಸ್ತಕ ಪ್ರಾಧಿಕಾರ.

## ಅಧ್ಯಾಯ: ೮

# ಕನಕ ಕೃತಿಗಳು ನಿರೂಪಿಸುವ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ

ಕನಕದಾಸರ ಕೃತಿಗಳನ್ನು ಮಧ್ಯಕಾಲೀನ ಸಾಮಾಜಿಕ, ರಾಜಕೀಯ ಚರಿತ್ರೆಯ ಪರಿಕರಗಳಾಗಿ ಸ್ವೀಕರಿಸುವ ಸಂದರ್ಭದಲ್ಲಿ ಎದುರಾಗುವ ಸವಾಲುಗಳನ್ನು ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕವೆಂದು ಪರಿಭಾವಿಸಲಾಗಿದೆ. ಒಂದು ನಾಡಿನ ಸಂಸ್ಕೃತಿ ಚರಿತ್ರೆಯನ್ನು ಸ್ಥಾಪಿತ ಮಾದರಿಗಳಿಗೆ ಪರ್ಯಾಯವಾಗಿ, ತಳವರ್ಗದ ಅನುಭವಗಳ ಆಧಾರದ ಮೇಲೆ ಮರುಕಟ್ಟುವ ನಿರೂಪಣೆಗಳು ಏಕ ಕಾಲದಲ್ಲಿ ಈ ಮೇಲಿನ ಎಲ್ಲಾ ಪರಿಭಾವನೆಗಳನ್ನು ಒಂದು ಅಖಂಡ ಪರಿಕಲ್ಪನೆಯಾಗಿ ರೂಪಿಸುತ್ತದೆ. ವಾಸ್ತವವಾಗಿ ನಾವು ಕಟ್ಟುತ್ತಿರುವ ಚರಿತ್ರೆಯ ಸ್ವರೂಪವನ್ನು ರಾಜಕೀಯ, ಸಾಮಾಜಿಕ, ಆರ್ಥಿಕ ಎಂದು ವಿಂಗಡಿಸಿಕೊಳ್ಳುವುದೇ ಸರಿಯಾದ ಕ್ರಮವಲ್ಲ. ಅಧ್ಯಯನದ ಅನುಕೂಲತೆಗಾಗಿ ಬಳಸಿಕೊಂಡ ಓರಿಯಂಟಲ್ ಮಾದರಿಯನ್ನು ಯಥಾಸ್ಥಿತಿಯಲ್ಲಿಯೇ ಸಂಶೋಧನೆಯಲ್ಲಿ ಮುಂದುವರಿಸಿಕೊಂಡಿದ್ದೇವೆ. ವರ್ಗ ರಾಜಕಾರಣವನ್ನು ಮತ್ತದೇ ಭಿನ್ನ ಚಿಂತನಾ ಮಾದರಿಗಳ ಮೂಲಕ ಬೆಳೆಸಿಕೊಂಡು ಬರುವ ಅಪಾಯವನ್ನು ಇಲ್ಲಿ ಗುರುತಿಸಿಕೊಳ್ಳಬೇಕು. ರಾಜಕೀಯವೆಂದು ಕರೆದುಕೊಳ್ಳುವ ಯಾವ ಚರಿತ್ರೆಯೂ ರಾಜನೊಬ್ಬನಿಗೆ ಸಂಬಂಧಿಸಿರುವುದಿಲ್ಲ. ಅದು ಅವನ ಯುದ್ಧ ದಾಹದ ಕಥನಗಳು ಮಾತ್ರವೇ ಆಗಿರುವುದಿಲ್ಲ. ಅರಸು ಕುಟುಂಬದ ಸಾಮಾನ್ಯ, ದೈನಂದಿನ ಬದುಕಿನ ಅನೇಕ ಚಿತ್ರಣಗಳನ್ನು ಹಾಗೂ ಜನ ಸಾಮಾನ್ಯರ ಜೀವನದ ಏಳು ಬೀಳುಗಳ ನಿರೂಪಣೆಗಳನ್ನೂ ಅದು ಒಳಗೊಳ್ಳಬೇಕಾದುದು ಅಗತ್ಯ. ಚರಿತ್ರೆಯನ್ನು ಮರು ಕಟ್ಟುವುದು ಕಾಲದ ಅಗತ್ಯವಾಗಬೇಕು. ವರ್ಗ, ವರ್ಣ, ಲಿಂಗ ತಾರತಮ್ಯದ ನೆಲೆಗಳಿಂದಲೂ ರಾಜಕೀಯ ಚರಿತ್ರೆಯನ್ನು ನಿರೂಪಿಸಬೇಕಾಗಿದೆ. ಜಾಗತೀಕರಣ, ಬಂಡವಾಳಶಾಹಿ ನಾಗರಿಕತೆಯ ಈ ಯುಗದಲ್ಲಿ ಆರ್ಥಿಕತೆಯ ಕುರಿತು ಚಿಂತಿಸುವುದೆಂದರೆ ಯಾವುದೋ ಪ್ರಬಲವರ್ಗದ, ಧನದಾಹಿ ವ್ಯವಸ್ಥೆಯ ವಿಜೃಂಭಣೆಯನ್ನು ಕುರಿತು ಮಾತಾಡುವುದಲ್ಲ. ಬದಲಿಗೆ ಜನಸಾಮಾನ್ಯರ ಬವಣೆಗಳನ್ನು ಹಾಗೂ ಅವರ ಕೊಳ್ಳುವ ಮತ್ತು ಉತ್ಪಾದನಾ ಸಾಮರ್ಥ್ಯದ ವಿಶ್ಲೇಷಣೆಯೂ ಜೊತೆಜೊತೆಯಲ್ಲಿ ಆಗಬೇಕಾದ ಕಾರ್ಯ.

ಧಾರ್ಮಿಕವೆಂದು ಕರೆದುಕೊಳ್ಳುವ ಅನೇಕ ವಿಷಯಗಳು ಈ ದೇಶದಲ್ಲಿ ಬಹುತ್ವದ

ಅಸ್ಮಿತೆಯನ್ನು ಹೇಗೆ ವಿಘಟಿಸುತ್ತಾ, ನಾಶಪಡಿಸುತ್ತಾ ತನ್ನದೇ ಶ್ರೇಷ್ಠತೆಯನ್ನು ಮೆರೆಯಲು ಹೇಗೆ ಹವಣಿಸುತ್ತಾ ಬಂದಿದೆ ಎನ್ನುವುದು ಕುತೂಹಲಕಾರಿ ವಿಷಯ. ಈ ದೇಶದ ಚರಿತ್ರೆಯನ್ನು ಧಾರ್ಮಿಕ ಮೂಲಭೂತವಾದದ ವೈಭವಪೂರ್ಣ ವರ್ಣನೆಯಾಗಿ ನೋಡುವುದರಲ್ಲೇ ನಾವು ತೃಪ್ತರಾಗಿದ್ದೇವೆ. ಧರ್ಮವನ್ನು ನಿರ್ದಿಷ್ಟ ಸಮೂಹದ ತತ್ತ್ವ ಸಿದ್ಧಾಂತವಾಗಿ ಪ್ರತಿಪಾದಿಸುತ್ತಾ ಒಟ್ಟು ಮಾನವ ಕುಲದ ಉನ್ನತ ಮೌಲ್ಯವಾಗಿ ಕಾಣುವುದನ್ನು ಮರೆತುಬಿಟ್ಟಿದ್ದೇವೆ. ಧಾರ್ಮಿಕ ಚರಿತ್ರೆ ಎಂದರೆ ಬುದ್ಧ,ಮಹಾವೀರ, ಬಸವಣ್ಣ, ಶರಣರು, ದಾಸರು ಏನು ಹೇಳಿದರು? ಅವರ ಕಾಲ, ಬೋಧನೆ ಮೊದಲಾದವುಗಳನ್ನು ಪಂಥ ನಿಷ್ಠವಾಗಿ ಓದುವುದು ಒಂದು ಕ್ರಮವನ್ನೂ, ಸತ್ಯ, ಅಹಿಂಸೆ, ಮಾನವತ್ವದ ಸಿದ್ಧಾಂತಗಳಾಗಿ ಒಟ್ಟು ವಿನ್ಯಾಸದಲ್ಲಿ ಓದುವುದು ಇನ್ನೊಂದು ಕ್ರಮವನ್ನೂ ರೂಢಿಸಿಕೊಂಡಿದ್ದೇವೆ. ಪಂಥ ನಿಷ್ಠವಾಗಿ ಧಾರ್ಮಿಕ ಚರಿತ್ರೆಯನ್ನು ಓದುವ ಈ ಕ್ರಮದಲ್ಲಿ ಕಾಣಿಸುವ ಬಿರುಕು ಹಾಗೇಯೇ ಮುಂದುವರಿದುಕೊಂಡು ಬಂದು ಧಾರ್ಮಿಕ ಕಲಹಕ್ಕೆ, ಧಾರ್ಮಿಕ ಮೂಲಭೂತವಾದಕ್ಕೆ ಕಾರಣವಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಸಂಶೋಧನೆಯ ಉದ್ದೇಶವು ಸಾಮಾಜಿಕವಾಗಿರುವುದು ಅನಿವಾರ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಕನಕ ಚಿಂತನೆಯು ನಮಗೆ ತೋರುವ ದಾರಿ ಬಹಳ ಮುಖ್ಯವೆನ್ನುವುದನ್ನು ಈ ಅಧ್ಯಯನವು ಪ್ರತಿಪಾದಿಸುತ್ತದೆ ಮತ್ತು ಕನಕ ಕೃತಿಗಳನ್ನು ಸಂಸ್ಕೃತಿ ಚರಿತ್ರೆಯ ಆಕರವಾಗಿ ಓದುವ ಬಹುತ್ವದ ಸಾಧ್ಯತೆಯನ್ನು ನಮ್ಮ ಮುಂದಿಡುತ್ತದೆ. ಕನಕ ನಿರ್ದಿಷ್ಟ ಸಮುದಾಯದ ಒಬ್ಬ ನಾಯಕನಲ್ಲ; ಅವನು ಸಮೂಹ ನಾಯಕ. ಕನಕನ ಅಸ್ಮಿತೆಯನ್ನು ಕನಕ ಕೃತಿಗಳು ದಾಖಲಿಸಿದ ಬಗೆಗೂ, ಕನಕ ಕೃತಿಗಳಾಚೆ ಕಾಣಿಸುವ ವ್ಯಕ್ತಿತ್ವಕ್ಕೂ ಇರುವ ಸಂಬಂಧಾಂತರಗಳನ್ನು ಸೂಕ್ಷ್ಮವಾದ ಅವಲೋಕನಕ್ಕೆ ಒಳಪಡಿಸುತ್ತಾ ಜಾತಿ ಹಾಗೂ ಧರ್ಮನಿಷ್ಠತೆ ಕನಕನ ವ್ಯಕ್ತಿತ್ವ ಹಾಗೂ ಕೃತಿತ್ವವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಹೇಗೆ ಪುನರ್ ರೂಪಿಸಿಕೊಂಡಿವೆ ಎಂಬುದು ನಮಗೆ ಮುಖ್ಯ.

ಕರ್ನಾಟಕದಲ್ಲಿ ಸಾಂಸ್ಕೃತಿಕ ಅಧ್ಯಯನದ ಚಹರೆಗಳು ಹೆಚ್ಚು ಬಹುತ್ವವನ್ನು ಒಳಗೊಂಡು ಬೆಳೆದಿರುವುದು ವಸಾಹತೋತ್ತರ ಕಾಲಘಟ್ಟದಲ್ಲಿ. ಅಲ್ಲಿಯವರೆಗೆ ಅದು ಏಕಮುಖಿ ಸಂಸ್ಕೃತಿ ವಕ್ತಾರಿಕೆಯ ಅಧ್ಯಯನದ ಮಾದರಿಗಳಾಗಿರುವುದನ್ನು ಕಾಣುತ್ತೇವೆ. ಶ್ರೇಷ್ಠವೆನಿಸಿದ್ದು ಮಾತ್ರ ಸಂಸ್ಕೃತಿ , ಪ್ರಬಲ ವರ್ಗ, ವರ್ಣವು ಪ್ರತಿಪಾದಿಸುವುದು ಮಾತ್ರ ಸಂಸ್ಕೃತಿ ಎಂಬ ತಿಳುವಳಿಕೆಯಲ್ಲಿ ಶೋಷಿತ, ದಮನಿತ ಚರಿತ್ರೆ, ಸಂಸ್ಕೃತಿಗಳು ಉಪೇಕ್ಷೆಗೆ ಒಳಗಾಗುವಂತೆ ನೋಡಿಕೊಂಡಿರುವುದು ಮತ್ತು ತಳವರ್ಗ, ಅಲೆಮಾರಿ- ಅರೆ ಅಲೆಮಾರಿ ಸಮುದಾಯಗಳಿಗೆ ಚರಿತ್ರೆಯೇ ಇಲ್ಲದಂತೆ ಮಾಡಿರುವುದು ಒಂದು ಸಾಂಸ್ಕೃತಿಕ ಹುನ್ನಾರವೇ ಆಗಿದೆ. ಜೊತೆಗೆ ಕೆಳವರ್ಗಗಳು ಮೇಲ್ವರ್ಗಗಳ ನಡೆ

ನುಡಿಯನ್ನು ಅನುಸರಿಸಿ ಬದುಕಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿರುವುದು ಕೂಡ ಇದರ ಇನ್ನೊಂದು ಕರಾಳ ಮುಖ ಎಂಬುದನ್ನು ಮರೆಯಬಾರದು. ಮಧ್ಯಕಾಲೀನ ಕರ್ನಾಟಕದ ಸ್ಥಿತಿಯೂ ಈಗಿನದಕ್ಕಿಂತ ಹೆಚ್ಚೇನೂ ಭಿನ್ನವಾಗಿಲ್ಲ. ಅಂದಿನ ಧಾರ್ಮಿಕ, ರಾಜಕೀಯ ವಿನ್ಯಾಸಗಳು ಹುಟ್ಟುಕಾಕಿದ ಬಿಕ್ಕಟ್ಟುಗಳೊಂದಿಗೆ ಕನಕದಾಸರನ್ನು ಇಟ್ಟು ನೋಡಿದಾಗ ಇದರ ಸ್ವರೂಪ ಹೆಚ್ಚು ಸ್ಪಷ್ಟವಾಗುತ್ತದೆ. ಅವರು ಬದುಕಿದ್ದ ಕಾಲ ಹಲವು ಬಗೆಯ ಸಂಘರ್ಷಗಳನ್ನು ಹೇಗೆ ಎದುರುಗೊಂಡಿತ್ತು ಎನ್ನುವುದನ್ನು ಈಗಾಗಲೇ ನೋಡಿದ್ದೇವೆ. ಪ್ರಭುತ್ವ ಮತ್ತು ಧರ್ಮ, ಸಾಮಾನ್ಯ ಪ್ರಜೆ ಮತ್ತು ಪ್ರಭುತ್ವ, ಅಧಿಕಾರ ರಾಜಕಾರಣ ಮತ್ತು ಜನಮುಖಿ ಕಾರ್ಯತಂತ್ರ (people oriented strategy) ಈ ಮೊದಲಾದ ಹಲವು ವೈರುಧ್ಯಗಳನ್ನು ಕನಕ ಕೃತಿಗಳು ಒಂದಿಲ್ಲೊಂದು ಬಗೆಯಲ್ಲಿ ಮುಖಾಮುಖಿಯಾಗಿವೆ. ಅವು ಸಮಕಾಲೀನ ದ್ವಂದ್ವ ತಲ್ಲಣಗಳೂ ಹೌದು. ಮನುಷ್ಯನ ಅಸ್ತಿತ್ವದ ಮೂಲಭೂತ ಪ್ರಶ್ನೆಗಳನ್ನು ಜಾತಿ ರಾಜಕಾರಣದೊಂದಿಗೆ ತುಲನೆ ಮಾಡುವುದಕ್ಕೆ ಪ್ರೇರೇಪಿಸುವ ಕನಕ ಕೃತಿಗಳು ತನ್ನ ಕಾಲದ ಸಾಮಾಜಿಕ ವಿನ್ಯಾಸಗಳನ್ನು ಬದಲಿಸಿ ನೋಡುವ ಒತ್ತಾಸೆಯನ್ನು ಹುದುಗಿಸಿಕೊಂಡಿವೆ. ಸಂಸ್ಕೃತಿ ಚರಿತ್ರೆಯನ್ನು ಮೇಲು ವರ್ಗದಿಂದ ನೋಡುವ ಬದಲು ಸಬಾಲ್ಟರ್ನ ನಿಲುವುಗಳಲ್ಲಿ ನೋಡಲು ಒತ್ತಾಯಿಸುತ್ತವೆ. ಈ ಬಗೆಯ ಪ್ರವೇಶ ಇದುವರೆಗಿನ ಕರ್ನಾಟಕದ ಗತ ವೈಭವಗಳನ್ನು ಮರು ಪರಿಶೀಲನೆಗೆ ಒಳಪಡಿಸುವ ಅಧ್ಯಯನದ ಮಾರ್ಗವೂ ಹೌದು. ಅದಕ್ಕಾಗಿ ಸಂಶೋಧನೆಯಲ್ಲಿ ಮತ್ತೆ ಮತ್ತೆ ಬಳಕೆಯಾಗುವ ಸಾಂಸ್ಕೃತಿಕ ಅಧ್ಯಯನವೆಂಬುದಕ್ಕಿರುವ ಸಿದ್ಧ ಪರಿಭಾಷೆ ಮತ್ತು ಮಾದರಿಗಳನ್ನು ನಿರಚನಗೊಳಿಸುತ್ತಾ ಹೊಸ ಮಾದರಿಯನ್ನು ಕಟ್ಟಿಕೊಳ್ಳುತ್ತಾ ಅದರ ಭಿನ್ನ ಭಿನ್ನ ಆಯಾಮಗಳನ್ನು, ಅರ್ಥ ಸಾಧ್ಯತೆಯನ್ನು ವಿಸ್ತರಿಸುತ್ತಾ ಹೋಗುವುದನ್ನು ಇತ್ತೀಚಿನ ಕೆಲವು ವರ್ಷಗಳಲ್ಲಿ ಕಾಣುತ್ತಿದ್ದೇವೆ. ಏಕೆಂದರೆ ಅದು ಕೇವಲ ಜನಬದುಕಿನ ನಡೆ, ನುಡಿ, ಆಚಾರ-ವಿಚಾರಗಳ ಮೊತ್ತ ಮಾತ್ರವಾಗಿರದೆ ಸಾಮಾಜಿಕ, ರಾಜಕೀಯ ಸನ್ನಿವೇಶದ ವ್ಯಾಖ್ಯೆಯೂ ಆಗಿರುವ ಒಂದು 'ಸಂಕೀರ್ಣ' ಪರಿಭಾಷೆಯಾಗಿ ಪ್ರಸ್ತುತ ಚಲಾವಣೆಗೊಳ್ಳುತ್ತಿದೆ.

'ಸಂಸ್ಕೃತಿ' ಎಂಬ ಪದಕ್ಕೆ ನಿಶ್ಚಿತವಾದ ಅರ್ಥವನ್ನು ನಿರ್ಣಯಿಸುವುದಕ್ಕೆ ನಮಗಿಂದೂ ಸಾಧ್ಯವಾಗಿಲ್ಲ. ಒಂದು ಕಾಲದ ವೈಭವವನ್ನು ವರ್ಣಿಸುವುದಷ್ಟೇ ಸಂಸ್ಕೃತಿ ಅಲ್ಲ; ತನ್ನ ಕಾಲದ ತಲ್ಲಣಗಳನ್ನು ಎದುರುಗೊಂಡು ಕಟ್ಟಿದ ಜೀವ ಪರವಾದ ಸಂವೇದನೆಯನ್ನು ಸಂಸ್ಕೃತಿಯ ಉತ್ಕೃಷ್ಟ ವ್ಯಾಖ್ಯೆ ಎಂದು ಸದ್ಯ ನಂಬಿದ್ದೇವೆ. ಅದು ಸಮಾಜದ ಎಲ್ಲಾ ಅಲಕ್ಷಿತ ವರ್ಗಗಳ, ಸಮುದಾಯದ ಅನನ್ಯತೆಯ ನೆಲೆಯೂ ಹೌದು. ಒಬ್ಬ ಲೇಖಕನ ಮಿತಿಯಲ್ಲಿ ನಾವು ಕಂಡುಕೊಳ್ಳುವ ಇಂತಹ ಅನನ್ಯತೆಯ

ಮಾದರಿಯ ಅಧ್ಯಯನವು ಬಹುತ್ವವನ್ನು ಒಳಗೊಂಡು ಬೆಳೆಯುವ ವಿನ್ಯಾಸದಲ್ಲಿ ಸಮಾವೇಶಗೊಳ್ಳುತ್ತದೆ. ಆಗ ಯಾವುದೇ ಪೂರ್ವಕಲ್ಪಿತ ವ್ಯಾಖ್ಯಾನಗಳಿಗಿಂತಲೂ ವಿಸ್ತಾರವಾಗಿ ವಿಶಾಲವಾದ ಸಾಂಸ್ಕೃತಿಕ ಪರಿಭಾಷೆಯೊಂದನ್ನು ನಮಗೆ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಈ ಕಾರಣಕ್ಕಾಗಿ ಕನಕ ಕೃತಿಗಳು ನಿರೂಪಿಸುವ ಮಧ್ಯಕಾಲೀನ ಸಾಂಸ್ಕೃತಿಕ ಚರಿತ್ರೆಯ ಎಳೆಗಳನ್ನು ಕಂಡುಕೊಳ್ಳುವ ಮೂಲಕ ಕರ್ನಾಟಕದ ಬಹುಮುಖಿ ಸಂಸ್ಕೃತಿ ಚಿಂತನೆಗೆ ಸಿಗಬಹುದಾದ ತಿಳುವಳಿಕೆಯನ್ನು ವಿಸ್ತರಿಸಬಹುದು.

**೧. ಇದುವರೆಗಿನ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಸ್ವರೂಪ ಮತ್ತು ಗ್ರಹಿಕೆ:** ಮಾಸ್ತಿಯವರು "ಕರ್ನಾಟಕ ಜನತೆಯ ಸಂಸ್ಕೃತಿ" (೧೯೩೨) ಪುಸ್ತಕ ಬರೆದು ಸರಿ ಸುಮಾರು ಮುಕ್ಕಾಲು ಶತಮಾನ ಕಳೆದಿದೆ. ಇದರ ನಂತರ ಕನ್ನಡದಲ್ಲಿ ಹಲವು ಮಾದರಿಯ ಅಧ್ಯಯನಗಳು ಬಂದು ಹೋಗಿವೆ. ಶಂಬಾ ಜೋಷಿ, ಡಿ.ವಿ.ಜಿ, ಮಾಸ್ತಿ, ಡಾ.ಚಿದಾನಂದ ಮೂರ್ತಿ, ಡಾ. ಎಂ.ಎಂ.ಕಲುಬುರ್ಗಿ, ಡಿ.ಆರ್. ನಾಗರಾಜ್, ಕೆ,.ವಿ.ಸುಬ್ಬಣ್ಣ ಬರಗೂರು ರಾಮಚಂದ್ರಪ್ಪ ಮುಂತಾದ ಸಂಸ್ಕೃತಿ ಚಿಂತಕರು ನಡೆಸಿದ ವ್ಯಾಪಕವಾದ ತಿಳುವಿನ ದಾರಿಗಳು ಹೊಸ ತಾತ್ವಿಕತೆಯನ್ನು ಸೃಷ್ಟಿಸಿರುವ ಕಾರಣ ಸಾಂಸ್ಕೃತಿಕ ಚಿಂತನೆಯ ವಿನ್ಯಾಸಗಳು ಬದಲಾಗುತ್ತಲೇ ಹೋಗಿರುವುದನ್ನು ಕಾಣಬಹುದು. ಮಧ್ಯಕಾಲೀನ ಚರಿತ್ರೆಯನ್ನು ರಾಜಕೀಯವಾಗಿ ಕಟ್ಟುವ ಪ್ರಯತ್ನದ ಜೊತೆಗೆ ಶಾಸನಗಳು, ಸಾಹಿತ್ಯ, ಶಿಲ್ಪಕಲೆ, ಧರ್ಮ, ಸಾಮಾಜಿಕ, ಆರ್ಥಿಕ ಜೀವನದ ಆಶಯಗಳ ರೂಪದಲ್ಲಿ ಪರಿನಿರ್ಮಿಸುವ ಓರಿಯಂಟಲಿಸ್ಟ್ ಅಧ್ಯಯನಗಳು ಒಂದು ಮಾದರಿಯಾದರೆ, ಕರ್ನಾಟಕದ ಭೌಗೋಳಿಕ ಅಸ್ಮಿತೆಯನ್ನು ದಾಖಲಿಸುವ, ಅದರ ಗತ ವೈಭವವನ್ನು ನೆನಪಿಸಿಕೊಂಡು ಮೌಲ್ಯ ಪ್ರಾಧಾನ್ಯತೆಯಿಂದ ರಾಷ್ಟ್ರೀಯತೆಯ ಭಾವದಲ್ಲಿ ಒಗ್ಗೂಡುವ ಉದಾತ್ತ ಪ್ರಯತ್ನಗಳು ಎರಡನೆಯ ಮಾದರಿ. ಎಚ್. ತಿಪ್ಪೇರುದ್ರ ಸ್ವಾಮಿಯವರ "ಕರ್ಣಾಟಕ ಸಂಸ್ಕೃತಿ ಸಮೀಕ್ಷೆ" ಇದಕ್ಕೆ ಉದಾಹರಣೆ. ಮೂರನೆಯ ಮಾದರಿ ಕರ್ನಾಟಕದ ಜಾನಪದ ಸಂಪತ್ತಿನ ಅಮೂಲಾಗ್ರ ಶೋಧನೆಯ ಮೂಲಕ ಜನಪದ ಮಹಾಕಾವ್ಯ ಸಂಪ್ರದಾಯ, ಬುಡಕಟ್ಟು, ಉಪಸಂಸ್ಕೃತಿ, ಪ್ರತಿಸಂಸ್ಕೃತಿ ಅಧ್ಯಯನಗಳು, ಜಾನಪದ ದೇಶೀವಾದ, ವಿವಿಧ ಜಾತಿ ಸಮುದಾಯ ಕೇಂದ್ರಿತ ಅಧ್ಯಯನಗಳು, ಭಾಷೆ, ಧರ್ಮ, ಜಾತಿ, ಪ್ರದೇಶ, ಲಿಂಗಾಧಾರಿತ ಅಧ್ಯಯನಗಳು ಸುಮಾರು ೭೦ರ ದಶಕದ ನಂತರದ ದಿನಗಳಲ್ಲಿ ಒಟ್ಟು ನಮ್ಮ ಸಂಸ್ಕೃತಿಯ ಚಿಂತನೆಯ ಭಾಗವಾದವು. ಮಾರ್ಕ್ಸ್‌ವಾದಿ, ಸ್ತ್ರೀವಾದಿ ಸಂಸ್ಕೃತಿ ಚರ್ಚೆಗಳು ದೇಶಿವಾದ ಹಾಗೂ ಜಾಗತೀಕರಣದ ಮುಖಾಮುಖಿಯಲ್ಲಿ ಹೊಸ ವ್ಯಾಖ್ಯಾನಕ್ಕೆ ಒಳಪಟ್ಟವು. ಪುರೋಹಿತಶಾಹಿ ಮಂಡಿಸುವ ಸಂಸ್ಕೃತಿ ಚಿಂತನೆಯನ್ನು ನಿರಾಕರಿಸುತ್ತಲೇ ಸಾಂಪ್ರದಾಯಿಕ ಗ್ರಹಿಕೆಗಳಿಗೆ ಪ್ರತಿರೋಧ ಒಡ್ಡಿದ ಶಂಬಾ, ಕಪಟರಾಳ ಕೃಷ್ಣರಾವ್,

ಸೇಡಿಯಾಪು ಕೃಷ್ಣಭಟ್ಟ ಮೊದಲಾದವರು ಸಂಸ್ಕೃತಿ ಗ್ರಹಿಕೆಯ ತಿಳಿವನ್ನು ಹೊಸದಾಗಿ ನಿರೂಪಿಸಿದರು. ದೊರೆತ ಆಕರಗಳ ಮೂಲಕ ಗತದ ಅರಿವನ್ನು ಪುನಾರಚಿಸಲು ತೊಡಗಿದ ಅನೇಕ ಸಂಸ್ಕೃತಿ ಚಿಂತಕರು ನಾಡು ನುಡಿಯ ಪರಿಭಾಷೆಗಳ ಸಾಂಪ್ರದಾಯಿಕ ನಿಲುವುಗಳನ್ನು ಪ್ರಶ್ನಿಸುವುದು ಮತ್ತು ಅದನ್ನು ಪುನರ್ ವ್ಯಾಖ್ಯಾನಕ್ಕೆ ಒಳಪಡಿಸುವ ಪ್ರಯತ್ನಗಳನ್ನು ಮಾಡಿದರು. ದಲಿತರು, ಶೋಷಿತರು, ಮಹಿಳೆಯರ ಸಾಂಸ್ಕೃತಿಕ ಶೋಧ ಪ್ರಕ್ರಿಯೆ ಆರಂಭವಾದಾಗಿನಿಂದ ಇದುವರೆಗೆ ವಿಸ್ಮೃತಿಗೆ ಒಳಗಾದ ಅನೇಕ ವಸ್ತು ಸಂಗತಿಗಳು ಮುನ್ನೆಲೆಗೆ ಬಂದವು. ಅಸ್ತಿತ್ವವೇ ಇಲ್ಲದ ಅಂಚಿನ ಸಮುದಾಯಗಳು, ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಗಳನ್ನು ಗುರುತಿಸುವ, ಶೋಧಿಸುವ ಪರ್ಯಾಯ ಸಾಂಸ್ಕೃತಿಕ ವಿನ್ಯಾಸಗಳು ರೂಪುಗೊಂಡವು.

ಕಲೆ, ಸಾಹಿತ್ಯದಂತಹ ಸೃಜನಾತ್ಮಕ ಅಭಿವ್ಯಕ್ತಿಯ ಕ್ರಮಗಳು ಸಂಸ್ಕೃತಿ ಚಿಂತನೆಯ ಸಾಮಗ್ರಿಗಳಾಗಿ ಬಳಕೆಯಾಗುವ ಸಾಧ್ಯತೆಯನ್ನು ಕಂಡುಕೊಂಡ ಮೇಲೆ ಕಲೆಗಾರ, ಕೃತಿಕಾರನ ಸಾಮಾಜಿಕ ಪರಿಸರದ ಪ್ರಭಾವವನ್ನು ಆ ರಚನೆಯಲ್ಲೂ ಗುರುತಿಸುವ ಅಧ್ಯಯನದ ಕ್ರಮಗಳು ಪ್ರಾರಂಭವಾಯಿತು. ವ್ಯಕ್ತಿ ಹಾಗೂ ಸಮುದಾಯ ಇಲ್ಲಿಯ ಕೇಂದ್ರ ಪ್ರಜ್ಞೆಗಳಾದವು. ಕರ್ನಾಟಕದ ಸಂಸ್ಕೃತಿ ಚರಿತ್ರೆಯನ್ನು ಎಲ್ಲಿಂದ ಆರಂಭಿಸಬೇಕು ಎನ್ನುವುದಕ್ಕೆ ಸೂಕ್ತ ಉತ್ತರ ನೀಡಿದವರು ಶಂಬಾ ಜೋಷಿಯವರೆ. ಸಮುದಾಯಗಳ ಬದುಕು, ನಂಬಿಕೆ, ದೈವ, ಧರ್ಮ, ಕಸುಬು, ವಲಸೆಯಂತಹ ಸಂಗತಿಗಳನಿಟ್ಟುಕೊಂಡು ಸಮಾಜ ಶಾಸ್ತ್ರೀಯ, ಮನಃಶಾಸ್ತ್ರೀಯ ಚಂತನೆಗಳಿಗೆ ಅವರು ತೊಡಗಿಕೊಂಡರು. ಅವರ "ಹಾಲುಮತ ದರ್ಶನ" ಈ ಹಿನ್ನಲೆಯಲ್ಲಿ ಗಮನಾರ್ಹವಾದುದು. 'ಸಂಸ್ಕೃತಿ' ಎಂದರೆ ಸಮುದಾಯದ ಸಮಗ್ರ ಜೀವನದ ವಿಧಾನ ಎಂಬ ಮಾನವ ಶಾಸ್ತ್ರೀಯ ಚೌಕಟ್ಟಿನಲ್ಲೇ ಅವರ ಸಂಶೋಧನೆಯಿದೆ.[೧] ಉಚ್ಚವರ್ಗದ ಜನರ ಸಂಸ್ಕೃತಿಕ ಮಾನದಂಡಗಳಿಗೆ ಬದಲಾಗಿ ತಳವರ್ಗಗಳ, ಸಮುದಾಯಗಳ ಭಾಷೆ, ಬದುಕನ್ನು ಆಧಾರವಾಗಿಟ್ಟುಕೊಂಡು ಮಾಡುವ ಇಂತಹ ಸಂಶೋಧನೆಗಳು ಸಹಜವಾಗಿ ಹೊಸತನದ ಹುಡುಕಾಟಕ್ಕೆ ಪ್ರೇರಣೆ ನೀಡಿತು. ಶಂಬಾ ಅವರ ಶೋಧದ ಮಾರ್ಗ ಹಿಡಿದು ಸಾಗಿದರೆ ಇಡೀ ಕರ್ನಾಟಕದ ಸಂಸ್ಕೃತಿ ಚಿತ್ರಣವೇ ಬದಲಾಗಬಹುದು.

ಕನಕದಾಸರನ್ನು ಈ ಹಿನ್ನಲೆಯಲ್ಲಿ ನೋಡುವ ಕ್ರಮಕ್ಕೆ ಹಲವು ತೊಡಕುಗಳಿವೆ. ಅವರು ವೈದಿಕ ಸಂಪ್ರದಾಯದ ನಿಲುವುಗಳನ್ನು ಎತ್ತಿ ಹಿಡಿಯುವ ಧಾರ್ಮಿಕ ನಿಲುವುಗಳಿಗೆ ಬದ್ಧರಾಗಿರುವುದರಿಂದ ಅದರಾಚೆ ಯೋಚಿಸುವುದು ಅವರಿಗೆ ಅನಿವಾರ್ಯವಾಗಿರಲಿಲ್ಲ ಎಂಬುದು ಒಂದಂಶವಾದರೆ ಅವರು ಕೆಳವರ್ಗದ ಶೋಷಿತರ

೧.ರಹಮತ್ ತರೀಕೆರೆ ಸಾಂಸ್ಕೃತಿಕ ಅಧ್ಯಯನ:, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಪುಟ೬೨, ೨೦೦೪

ಪ್ರತಿನಿಧಿಯಾಗಿ ಕಂಡರೂ ನಿರ್ದಿಷ್ಟ ಸಮುದಾಯದೊಂದಿಗೆ ಅವರು ತನ್ನನ್ನು ಗುರುತಿಸಿಕೊಳ್ಳದಿರುವುದು ಎರಡನೆಯದ್ದು. ಹಾಗೆ ಗುರುತಿಸಲು ಸಾಧ್ಯವಾಗದಿರುವುದರಿಂದಲೇ ಅವರೊಬ್ಬ ಸಮುದಾಯ ನಾಯಕನಾಗದೆ ಸಮೂಹ ನಾಯಕನಾದರು ಎನ್ನುವುದು ಇದರ ಇನ್ನೊಂದು ತಿರುವು. ಕನಕದಾಸರು ಶೋಷಿತ ಸಮೂಹಗಳ ಪ್ರತಿಧ್ವನಿಯಾದರು ಎಂದು ನಾವೀಗ ಹೇಳುವುದು ಅವರು ತಾನು ಬದುಕಿದ ಸಾಂಸ್ಥಿಕ ಚೌಕಟ್ಟುಗಳನ್ನು ಮೀರಿ ಜನಪರವಾಗಿ ಚಿಂತಿಸಿದರು ಎನ್ನುವ ಕಾರಣಕ್ಕಾಗಿ. ಅವರ ಚಿಂತನೆಯ ನೆಲೆ ಕೆಲವು ಧಾರ್ಮಿಕ ಪೂರ್ವಾಗ್ರಹಕ್ಕೆ ಒಳಗಾಗಿರದೆ ಅದು ಅಖಂಡ ಕರ್ನಾಟಕದ ಜನವಾದಿ ನೆಲೆಯನ್ನು ಆಶ್ರಯಿಸಿತ್ತು. ಪ್ರಭುತ್ವ ಹಾಗೂ ಜನತ್ವವನ್ನು ಮುಖಾಮುಖಿಯಾಗಿಸುವ ಧೋರಣೆಯಲ್ಲಿ ಜನತ್ವದ ನೆಲೆಯಲ್ಲಿ ತಮ್ಮನ್ನು ತಾವು ನಿಲ್ಲಿಸಿ ಕನಕದಾಸರು ತನ್ನ ಅಸ್ಮಿತೆಯನ್ನು ದಾಖಲಿಸಿಕೊಂಡರು. ಹಾಗಾಗಿಯೇ ಕನಕದಾಸರು ಕಂಡ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಶೋಷಿತ ಸಮುದಾಯಗಳ ನೆಲೆಯಿಂದ ಪುನಾರಚಿಸಿಕೊಳ್ಳುವುದು ಮುಖ್ಯವಾಗುತ್ತದೆ.

**೨. ಕನಕದಾಸರು ಕಟ್ಟಿದ ಕರ್ನಾಟಕದ ಬಹುತ್ವದ ಕಥನ:**

ಕರ್ನಾಟಕವನ್ನು ಪರಿಭಾವಿಸುವಲ್ಲಿ ಇದುವರೆಗೆ ಅದರ ಅಖಂಡತೆ ಅಥವಾ ಬಹುತ್ವದ ನೆಲೆಯನ್ನು ಅಷ್ಟಾಗಿ ಪರಿಭಾವಿಸಿದಂತೆ ಕಾಣುವುದಿಲ್ಲ. ಕರ್ನಾಟಕದ ಇತಿಹಾಸವೆಂದರೆ ಆಳುವ ಅರಸನನ್ನು ವೈಭವೀಕರಿಸಿದ್ದು ಮಾತ್ರ. ವಸಾಹತೋತ್ತರ ಕಾಲಘಟ್ಟದಿಂದೀಚೆಗೆ ಕರ್ನಾಟಕವನ್ನು ಬಹುತ್ವದ ನೆಲೆಯಲ್ಲಿ ಕಾಣುವ ದೇಸೀ ದೃಷ್ಟಿಕೋನ ಹೆಚ್ಚು ಪ್ರಚಲಿತವಾಯಿತು ಎಂದರೆ ತಪ್ಪಾಗಲಿಕ್ಕಿಲ್ಲ. ವಿಜಯನಗರ ಸಾಮ್ರಾಜ್ಯವನ್ನು ನಮ್ಮೆದುರು ಬಿಂಬಿಸಿದ ಬರವಣಿಗೆಗಳು ಅದರ ಶ್ರೀಮಂತಿಕೆಯನ್ನು ಹೊಗಳುವ ಬರದಲ್ಲಿ ವಸಾಹತುಶಾಹಿ ವ್ಯವಸ್ಥೆಯನ್ನು ಪರೋಕ್ಷವಾಗಿ ಈ ನಾಡಿಗೆ ಆಹ್ವಾನಿಸಿದೆ. ಇದರ ಒಳಿತು ಕೆಡಕುಗಳು ಏನೇ ಇರಲಿ, ವಿಜಯನಗರದ ಅರಸರ ಕನ್ನಡ ಪ್ರಜ್ಞೆ ಅಖಂಡ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಕೃಷ್ಣದೇವರಾಯ ತನ್ನ ತಾಯಿಯ ಭಾಷೆಯನ್ನೇ ವಿಶೇಷವಾಗಿ ಗೌರವಿಸಿದ. ತೆಲುಗು ಸಾಹಿತ್ಯ ಚರಿತ್ರೆಯಲ್ಲಿ "ಕೃಷ್ಣದೇವರಾಯ ಯುಗ", "ಸುವರ್ಣಯುಗ"ವನ್ನೇ ನಿರ್ಮಾಣ ಮಾಡಿದ ಕೃಷ್ಣದೇವರಾಯ ಕನ್ನಡಕ್ಕೆ ತೋರಿದ ಕಳಕಳಿ ಏನೇನೂ ಸಾಲದು. ಉಡುಪಿ ಕೃಷ್ಣನ ಹೆಸರನ್ನಿಟ್ಟುಕೊಂಡ ಈ ಕನ್ನಡದ ಅರಸು ಸುಮಾರು ಏಳು ಬಾರಿ ತಿರುಪತಿಗೆ ಯಾತ್ರೆ ಕೈಗೊಂಡು ಅಲ್ಲಿನ ಬೊಕ್ಕಸವನ್ನು ಧನ ಕನಕಗಳಿಂದ ತುಂಬಿದ್ದಾನೆಂದು ಡಾ. ಎಂ. ಎಂ. ಕಲುಬುರ್ಗಿ ಬರೆಯುತ್ತಾರೆ. (**ಡಾ.ಎಂ.ಎಂ. ಕಲುಬುರ್ಗಿ: ಮಾರ್ಗ–ಸಂಪುಟ ೪, ಪುಟ:೪೨೮**) ಕರ್ನಾಟಕದ ಅಪಾರ ಸಂಪತ್ತನ್ನು ಒಡವೆಯ ರೂಪದಲ್ಲಿ ತಿರುಪತಿಗೆ ಸಲ್ಲಿಸಿದ ಕೃಷ್ಣದೇವರಾಯನ ನಿಲುವನ್ನು ಪ್ರಶ್ನಿಸಲಾಗದೇ ಕನಕದಾಸರು

ತಿರುಪತಿಯ ತಿಮ್ಮಪ್ಪನನ್ನು ಗೋವಿಂದ ಸೆಟ್ಟಿ ಎಂಬ ವ್ಯವಹಾರಿಕ ನಾಮ ರೂಪದಲ್ಲಿ ವಿಡಂಬಿಸಿ 'ಬಂದೆವಯ್ಯಾ ಗೋವಿಂದಸೆಟ್ಟಿ' ಎನ್ನುವ ನಿಂದಾಸ್ತುತಿಯನ್ನು ರಚಿಸಿರಬೇಕು. ('ಒಡವೆಯ ಗಳಿಸುವ ಕಡುಲೋಭಿ ಶೆಟ್ಟಿ') ಕೃಷ್ಣದೇವರಾಯ ತೆಲುಗು ಸಂಸ್ಕೃತಿಯನ್ನು ಕನ್ನಡದೊಂದಿಗೆ ಬೆರೆಸಲು ಮಾಡಿದ ಬಹು ದೊಡ್ಡ ಪ್ರಯತ್ನದ ಸಂದರ್ಭದಲ್ಲಿಯೇ ಕನಕದಾಸರು ತೆಲುಗು ಭಾಷೆಯ ವ್ಯಾಮೋಹಕ್ಕೆ ಒಳಗಾಗದೆ ಕನ್ನಡ ಸಂಸ್ಕೃತಿಗೆ ನಿಷ್ಠವಾಗಿರುವುದು ವಿಶೇಷವೆನಿಸುತ್ತದೆ. ಕನ್ನಡ ಭಾಷೆ, ಸಂಸ್ಕೃತಿ ಪ್ರಜ್ಞೆಯನ್ನು ವಿಶೇಷವಾಗಿ ಕಾಪಿಟ್ಟುಕೊಂಡು ಬಂದ ಕನಕದಾಸರಿಗೆ ಕರ್ನಾಟಕದ ಭೌಗೋಳಿಕ, ಭಾಷಿಕ, ಸಾಂಸ್ಕೃತಿಕ ಪರಿಧಿಯ ಸ್ಪಷ್ಟವಾದ ತಿಳುವಳಿಕೆ ಇತ್ತು ಎನ್ನುವುದು ಮುಖ್ಯ. ಈ ಅರಿವಿನೊಂದಿಗೆ ಕರ್ನಾಟಕದ ಬಹುತ್ವವನ್ನು ಒಳಗೊಳ್ಳುವ ಹಾಗೆ ಅವರ ಕೃತಿಗಳು ರಚಿಸಲ್ಪಟ್ಟಿವೆ.

ಕನಕದಾಸರನ್ನು ಆವರಿಸಿಕೊಂಡ ಕರ್ನಾಟಕದ ಬಹುತ್ವದ ಪ್ರಜ್ಞೆ ಯಾವುದು? ಕನ್ನಡ ಸಾಹಿತ್ಯ ಚರಿತ್ರೆಯ ಆರಂಭದಿಂದಲೂ ಕನ್ನಡವು ತನ್ನ ಸತ್ವ ಕಾಯ್ದುಕೊಂಡು ಬಂದಿರುವುದು ಅದರ ಜಾನಪದೀಯ, ದೇಸೀ ಪ್ರಜ್ಞೆಯ ಮೂಲಕ ಎಂಬುದು ಗಮನಿಸುವ ಮಾತು. ವೈದಿಕ ಪರಂಪರೆಯ ಆಲೋಚನೆಗಳು ತನ್ನ ಆಂತರಿಕ ಸತ್ವವನ್ನು ಹಾಳುಗೆಡುಹಲೂ ನಿರಂತರ ಪ್ರಯತ್ನ ಮಾಡುತ್ತಿದ್ದಾಗಲೂ ಕನ್ನಡಿಗ ಸಾಮಾನ್ಯರ ದೇಸೀ ಪ್ರಜ್ಞೆ ಅಂತಸ್ಥವಾಗಿ ಸಮಾಜದ ತಿಳುವಳಿಕೆಯ ಭಾಗವಾಗಿತ್ತು ಎನ್ನುವುದನ್ನು ನಮ್ಮ ಕನ್ನಡದ ಪ್ರಾಚೀನ ಕವಿಗಳು ನಮಗೆ ತೋರಿಸಿಕೊಟ್ಟಿದ್ದಾರೆ. ಮಾರ್ಗ ಮತ್ತು ದೇಸೀ ಎಂಬ ಎರಡು ಪರಿಕಲ್ಪನೆಗಳು ನಮ್ಮ ಸಾಹಿತ್ಯ, ಸಂಸ್ಕೃತಿಯನ್ನು ವಿಭಿನ್ನವಾಗಿ ನಿರ್ವಹಿಸಿವೆ. ಯಾವುದು ಈ ನೆಲ ಮೂಲವೋ ಅದು ಗಟ್ಟಿಯಾಗಿ ಇಂದಿಗೂ ಈ ನೆಲದಲ್ಲಿ ನಿಂತಿದೆ. ನೆಲ ಮೂಲ ಸಂಸ್ಕೃತಿಯ ಈ ವಿನ್ಯಾಸಗಳು ಸಮಷ್ಟಿ, ಸಮನ್ವಯ, ಬಹುತ್ವದ ಗುಣವನ್ನೇ ಹೆಚ್ಚಾಗಿ ಆಶ್ರಯಿಸಿದೆ. ಸಾಮಾನ್ಯರ ಬದುಕಿನ ಸಂರಚನೆಯನ್ನು ತನ್ನ ಅನುಭವದ ಅಗಾಧತೆಗೆ ಒಗ್ಗಿಸಿಕೊಳ್ಳುವ, ಅರಿವಿಗೆ ದಕ್ಕಿಸಿಕೊಳ್ಳುವತ್ತ ಕಾರ್ಯೋನ್ಮುಖವಾಗುವ ಈ ದೇಸೀ ಪ್ರಜ್ಞೆಯೊಳಗೆ ಆಧ್ಯಾತ್ಮವಿದೆ, ರಾಜಕೀಯವಿದೆ, ಆರ್ಥಿಕ, ಕಲೆ, ವಾಣಿಜ್ಯವೇ ಮೊದಲಾದ ಜ್ಞಾನದ ವಿವಿಧ ಶಿಸ್ತುಗಳಿವೆ. ಅದು ಕೂಲಿ ಕಾರ್ಮಿಕರು, ಬಡವರು, ರೈತಾಪಿ ವರ್ಗ, ಕುಶಲಕರ್ಮಿಗಳನ್ನು, ದಲಿತರು, ಎಲ್ಲಾ ಬಗೆಯ ಶೋಷಿತರು, ಮಹಿಳೆಯರು, ಅಲೆಮಾರಿಗಳನ್ನೂ ಒಳಗೊಂಡ ಸಮಾಜೋ- ಆರ್ಥಿಕ-ರಾಜಕೀಯ ವ್ಯವಸ್ಥೆ. ಅದು ಎಲ್ಲರ ಪರವಾಗಿರುವ ಜ್ಞಾನ ವ್ಯವಸ್ಥೆ. ಕನಕದಾಸರಲ್ಲಿರುವುದು ಇಂತಹ ಬಹುತ್ವದ ತಿಳುವಳಿಕೆ. ಕನ್ನಡ ನಾಡಿನ ಈ ಬಹುತ್ವದ ಆಶಯಗಳನ್ನು ಸಂಸ್ಕೃತಿ ಕಥನವಾಗಿಸುವಲ್ಲಿ ಕನಕ ಕೃತಿಗಳು ಶ್ರಮಿಸಿವೆ.

ಅದು ಕರ್ನಾಟಕವನ್ನು ಇದುವರೆಗಿನ ತಿಳುವಳಿಕೆಗಿಂತ ಭಿನ್ನವಾಗಿ ನೋಡುವುದಕ್ಕೆ ಒತ್ತಾಯಿಸುತ್ತದೆ.

ಬಹುತ್ವವು ಯಾವುದೇ ಒಂದು ಆಲೋಚನೆ, ಒಂದು ಧರ್ಮ, ಒಂದು ಜ್ಞಾನ– ಹೀಗೆ ಒಂದೇ ಒಂದು. ಅದುವೇ ಶ್ರೇಷ್ಠ ಎನ್ನುವುದನ್ನು ಒಪ್ಪುವುದಿಲ್ಲ. ಯಾವುದೇ ನಾಡಿನ ಚರಿತ್ರೆಯು ಒಂದೇ ಆಗಿರಲು ಸಾಧ್ಯವೂ ಇಲ್ಲ. ಭಾರತವನ್ನು ಕೇಂದ್ರೀಕರಿಸಿ ಹೇಳುವುದಾದರೆ ನಮ್ಮಲ್ಲಿ ವೈವಿಧ್ಯತೆಯಲ್ಲಿ ಏಕತೆ ಎಂಬ ತತ್ವ ಎಂದಿನಿಂದಲೂ ಇದೆ. ವಿವಿಧ ಜಾತಿ, ಮತ ಪಂಥ, ಧರ್ಮಗಳ 'ಸೆಕ್ಯುಲರ್' ದೃಷ್ಟಿಕೋನವನ್ನು ಎಂದಿನಿಂದಲೂ ಈ ದೇಶದ ಸಂವಿಧಾನ ಒಪ್ಪಿಕೊಂಡಿದೆ.

ಮಧ್ಯಕಾಲೀನ ಕರ್ನಾಟಕದಲ್ಲಿ ಮುಸ್ಲಿಂ ಆಕ್ರಮಣ– ಈಗ ಇರುವಷ್ಟು ದೊಡ್ಡ ಧಾರ್ಮಿಕ, ಸಾಂಸ್ಕೃತಿಕ ಸಂಗತಿಯಾಗಿರಲಿಲ್ಲ. ಅದು ಮುಖ್ಯವಾಗಿ ರಾಜಕೀಯಕ್ಕೆ ಸಂಬಂಧಿಸಿದ ಘಟನೆಯಾಗಿ ಮಾತ್ರ ಪರಿಭಾವಿಸಲ್ಪಟ್ಟಿತ್ತು. ಹಿಂದುತ್ವದ ರಕ್ಷಣೆಗಾಗಿಗೆ ವಿಜಯನಗರದಂತಹ ಸಾಮ್ರಾಜ್ಯ ಹುಟ್ಟಿತು ಎನ್ನುವ ಕಟ್ಟುಕಥೆಗಳನ್ನು ಕಟ್ಟಿದ ವಸಾಹತೋತ್ತರ ಐತಿಹಾಸಿಕ ಸಂಕಥನಗಳು ಈ ದೇಶವನ್ನು ವಿಭಜಿಸಿ ನೋಡುವ ಕೆಲಸವನ್ನೆ ಮಾಡಿವೆ. ಆಶ್ಚರ್ಯದ ಸಂಗತಿ ಎಂದರೆ ಕನಕಕೃತಿಗಳು ಮುಸ್ಲಿಂ ಪ್ರಭುತ್ವ ಈ ದೇಶವನ್ನು ಆಳುವ ರಾಜಕೀಯ ಕದನವನ್ನು ಧಾರ್ಮಿಕ ಮೂಲಭೂತವಾದದ ಹಿನ್ನಲೆಯಲ್ಲಿ ನೋಡಿಲ್ಲ. ವೈಷ್ಣವ ಧರ್ಮದ ಪ್ರಬಲ ಪ್ರತಿಪಾದಕರಾದ ಅವರು ಮುಸ್ಲಿಂ ಧರ್ಮವಿರೋಧದ ಮಾತುಗಳನ್ನಾಡುವುದಿಲ್ಲ. ಹಿಂದೂ, ಮುಸ್ಲಿಂ, ಜೈನ, ಕ್ರೈಸ್ತ, ಹೀಗೆ ಒಟ್ಟಾರೆ ಎಲ್ಲಾ ಧರ್ಮದ ಹುಳುಕನ್ನು ಹೇಳುವ ಅವರ ಒಂದು ಕೀರ್ತನೆ ದೊರೆಯುತ್ತದೆಯೇ ಹೊರತು ಬೇರೆ ಯಾವ ಸಂದರ್ಭದಲ್ಲೂ ಧಾರ್ಮಿಕ ಅಸಹಿಷ್ಣುತೆಯು ಅವರನ್ನು ಕಾಡುವುದಿಲ್ಲ. ಹಿಂದೂ– ಮುಸ್ಲಿಂ ಧಾರ್ಮಿಕ ಸಂಘರ್ಷಗಳ ಪ್ರಸ್ತಾಪವನ್ನು ಎಲ್ಲಿಯೂ ಮಾಡುವುದಿಲ್ಲ.

'ಕಲಿಯೇರಿ ಬಂತು' ಎಂಬ ಕೀರ್ತನೆಯಲ್ಲಿ ಶೈವ–ವೈಷ್ಣವ ತಿಕ್ಕಾಟಗಳನ್ನು ಕುರಿತು ಮಾತಾಡುತ್ತಾರೆ. "ಹರಿ–ಹರರ ಪೂಜೆಗಳು ಹಗರಣಗಳಾದವು" ಎಂದು ಒಂದು ಕಡೆ ಹೇಳಿದರೆ, ಇನ್ನೊಂದೆಡೆ ಶಿವಶರಣರಿಗೆ 'ಹೇಳಲಂಜಿಕೆ ಆವುದು' ಎನ್ನುತ್ತಾ ಹರಿ–ಹರರ ಅಭೇದ ಕಲ್ಪನೆಯನ್ನು ನೀಡುತ್ತಾರೆ:

ಕೇಳಿರೈ ಶಿವಶರಣರು ಹೇಳಲಂಜಿಕೆ ಆವುದು
ಭಾಳನೇತ್ರನ ಭಕ್ತರಿಂತು ನೋಡಿಕೊಳ್ಳಿರೈ
    ಮೂರುಲಿಂಗ ತನ್ನೊಳು ಮುಖ್ಯವಾಗಿರುವಾಗ
    ಬೇರೊಂದು ಲಿಂಗ ಬೆಲೆ ಮಾಡಿ ತಂದು

ತೋರುವಂಗ್ಯೆಲಿಟ್ಟು ತೋಯಪುಷ್ಪವ ನೀಡಿ
ಯಾರ ಮನಕ್ಕೊಪ್ಪಿಸುವಿರೀ ಶೀಲವಂತರು
ಲಿಂಗವೊಂದು ತನ್ನೊಳು ಲೀನವಾಗಿರುವಾಗ
ಅಂಗಭವಿಗಳು ಕೂಡಿ ಆಡಿಕೊಂಬರು
ಅಂಗದನುಭವದರ್ಥವನರಿಯದ ಇಂತಹ
ಭಂಗಿ ಹುಚ್ಚರೆಲ್ಲ ಶಿವನ ಭಕ್ತರಹರೆ
ನಾಗಲಿಂಗ ತನ್ನೊಳು ನಾಟ್ಯವಾಡುತಿರಲು
ಆಗಮಿಸಿದ ಲಿಂಗವ ಬೆದಕಲೇತಕ್ಕೆ
ಕಾಗಿನೆಲೆಯಾದಿಕೇಶವನೆ ನಾಗಶಯನ
ನಾಗಿರಲು ಬೇರೊಂದನರಸಲೇತಕ್ಕೆ

ಈ ಬಗೆಯ ವೈಷ್ಣವ ಮೋಹವನ್ನು ಮುಂದಿಡುವ ಕನಕದಾಸರಿಗೆ ಶೈವ-ವೈಷ್ಣವರು ಒಂದಾಗಿ ಪರಸ್ಪರ ಗೌರವದಿಂದ ಬದುಕಬೇಕೆಂಬ ಆಶಯವಿದೆ. ಮೋಹನ ತರಂಗಿಣಿಯಲ್ಲಿಯೂ ಇಂತಹ ಧಾರ್ಮಿಕ ಸಹಿಷ್ಣುತೆಯ ಚಿತ್ರವನ್ನು ತರುತ್ತಾರೆ. ಬಾಣಾಸುರನ ಶಿವಪೂಜೆಯನ್ನು ವರ್ಣಿಸುವ ಕನಕದಾಸರಿಗೆ ಉಷಾ-ಅನಿರುದ್ಧರ ವಿವಾಹದ ಮೂಲಕ ಜಾತಿಗಿಂತ ಪ್ರೀತಿ ನೀತಿಗಳು ಮುಖ್ಯವೆಂಬ ಪ್ರತಿಪಾದಿಸುತ್ತಾರೆ. ಅದು ತತ್ಕಾಲೀನ ರಾಜಕೀಯ, ಧಾರ್ಮಿಕ ಸಂಘರ್ಷಕ್ಕೆ ನೀಡಿದ ಉತ್ತರವೂ ಹೌದು. ಕನಕದಾಸರಿಗೆ ವೈಷ್ಣವರೇ ಸರ್ವಶ್ರೇಷ್ಠರೆಂಬ ಭ್ರಮೆ ಇಲ್ಲ. ಅವರ ಡಾಂಭಿಕತೆಯನ್ನೂ ಕಟು ವಾಕ್ಯಗಳಲ್ಲಿ ಖಂಡಿಸುವುದನ್ನು ಮರೆಯುವುದಿಲ್ಲ. ಹೀಗೆ ಧರ್ಮ, ಕಲೆ, ಸಾಹಿತ್ಯ, ಸಾಮಾಜಿಕ ವಸ್ತು ಸಂಗತಿಗಳಲ್ಲಿ ಬಹುತ್ವವನ್ನು ಸಾಧಿಸುವ ಪ್ರಜ್ಞೆ ಕನಕದಾಸರಿಗೆ ಸಹಜವಾಗಿದೆ.

ಕರ್ನಾಟಕದ ಧಾರ್ಮಿಕ ಪರಂಪರೆಯಲ್ಲಿ ಕೇವಲ ವೈಷ್ಣವ ಪ್ರತಿನಿಧಿ ಕನಕದಾಸರನ್ನು ಎಂದು ಗುರುತಿಸುವುದು ಹೆಚ್ಚು ಸೂಕ್ತವಾಗಲಾರದು. ಮೇಲ್ನೋಟಕ್ಕೆ ವೈಷ್ಣವ ಧರ್ಮ ಪ್ರಚಾರಕ್ಕಾಗಿ ತಮ್ಮ ಬದುಕಿನ ಅಮೂಲ್ಯ ಕ್ಷಣಗಳನ್ನು ಅವರು ವ್ಯಯಿಸಿದಂತೆ ಕಂಡರೂ ಅವರು ಪ್ರತಿಪಾದಿಸುವ ತಾತ್ವಿಕತೆಯಲ್ಲಿ ಆಳವಾದ ಅನುಭವ ಮತ್ತು ಅನುಭಾವ ಪರಂಪರೆಯ ಹೊಳಹುಗಳಿವೆ. ಕರ್ನಾಟಕದ ಶ್ರಮಣಧಾರೆ, ಕಾಲುದಾರಿಯ ಪಂಥಗಳ ಆಶಯ ಮತ್ತು ನಿಲುವುಗಳಿವೆ. ಧರ್ಮ ಮತ್ತು ಮತಕ್ಕಿಂತ ಭಿನ್ನವಾಗಿ ಮನುಷ್ಯತ್ವದ ಹುಡುಕಾಟ ನಡೆಸುವ ಪ್ರಖರ ವೈಚಾರಿಕತೆಯ ಮೂಲಕ ಸಾರುವ 'ದರ್ಶನ' ವಾದಿ ಆಯಾಮಗಳಿವೆ. ಸಿದ್ಧ, ಶರಣ, ಶ್ರಮಣ ಪರಂಪರೆಗಳಿಗೆ ಜಾತಿ, ಕುಲದ ನಿರಾಕರಣೆ ಸಹಜವಾದುದು. ಬ್ರಾಹ್ಮಣೇತರ ಸಾಧಕರಿಗೆ ಸಿದ್ಧ ಪರಂಪರೆಗಳು ತೋರಿದ ಮಾರ್ಗ ವೈದಿಕ ವಿರೋಧಿ ನೆಲೆಯಿಂದ ಹುಟ್ಟಿರುವಂತದ್ದು.

ಕನಕಕದಾಸರು ಕರ್ನಾಟಕದ ಈ ಶ್ರಮಣ ಪರಂಪರೆಯ ಪ್ರಚಂಡ ಶಕ್ತಿಯಾಗಿ ಹೊರಹೊಮ್ಮಿದ್ದು ಕೂಡ ಈ ನಾಡಿನ ಬಹುಸಂಖ್ಯಾತರ ಪರವಾಗಿ ಎನ್ನುವುದು ಮುಖ್ಯವಾದ ಸಂಗತಿ. ವೈದಿಕವಾದಿ ನಿಲುವುಗಳು ಮನುಷ್ಯನನ್ನು ಜಾತಿ, ಕುಲದ ಹಿನ್ನಲೆಯಲ್ಲಿ ನೋಡುವ ತರತಮವಾದಿ ನಿಲುವುಗಳು ಇಂದಿಗೂ ಹಾಗೆಯೇ ಮುಂದುವರಿದಿರುವುದನ್ನು ನೋಡಿದರೆ ಇದಕ್ಕೆ ಮೊದಲು ತಾತ್ವಿಕ ವಿರೋಧವನ್ನು ಒಡ್ಡಿದವರು ಈ ಶ್ರಮಣ ಪರಂಪರೆಯ ಸಂತರು. "ಮಧ್ಯಯುಗೀನ ಭಾರತದ ನಿಜವಾದ ನಾಡಿ ಮಿಡಿತವನ್ನು ಅರಿಯಬೇಕಾದರೆ ಶ್ರಮಣಧಾರೆಗಳಿಗೇ ಹೋಗಬೇಕು. ಅವುಗಳ ಮೂಲಕ ಹೋದರೆ ಮಾತ್ರ ಭಾರತೀಯ ಸಮಾಜಗಳ ಅಂತರಂಗಕ್ಕೆ ಹೋಗಲು ಸಾಧ್ಯ. ಸ್ಥೂಲವಾಗಿ ಬೌದ್ಧ, ಜೈನ, ಸಿದ್ಧ, ನಾಥ, ಶರಣ, ಸೂಫಿ ತತ್ತ್ವಪದಕಾರರು ಮತ್ತು ಶಾಕ್ತಪಂಥಗಳನ್ನು ಶ್ರಮಣಧಾರೆಗಳೆಂದು ಸೂಚಿಸುತ್ತಾರೆ. ಇವುಗಳಲ್ಲಿ ಒಂದೆರಡು ಧಾರೆಗಳನ್ನು ಬಿಟ್ಟರೆ ಉಳಿದವು ಅಖಿಲ ಭಾರತ ವ್ಯಾಪ್ತಿವುಳ್ಳವು. ಇವುಗಳು ರೂಪುಗೊಳ್ಳಲು ಕರ್ನಾಟಕದ ದೊಡ್ಡ ಪಾಲಿದೆ" ಎಂಬ ಡಾ. ನಟರಾಜ ಬೂದಾಳ್ ಅವರ ಮಾತನ್ನು ಗಮನಿಸಬೇಕು. ಕರ್ನಾಟಕದ ಚರಿತ್ರೆಯನ್ನು ರೂಪಿಸಬೇಕಾದ ಈ ಪರಂಪರೆಗಳನ್ನು ಬಲವಂತವಾಗಿ ಹತ್ತಿಕ್ಕುವ ಪ್ರಯತ್ನಗಳು ವಿಜಯನಗರ ಕಾಲದ ಆದಿಯಿಂದಲೂ ನಡೆದಿದೆ. ವೈದಿಕ ಧರ್ಮ, ಆಂಧ್ರ ಸಂಸ್ಕೃತಿಯ ಮುಖವಾಣಿಗಳಾಗಿ ಕೆಲಸ ಮಾಡಿದ ವಿಜಯನಗರದ ಕೆಲವು ಅರಸರು ವೈದಿಕ ...ಗಳಿಗೆ ನೀಡಿದ ಮನ್ನಣೆಯನ್ನು ಗಮನಿಸಿದರೆ ಶೂದ್ರ ವರ್ಗಗಳ ಧಾರ್ಮಿಕ ...ುವುಗಳನ್ನು ಧಿಕ್ಕರಿಸಿದಂತೆ ತೋರುತ್ತದೆ. ಸುಮಾರು ಹದಿನೇಳನೆ ಶತಮಾನದ ...ಂತರ ಶ್ರಮಣ ಪರಂಪರೆಗಳು ಮತ್ತೆ ಕರ್ನಾಟಕದಲ್ಲಿ ತನ್ನ ಅಸ್ತಿತ್ವವನ್ನು ತೋರ್ಪಡಿಸಲು ಬಯಸಿರುವುದನ್ನು ನೋಡಿದರೆ ಕನಕದಾಸರು ಆ ತತ್ತ್ವ ಸಿದ್ಧಾಂತಗಳ ಪುನರುಜ್ಜೀವನಕ್ಕೆ ನೀಡಿದ ಕೊಡುಗೆಯನ್ನು ಗಮನಿಸಬಹುದು. ಕರ್ನಾಟಕದ ಸಂಸ್ಕೃತಿಯನ್ನು ಮತ್ತೆ ಅದರ ನೈಜತೆಯ ನೆಲೆಯಲ್ಲಿ ಎತ್ತಿ ಹಿಡಿಯುವ ಪ್ರಯತ್ನವನ್ನು ಕನಕದಾಸರು ಪ್ರಜ್ಞಾಪೂರ್ವಕವಾಗಿ ಮಾಡಿದರು.

ಭಿಕ್ಷಾಟನೆಯನ್ನು ತಮ್ಮ ಮುಖ್ಯ ವೃತ್ತಿಯಾಗಿ ಮಾಡಿಕೊಂಡ ದಾಸಪಂಥ ಹಾಡು, ನೃತ್ಯ ಪರಿಕರಗಳಾದ ತಾಳ, ತಂಬೂರಿಯನ್ನು ಹಿಡಿದು ಅಲೆಮಾರಿಗಳಾಗಿ ಸಾಗಿದ ದಾರಿ ಕರ್ನಾಟಕದ ಬಹುತ್ವದ ಕಲ್ಪನೆಯನ್ನು ಜನ ಸಾಮಾನ್ಯರಿಗೆ ತಿಳಿಸುವ ತನ್ಮೂಲಕ ಸಾಮಾಜಿಕ ಜಾಗೃತಿಯನ್ನುಂಟು ಮಾಡುವ ಪ್ರಯತ್ನವೇ ಆಗಿದೆ. ಭಾಷೆ ಮತ್ತು ಅರ್ಥವನ್ನು ತೀರಾ ಚಾಕಚಕ್ಯತೆಯಿಂದ ಬಳಸುವ ಉತ್ತರದ ಸಂತ ಪರಂಪರೆಯ ಆಶಯಗಳನ್ನು ತಮ್ಮ ಬೆಡಗಿನ ವಚನ ಹಾಗೂ ಮುಂಡಿಗೆಗಳಲ್ಲಿ ವಿಶೇಷವಾಗಿ ಬಳಸಿದರು. ಕನ್ನಡದ ಬೆಡಗಿನ ವಚನಗಳಂಥ ವಿಲಕ್ಷಣ ಉಕ್ತಿಗಳುಳ್ಳ ಪದಗಳನ್ನು

ಹಿಂದಿಯಲ್ಲಿ 'ಉಲಟ್‌ಬಾಂಸಿ' ಎಂದು ಕರೆಯುತ್ತಾರೆ. ಉಲ್ಲಂಘಭಾಷಿತ, ಉಲ್ಟೀಬಾನೀ ಎಂಬ ಹೆಸರೂ ಇದೆ. ಪರಸ್ಪರ ವಿರೋಧವೆನಿಸುವ ಉಕ್ತಿಗಳಿಂದ ಅನಿರ್ವಚನೀಯ ಅನುಭವಗಳಿಗೆ ಮಾತಿನ ರೂಪ ಕೊಡುವ ಯತ್ನ ಇಲ್ಲಿದೆ. ಚೌರಾಸೀ ಸಿದ್ಧರಲ್ಲಿ ಇದನ್ನು 'ಸಂಧಾಭಾಷಾ' 'ಸಂಧ್ಯಾಭಾಷೆ' (Evening Language, Twilight Language) ಎಂದೂ ಹೇಳಲಾಗುತ್ತದೆ. ಸಂಜೆಯಲ್ಲಿ ಕತ್ತಲು ಬೆಳಕು ಕೂಡಿರುವಂತೆ ಇದೊಂದು ಮುಸುಕಿನ ಭಾಷೆ. ಇಂತಹ ಉಲಟ್‌ಬಾಂಸಿಗಳೇ ಬೆಡಗಿನ ವಚನಗಳಿಗೆ ಪ್ರೇರಣೆ ನೀಡಿವೆ. ಸಂತ ಶಿಶುನಾಳ ಶರೀಫ್‌ರ 'ಕೋಡಗಾನ ಕೋಳಿ ನುಂಗಿತ್ತಾ' ಇದಕ್ಕೊಂದು ಉದಾಹರಣೆ. ದಾಸ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಬಳಸುವ ಉಗಾಭೋಗಗಳಿಗಿಂತ ಕನಕದಾಸರು ಮುಂಡಿಗೆಯನ್ನು ಬಳಸುತ್ತಾರೆ. ಕನಕ ಕೀರ್ತನೆಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅದರ ತಾತ್ವಿಕತೆಯು ಹೆಚ್ಚು ಜನಪರವಾಗಿರುವುದನ್ನು ಕಾಣುತ್ತೇವೆ. ಮೌಢ್ಯ ವಿರೋಧಿ ಧೋರಣೆಯನ್ನು ಗಮನಿಸುತ್ತೇವೆ. ಹನ್ನೆರಡನೇ ಶತಮಾನದಲ್ಲಿ ಅಲ್ಲಮಪ್ರಭು ಬೆಡಗಿನ ವಚನಗಳೆಂಬ ಪ್ರಕಾರವನ್ನು ಹೊರತಂದಂತೆ ಹದಿನಾರನೇ ಶತಮಾನದಲ್ಲಿ ಕನಕದಾಸರು ಒಗಟು ಪ್ರಕಾರವಾದ ಬೆಡಗಿನ ವಚನಗಳನ್ನು ಚಲಾವಣೆಗೆ ತಂದರು. ಕನಕನ ಮುಂಡಿಗೆಗಳು ಅನುಭಾವದ ನಿಗೂಢತೆಯನ್ನು ಜನಬಳಕೆಯ ರೂಪಕದ ಮೂಲಕ ನಮ್ಮ ಮುಂದಿಡುತ್ತವೆ. 'ಕೈ ಇಲ್ಲದ ಕುಂಬಾರ', 'ತಳವಿಲ್ಲದ ಮಡಕಿ', 'ತುಂಬದ ಕೆರಿಯಾಗ ಮೇಯಾಕ ಬಂದವು ಮೂರು ಎಮ್ಮಿ' ಈ ಮೊದಲಾದ ಪದಗಳಲ್ಲಿ ಆಧ್ಯಾತ್ಮದ ಮೂಲ ಗ್ರಹಿಕೆಗಳನ್ನು ಬಿಚ್ಚಿಡುವಲ್ಲಿ ವೈದಿಕ ಪರಿಭಾಷೆಗಿಂತ ಭಿನ್ನವಾದ ನುಡಿಗಟ್ಟುಗಳನ್ನು ಬಳಸುವುದು ಗಮನಾರ್ಹ.

ಆರು ಜೋಡಿನ ಓಲೆಯಿತ್ತು ಮೂರು ಮುತ್ತಿನ ಮೂಗುತಿಯಿತ್ತು
ಚಾರುತರದ ಇಪ್ಪತ್ನಾಲ್ಕೆಳೆಯ ಸರವು ಒಂದಿತ್ತು

ಅಷ್ಟಾಂಗಯೋಗ ತತ್ವವನ್ನು ಸರಳ ಪರಿಭಾಷೆಯಲ್ಲಿ ಕಟ್ಟಿಕೊಡುವ ಕನಕದಾಸರ ಸ್ವಂತಿಕೆಯ ಗುಣ ಎಂತವರಿಗೂ ಆಪ್ತವಾಗುತ್ತದೆ. ಕನಕನ ದೃಷ್ಟಿಯಲ್ಲಿ ಶೂದ್ರನೆಂದರೆ ಯಾರು? 'ಶ್ರುತಿ ಶಾಸ್ತ್ರ ಪುರಾಣಗಳ ಓದುವವನೆ ಶೂದ್ರ'. "ಶುಚಃ ದ್ರವತೀತಿ ಶೂದ್ರ". ಛಾಂದೋಗ್ಯ ಉಪನಿಷತ್‌ನ ಮಾತು. ಅಂದರೆ ಶ್ರತಿ ಶಾಸ್ತ್ರ ಪುರಾಣಗಳ ಅಧ್ಯಯನದಿಂದ ಯಾವನು ತಮ್ಮ ಪಾಪಗಳನ್ನು ದೂರ ಮಾಡಿಕೊಳ್ಳುತ್ತಾನೊ ಅವನು ಶೂದ್ರ. ಕನಕದಾಸರು ತಮ್ಮ ವಿದ್ವತ್ತಿನ ಮೂಲಕ ಎಂತವರನ್ನೂ ವಿಭ್ರಮೆಗೆ ಒಳಪಡಿಸಬಲ್ಲರು. ಪರಸ್ಪರ ಅರ್ಥ ವೈರುದ್ಧ್ಯವಿರುವ ನುಡಿಗಳನ್ನು ಬಳಸಿ ಈ ವಿಭ್ರಮೆಯನ್ನು ಸೃಷ್ಟಿಸುತ್ತಾರೆ. ಅವರು ಬಳಸಿದ ಪರಿಕಲ್ಪನೆಗಳು ಜನಸಾಮಾನ್ಯರ ಕಲ್ಪನೆಗೆ ನಿಲುಕುವಷ್ಟು ಸರಳವಾಗಿವೆ. ಈ ದೃಷ್ಟಿಯಿಂದ ಕನಕದಾಸರು ಪ್ರತಿಪಾದಿಸಿದ

ಧಾರ್ಮಿಕ ಚಿಂತನೆಗಳನ್ನು ಅಧ್ಯಯನ ಮಾಡಲು ಸಾಕಷ್ಟು ಅವಕಾಶಗಳಿವೆ.

ಕನಕದಾಸರಲ್ಲಿ ಮೌಢ್ಯ ವಿರೋಧಿ ನಿಲುವುಗಳು ಸ್ಪಷ್ಟವಾಗಿ ಕಾಣುತ್ತವೆ ಮಧ್ಯಕಾಲೀನ ಧಾರ್ಮಿಕ ಕರ್ನಾಟಕ ಹಲವು ಧರ್ಮಗಳ ಕಾರಣದಿಂದಾಗಿ ಮುಖ್ಯವಾಗಿರುವ ಹಾಗೆ ಧರ್ಮದ ಹೆಸರಿನಲ್ಲಿ ನಡೆಯುವ ಅನೇಕ ಮೂಢನಂಬಿಕೆಗಳನ್ನು ಮೌಢ್ಯ ಅಚರಣೆಗಳನ್ನು ತಮ್ಮ ಕೀರ್ತನೆಗಳಲ್ಲಿ ಕಟುವಾಗಿ ಟೀಕಿಸುತ್ತಾರೆ. ಅವರ ಕೀರ್ತನೆಗಳಲ್ಲಿ ಹಿಂಸಾತ್ಮಕ ಧೋರಣೆಗಳಿಗೆ ತೀರ್ವವಾದ ಪ್ರತಿರೋಧವಿದೆ ದೇವರನ್ನು ಒಲಿಸಿಕೊಳ್ಳುವ ಭರದಲ್ಲಿ ಕುರಿ ಕೋಣಗಳನ್ನು ಬಲಿ ಕೊಡುವ ಅಚರಣೆಗಳನ್ನು ವ್ಯಂಗ್ಯವಾಗಿ ನೋಡುತ್ತಾ ಸಮಾಜವನ್ನು ಎಚ್ಚರಿಸುವಂತಹ ಕೆಲಸವನ್ನು ಮಾಡಿದ್ದಾರೆ.

ಕ್ಷೀಣ ಶಾಸ್ತ್ರಾರ್ಥವನು ಪರಿಗ್ರಹಿಸಿ ನಿಖಿಲ ಕುರಿ
ಕೋಣಗಳ ತಲೆಚೆಂಡ ಕುಟ್ಟಿಸುತ
ಪ್ರಾಣ ಹತ್ಯವ ಮಾಳ್ಪುದಾವ ಸತ್ಕರ್ಮ – ನಾರಾ
ಯಣನ  ನಾಮಸ್ಮರಣೆ ಮಾಡು ಮನವೆ
    ಖಂಡವನು ಕೊಯ್ದು ಕೊಡಬೇಡ ದಳ್ಳುರಿಯಗ್ನಿ
    ಕಂಡವನು ಹೊಕ್ಕು ಹೊರಡುವುದುಚಿತವೆ
    ಭಂಡರಂದದಿ ಬತ್ತಲೆಯೆ ಬರುವುದಾವಾಟ
    ಪುಂಡರೀಕಾಕ್ಷನ ನೆನೆ ಕಂಡ್ಯ ಮನವೆ
ಕುಟ್ಟಿಕೊಳ್ಳದಿರಿ ಜಟ್ಟಿ ಗುಂಡಿನಲಿ, ಶಸ್ತ್ರವನು
ಚಿಟ್ಟಿ ಕೊಳ್ಳದಿರಿ, ಬೆನ್ನಲಿ ಸಿಡಿಯನು
ಕಟ್ಟಿ ತೂಗಿಸಿಕೊಳ್ಳದಿರಿ ಕರಟಕದಂತೆ
ಗುಟ್ಟಿನಲಿ ಗೋಪಾಲಕನ ಸ್ಮರಿಸು ಮರುಳೆ
    ತೊಗಲ ಬಿಲ್ಲೆಗಳ ಕೊರಳಲ್ಲಿ ಕಟ್ಟಿಕೊಂಡು
    ಹಗಲಿರುಳು ಅನ್ನಪಾನಕೆ ಹೋಗದೆ
    ಮೃಗವೈರಿಯಂತೇಕೆ ಕಿಸುಕೆಲೆವ ರಂಪಾಟ
    ಜಗದಾಧಿಪತಿಯ ನಾಮ ಸ್ಮರಿಸು ಮರುಳೆ
ಉತ್ತಮರು ಸುರೆಯನೀಂಟುವರೆ ತರಹರಿಸಿ ಮದೋ
ನ್ಮತ್ತರಾಗಿ ಅಸಭ್ಯ ಶಬ್ದವ ನುಡಿವರೆ
ಸತ್ತ ಹೆಣದಂತೆ ಬಿದ್ದಿಹುದಾವ ನೀತಿ ಪುರು
ಷೋತ್ತಮನ ನಾಮ ಸ್ಮರಣೆಯ ಮಾಡು ಮನವೆ
    ವೇದೋಕ್ತ ಪೂಜೆಯಲಿ ತೃಪ್ತಿಪಟ್ಟರೆ ನೀವು
    ಅದರಿಂದ ಫಲವೇನು ಪೇಳಿರಯ್ಯ

ನಾದವನು ಕೇಳ್ದ ಹರಿಣದಂದದಿ ಕೆಡದೆ ಮಧು
ಸೂದನನ ನಾಮ ಸ್ಮರಣೆಯ ಮಾಡು ಮರುಳೆ

ಈ ಕೀರ್ತನೆಯಲ್ಲಿ ಮಧ್ಯಕಾಲೀನ ಕರ್ನಾಟಕ ಹಲವು ವಾಮಾಚಾರದ ಘೋರ ಆಚರಣೆಗಳ ಮೇಲೆ ಕನಕದಾಸರು ಗಮನ ಹರಿಸುತ್ತಾರೆ. ಪ್ರಾಣಿ ಬಲಿಯನ್ನು ಕೊಡುವಾಗ ಬಂಡುಗುಡಲಿಯಿಂದ ಕೊರಳನ್ನು ಕತ್ತರಿಸಿ ಸಾಯಿಸುವುದು ಒನಕೆಯಿಂದ ತಲೆ ಚೆಚ್ಚಿ ಕೊಲ್ಲುವುದು ಇನ್ನೊಂದು ವಿಧ. ಈ ರೀತಿ ದೇವರ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿಕೊಡುವ ಆಚರಣೆಯನ್ನು ಅವರು ವಿರೋಧಿಸುತ್ತಾರೆ. ಕೆಂಡ ಹಾಯುವುದು ಪದ್ಧತಿ ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಇಂದಿಗೂ ಅದು ಪ್ರಚಲಿತವಾಗಿದೆ. ಕೆಂಡವನ್ನು ಕಾಲಿನಲ್ಲಿ ತುಳಿದು ದೇವರ ಹರಕೆ ಸಲ್ಲಿಸುವ ಈ ಪದ್ಧತಿಯಲ್ಲಿ ಹಿಂಸೆ ಇದೆ. ಅದನ್ನು ಕನಕದಾಸರು ವಿರೋಧಿಸುತ್ತಾರೆ. ಭಕ್ತಿ ಎನ್ನುವುದು ಅವರ ಪ್ರಕಾರ ಮನುಷ್ಯನ ಮನಸ್ಸಿನ ವಿಕಾಸವೇ ಹೊರತು ಹಿಂಸೆಯಲ್ಲ. ಬೆತ್ತಲೆ ಸೇವೆ, ಸಿಡಿ ಸೇವೆ, ಮೀನ ಖಂಡಕ್ಕೆ ಗೂಟವನ್ನು ಹೊಡೆಸಿಕೊಳ್ಳುವ ಆಚರಣೆ ಮರದ ದೋಣಿಯಲ್ಲಿ ನಾಯಿಯಂತೆ ಬಾಯಿ ಹಾಕಿ ಅನ್ನ ತಿನ್ನುವ ಪದ್ಧತಿ ಮೊದಲಾದ ಕ್ರೂರ ಧಾರ್ಮಿಕ ವಿಧಿ ವಿಧಾನಗಳು ಕರ್ನಾಟಕದಲ್ಲಿ ಚಾಲ್ತಿ ಇದ್ದ ಬಗ್ಗೆ ಕನಕ ಕೀರ್ತನೆಗಳು ಉಲ್ಲೇಖಿಸುತ್ತವೆ. ಮನುಷ್ಯನ ನಡೆ ನುಡಿ ಆಚಾರ ವಿಚಾರಗಳ ಬಗ್ಗೆ ಕನಕದಾಸರಲ್ಲಿ ವಿಶೇಷವಾದ ಕಾಳಜಿ ಇದೆ.

ಕನಕದಾಸರ ಕಾಲದಲ್ಲಿ ಚಂದ್ರಗುತ್ತಿ ಎಲ್ಲಮ್ಮನ ಬತ್ತಲ ಸೇವೆಯ ವಿಚಾರ ಅನೇಕ ಕೀರ್ತನೆಗಳಲ್ಲಿ ಮತ್ತೆ ಮತ್ತೆ ಬರುತ್ತದೆ. ಆ ಕಾಲದ ತಾಮಸ ಆಚರಣೆಗಳ ಬಗ್ಗೆ ಜನಜಾಗೃತಿಯನ್ನು ಹುಟ್ಟಿಸುವ ದೊಡ್ಡ ಕೆಲಸವನ್ನೇ ಅವರು ಮಾಡಿದ್ದಾರೆ.

ಸುತ್ತಣವರ ಮಾತು ಕೇಳಿ ಗುತ್ತಿಯ ಎಲ್ಲಮ್ಮಗೊಲಿದು
ಬತ್ತಲೆಯೆ ದೇವರೆದುರು ಬರುವುದು ನೋಡಿರೋ
ಮತ್ತೆ ಬೆವಿನುಡಿಗೆಯ ಅರ್ತಿಯಿಂದುಟ್ಟುಗೊಂಡು
ಮುಕ್ತಿ ಕಾಂಬೆವೆಂಬ ಮೌಢ್ಯ ಬೇಡಿರೋ

ಇಂತಹ ಕೀರ್ತನೆಗಳ ಮೂಲಕ ಒಂದು ಜಾಗೃತ ಸಾಮಾಜಿಕ ಪರಿಸರವನ್ನು ನಿರ್ಮಿಸುವ ಹೊಣೆಗಾರಿಕೆಯ್ನನು ಕನಕದಾಸರು ವಿಶೇಷವಾಗಿಯೇ ನಿರ್ವಹಿಸಿದ್ದಾರೆ. ಅವರ ಟೀಕೆಗೆ ಬ್ರಾಹ್ಮಣರು ಹೊರತಾಗಿಲ್ಲ. ಕ್ರೈಸ್ತ, ಮುಸಲ್ಮಾನ, ವೈಷ್ಣವ, ಲಿಂಗಾಯಿತ, ಬೌದ್ಧ, ಶೈವ, ಶಾಕ್ತ ಹೀಗೆ ಹಲವು ಧರ್ಮ ಪಂಥಗಳ ಡಂಬಾಚಾರದ ಭಕ್ತಿಯನ್ನು ತೀಕ್ಷ್ಣ ಪದಗಳಲ್ಲಿ ಖಂಡಿಸುತ್ತಾರೆ. ಉದಾಹರಣೆಗೆ ಈ ಕೆಳಗಿನ ಕೀರ್ತನೆಯನ್ನು ನೋಡಬಹುದು.

ತೀರ್ಥ ಪೀಡಿದವರೆಲ್ಲ ತಿರುನಾಮಧಾರಿಗಳೆ - ಜನ್ಮ
ಸಾರ್ಥಕವಿಲ್ಲದವರೆಲ್ಲ ಭಾಗವತರೆ
ಮೂಗ್ಹಿಡಿದು ನೀರೊಳಗೆ ಮುಳುಗಿ ಜಪತಪ ಮಾಡಿ
ನಿಗಮಾಗಮ ಪುರಾಣಗಳನೋದಿ ತಿಳಿದು
ಬಾಗಿ ಪರಸ್ತ್ರೀಯರನು ಬಯಸಿ ಕಣ್ಣಿಡುವಂಥ
ಯೋಗ ಭ್ರಷ್ಟರೆಲ್ಲ ದೇವ ಬ್ರಾಹ್ಮಣರೆ?
ಪಟ್ಟಿ ನಮವ ಬಳಿದು ಪಾತ್ರೆ ಕೈಯಲಿ ಹಿಡಿದು
ಗುಟ್ಟಿನಲಿ ಜಪಿಸುವ ಗುರುತರಿಯದೆ
ಕೆಟ್ಟ ಕೂಗನು ಕೂಗಿ ಹೊಟ್ಟೆಯನು ಹೊರೆವಂಥ
ಪೊಟ್ಟೆಗುಡುಮಗಳೆಲ್ಲ ಪರಮ ವೈಷ್ಣವರೆ?
ಲಿಂಗಾಂಗದೊಳಗಿರುವ ಚಿನ್ಮಯವ ತಿಳಿಯದೆ
ಲಿಂಗಲಿಂಗದ ನೆಲೆಯ ಗುರುತರಿಯದೆ
ಜಂಗಮ ಸ್ಥಾವರದ ಹೊಲಬನರಿಯದ ಇಂಥ
ಭಂಗಿಮಕ್ಕಗಳೆಲ್ಲ ನಿಜ ಲಿಂಗವಂತರೆ?
ಅಲ್ಲಾ ಖುದಾ ಎಂಬ ಅರ್ಥವನು ತಿಳಿಯದೆ
ಮಲ್ಲ ಶಾಸ್ತ್ರದ ನೆಲೆಯ ಮುನ್ನರಿಯದೆ
ಪೊಳ್ಳು ಕೂಗನು ಕೂಗಿ ಬಗುಳಿ ಬಾಯಾರುವಂಥ
ಕಳ್ಳ ಸುಳ್ಳರಿಗೆಲ್ಲ ವೀರ ಸ್ವರ್ಗವುಂಟೆ?
ವೇಷ ಭಾಷೆಯ ಕಲಿತು ಗೋಸಾಯಿ ಉಡೆದೊಟ್ಟು
ಆಸೆಯನು ತೊರೆಯದೆಯೆ ತಪಕೆ ಕುಳಿತು
ವಾಸನೆಯ ಗುರುತಿನಾ ಹೊಲಬನರಿಯದ ಇಂಥ
ವೇಷಧಾರಿಗಳೆಲ್ಲ ಸಂನ್ಯಾಸಿಗಳೆ?

ದಾಸತ್ವ ಸಂನ್ಯಾಸದ ಚರ್ಚೆಯು ಕನಕದಾಸರ ಕೀರ್ತನೆಯಲ್ಲಿದೆ. ದಾಸತ್ವದ ಹೆಸರಿನಲ್ಲಿ ಭಂಡ ಜನ್ಮ ಹೊರೆಯುವ ಸಂನ್ಯಾಸಿಗಳನ್ನು ಅವರು ಟೀಕಿಸುವುದನ್ನು ಮರೆಯುವುದಿಲ್ಲ. ಕನಕದಾಸರ ಈ ಪ್ರಖರ ವೈಚಾರಿಕತೆಯ ಹಿಂದೆ ಕನ್ನಡದ ಅನುಭಾವ ಪರಂಪರೆಯ ಚಹರೆಗಳಿವೆ. ಒಂದರ್ಥದಲ್ಲಿ ಕನಕದಾಸರೇ ಮೊದಲ ಕೆಳವರ್ಗದ ಸುಶೀಕ್ಷಿತ ತತ್ವಪದಕಾರನೂ ಹೌದು. ಹದಿನೇಳನೆ ಶತಮಾನದ ವರೆಗೂ ಹೆಚ್ಚಿನ ತತ್ವಕಾರರೆಲ್ಲ ಮೇಲ್ವರ್ಗಕ್ಕೆ ಸೇರಿದವರು. ಸುಮಾರು ಹದಿನೇಳನೆ ಶತಮಾನದಲ್ಲಿ ಬಂದ ತತ್ವಪದಕಾರರಲ್ಲಿ ಜಾತಿ, ಧರ್ಮ, ಮತ, ಪಂಥ ವರ್ಗ, ವರ್ಣ ಯಾವುದೂ ಕಂಡು ಬರುವುದಿಲ್ಲ, ಅವರ ಪ್ರಕಾರ ಅನುಭಾವ ಯಾವೊಂದು ಜಾತಿ ಧರ್ಮಕ್ಕೂ

ಸಂಬಂಧಪಟ್ಟಿರುವಂತದ್ದಲ್ಲ ಎಲ್ಲ ಧರ್ಮವನ್ನು ಮೀರಿರುವುದೇ ಅನುಭಾವ. ಅವರ ಶಾಬ್ದಿಕ ರಚನೆಗಳಲ್ಲಿ ಅನೇಕ ದೇಸಿ ರೂಪಗಳ ಕಂಡುಬರುತ್ತವೆ. ದೇಸಿ ಪರಿಕಲ್ಪನೆಗಳ ಮೂಲಕ ಜನರನ್ನು ತಲುಪುವುದು ಸುಲಭವೆನ್ನುವುದು ಅವರಿಗೆ ತಿಳಿದಿತ್ತು. ಕನಕದಾಸರ ಕುಲದ ಬಗೆಗಿನ ವ್ಯಾಖ್ಯಾನವನ್ನು ಒಳಗೊಂಡ ಈ ಎರಡು ತತ್ವ ಪದಗಳನ್ನು ಗಮನಿಸಬಹುದು.

೧. ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ
ಕೆಸರಳೊ ತಾವರೆ ಪುಟ್ಟಲು ಅದ ತಂದು
ಬಿಸಜನಭನಿಗಪಿಸಲಿಲ್ಲವೆ
ಹಸುವಿನ ಮಾಂಸದೊಳ್ಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣಲಿಲ್ಲವೆ
ಮೃಗಗಳ ಮೈಯಲಿ ಪುಟ್ಟಿದ ಕತ್ತುರಿಯ
ತೆಗೆದು ಪೂಸುವರು ದ್ವಜರೆಲ್ಲರು
ಒಗೆಯಿಂದ ನಾರಾಯಣನ್ಯಾವ ಕುಲ
ಅಗಜವಲ್ಲಭನ್ಯಾತರ ಕುಲದವನು
ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರೀಯಗಳ ಕುಲ ಪೇಳಿರಯ್ಯ
ಆತ್ಮಾಂತರಾತ್ಮ ನೆಲೆಯಾದಿಕೇಶವನು
ಆತನೊಲಿದ ಮೇಲೆ ಯಾತರು ಕುಲವಯ್ಯ

೨. ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರ
ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆ ಕಂಡ್ಯ ಮನಜ
ಜಲವೇ ಸಕಲ ಕುಲಕ್ಕೆ ತಾಯಲ್ಲದೆ
ಜಲದ ಕುಲವೇನಾದರು ಬಲ್ಲಿರ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ
ನೆಲೆಯನರಿತು ನೀ ನೆನೆ ಕಂಡ್ಯ ಮನುಜ

ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿ ಕಾಗಿನೆಲೆಯದಿಕೇಶವರಾಯನ
ಚರಣ ಕಮಲವ ಕೀರ್ತಿಸುವನೆ ಕುಲಜ

ಪಂಪನಲ್ಲಿ ಕಾಣಿಸಿಕೊಂಡ ಈ ಕುಲದ ವ್ಯಾಖ್ಯಾನ ಮತ್ತೆ ಕಾಣುವುದು ಕನಕದಾಸರಲ್ಲಿ ಬಸವಾದಿ ಶಿವಶರಣರು ಮನುಷ್ಯ ಜಾತಿ ಕುಲದ ಬಗೆಗೆ ತಳೆದ ಕ್ರಾಂತಿ ನಿಲುವುಗಳು ಕನಕದಾಸರಲ್ಲಿ ಮತ್ತೆ ಪ್ರತಿಧ್ವನಿಸಿದರೂ ಪಂಪ ಹೇಳಿದ, 'ಕುಲವನೇ ಮುನ್ನ ಉಗ್ಗಡಿಪಿರೇಂಗಳಾ? ಕುಲಂ ಕುಲಮಲ್ತು ಚಲಂ ಕುಲಂ, ಗುಣಂ ಕುಲಂ....' ಎಂಬ ಮಾತು ಕನಕನಲ್ಲಿ ಭಗವಂತನಿಗೆ ಶರಣನಾದವನೇ ಕುಲಜನೆಂಬ ವ್ಯಾಖ್ಯಾನ ದೊರೆಯುತ್ತದೆ. ಅನೇಕ ತತ್ವ ಪದಕಾರರಲ್ಲಿಯೂ ವೈಷ್ಣವ ಧೋರಣೆಯು ಮತ್ತೆ ಮತ್ತೆ ಕಾಣಿಸುವುದು ಮನುಷ್ಯನೊಳಗಿನ ಅನುಭಾವದ ಹುಡುಕಾಟಕ್ಕಾಗಿ. ಕನಕದಾಸರ ಅನೇಕ ಕೀರ್ತನೆಗಳಲ್ಲಿ ತತ್ವ ಪದಗಳ ಆಶಯ ಮತ್ತು ಆಕೃತಿಗಳು ದೇಸಿ ಸತ್ವದೊಡನೆ ಕಾಣಿಸುತ್ತದೆ. ದೇಸಿತನವು ತತ್ವ ಪದಗಳ ಒಂದು ವಿಶೇಷ ಲಕ್ಷಣ. ಕರ್ನಾಟಕ ಸಾಮಾಜಿಕ ಚರಿತ್ರೆಯನ್ನು ವೈದಿಕ ನೆಲೆಗಳಿಂದ ಕಟ್ಟುವುದಕ್ಕೆ ಪರ್ಯಾಯವಾಗಿ ಜನಪದ ಸಂಸ್ಕೃತಿಯ ಅರಿಮೆಯೊಂದಿಗೆ ಅದರ ಔನ್ನತ್ಯವನ್ನು ಕನಕದಾಸರು ಎತ್ತಿ ಹಿಡಿಯುತ್ತಾರೆ. ಕಾವ್ಯ ಭಾಷೆ ಮತ್ತು ಚೌಕಟ್ಟಿನಲ್ಲಿ ತ್ರಿಪದಿ ಹಾಗೂ ದ್ವಿಪದಿಯ ಲಯವನ್ನು ವಿಶೇಷವಾಗಿ ಬಳಸಿಕೊಂಡಿದ್ದಾರೆ. ಕರ್ನಾಟಕದ ಜನಪದ ದೇವರು, ಗ್ರಾಮದೇವತೆಗಳು, ಕ್ಷುದ್ರದೇವತೆಗಳು, ಬಣಗುದೈವಗಳ ಉಲ್ಲೇಖವನ್ನು ನೀಡುತ್ತಾ ಅವುಗಳ ಸುತ್ತ ಇರುವ ಜನಪದರ ಮೂಢ ನಂಬಿಕೆಗಳನ್ನು ಪ್ರಶ್ನಿಸುತ್ತಾರೆ.

ಎಕ್ಕನಾತಿ ಎಲ್ಲಮ್ಮ ಮಾರಿ ದುರ್ಗಿ ಚೌಡಿಯರ
ಅಕ್ಕರಿಂದಲಿ ಪೂಜೆ ಮಾಡಲೇಕೆ
ಕಿಕ್ಕಿರಿದು ಯಮನ ದೂತರೆಳೆದೊಯ್ವಾಗ
ಶಕ್ತೇರು ಬಿಡಿಸಿಕೊಂಡಾರೇನೋ ಮರುಳೆ
ಸಂಭ್ರಮದಲೊಂದ್ಹೊತ್ತು ನೇಮದಲಿದ್ದು
ತಂಬಿಟ್ಟಿನಾ ದೀಪ ಹೊರಲೇತಕೆ
ಕೊಂಬು ಹೋತ ಕುರಿ ಕೋಣನಾ ಬಲಿಗೊಂಬ
ದೊಂಬಿ ದೈವಗಳ ಭಜಿಸದಿರು ಮನವೆ
ಚಿಗುರೆಲೆ ಬೇವಿನಸೊಪ್ಪು ನಾರಸೀರೆ
ಬಗೆಬಗೆಯಿಂದ ಶೃಂಗಾರ ಮಾಡಿ
ನೆಗೆನೆದು ಆಡಲು ಕುಣಿಯಲು ನಿನಗಿನ್ನು

ಮಿಗಿಲಾದ ಮುಕುತಿಯುಂಟೇ ಹುಚ್ಚು ಮನವೆ?

ಇಲ್ಲಿ ಕನಕದಾಸರು ಇಂಥಹ ಜನಪದ ದೈವಗಳ ಅಸ್ತಿತ್ವವನ್ನು ನಿರಾಕರಿಸುವುದಿಲ್ಲ. ಆದರೆ ಅಲ್ಲಿ ಕಂಡು ಬರುವ ಧಾರ್ಮಿಕ ಅಂಧ ಶ್ರದ್ಧೆಗಳನ್ನು ನಿರಾಕರಿಸುತ್ತಾರೆ. ಧನ ಬಲ, ರಾಜಕೀಯ ಬೆಂಬಲ, ಧಾರ್ಮಿಕ ಬಲವಿರುವ ವರ್ಗಗಳು ತಮ್ಮ ಭದ್ರತೆಗಾಗಿ ರೂಪಿಸಿಕೊಂಡ ಧರ್ಮ, ದೇವರುಗಳನ್ನು ಕೆಳವರ್ಗದ ಜನ ನಂಬಿ ಮೋಸ ಹೋಗುವುದನ್ನು ವಿರೋಧಿಸುತ್ತಾರೆ. ಅವರ ಕೀರ್ತನೆಗಳಲ್ಲಿ ಭಗವತ್ ಭಕ್ತಿ ಅನುಭಾವಕ್ಕೆ ಬಹಿರಂಗದ ಆಚರಣೆಗಳಿಗಿಂತ ಅಂತರಂಗದ ಸಾಧನೆ ಮುಖ್ಯವೆಂಬುದು ಪ್ರತಿಪಾದನೆಯಾಗುತ್ತದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಿದ ಅನೇಕ ತತ್ವಕಾರರು ಶರಣರು, ಅನುಭಾವಿಗಳು, ಸಂತರು ಅಂತರಂಗದ ಶುದ್ಧತೆಯ ಬಗ್ಗೆಯೇ ಮಾತನಾಡುತ್ತಾರೆ. ಈ ಹಿನ್ನೆಲೆಯನ್ನೆಲ್ಲ ಗಮನಿಸಿದರೆ ಕನಕ ಕೀರ್ತನೆಗಳಿಗೂ ಕನ್ನಡದ ಅನುಭಾವ ಗೀತೆಗಳಿಗೂ ಬಹಳ ಹತ್ತಿರದ ಸಂಬಂಧವಿದೆ ಎನಿಸುತ್ತದೆ. ಈ ಬಗ್ಗೆ ಹೆಚ್ಚಿನ ಅಧ್ಯಯನಗಳು ಆಗಬೇಕಾಗಿದೆ. ಚಾರಣ ಕವಿಯಾದ ಕನಕದಾಸರು ಅರಿವಿನೆಡೆಗೆ ಹೊರಟ ಈ ಸುದೀರ್ಘ ಪಯಣದಲ್ಲಿ ಕರ್ನಾಟಕದ ಬಹುತ್ವವನ್ನು ಅವಲೋಕಿಸುವ, ವಿಶ್ಲೇಷಿಸುವ, ವಿಮರ್ಶಿಸುವ ಮೂಲಕ ಅನನ್ಯತೆಯನ್ನು ಸಾಧಿಸಿದ್ದಾರೆ.

ಕನಕದಾಸರ ಮೋಹನತರಂಗಿಣಿ, ನಳಚರಿತ್ರೆ, ಹರಿಭಕ್ತಿ ಸಾರ, ರಾಮಧಾನ್ಯ ಚರಿತ್ರೆಯಲ್ಲಿ ಕಾಣಿಸಿಕೊಂಡಿದ್ದು ಈ ನಾಡಿನ ಜಾನಪದ ಸಂಸ್ಕೃತಿ. ಇಲ್ಲಿನ ಆಹಾರ ಪದ್ಧತಿ, ಊಟೋಪಚಾರ, ಕೃಷಿ ಉಪಕರಣ, ಆಯುಧ, ಅಡುಗೆ ಸಾಮಗ್ರಿ, ಜನಪದ ವಾದ್ಯಗಳು, ಉದ್ಯೋಗ, ಮದುವೆ, ಹಬ್ಬ ಸಂಪ್ರದಾಯ ಇತ್ಯಾದಿಗಳ ಬಗ್ಗೆ ನೀಡುವ ವಿವರಗಳಲ್ಲಿ ಕನಕದಾಸರು ತಮ್ಮ ಪರ್ಯಟನದಿಂದ ಕರ್ನಾಟಕವನ್ನು ಅದರ ಅಖಂಡ ಸ್ವರೂಪವನ್ನು ಗ್ರಹಿಸುವಲ್ಲಿ ಹೆಚ್ಚು ಒತ್ತು ನೀಡಿದ್ದಾರೆ. ಮೋಹನ ತರಂಗಿಣಿಯ ಸೌರಾಷ್ಟ್ರ ವರ್ಣನೆಯಲ್ಲಿ ಕರ್ನಾಟಕದ ಪ್ರಾಕೃತಿಕ ಸಂಪತ್ತು, ಜಲ-ಜೀವ ಸಂಪತ್ತಿನ ವಿವರಣೆಗಳಿವೆ. ಸಮುದ್ರ ವರ್ಣನೆಯು ಅವರ ಸ್ವತಃ ಅನುಭವವಾಗಿದ್ದು ಸಮುದ್ರದ ತೆರೆಗಳು ಬಂದು ಅಪ್ಪಳಿಸುವ ಚಿತ್ರಣ ನೀಡುತ್ತಾರೆ.

ಹೊದ್ದಿರಲುರ್ವಿಯ ಹೆಜಿಸಾರುಸಾರೆಂದು
ಬುದ್ಧಿಗಲಿಸೆ ಕೇಳದಿರಲು
ಗದ್ದಿಸಿ ತೆರೆಗೆಯ್ಗಳಿಂದೆ ತಾಡಿಸುವಂತೆ
ಗುದ್ದಿತು ಜಲನಿಧಿ ತಟವ

ಸೌರಾಷ್ಟ್ರದ ಗದ್ದೆ ಕಾಯುವ ಪುಳಿಂದಿನಿಯರು, ವಿಜಯನಗರದ ಬೀದಿಗಳಲ್ಲಿ ಕಾಣಿಸುವ ವೇಶ್ಯಾಗೃಹಗಳು, ಬ್ರಾಹ್ಮಣ ಹೆಂಗಸರು, ಕೈ ನೋಡಿ ಭವಿಷ್ಯ ಹೇಳುವ

ಕೊರವಂಜಿಗಳು, ವ್ಯಾಪಾರ ವ್ಯವಹಾರ ಕೋವಿದರಾದ ವರ್ತಕರು, ಸೈನಿಕರು, ಶಕುನ ಹೇಳುವವರು ಮೊದಲಾದವರನ್ನು ಉಲ್ಲೇಖಿಸುತ್ತ ಕರ್ನಾಟಕದ ಬಹುತ್ವದ ಕಥನವನ್ನೇ ಕಟ್ಟಿದ್ದಾರೆ.

೩. ರಾಷ್ಟ್ರೀಯತೆಯ ಪ್ರಜ್ಞೆ:

ವಸಾಹತು ಪೂರ್ವ ಕರ್ನಾಟಕದ ಚಿತ್ರಣದಲ್ಲಿ ರಾಷ್ಟ್ರೀಯತೆಯು ಗೈರುಹಾಜರಾಗಿತ್ತು, ಈ ದೇಶದಲ್ಲಿ ರಾಜಕೀಯ ಆಕ್ರಮಣಗಳು ನಡೆಯುವ ಹೊತ್ತಿಗೆ ನಾಡಿನ ಅಖಂಡತೆಯ ಪ್ರಶ್ನೆಯೂ ಮುಖ್ಯವಾಯಿತು. "ಕನಕದಾಸರ ಹಾಡುಗಳಲ್ಲಿ ಕಂಡು ಬರುವ ಬಹಳಷ್ಟು ಅಂಶಗಳು, ಅಂದು ಕನ್ನಡ ರಾಷ್ಟ್ರೀಯತೆಯ ಸಮಾಜವು ತೊಡಗಿಕೊಂಡಿದ್ದ ಹಲವಾರು ಸಂಘರ್ಷಾತ್ಮಕ ಅಂಶಗಳನ್ನು ಬಿಂಬಿಸುತ್ತದೆ"[೨] ಎನ್ನುವ ಬಂಜಗೆರೆಯವರ ಮಾತನ್ನು ಗಮನಿಸಿದರೆ ರಾಷ್ಟ್ರೀಯತೆಯ ಆಶಯಗಳು ವ್ಯಕ್ತವಾಗುವುದೇ ಅದು ಒಳಗೊಳ್ಳುವ ಸಮೂಹ, ಸಮಷ್ಟಿಯ ಪ್ರಜ್ಞೆಯಿಂದ. ಮಧ್ಯಕಾಲೀನ ರಾಜಕೀಯ, ಸಾಮಾಜಿಕ ಪರಿಸ್ಥಿತಿಯನ್ನು ಕುರಿತು ಅವರೇ ಹೇಳುವಂತೆ, "ಕರ್ನಾಟಕದೊಳಗೆ ಈ ಅವಧಿಯಲ್ಲಿ, ಮಧ್ಯಾವಧಿಯ ಊಳಿಗಮಾನ್ಯತೆಯನ್ನು ನಿವಾರಿಸುವುದಕ್ಕೆ ಬೇಕಾದ ರಾಜಕೀಯ ಪರಿಸ್ಥಿತಿಗಳು ನಿರ್ಮಾಣವಾಗಿದ್ದವು. ಸಮಾಜದ ಎಲ್ಲಾ ರಂಗಗಳಲ್ಲಿ ನಿರ್ಮಾಣವಾಗಿದ್ದ ಊಳಿಗಮಾನ್ಯ ವಿರೋಧಿ ಅಂಶಗಳ ಬಲಿಷ್ಠಗೊಳ್ಳುವಿಕೆಯಿಂದ ಯುದ್ಧ ಕೋರ ಪಾಳೇಗಾರರರ ಮತ್ತು ಊಳಿಗಮಾನ್ಯ ಅರಾಜಕತೆಯ ವಿರುದ್ಧ, ಒಂದು ದೃಢ ಭೌತಿಕ ಸನ್ನಿವೇಶ ನಿರ್ಮಾಣವಾಗಿತ್ತು.ಈ ಅಡೆತಡೆಗಳ ವಿರುದ್ಧ ಸೃಷ್ಟಿಯಾದ ಭೌತಿಕ ಸನ್ನಿವೇಶವು ಅವುಗಳ ನಿವಾರಣೆಗೆ ಹಾಗೂ ಉತ್ತರಾಧಿಯ ಊಳಿಗಮಾನ್ಯತೆಯ ಉದ್ಘಾಟನೆಗೆ ಅಗತ್ಯ ಪರಿಸ್ಥಿತಿಗಳನ್ನು ಉಂಟುಮಾಡಿದ್ದವು. ಈ ಅವಧಿಯು ಅದರ ನಿಜವಾದ ಅರ್ಥದಲ್ಲಿ ಕರ್ನಾಟಕದ ಬಂಡವಾಳಶಾಹಿ ಪ್ರಜಾತಾಂತ್ರಿಕ ಆರಂಭ ಮತ್ತು ಊಳಿಗಮಾನ್ಯತೆಯ ಸಾಮಾಜಿಕ ಅಸ್ತಿತ್ವವನ್ನು ಅಂತಿಮವಾಗಿ ಕೊನೆಗೊಳಿಸುವ ಕಾಲಘಟ್ಟಕ್ಕೆ ಅಡಿಪಾಯವನ್ನು ಹಾಕಿತು."[೩] ಕನಕದಾಸರ ಸ್ವತಂತ್ರವಾದಿ ಚಿಂತನೆಯ ನೆಲೆಗಳನ್ನು ಅವರ ಕಾವ್ಯದ ಹಿನ್ನಲೆಯಲ್ಲಿ ಗಮನಿಸಿದರೆ ಅಲ್ಲಿಯೂ ಈ ಧೋರಣೆ ವ್ಯಕ್ತವಾಗುತ್ತಿರುವುದನ್ನು ಕಾಣಬಹುದು. ಪ್ರಜಾ ಪ್ರಭುತ್ವದ ಆಶಯಗಳ ಸೂಕ್ಷ್ಮ ಹೊಳವುಗಳು ಅಲ್ಲಿವೆ. ರಾಮಧಾನ್ಯ ಚರಿತ್ರೆ ಈ ದೃಷ್ಟಿಯಿಂದ ಮುಖ್ಯ. ಅಭಿಪ್ರಾಯ ಸ್ವಾತಂತ್ರ್ಯದ ಸ್ಪಷ್ಟ ಚಿತ್ರಣಗಳು ಮೂಡುವ ಆ ಕೃತಿ ಹಲವು ದೃಷ್ಟಿಯಿಂದ ಮುಖ್ಯವೆಂಬುದನ್ನು ಈಗಾಗಲೇ ಗುರುತಿಸಲಾಗಿದೆ. ಇಲ್ಲಿಂದಲೇ ರಾಷ್ಟ್ರೀಯ ಪ್ರಜ್ಞೆಯ ಹುಟ್ಟು ಎಂದರೂ ತಪ್ಪಾಗಲಿಕ್ಕಿಲ್ಲ. ಈ ಅವಧಿಯಲ್ಲಿ

---

೨. ಡಾ. ಬಂಜಗೆರೆ ಜಯಪ್ರಕಾಶ: ಕನ್ನಡ ರಾಷ್ಟ್ರೀಯತೆ: ಪುಟ ೧೫೭ ,೨೦೦೦.

೩. ಅದೇ.೧೬೩

ರಾಷ್ಟ್ರೀಯತೆ ಎಂದರೆ ಅದು ಪ್ರಭುತ್ವದ ಮುಖವಾಣಿಯಲ್ಲ. ಈ ನೆಲದ ರೈತರು, ಕೂಲಿಕಾರ್ಮಿಕರು, ದಲಿತರು, ಮಹಿಳೆಯರು, ವರ್ತಕರು, ಸೈನಿಕರು ಹೀಗೆ ವಿವಿಧ ವರ್ಗಗಳ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಅವುಗಳ ಅಸ್ತಿತ್ವವನ್ನು ಗುರುತಿಸುವ ಮೂಲಕ ಒಂದು ನಾಡಿನ ರಾಷ್ಟ್ರೀಯತೆಯ ಪ್ರಜ್ಞೆ ರೂಪುಗೊಳ್ಳುತ್ತದೆ. ಅದು ಎಲ್ಲಾ ಸಮೂಹಗಳು ತಮ್ಮ ಅಸ್ಮಿತೆಗಾಗಿ ನಡೆಸುವ ಒಂದು ಪ್ರಯತ್ನ. ಕನಕಕೃತಿಗಳನ್ನು ಓದುವಾಗ ರಾಷ್ಟ್ರೀಯವಾದಿ ಸಮೂಹ ಪ್ರಜ್ಞೆಯೊಂದು ರೂಪುಗೊಳ್ಳುವುದಕ್ಕೆ ಪೂರಕವಾದ ವೇದಿಕೆಯೊಂದು ಅಲ್ಲಿಂದ ನಿರ್ಮಾಣವಾದಂತೆ ಕಾಣುತ್ತದೆ. ಈ ನೆಲದ, ಕೃಷಿ, ಕೈಗಾರಿಕೆ, ನೀರಾವರಿ, ಕಾಲುವೆ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಐತಿಹಾಸಿಕ ಈ ಎಲ್ಲಾ ಆಯಾಮಗಳನ್ನು ಅದು ಒಳಗೊಳ್ಳುವುದರಿಂದ ಅದರ ಆಯಾಮಗಳು ವಿಸ್ತರಿಸಿಕೊಂಡಿವೆ. ಕನಕಕೃತಿಗಳು ಸಾಗರೋತ್ತರ ವಾಣಿಜ್ಯೋದ್ಯಮವನ್ನು ಗುರುತಿಸುತ್ತಾ ವಸಾಹತುಶಾಹಿಗಳ ಆಗಮನದವರೆಗಿನ ಕರ್ನಾಟಕದ ವಾಣಿಜ್ಯ ಬೆಳವಣಿಗೆಯನ್ನು ಗುರುತಿಸಲು ಸಾಧ್ಯವಿದೆ. ಮೋಹನತರಂಗಿಣಿಯ ಮೂರನೇ ಸಂಧಿಯಲ್ಲಿ ೧೧ರಿಂದ ೩೧ರ ವರೆಗಿನ ಪದ್ಯಗಳಲ್ಲಿ ವಿಜಯನಗರದ ವಾಣಿಜ್ಯ ವೈಭವದ ಚಿತ್ರಣಗಳಿವೆ. ದ್ವಾರಕಾಪುರದಲ್ಲಿ ಸೋಮ ಹಾಗೂ ಸೂರ್ಯ ವೀಧಿಗಳಿದ್ದು ಅಲ್ಲಿ ಎಂತಹ ವಸ್ತುಗಳು ಮಾರಾಟವಾಗುತ್ತಿತ್ತು ಎಂಬ ವಿಶಿಷ್ಟ ಚಿತ್ರಣ ದೊರೆಯುತ್ತದೆ. ಇದು ಅಬ್ದುಲ್ ರಜಾಕ್‌ನಲ್ಲೂ ಬಂದಿದೆ. ವಿಜಯನಗರದ ಅರಸರು ಜನಸಾಮಾನ್ಯರ ಮೇಲೇ ವಿಧಿಸುತ್ತಿದ್ದ ಬಾಲದೆರೆ(ಬಾಲವಿರುವ ಪ್ರಾಣಿಗಳ ಮೇಲೆ ವಿಧಿಸುತ್ತಿದ್ದ ತೆರಿಗೆ), ಕ್ಷೌರಿಕರ ಮೇಲೆ, ವೇಶ್ಯೆಯರು ಮೊದಲಾದವರ ಮೇಲೆ ವಿವಿಧ ಬಗೆಯ ತೆರಿಗೆಗಳನ್ನು ಹೇರಲಾಗುತ್ತಿತ್ತು. ಪುರಂದರ ದಾಸರು ಹಾಗೂ ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಆ ಕಾಲದಲ್ಲಿ ಚಾಲ್ತಿಯಲ್ಲಿದ್ದ ನ್ಯಾಯಬದ್ಧವಲ್ಲದ ಹಣ ಸಂಗ್ರಹಣೆಯ ಮಾರ್ಗಗಳನ್ನು ಟೀಕಿಸಿದ್ದಾರೆ. ರೈತರು ಭೂಕಂದಾಯ ಪಾವತಿಸಲಾಗದೆ ಊರುಬಿಟ್ಟ ಸ್ಥಿತಿಗಳೂ ಇವೆ.

ಒಟ್ಟಿನಲ್ಲಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ ರೂಪಿಸಲು ನೆರವಾಗುವ ಬಹುತ್ವದ ನೆಲೆಯೊಂದು ರಾಷ್ಟ್ರೀಯವಾದಿ ಧೋರಣೆಯೊಂದಿಗೆ ಕನಕಕೃತಿಗಳಲ್ಲಿ ಕಾಣಿಸಿ ಕೊಂಡಿರುವುದು ಅಧ್ಯಯನ ಯೋಗ್ಯ ವಿಚಾರವಾಗಿದೆ.

# ಆಕರ ಗ್ರಂಥಗಳು:


೧. ಸಂಪುಟ ಭಾಗ-೧ ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ- ಡಾ. ಬಿ. ಶಿವರಾಮ ಶೆಟ್ಟಿ (ಸಂ): ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವ ವಿದ್ಯಾಲಯ(೨೦೧೩)

೨. ಡಾ.ಎಂ.ಎಂ.ಕಲಬುರ್ಗಿ: ಮಾರ್ಗ-ಸಂ ೪, ಸ್ವಪ್ನ ಬುಕ್ ಹೌಸ್, ಬೆಂಗಳೂರು (೨೦೦೪)

೩. ಡಾ. ಎಚ್.ಎನ್. ಮುರಳೀಧರ(ಸಂ); ಈ ಪರಿಯ ಸೊಬಗು ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ(೨೦೧೦)

೪. ಪ್ರೊ. ಎ. ವಿ. ನಾವಡ (ಸಂ); ಕನಕ ಕಾವ್ಯ ಸಂಪುಟ; ಕನಕದಾಸ ಅಧ್ಯಯನ ಸಂಶೋಧನ ಪೀಠ (೨೦೧೧)

೫. ಡಾ.ದೇ. ಜವರೇ ಗೌಡ (ಸಂ): ಕನಕಾವಲೋಕನ (ಕನಕದಾಸರ ಜೀವನ ಮತ್ತು ಕೃತಿಗಳನ್ನು ಕುರಿತ ಲೇಖನಗಳು) :ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, (೨೦೧೨)

೬. ಡಾ. ಎಂ. ಚಿದಾನಂದ ಮೂರ್ತಿ : ಬೃಹತ್ ಕರ್ನಾಟಕ : ಭಾಷಿಕ, ಸಾಂಸ್ಕೃತಿಕ: ಸುವರ್ಣ ಸಿರಿ ಮಾಲೆ, ಸಪ್ನ ಬುಕ್ ಹೌಸ್ ಬೆಂಗಳೂರು (೨೦೦೮)

೭. ವಿಜಯ್ ಪೂಣಚ್ಚ ತಂಬಂಡ, ವಿರೂಪಾಕ್ಷಿ ಪೂಜಾರಹಳ್ಳಿ (ಸಂ) : ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,(೨೦೧೦)

೮. ಪ್ರೊ. ನಾ. ಗೀತಾಚಾರ್ಯ : ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,(೨೦೦೮)

೯. ಡಾ. ಸಿ. ಆರ್. ಗೋವಿಂದರಾಜು : ನವಚಾರಿತ್ರಿಕವಾದ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, (೨೦೦೯)

೧೦. ಚಂದ್ರಕಾಂತ ಬಿಜ್ಜರಗಿ : ದಾರ್ಶನಿಕ ಕವಿ ಕನಕದಾಸರು : ಶೈಲಚಂದ್ರ ಪ್ರಕಾಶನ ವಿಜಾಪುರ, (೨೦೧೦)

೧೧. ಶಿವಪ್ರಸಾದ ಟಿ. ಆರ್ : ಶ್ರೀ ಕೃಷ್ಣದೇವರಾಯ : ಚಿಂತನಗಂಗಾ ಪ್ರಕಾಶನ ದಾವಣಗೆರೆ, (೨೦೦೯)

೧೨. ಡಾ. ಎನ್. ವೆಂಕಟರಮಣಯ್ಯ (ಮೂಲ) ಗುರುಮೂರ್ತಿ ಪೆಂಡಕೂರು(ಅನು:) ವಿಜಯನಗರ ಚರಿತ್ರೆ : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು, (೨೦೧೦)

೧೩. ಪ್ರೊ. ಬಿ. ಷೇಕ್ ಅಲಿ (ಪ್ರಸಂ), ಪ್ರೊ. ಕೆ. ಎಸ್. ಶಿವಣ್ಣ(ಸಂ) : ಕರ್ನಾಟಕ ಚರಿತ್ರೆ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ; (೧೯೯೭)
೧೪. ಡಾ. ಮ. ಸು. ಕೃಷ್ಣಮೂರ್ತಿ : ಉತ್ತರದ ಸಂತ ಪರಂಪರೆ : ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, (೨೦೦೩)
೧೫. ಡಾ. ಹಜರಾತ್‌ಸಾಬ್ ಹು ನದಾಫ್ : ಕನಕದಾಸರ ಕೃತಿಗಳು ಜಾನಪದೀಯ ಅಧ್ಯಯನ : ಸಿರಾ ಪಬ್ಲಿಪಿಂಗ್ ಹೌಸ್ ಮೈಸೂರು : (೨೦೦೭)
೧೬. ಡಾ. ಶಿವಪ್ರಸಾದ್ ವೈ. ಎಸ್. : ಕನಕ ಪುರಂದರ ಇಹಪರಗಳ ಮುಖಾ ಮುಖಿ : ಐಬಿಎಚ್ ಪ್ರಕಾಶನ ಬೆಂಗಳೂರು, (೨೦೧೧)
೧೭. ಡಾ.ಎಸ್. ಎಸ್. ಅಂಗಡಿ : ದಾಸಸಾಹಿತ್ಯ ಭಾಷೆ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, (೨೦೧೦)
೧೮. ಡಾ. ಶ್ರೀರಾಮ ಅಚನೂರು : ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ: ಗಗನ ಪ್ರಕಾಶನ ಬಾಗಲಕೋಟೆ,(೨೦೧೧)
೧೯. ಡಾ॥ ದೇ. ಜವರೇಗೌಡ (ಸಂ) : ಕನಕದಾಸರ ರಾಮಧಾನ್ಯ ಚರಿತ್ರ : ಡಿ. ವಿ. ಕೆ. ಮೂರ್ತಿ : ಪ್ರಕಾಶಕರು : ಮೈಸೂರು, (೨೦೦೫)
೨೦. ಹೊ.ರಾ. ಸತ್ಯನಾರಾಯಣರಾವ್ (ಸಂ) : ಕನಕದಾಸರ ಜನಪ್ರಿಯ ಕೀರ್ತನೆಗಳು: ಅಂಕಿತ ಪುಸ್ತಕ ಬೆಂಗಳೂರು, (೨೦೦೮)
೨೧. ವಿದ್ವಾನ್ ಎನ್. ರಂಗನಾಥಶರ್ಮ : ಕನಕದಾಸ ವಿರಚಿತ ಹರಿಭಕ್ತಸಾರ : ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, (೨೦೦೯)
೨೨. ಹ. ಕ. ರಾಜೇಗೌಡ : ಸಾಹಿತ್ಯ ಶೋಧ (ಸಂಶೋಧನಾ ಲೇಖನಗಳ ಸಂಗ್ರಹ): ಪರಂಪರಾವಲೋಕನ ಸಮಿತಿ ಮಂಡ್ಯ, (೨೦೦೮)
೨೩. ವಸು. ಎಂ. ವಿ (ಸಂ) : ಕನ್ನಡದೊಳ್ ಭಾವಿಸಿದ ಜನಪದಂ : ಪ್ರಕಾಶನ ಚಿಂತನ ಪುಸ್ತಕ ಬೆಂಗಳೂರು, (೨೦೦೯)
೨೪. ಪ್ರೊ. ಸುಧಾಕರ (ಸಂ) : ಕನಕದಾಸರ ಕೀರ್ತನೆಗಳು ಮತ್ತು ಮಂಡಿಗೆಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, (೨೦೧೨)
೨೫. ಬೆಟಗೇರಿ ಕೃಷ್ಣ ಶರ್ಮ : ಕರ್ಣಾಟಕ ಜನಜೀವನ : ಪ್ರಕಾಶಕವಿ ಬೆಟಗೇರಿ ಕೃಷ್ಣ ಶರ್ಮ ಜಯಂತಿ ಕಾರ್ಯಾಲಯ ಧಾರವಾಡ, (೧೯೩೯)
೨೬. ಪ್ರೊ: ಲಕ್ಷಣ್ ತೆಲಗಾವಿ : ವಿಜಯನಗರಕಾಲದ ರಾಮನುಜಕೂಟಗಳು: ಪ್ರಸಾರಾಂಗ ಕನಕಡೆ ವಿಶ್ವವಿದ್ಯಾಲಯ, ಹಂಪಿ, (೨೦೦೯)
೨೭. ಡಾ. ಬಸವರಾಜ ಕಲ್ಗುಡಿ : ನಕ್ಷೆ ನಕ್ಷತ್ರ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, (೨೦೧೦)

೨೮. ರಾಬರ್ಟ ಸಿವೆಲ್ ; ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,(೧೯೯೨)
೨೯. ಡಾ.ಎಸ್.ಎಸ್. ಕೋತಿನ : ಮೋಹನ ತರಂಗಿಣಿ ; ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು,(೧೯೮೪)
೩೦. ಶಂ. ಬಾ. ಜೋಶಿ : ಎಡೆಗಳು ಹೇಳುವ ಕಂನಾಡ ಕಥೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, (೨೦೧೧)
೩೧. ಡಾ. ಬಿ. ಶಿವರಾಮಶೆಟ್ಟಿ (ಸಂ) : ಕನಕ ಚಿಂತನ ೨೦೦೨-೨೦೦೮ : ಕನಕದಾಸ ಸಂಶೋಧನ ಕೇಂದ್ರ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳ ಗಂಗೋತ್ರಿ, (೨೦೧೦)
೩೨. ಡಾ. ಎಂ. ಚಿದಾನಂದ ಮೂರ್ತಿ : ಸಂಶೋಧನ ತರಂಗ : ಸರಸ ಸಾಹಿತ್ಯ ಪ್ರಕಾಶನ ಮೈಸೂರು, (೧೯೬೬)
೩೩. ಡಾ. ಡಿ. ಸದಾಶಿವ ಶೆಟ್ಟಿ : ನಳ ಚರಿತ್ರೆ : ಕನಕದಾಸ ಅಧ್ಯಯನ ಸಂಶೋಧನ ಪೀಠ ಉಡುಪಿ, (೨೦೧೧)
೩೪. ಚಂದ್ರಕಾಂತ ಬಿಜ್ಜರಗಿ : ಹಾಲುಮತ ಸನಾತನ ಧರ್ಮ : ಶೈಲಚಂದ್ರ ಪ್ರಕಾಶನ ವಿಜಾಪುರ, (೨೦೧೩)
೩೫. ಜಿ.ಜಿ. ಮಂಜುನಾಥನ್ (ಸಂ) ಮೋಹನ ತರಂಗಿಣಿ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, (೧೯೯೯)
೩೬. ಡಾ. ಮೊಗಳ್ಳಿ ಗಣೇಶ್ : ಅವ್ಯಕ್ತ ಚರಿತ್ರೆ : ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ, (೨೦೦೯)
೩೭. ಡಾ. ಬಂಜಗೆರೆ ಜಯಪ್ರಕಾಶ: ಮಧ್ಯಯುಗೀನ ಭಾರತ ಅಂತ್ಯಜರ ತತ್ವ ಚಿಂತನೆ; ಚಾರು ಪ್ರಕಾಶನ ಬೆಂಗಳೂರು, (೨೦೧೧)
೩೮. ಚಂದ್ರಕಾಂತ ಬಿಜ್ಜರಗಿ : ಕುರುಬರ ಕುಲಗುರು ರೇವಣ ಸಿದ್ಧ : ಶೈಲಚಂದ್ರ ಪ್ರಕಾಶನ ವಿಜಾಪುರ, (೨೦೧೦
೩೯. ರಹಮತ್ ತರೀಕೆರೆ : ಕರ್ನಾಟಕದ ನಾಥಪಂಥ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ: (೨೦೦೯)
೪೦. ದೇ ಜವರೇ ಗೌಡ, ಎಲ್, ಎಸ್.ಶೇಷಗಿರಿ ರಾವ್, ದೇವೇಂದ್ರ ಕುಮಾರ ಹಕಾರಿ, ಎಚ್ ಜೆ.ಲಕ್ಕಪ್ಪಗೌಡ (ಸಂ) ; ಜನಪ್ರಿಯ ಕನಕ ಸಂಪುಟ; ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು. (೧೯೮೯).
೪೧. ಡಾ. ಹಜರತ್ ಸಾಬ್ ಹು ನದಾಫ್, ಡಾ. ಬಿ. ಶಿವರಾಂ ಶೆಟ್ಟಿ; ಕನಕ ಚಿಂತನ ೨೦೦೯-೨೦೧೦; ಕನಕದಾಸ ಸಂಶೋಧನಾ ಕೇಂದ್ರ ಮಂಗಳೂರು ವಿಶ್ವವಿದ್ಯಾನಿಲಯ, (೨೦೧೦)

೪೨. ಕೊರಟಿ ಶ್ರೀನಿವಾಸ್ ರಾವ್; ಶ್ರೀ ಕನಕದಾಸರು; ಭಾಗ್ಯಲಕ್ಷ್ಮೀ ಪ್ರಕಾಶನ ಬೆಂಗಳೂರು; (೨೦೦೩)
೪೩. ಚಂದ್ರಕಾಂತ ಬಿಜ್ಜರಗಿ; ಕುರುಬರ ಹೆಜ್ಜೆಗಳು; ಹೇಮಕಾಂತ ಬಿಜ್ಜರಿಗಿ ಶೈಲಚಂದ್ರ ಪ್ರಕಾಶನ ವಿಜಾಪುರ, (೨೦೧೧)
೪೪. ರಹಮತ್ ತರಿಕೆರೆ; ಕರ್ನಾಟಕದ ಸೂಫಿಗಳು ; ಅಭಿನವ ಬೆಂಗಳೂರು, (೨೦೦೮)
೪೫. ಡಾ. ಬಿ. ಶಿವರಾಂ ಶೆಟ್ಟಿ (ಸಂ); ಕನಕ ಚಿಂತನ ೨೦೧೧-೨೦೧೨; ಕನಕದಾಸ ಸಂಶೋಧನಾ ಕೇಂದ್ರ ಮಂಗಳೂರು ವಿಶ್ವವಿದ್ಯಾನಿಲಯ; (೨೦೧೩)
೪೬. ಡಾ.ಎಂ ಚಿದಾನಂದ ಮೂರ್ತಿ: ಜನ-ಜನಪದ-ಜಾನಪದ, ಸ್ವಪ್ನ ಬುಕ್ ಹೌಸ್, ಬೆಂಗಳೂರು. (೨೦೦೨)
೪೭. ಕಟ್ಟಿ ಶೇಷಾಚಾರ್ಯರು : ಕವಿ ಕನಕದಾಸರು : ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, (೨೦೧೦)
೪೮. ಚಂದ್ರಕಾಂತ ಬಿಜ್ಜರಗಿ : ಹಾಲುಮತ ರತ್ನಗಳು : ಶೈಲಚಂದ್ರ ಪ್ರಕಾಶನ ವಿಜಾಪುರ, (೨೦೧೨)
೪೯. ಡಾ.ಸಿ.ಎನ್. ರಾಮಚಂದ್ರ : ರಕ್ತಿ-ರೂಪಣೆ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, (೨೦೦೭)
೫೦. ಸಬಾಲ್ಟರ್ನ್ ಓದು: ಡಾ.ಮೇಟಿ ಮಲ್ಲಿಕಾರ್ಜುನ(ಸಂ); ಅರುಹು ಕುರುಹು; ಕುವೆಂಪುನಗರ, ಮೈಸೂರು.(೨೦೧೩)
೫೧. ಅಮರೇಶ ನುಗಡೋಣಿ (ಸಂ) : ಪುರಂದರ ಸಾಹಿತ್ಯ ಅಧ್ಯಯನ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, (೨೦೧೦)
೫೨. ಎಂ. ಚಿದಾನಂದಮೂರ್ತಿ : ಹೊಸತು ಹೊಸತು : ಕನ್ನಡ ವಿಶ್ವ ವಿದ್ಯಾಲಯ ಹಂಪಿ, (೧೯೯೩)
೫೩. ಡಾ. ಎಂ. ಚಿದಾನಂದ ಮೂರ್ತಿ : ಸಂಶೋಧನ ತರಂಗ ಸಂಪುಟ-೨ : ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, (೧೯೭೦)
೫೪. ಡಾ.ಎಸ್.ಎಸ್. ಭಗವತಿ, ಡಾ॥ ಎಚ್. ಎಸ್. ಮೇಲಿನಮನಿ : ಕನಕದಾಸರ ಒಂದು ಅಧ್ಯಯನ : ವಿದ್ಯಾನಿಧಿ ಪ್ರಕಾಶನ ಗದಗ, (೨೦೦೭)
೫೫. ವಾಣಿ ಅನಿಲ್ : ಹರಿದಾಸ ಲಹರಿ : ಶ್ರೀಮತಿ ವಾಣಿ ಅನಿಲ್ ಬೆಂಗಳೂರು (೨೦೦೯)
೫೬. ಬನ್ನಂಜೆ ಗೋವಿಂದಾಚಾರ್ಯ : ಕನಕೋಪನಿಷತ್ತು : ಕನಕದಾಸ ಅಧ್ಯಯನ ಸಂಶೋಧನ ಪೀಠ, (೨೦೦೮)

೫೭. ಬೇಲೂರು ಕೇಶವದಾಸರು : ಶ್ರೀ ಕರ್ಣಾಟಕ ಭಕ್ತ ವಿಜಯ : ನವಭಾರತೀ ಪ್ರಕಾಶನ ಮೈಸೂರು, (೨೦೧೧)

೫೮. ಬಾಬು ಕೃಷ್ಣಮೂರ್ತಿ : ಯಾವುದು ಚರಿತ್ರೆ? : ವಸಂತ ಪ್ರಕಾಶನ ಬೆಂಗಳೂರು; (೨೦೧೩)

೫೯. ಹೆರಂಜೆ ಕೃಷ್ಣ ಭಟ್ಟ : ದಾಸ-ಕನಕ ಪ್ರಭೆ (ಪುರಂದರ ದಾಸರ ಕುರಿತ ಬರಹಗಳು ಹಾಗೂ ಕನಕದಾಸರ ಕುರಿತ ಕವನಗಳ ಸಂಕಲನ) : ಕನಕದಾಸ ಅಧ್ಯಯನ ಸಂಶೋಧನ ಪೀಠ ಉಡುಪಿ (೨೦೧೧)

೬೦. ಬಸವರಾಜ ಕಲ್ಗುಡಿ : 'ಅನುಭಾವ ' ಸಾಂಸ್ಕೃತಿ ಸಮಸ್ಸೆ ಮತ್ತು ಹುಡುಕಾಟ : ಕೆ.ಬಿ. ಪ್ರಗತಿ ಬರಹ ಪಬ್ಲಿಷಿಂಗ್ ಹೌಸ್ ಹಂಪಿನಗರ ಬೆಂಗಳೂರು, (೨೦೧೩)

೬೧. ಚಂದ್ರಕಾಂತ ಬಿಜ್ಜರಗಿ : ಬೀರದೇವರ ಅವತಾರಗಳು : ಶೈಲಚಂದ್ರ ಪ್ರಕಾಶನ ವಿಜಾಪುರ (೨೦೧೧)

೬೨. ಎನ್.ಎಂ. ಅಂಬಲಿಯವರ : ದಾಸಶ್ರೇಷ್ಠ ಕನಕದಾಸರ ನಳಚರಿತ್ರೆ : ವಿದ್ಯಾನಿಧಿ ಪ್ರಕಾಶನ, ಗದಗ (೨೦೦೫)

೬೩. ಚಂದ್ರಕಾಂತ ಬಿಜ್ಜರಗಿ : ಸೋನ್ನಲಿಗೆ ಸಿದ್ಧರಾಮ : ಶೈಲಚಂದ್ರ ಪ್ರಕಾಶನ ವಿಜಾಪುರ (೨೦೧೨)

೬೪. ಪಾವಂಜೆ ಗುರುರಾವ್ : ಕನಕದಾಸರ ಕೀರ್ತನೆ : ಮಂಗಳೂರು ವಿಶ್ವವಿದ್ಯಾನಿಲಯ(೨೦೧೧)

೬೫. ಡಾ. ಲಿಂಗದೇವರು ಹಳೆಮನೆ (ಸಂ): ಸಂಸ್ಕೃತಿ ಶೋಧ, ಅರುಹು-ಕುರುಹು ಪ್ರಕಾಶನ, ಮೈಸೂರು.(೨೦೦೯)

೬೬. ಡಾ. ಬಂಜಗೆರೆ ಜಯಪ್ರಕಾಶ: ಕನ್ನಡ ರಾಷ್ಟ್ರೀಯತೆ,ಕ್ರಾಂತಿಸಿರಿ ಪ್ರಕಾಶನ ಬೆಂಗಳೂರು(೨೦೦೦)

೬೭. ಡಿ.ಆರ್. ನಾಗರಾಜ್: ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ(೧೯೯೬)

೬೮. ಡಾ.ನಿರುಪಮಾ: ಕೃಷ್ಣದೇವರಾಯನ ಅಮುಕ್ತಮಾಲ್ಯದ, ಕನ್ನಡ ವಿಶ್ವವಿದ್ಯಾಲಯ, ಹಂಪಿ(೨೦೧೦)

೬೯. ಡಾ. ಕೆ.ವಿ. ನಾರಾಯಣ: ತೊಂಡುಮೇವು ಕಂತೆ ೨, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.(೨೦೧೦)

೭೦. ತತ್ವಪದಗಳು- ಪ್ರಾತಿನಿಧಿಕ ಸಂಕಲನ. ಶಾಂತರಸ (ಪ್ರ,ಸಂ),ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು (೨೦೦೦)

೭೧. ಸಂತ ಭದ್ರಗಿರಿ ಅಚ್ಯುತದಾಸ: ಶ್ರೀ ಹರಿಕಥಾಮೃತ ಸಿಂಧು, ಶ್ರೀ ಸುಧೀಂದ್ರ ಪಬ್ಲಿಷಿಂಗ್ ಹೌಸ್, ಬೆಂಗಳೂರು (೧೯೯೨)

೭೨. ಡಾ. ಹಂಪ. ನಾಗರಾಜಯ್ಯ;ಕಡೆಗೋಲು, ಕನ್ನಡ ವಿಶ್ವವಿದ್ಯಾಲಯ, ಹಂಪಿ (೨೦೦೭)

ಪೂರಕ ಪತ್ರಿಕೆಗಳು/ನಿಯತಕಾಲಿಗಳು:
ಅರುಹು–ಕುರುಹು,
ಸಾಕ್ಷಿ, ಪ್ರಜಾವಾಣಿ
ಅಂತರ್ಜಾಲದ ಬ್ಲಾಗ್‌ಗಳು

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರ ಜೀವನ ದರ್ಶನ ಮತ್ತು ಅವರ ಕಾವ್ಯ-ಕೀರ್ತನೆಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಈ ಬಗೆಯ ಕಾರ್ಯಾಧ್ಯಯನಗಳಿಗೆ ಯುವ ಸಮುದಾಯವನ್ನು ತೊಡಗಿಸಿಕೊಳ್ಳುವುದು ಇದರ ಆಶಯವಾಗಿದೆ. ಈ ನೆಲೆಯಲ್ಲಿ ಹೊಸ ಹೊಸ ದೃಷ್ಟಿಕೋನದಿಂದ ಅಧ್ಯಯನಶೀಲ ವಿದ್ವಾಂಸ, ಸಂಶೋಧನಾರ್ಥಿಗಳಿಗೆ ಫೆಲೋಶಿಪ್ ನೀಡಿಕೆ, ಅಧ್ಯಯನಗಳಿಗೆ ಅನುದಾನ, ರಾಜ್ಯ-ರಾಷ್ಟ್ರಮಟ್ಟದಲ್ಲಿ ವಿಚಾರ ಸಂಕಿರಣ-ಸಂವಾದಗೋಷ್ಠಿಗಳ ಏರ್ಪಾಟು, ವಿವಿಧ ಮಾಧ್ಯಮಗಳಲ್ಲಿ ಕನಕದಾಸರ ತತ್ವಾದರ್ಶಗಳ ಪ್ರದರ್ಶನ-ಪ್ರಸಾರ ಕಾರ್ಯ, ವಿವಿಧ ಭಾಷೆಗಳಿಗೆ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ, ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು, ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ, ಯುವಜನ-ವಿದ್ಯಾರ್ಥಿ ಸಮುದಾಯಕ್ಕಾಗಿ ಕನಕ ಸಂಸ್ಕೃತಿ ಕಮ್ಮಟ-ರಸಗ್ರಹಣ ಶಿಬಿರಗಳ ಸಂಘಟನೆ, ಹಿರಿಯ ಹಾಗೂ ಯುವ ವಿದ್ವಾಂಸರಿಗೆ ಪುರಸ್ಕಾರ ಮುಂತಾದ ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿದೆ.

ಕನಕ ಅಧ್ಯಯನ ಕೇಂದ್ರವು ಸಂಶೋಧನಾ ಮಾಲೆಯಡಿ ಪ್ರಸ್ತುತ **ಕನಕ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ** ಕೃತಿಯು ಪ್ರಕಟವಾಗುತ್ತಿದೆ. ಅನುಭಾವ ಪರಂಪರೆಯಲ್ಲಿ ಕನಕದಾಸರ ಅನುಭಾವಿ ಚಿಂತನೆಗಳ ಮಹತ್ವವನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅನುಭಾವಿ ನೆಲೆಯಲ್ಲಿ ಚಿಂತಿಸುವ ಯುವ ಸಂಶೋಧಕರಿಗೆ ಇದು ಉಪಯುಕ್ತವಾಗ ಬಲ್ಲದೆಂದು ನಿರೀಕ್ಷಿಸಲಾಗಿದೆ.

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು
2ನೇ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಬೆಂಗಳೂರು-560 002.
www.saintpoetkanaka.in
e-mail: kanakaresearchcentre@gmail.com
080-22113147